ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ

(ಪಿಎಚ್ ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಪೂರ್ಣಿಮಾ ಎಸ್.

ಸಂಶೋಧನ ವಿದ್ಯಾರ್ಥಿನಿ

ಮಾರ್ಗದರ್ಶಕರು

ಡಾ. ವೆಂಕಟೇಶ ಇಂದ್ವಾಡಿ

ಪ್ರವಾಚಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

೨೦೦೯

ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಪೂರ್ಣಿಮಾ ಎಸ್.

ಸಂಶೋಧನ ವಿದ್ಯಾರ್ಥಿನಿ

ಮಾರ್ಗದರ್ಶಕರು

ಡಾ. ವೆಂಕಟೇಶ ಇಂದ್ವಾಡಿ

ಪ್ರವಾಚಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

೨೦೦೯

ಸಂಶೋಧಕರ ಪ್ರಮಾಣಪತ್ರ

ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ ಎಂಬ ಮಹಾ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ **ಡಾ.ವೆಂಕಟೇಶ ಇಂದ್ವಾಡಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಪೂರ್ಣಿಮಾ ಎಸ್.

ಪೂರ್ಣಿಮಾ ಎಸ್.
ಸಂಶೋಧಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 30-06-09
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ಪ್ರಮಾಣಪತ್ರ

ಪೂರ್ಣಿಮಾ ಎಸ್. ಅವರು **ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ** ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್. ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಸಲ್ಲಿಸುತ್ತಿದ್ದಾರೆ, ಪ್ರಸ್ತುತ ಮಹಾಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ವೆಂಕಟೇಶ ಇಂದ್ವಾಡಿ
ಪ್ರವಾಚಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ :
ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ ಎಂಬ ಮಹಾಪ್ರಬಂಧದ ಅಧ್ಯಯನಕ್ಕೆ ಕನ್ನಡ ವಿಶ್ವವಿದ್ಯಾಲಯದಲ್ಲಿ ಅವಕಾಶ ಕಲ್ಪಿಸಿಕೊಟ್ಟ ಡಾ.ಬಿ.ಎ.ವಿವೇಕ ರೈ ಅವರಿಗೂ ಮತ್ತು ಇಂದಿನ ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಅವರಿಗೂ ಹಿಂದಿನ ಕುಲಸಚಿವರಾದ ಡಾ.ಬೋರಲಿಂಗಯ್ಯ ಅವರಿಗೂ ಹಾಗೂ ಹಿಂದಿನ ಅಧ್ಯಯನಾಂಗದ ನಿರ್ದೇಶಕರಾದ ಡಾ.ಡಿ.ಪಾಂಡುರಂಗ ಬಾಬು ಅವರಿಗೂ ಇಂದಿನ ಅಧ್ಯಯನಾಂಗ ನಿರ್ದೇಶಕರಾದ ಡಾ.ವೀರೇಶ ಬಡಿಗೇರ ಅವರಿಗೂ ಕೃತಜ್ಞತೆಗಳು.

ಈ ಸಂಶೋಧನೆಗೆ ಅವಕಾಶ ಕಲ್ಪಿಸಿಕೊಟ್ಟು, ಮಾರ್ಗದರ್ಶನ ಮಾಡಿ, ತಮ್ಮ ಸಲಹೆ, ಸೂಚನೆ, ಅಪೂರ್ವ ಒಳನೋಟಗಳಿಂದ ನನ್ನ ಅರಿವನ್ನು ವಿಸ್ತರಿಸಿದ ನನ್ನ ವಿದ್ಯಾ ಗುರುಗಳಾದ ಡಾ.ವೆಂಕಟೇಶ ಇಂದ್ವಾಡಿ ಅವರಿಗೆ ನನ್ನ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಅಧ್ಯಯನದ ಅವಧಿಯಲ್ಲಿ ಭಾಷಾ ನಿಕಾಯದಲ್ಲಿ ಕುಟುಂಬದ ವಾತಾವರಣ ನೀಡಿ ನನ್ನನ್ನು ಬೆಂಬಲಿಸಿದ ವಿಭಾಗದ ಮುಖ್ಯಸ್ಥರು ಡಾ.ಬಿ.ಎಂ.ಪುಟ್ಟಯ್ಯ, ಡಾ.ಮಲ್ಲಿಕಾರ್ಜುನ ಗೌಡ, ಹಾಗೂ ಡಾ.ರಹಮತ್ ತರೀಕೆರೆ, ಡಾ.ಅಮರೇಶ ನುಗಡೋಣಿ ಹಾಗೂ ಕಚೇರಿ ಸಿಬ್ಬಂದಿಗಳಾದ ಶಿವಪ್ಪ, ಕರೀಂಸಾಬ್ ಅವರನ್ನು ನೆನೆಯುತ್ತೇನೆ.

ಕನ್ನಡ ವಿಶ್ವವಿದ್ಯಾಲಯದ ಚೆಂದದ ಪ್ರಕೃತಿಯ ತಂಪಿನಂತೆ, ಮನಕ್ಕೆ ತಂಪೆರದು, ಮಾರ್ಗದರ್ಶಿಯಾದ ಮುದ್ದು ಗೆಳತಿ ಸುಮತಿಯನ್ನು ನೆನೆಯದಿರಲಾರೆ. ನನ್ನ ಪ್ರಬಂಧದ ಒರೆ ಕೋರೆಗಳನ್ನು ತಿದ್ದುತ್ತಾ ಪ್ರೀತಿಯಿಂದ ಸಹಕರಿಸಿದ ಬಾಬು, ನಲ್ಮೆಯ ಗೆಳತಿ ಶಿವಕುಮಾರಿ ಇವರೆಲ್ಲರ ಸ್ನೇಹವನ್ನು, ಪ್ರೀತಿಯನ್ನು ನೆನೆಯುತ್ತೇನೆ.

ನನ್ನ ಅಧ್ಯಯನದ ಪೂರಕಶಕ್ತಿಯಾದ ನನ್ನ ಅಧ್ಯಯನಕ್ಕೆ ಹೆಮ್ಮೆಯಿಂದ ಸಹಕರಿಸಿದ ಅಮ್ಮನಂತಿರುವ ಪ್ರೀತಿಯ ಅತ್ತೆಯವರಾದ ಶ್ರೀಮತಿ ಪಾರ್ವತಮ್ಮ ಹೊನ್ನಪ್ಪನವರಿಗೆ, ಪ್ರೀತಿಯಿಂದ ಹಾರೈಸಿದ ಅಮ್ಮ ಅಪ್ಪನವರಾದ ಶ್ರೀಮತಿ ಶಿವಮ್ಮ ಸಿದ್ದೇಗೌಡ ಹಾಗೂ ಮಮಕಾರವಿಟ್ಟು ಪೊರೆದ ಚಿಕ್ಕಪ್ಪ ಗೋವಿಮದರಾಜು, ಚಿಕ್ಕಮ್ಮ ಸಾವಿತ್ರಮ್ಮ ಅವರಿಗೆ

ನಲ್ಮೆಯ ಸಹೋದರಿ ಪ್ರಿಯಾಂಕ ಹಾಗೂ ಸಹೋದರ ಅಭಿ ಇವರ ಸ್ನೇಹವನ್ನು ನೆನೆಯುತ್ತೇನೆ. ನನ್ನ ಬಗ್ಗೆ ಕಾಳಜಿ ತೋರುವ ಕುಟುಂಬದ ಸದಸ್ಯರಾದ ಶ್ರೀಮತಿ ಅನ್ನಪೂರ್ಣವಾಸು ಮತ್ತು ಶ್ರೀಮತಿ ರೂಪ ರವಿಶಂಕರ್ ಅವರುಗಳಿಗೆ

ನನ್ನ ಅಧ್ಯಯನದ ಪೂರಕ ಶಕ್ತಿಯಾದ ನನ್ನ ಬಾಳಾಸಂಗಾತಿ ಪ್ರೀತಿಯ ಗೆಳೆಯ ಕೃಷ್ಣ ಸ್ಮರಣ ಕುಮಾರ್ ಮತ್ತು ಮುದ್ದು ಮಗಳು ಅದ್ವಿಕಾಳನ್ನು ನೆನೆಯದಿರಲಾರೆ.

ಕೃತಜ್ಞತೆಗಳು

ಪೂರ್ಣಿಮಾ ಎಸ್.

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪೀಠಿಕೆ

ಆಧುನಿಕ ಮಹಿಳಾ ಸಾಹಿತ್ಯವನ್ನು ಕುರಿತು ವಿಶ್ಲೇಷಣೆಗೆ ತೊಡಗಿದಾಗ ಒಂದು ರೀತಿಯಲ್ಲಿ ಮಾನವನ ಇತಿಹಾಸದಲ್ಲಿ ಮಹಿಳಾ ಚರಿತ್ರೆಯ ಸಿಂಹಾವಲೋಕನ ಮಾಡಿದಂತಿರುತ್ತದೆ. ಮಹಿಳಾ ಸಾಹಿತ್ಯವೆಂದರೆ ಮೂಲತಃ ಒಂದು ಕ್ರಾಂತಿಯ ಫಲ. ಮಹಿಳೆಗೆ ಸಾವಿರಾರು ವರ್ಷದ ಚರಿತ್ರೆಯಿದ್ದರೂ ಅವಳ ಅಭಿವ್ಯಕ್ತಿಗೆ ಸಂಪೂರ್ಣ ಅವಕಾಶ ಸಿಕ್ಕಿದ್ದು ಆಧುನಿಕ ಕನ್ನಡ ಸಾಹಿತ್ಯದಲ್ಲಿ. ವಚನಕಾರರ ಕಾಲದಲ್ಲಿ ಮಹಿಳೆಗೆ ಅವಕಾಶ ಸಿಕ್ಕಿದ್ದರೂ ಧಾರ್ಮಿಕ ವಾತಾವರಣದಿಂದ ಅದು ಪರಿಪೂರ್ಣ ಅಭಿವ್ಯಕ್ತಿಯಾಗಿ ಹೊರಹೊಮ್ಮಲಿಲ್ಲ. ೧೯ನೇ ಶತಮಾನವು ವೈವಿಧ್ಯತೆ, ಸೃಜನಶೀಲತೆ, ವೈಚಾರಿಕತೆಗಳಿಂದಾಗಿ ತನ್ನ ಆಳ-ಅರಹುಗಳನ್ನು ವಿಸ್ತರಿಸಿಕೊಂಡಿದ್ದು ಗಮನಾರ್ಹ. ಆದರೆ ಈ ಸಹಸ್ರಮಾನವು ಸಾಮಾಜಿಕ ಪುರುಷನ ದೃಷ್ಟಿಯ ಸೃಷ್ಟಿ. ತನ್ನ ಅನುಕೂಲಕ್ಕಾಗಿ ಸುಖಕ್ಕಾಗಿ ಅಧಿಪತ್ಯಕ್ಕಾಗಿ ಪುರುಷ ಸೃಷ್ಟಿಸಿಕೊಂಡ ಸಮಾಜವನ್ನು ಪ್ರತಿಬಿಂಬಿಸಿದ ಸಾಹಿತ್ಯ. ಇದು ಎಷ್ಟೇ ಸ್ತ್ರೀಮಯವಾಗಿದ್ದರೂ ಇವುಗಳು ಸೃಷ್ಟಿಸಿದ ಲೇಖನಿಯಲ್ಲಿ ಹರಿದಿದ್ದು, ಪುರುಷ ನಾಡಿಮಿಡಿತ.

ಅವಳ ಈ ಸ್ಥಿತಿಗೆ ಕಾರಣಗಳನ್ನು ಹುಡುಕುತ್ತಾ ಹೊರಟಾಗ ಅವಳು ಬದುಕಿದ್ದ ರೀತಿಯನ್ನು ಅವಲೋಕಿಸಬೇಕಾಗುತ್ತದೆ. ವೇದ ಕಾಲದಲ್ಲಿ ಸ್ತ್ರೀಯ ಸ್ಥಾನ-ಮಾನಗಳು ಪ್ರಬುದ್ಧವಾಗಿರುತ್ತಿದ್ದವು. ಅಪೌರುಷೇಯ ರಚನೆಗಳು ಹಕ್ಕುಗಳು ಸ್ತ್ರೀಯರ ರಚನೆಗಳಾಗಿದ್ದವು. ಧಾರ್ಮಿಕ, ತಾತ್ವಿಕ ನೆಲೆಯಲ್ಲಿ ಪುರುಷನ ಮಟ್ಟಿಗೆ ಸಮಾನತೆ ಪಡೆದು, ಗೌರವದ ಸ್ಥಾನಮಾನ ಪಡೆದಿದ್ದಳು. ಉಪನಿಷತ್ತುಗಳ ಕಾಲದಲ್ಲಿ ಛಾಂದೋಗ್ಯದಂತಹ ಮಹತ್ವದ ರಚನೆಯಲ್ಲಿ ಪಾಲ್ಗೊಂಡಿದ್ದಳು. ರಾಮಾಯಣ ಮತ್ತು ಮಹಾಭಾರತದ ಕಾಲದಲ್ಲಿ ಶಿಕ್ಷಣ ಸೌಲಭ್ಯವಿದ್ದರೂ ಮಹಿಳೆಯರಿಗೆ ಪಾತಿವ್ರತ್ಯ, ದೈವಭಕ್ತಿಗಳು ಎತ್ತಲಾರದ ಹೊರೆಗಳಾಗಿದ್ದವು. ಬೌದ್ಧ ಜೈನಯುಗಗಳ ಸ್ತ್ರೀಯರಿಗೆ ಧರ್ಮಗಳು ತುಸು ಅವಕಾಶ ಕೊಟ್ಟಿರುವುದನ್ನು

ಧಾರ್ಮಿಕ ಗ್ರಂಥಗಳು ಮತ್ತು ಆ ಕಾಲದ, ಸಮಕಾಲೀನ ಪ್ರವಾಸಿ ಗ್ರಂಥಗಳ ಮೂಲಕ ನೋಡಬಹುದು. ಗತಕಾಲದ ಮಹಿಳೆಗೆ ಬಂಧನಗಳು ಸಂಕೋಲೆಯಾಯಿತು.

ಆದರೆ ನಂತರದ ಜಾನಪದ ಸಂಸ್ಕೃತಿಯು ಮುಕ್ತ ವಾತಾವರಣ ತಂದುಕೊಟ್ಟಿತು. ಕಾಂತಸಮ್ಮಿತವಾಗಿ ಸ್ತ್ರೀ ಸಹಜ ಕೋಮಲತೆಯನ್ನು ಉಕ್ಕಿ ಹರಿಸುವ ಸೂಕ್ತ ಮನೋಭಾವನೆಯುಳ್ಳ ರಚನೆಗಳು ಮಹಿಳೆಯರಿಂದ ಹಾಡಿಕೊಳ್ಳಲ್ಪಟ್ಟಿರಬಹುದು ಎಂದು ವಿದ್ವಾಂಸರ ಅಭಿಪ್ರಾಯ. ಇಲ್ಲಿ ಗ್ರಾಮೀಣ ಹೆಣ್ಣಿನ ಆತ್ಮ ವಿಶ್ವಾಸವನ್ನು ಹಾಡಾಗಿ ಹೊರಹೊಮ್ಮಿಸಿದೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮೊಟ್ಟ ಮೊದಲು ಹೆಣ್ಣಿಗೆ ಧ್ವನಿ ಬಂದದ್ದು ವಚನಯುಗದ ಪ್ರೇರಣೆ ಪ್ರಭಾವದಿಂದ. ಲಿಂಗಸಮಾನತೆ ಎಂಬುದು ಹನ್ನೆರಡನೆ ಶತಮಾನದಲ್ಲಿ ಎಚ್ಚರಗೊಂಡಿದ್ದು ನಿಜಕ್ಕೂ ಅದ್ಭುತವೇ. 'ಅಂತರಂಗದೊಳಗೆ ಸುಳಿವಾತ್ಮ ಗಂಡು ಅಲ್ಲ ಹೆಣ್ಣು ಅಲ್ಲ' ಎಂಬ ಅಲ್ಲಮನ ವಚನದಂತೆ ಲಿಂಗಸಮಾನತೆಯ ತಾರಕ ಮಂತ್ರ ನಿಜಕ್ಕೂ ಆಶ್ಚರ್ಯಕರ. ಶರಣೆಯರು ಶರಣರಷ್ಟೇ ನಿಷ್ಠೆ, ಕಾಯಕ, ಭಕ್ತಿ, ಶೀಲ, ಕೆಚ್ಚು ಹೊಂವಿರುವುದು ಗಮನಾರ್ಹವಾದುದು. ನಂತರದಲ್ಲಿ ಸಂಚಿಹೊನ್ನಮ್ಮ, ಹರಪನಳ್ಳಿ ಬೀಮಮ್ಮ, ಶೃಂಗಾರಮ್ಮ ಕ್ರಾಂತಿಯ ಕಿಡಿಗಡಿಗಳೆನಿಸಿದ್ದರು. "ಪೆಣ್ಣು-ಪೆಣ್ಣೆಂದೇಕೆ ಬೀಳುಗಳೆವಿರಿ ಕಣ್ಣು ಕಾಣದ ಗಾವಿಲರು" ಎಂದು ಹೆಣ್ಣನ್ನು ತ್ಯಾಜ್ಯ ಭಾವನೆಯಿಂದ ನೋಡುವ ಪುರುಷನಿಗೆ ಸಂಚಿ ಹೊನ್ನಮ್ಮ ಸವಾಲೊಡ್ಡಿದ್ದಾಳೆ.

ನಂತರದಲ್ಲಿ ಕೆಲವು ವರ್ಷ, ಸ್ತ್ರೀ ಧ್ವನಿ ನಿಶ್ಯಬ್ಧವಾಯಿತು. ನಂತರದಲ್ಲಿ ಪಶ್ಚಿಮದ ಪ್ರಭಾವದಿಂದ ಸ್ವಾತಂತ್ರ್ಯ ಪೂರ್ವ, ಸ್ವಾತಂತ್ರ್ಯೋತ್ತರದ ಪ್ರಯತ್ನದ ಫಲವಾಗಿ ಸ್ತ್ರೀಗೆ ಶಿಕ್ಷಣ ದೊರೆತು ಮೂಗನಿಗೆ ಬಾಯಿ ಬಂದಂತಾಯಿತು. ಅಕ್ಷರಾಭ್ಯಾಸ ಹೆಣ್ಣಿಗೆ ವರವಾಯಿತು. ಪ್ರಾರಂಭದಲ್ಲಿ ಉಚ್ಚ ವರ್ಗದ ಸ್ತ್ರೀಯರಿಗೆ ಈ ಸೌಲಭ್ಯ ದೊರೆಯಿತು ಎನ್ನುವಂತಾದರೂ ಕ್ರಮೇಣ-ಸಮಾಜದ ಎಲ್ಲಾ ವರ್ಗದ ಸ್ತ್ರೀಯರಿಗೆ ಶಿಕ್ಷಣ ದೊರಕಿದಂತಾಯಿತು.

ಸಾಹಿತ್ಯ ನಿಧಾನಗತಿಯಲ್ಲಿ ಚಿಗುರೊಡೆಯಿತು. ಇಂಗ್ಲೀಷ್ ಸಾಹಿತ್ಯದ ಪ್ರಭಾವದ ಜೊತೆಗೆ ಪೌರೋತ್ಯ ದೇಶಗಳ ಸ್ತ್ರೀವಾದದ ಪರಿಕಲ್ಪನೆಗೆ ಭಾರತದ ಸ್ತ್ರೀಯರು ಸ್ಪಂದಿಸಿದರು. ಅಮೇರಿಕಾದಲ್ಲಿ ಆರಂಭವಾದ ಮಹಿಳಾವಾದ ಕ್ರಮೇಣ ಎಲ್ಲಾ ಕಡೆಗೂ ಹರಡಿತು. ಸೋಶಿಯಲಿಜಂ, ಫೆಮಿನಿಜಂ ಈ ಕಾಲದ ಮುಖ್ಯ ಚರ್ಚೆಯ ವಿಷಯವಾಯಿತು.

ಶಿಕ್ಷಣದ ಕಾರಣ ಸ್ತ್ರೀ ಬೌದ್ಧಿಕವಾಗಿ ಪ್ರಬುದ್ಧಳಾಗುವುದರ ಜೊತೆಗೆ ಶಾಲಾ ಕಾಲೇಜುಗಳಿಗೆ ಮುಕ್ತವಾಗಿ ಕಾಲಿಡುವಂತಾಯಿತು. ಒಟ್ಟಾರೆ ಒಂದೇ ಬಾರಿಗೆ ಶಿಕ್ಷಣಗ ಅರಿವು, ಪಾಶ್ಚಾತ್ಯ ಸ್ತ್ರೀವಾದದ ತಿಳುವಳಿಕೆ, ಅವಳಲ್ಲಿ ಎಚ್ಚರಗೊಂಡು ತನ್ನಿರುವಿನ ಬಗ್ಗೆ

ಯೋಚಿಸಲಾರಂಭಿಸಿದಳು. ಸಮಾಜದಲ್ಲಿ ಹೆಣ್ಣಿನ ಮೇಲೆ ನಡೆಯುವ ಶೋಷಣೆಗಳ ಅರಿವು ಬಂದಿದ್ದು ತಡವಾಗಿಯಾದರೂ ಮಹಿಳಾ ಇತಿಹಾಸ ಎಚ್ಚೆತ್ತುಕೊಳ್ಳಹತ್ತಿತು. ಆದರೆ ಶಿಕ್ಷಣ ಕೆಲವೊಂದು ವರ್ಗದ ಸ್ತ್ರೀಯರಿಗೆ ಸೀಮಿತವಾಗಿತ್ತು. ಪೌರೋತ್ಯ ದೇಶಗಳ ಸ್ತ್ರೀಯರ ಸ್ಥಿತಿ-ಗತಿಗಳೊಡನೆ ತನ್ನನ್ನು ಹೋಲಿಸಲಾರಂಭಿಸಿದಳು. ಆದರೂ ಅರಿವು ತನ್ನದಾದರೂ ಒಂದೇ ಬಾರಿ ಎಲ್ಲವನ್ನು ಬದಲಾಯಿಸಿ ವಿರೋಧಿಸುವುದು ಕಷ್ಟವಾಯಿತು.

ಶಿಕ್ಷಣದ ಅರಿವಿನಿಂದ ಬರವಣಿಗೆ ಅವಳ ಕೈಲಿತ್ತು. ಪುರುಷ ಅಧಿಪತ್ಯದಲ್ಲಿದ್ದ ಸಾಮಾಜಿಕದೆಡೆಗೆ ಗಮನ ಹರಿಸಲಾರಂಭಿಸಿದಳು. ಸುಮಾರು ೧೫೦೦ ವರ್ಷದ ಇತಿಹಾಸವಿರುವ ಕನ್ನಡ ಸಾಹಿತ್ಯ ಪುರುಷ ಸೃಷ್ಟಿಯಾಗಿತ್ತು. ಕಂತಿ, ಅಕ್ಕಮಹಾದೇವಿ, ಸಂಚಿಹೊನ್ನಮ್ಮ ಪಾತ್ರಗಳು ಅಲ್ಲಲ್ಲಿ ಕಂಡುಬಂದರೂ ಇವರ ಕಾಲಾವಧಿಗಳಲ್ಲಿ ಬಹಳಷ್ಟು ಅಂತರವಿದೆ. ೧೫೦೦ ವರ್ಷದ ಕನ್ನಡ ಸಾಹಿತ್ಯ ಇತಿಹಾಸಕ್ಕೆ ತನ್ನದೊಂದು ಜಾಗದ ಅವಶ್ಯಕತೆಯಿತ್ತು.

ಅಂದಿನ ಸ್ಥಿತಿಯಲ್ಲಿ ನೇರವಾದ ಸಾಮಾಜಿಕ ಪ್ರತಿಭಟನೆಗಿಂತ ಅಕ್ಷರ ಪ್ರತಿಭಟನೆ ಪರ್ಯಾಯ ವ್ಯವಸ್ಥೆಯಾಗಿತ್ತು. ಶತಮಾನಗಳಿಂದ ತುಳಿತಕ್ಕೊಳಗಾದ ಅವಳಿಗೆ ಸಾಹಿತ್ಯ ಒಂದು ರೀತಿ ಮನೋ ಅಭಿವ್ಯಕ್ತಿಯ ತನ್ನ ಒಳ-ಹೊರಗಿನ ರೋಷ-ಆವೇಶಗಳ ಅಭಿವ್ಯಕ್ತಿಯ ವೇದಿಕೆಯಾಗಿತ್ತು.

ಸಾಹಿತ್ಯರಂಗದಲ್ಲಿ ಕಥೆ, ನಾಟಕ, ಕಾದಂಬರಿ, ಸಣ್ಣಕತೆ, ಕಾವ್ಯ ಮುಂತಾದ ಮಾಧ್ಯಮಗಳು ವಿಪುಲವಾಗಿ ಹರಿದರೂ, ಹೆಣ್ಣಿನ ಭಾವನಾತ್ಮಕ ಧೋರಣೆಯನ್ನು ಕಟ್ಟಿಕೊಡುವಲ್ಲಿ ಕಾವ್ಯ ಮಾಧ್ಯಮ ಪರಿಣಾಮಕಾರಿಯಾಯಿತು.

ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ

ಮಹಿಳಾ ಕಾವ್ಯವನ್ನು ಗಮನಿಸಿದಂತೆಲ್ಲಾ ಈ ಅಂಶ ಬೆಳಕಿಗೆ ಬರುತ್ತದೆ. ದೇಶ ಪ್ರೇಮದ ಬಗ್ಗೆ ಕಾವ್ಯಗಳನ್ನು ಬರೆದರೂ ಪುರುಷನ ಬಗ್ಗೆ ಧೋರಣೆಯಲ್ಲಿ ನಕಾರಾತ್ಮಕ (Negative)ವಾಗಿ ಬರೆದಿರುವವರೇ ಜಾಸ್ತಿ. ಶತಮಾನಗಳಿಂದ ಪುರುಷ ಶೋಷಣೆಗೆ ಒಳಗಾದ ಸ್ತ್ರೀಯರು ಪುರುಷ ವಿರೋಧಿ ನಿಲುವಿಗೆ ಬರುವುದು ಸಹಜ.

ಆರಂಭದ ಕವಿಯತ್ರಿಯರಾದ ಬೆಳಗೆರೆ ಜಾನಕಮ್ಮ, ತಿರುಮಲೆ ರಾಜಮ್ಮ ನಂಜನಗೂಡು ತಿರುಮಲಾಂಭ, ರಾಜಮ್ಮ, ಪಾರ್ವತಿದೇವಿ ಹೆಗೆಡೆ ಕಾವ್ಯಗಳು ಆರಂಭ ಸಮಾಜದ ದುಷ್ಟಪದ್ಧತಿ, ಹೆಣ್ಣಿನ ದಾಸ್ಯ ಶೋಷಣೆ ಬಗ್ಗೆ ಕಾವ್ಯ ರಚಿಸಿದರು, ಹೆಣ್ಣಿನ

ದಾಸ್ಯ, ಶೋಷಣೆ ಬಗ್ಗೆ ಕಾವ್ಯ ರಚಿಸುವಾಗ ಪುರುಷ ವಿರೋಧವು ನೇರವಾಗಿರಲಿಲ್ಲ. ನಂತರದ ಅಂದರೆ ೧೯೭೩ ನಂತರ ಮಹಿಳಾ ಕಾವ್ಯ ಮಹಿಳೆಯ ವಿಮೋಚನೆಯ ಪ್ರತಿಭಟನೆಯ ಕಾವ್ಯಗಳು ಮಹಿಳೆ ತನಗೊಂದು ಸ್ವತಂತ್ರ ವ್ಯಕ್ತಿತ್ವವಿದೆಯೆಂದೂ, ಅವಳ ಆತ್ಮಗೌರವಕ್ಕೆ ಧಕ್ಕೆ ತರುವ ಯಾವುದೇ ವ್ಯಕ್ತಿ, ವ್ಯವಸ್ಥೆಗಳ ವಿರುದ್ಧ ಬಂಡಾಯ ಸಾರಿದ್ದಾರೆ.

ಪಾಶ್ಚಾತ್ಯ ಮಹಿಳಾವಾದ ಈ ಸಮಯದಲ್ಲಿ ಅನೇಕ ಬರಹಗಾರ್ತಿಯರ ಮೇಲೆ ಗಾಢವಾದ ಪ್ರಭಾವ ಬೀರಿದ್ದನ್ನು, ಮಹಿಳಾ ಸಾಹಿತ್ಯದಲ್ಲಿ ವಿಶೇಷವಾಗಿ ಕಾವ್ಯದಲ್ಲಿ ನಾವು ಗುರುತಿಸಬಹುದು. ಸ್ತ್ರೀಯ ಸ್ವಾತಂತ್ರ್ಯ ಎನ್ನುವುದು ಮೂಲ ಮಂತ್ರವಾಯಿತು. ಆಧುನಿಕ ಫೆಮಿನಿಸ್ಟ್ ಮಾರ್ಗರೇಟ್ .ಫುಲ್ಲರ್ ಎಂಬ ಮಹಿಳಾವಾದಿಯ ಅಭಿಪ್ರಾಯವು ಬರಹಗಾರ್ತಿಯರಲ್ಲಿ ಹೊಸ ಚೈತನ್ಯವನ್ನು ಮೂಡಿಸಿತ್ತು. ಅವಶ್ಯವಿದ್ದಷ್ಟು ಸಹಜವಾಗಿ ಬೆಳೆಯುವ ಅವಕಾಶ ಸ್ವಂತದ ಬುದ್ಧಿಯನ್ನು ಉಪಯೋಗಿಸುವ ಅವಕಾಶ, ಒತ್ತಡ ದಬ್ಬಾಳಿಕೆಗಳಿಂದ ಮುಕ್ತವಾದ ಬದುಕನ್ನು ಹೊಂದುವ ಅವಕಾಶ, ಎಂಬ ತಾರಕ ಮಂತ್ರ ಅವರನ್ನು ಮಂತ್ರಮುಗ್ಧಗೊಳಿಸಿತ್ತು. ತಡವಾಗಿಯಾದರೂ ಪ್ರಾರಂಭಿಸಿದ ಪ್ರತಿಭಟನಾತ್ಮಕ ಧೋರಣೆಯ ತೀವ್ರತೆಯು ಹೊಸ ಅಶಾವಾದ ಮೂಡಿಸಿದ್ದು ಸತ್ಯವೇ.

ಹೀಗೆ ಆಧುನಿಕ ಮಹಿಳಾ ಕಾವ್ಯ ಪ್ರತಿಭಟನೆಯ ನೋವು ಆಕ್ರೋಶಗಳಿಗೆ ವೇದಿಕೆ ಯಾಗಿಯೇ ಸಿದ್ದಗೊಂಡಿತು. ಈ ಕಾರಣಕ್ಕಾಗಿಯೇ ಸ್ತ್ರೀವಾದ ಬೆನ್ನೆಲುಬಾಗಿ ನಿಂತುಕೊಂಡಿತು.

ಮಹಿಳಾ ಕಾವ್ಯ ಸ್ತ್ರೀವಾದಕ್ಕೆ ಬೆನ್ನೆಲುಬು ಆದುದು ಆಕಸ್ಮಿಕವಲ್ಲ. ಇದು ಒಂದು ಅವಶ್ಯಕತೆಯಾಗಿತ್ತು. ಅದನ್ನು ನಿರೂಪಿಸುವುದು ಬುದ್ದಿವಂತಿಕೆಯ ಪ್ರಶ್ನೆಯಲ್ಲ, ಸ್ತ್ರೀವಾದವೆನ್ನುವುದು ಬೌದ್ಧಿಕ ಕಸರತ್ತು ಏನಲ್ಲ. ಅದು ಇಂದಿನ ಜಗತ್ತಿನ ಮಾನವೀಯತೆಯ ಅವಶ್ಯಕತೆ, ಸ್ತ್ರೀವಾದದ ಜನನವೇ ಒಂದು ಮೂಲದ ವಿದ್ವಾಂಸರ ಪ್ರಕಾರ ಮಹಿಳಾ ಚಳುವಳಿಯ ಮಹಿಳಾ ಅಧ್ಯಯನ ಹಾಗೂ ಮಹಿಳಾ ಕಾವ್ಯದ ಉಗಮಕ್ಕೆ ಸ್ಫೂರ್ತಿ ಎನ್ನುತ್ತಾರೆ.

ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದ ಬೆನ್ನೆಲುಬಾದ ಕಾರಣ ಮೊದಲೇ ಹೇಳಿದಂತೆ, ಶತಮಾನಗಳಿಂದ ನೊಂದ ಹೆಣ್ಣಿಗೆ ಅಕ್ಷರದ ಮೂಲಕ ತನ್ನ ಪ್ರತಿಭಟನೆಯನ್ನು ಮಾಡಲು ವೇದಿಕೆಯಾಗಿ ಈ ಸ್ತ್ರೀವಾದ ಬೇಕಾಗಿತ್ತು. ಸ್ತ್ರೀವಾದದ ಧೋರಣೆಗಳು ವಾದಗಳು ಹಕ್ಕೊತ್ತಾಯಗಳು ಈ ಸಂದರ್ಭದಲ್ಲಿ ಪ್ರಸ್ತುತವೆನಿಸಿದವು. ಮಹಿಳಾ ಸಂವೇದನೆಯು ಮಹಿಳಾ ಕಾವ್ಯದಲ್ಲಿ ಹರಿದಾಡಿದ್ದವು. ೧೯೭೫ ನಂತರದ ಶೈಲಜಾ ಉಡುಚಣ, ಮಕ್ತಾಯಕ್ಕ, ವೈದೇಹಿ, ಕನ್ನಿಕಾ ಹೆಗಡೆ, ಕಮ್ಮಲಾ ಹೆಮ್ಮಿಗೆ, ವಿಜಯಶ್ರೀ ಸಬರದ, ಸುಕನ್ಯಾ ಮಾರುತಿ, ಹೇಮಾ ಪಟ್ಟಣಶೆಟ್ಟಿ, ಭಾಗೀರಥಿ ಹೆಗಡೆ, ಸರಸ್ವತಿ ಚಿಮ್ಮುಲಗಿ, ರಜಿಯಾ ಡಿ. ಇದರ

ಜೊತೆ ಹೊಸ ತಲೆಮಾರಿನ ತೇಜಸ್ವಿ ನಿರಂಜನ, ಮಮತ ಜಿ. ಸಾಗರ್, ಗೀತಾ ಹೆಗಡೆ, ಹಾ.ಮ. ಕನಕ, ಧರಣಿ ಮಾಲಗತ್ತಿ ವಸಂತ, ಸುಧಾ ಚವತ್ತಿ, ಮೀನಾಸದಾಶಿವ, ಮುಂತಾದವರು ಈ ಶತಮಾನದ ಕಾವ್ಯ ಭರವಸೆಯ ಬೆಳಕಿನ ಕವಿಯತ್ರಿಯರಾದರೂ ಒಟ್ಟಾರೆ ಮಹಿಳಾ ಸಂವೇದನೆ ಸ್ತ್ರೀವಾದ ಮಹಿಳಾ ಅಧ್ಯಯನ ಹಕ್ಕೊತ್ತಾಯಗಳು ಆಧುನಿಕ ಮಹಿಳಾ ಕಾವ್ಯದ ಮೇಲೆ ಅತೀವ ಪ್ರಭಾವ ಬೀರಿದವು.

ಪ್ರಸ್ತುತ ಪ್ರಬಂಧವು ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ ಎಂಬ ವಿಷಯ ಕುರಿತಾಗಿದೆ. ಆಧುನಿಕ ಮಹಿಳಾ ಕಾವ್ಯ ಮಹಿಳಾ ಸಾಹಿತ್ಯಕ್ಕೊಂದು ಕನ್ನಡಿ ಹಿಡಿದಂತಾಯಿತು.

ಪ್ರಬಂಧದಲ್ಲಿ ಸ್ತ್ರೀವಾದಿ ಕ್ರಮದ ಅಗತ್ಯ ಹೆಚ್ಚಿನದಾಗಿರುತ್ತದೆ. ಮಹಿಳಾ ಕವಿಯತ್ರಿಯರು ಹೊಸ ಪ್ರಜ್ಞೆಯ ಜೊತೆಗೆ ಮಹಿಳಾ ಸಂವೇದನೆಯ ಪ್ರಭಾವದಿಂದ ವಸ್ತು ವಿನ್ಯಾಸ, ಭಾಷೆ, ಶಿಲ್ಪ, ಶೈಲಿ, ನಿರೂಪಣಾತಂತ್ರ ಎಲ್ಲಾ ದೃಷ್ಟಿಯಿಂದಲೂ ಉತ್ತಮ ಮಟ್ಟದ ಕವಿತೆಯನ್ನು ರಚಿಸಿದ್ದಾರೆ.

ಇಲ್ಲಿ ಚರ್ಚಿತವಾದ ವಿಷಯಗಳನ್ನು ಅವಲೋಕಿಸಿದಾಗ ಪುರುಷ, ಸಾಮಾಜಿಕ ಧೋರಣೆ, ಲಿಂಗ ಸಮಾನತೆ, ದೌರ್ಜನ್ಯ, ಸಂಪ್ರದಾಯಗಳ ಬಿಗಿಹಿಡಿತ ಭಾವನೆಗಳ ಅಳಕು ಹಿಂಜರಿಕೆ, ಮೂಲಭೂತ ಅವಶ್ಯಕತೆಗಳ ಕೊರತೆ, ಪಾತಿವ್ರತ್ಯದ ಪ್ರಶ್ನೆ, ಗಂಡು ಸಂತಾನದ ಬಯಕೆ ವಿರೋಧ, ಲೈಂಗಿಕ ನ್ಯಾಯ ಸ್ತ್ರೀಯ ದುಡಿಯುವ ಶಕ್ತಿ, ಸಾಮಾಜಿಕ ಅಧಿಕಾರ ಶಕ್ತಿ, ಮಹಿಳಾ ಸ್ವಾತಂತ್ರ್ಯ ಸಂಘಟನೆ, ಗಂಡಿನ ನಿರಾಕರಣೆ, ಮಹಿಳೆಯ ಸ್ಥಾನ ನಿರ್ದೇಶಕ ಮುಂತಾದವುಗಳ ದೀರ್ಘ ಚರ್ಚೆ ಕುರಿತಂತೆ ಚರ್ಚಿತ ವಿಷಯಗಳಾದವು.

'ಸಾಂಪ್ರಾದಾಯಕ ಮೌಲ್ಯಗಳ ವಿರೋಧ, ವೈಯಕ್ತಿಕತೆಯ ಸ್ಥಾಪನೆಯ ಯತ್ನ ಈಚಿನ ಮಹಿಳಾ ಕಾವ್ಯದಲ್ಲಿ ಸತತ ವಾದ, ತೀವ್ರವಾದ ಪ್ರತಿಪಾದನೆ ಪಡೆದಿದೆ. ಪರಂಪರಾಗತ ಮೌಲ್ಯಗಳ ಸಕಾರವಾಗಿದ್ದ ಪುರಾಣೇತಿಹಾಸಿಗಳ ಸ್ತ್ರೀ ಮಾದರಿಗಳು ಇಂದು ಮಾದರಿಗಳಾಗಿಲ್ಲ. ಬದಲಿಗೆ ಅವು 'ಶಾಪವಾಗಿವೆ' ಸ್ತ್ರೀ ಕುಲಕ್ಕೆ ಎಂಬ ಅರಿವಿದೆ. ಈ ಪುರಾಣ ಭಂಜಕ ಧೋರಣೆ ಹೊಸ ಪ್ರತೀಕಗಳ ಸ್ಥಾಪನೆಯ ಒಂದು ಹಂತವೇ ಆಗಿದೆ. ತನ್ನ ಹಿಂದಿನ ಪರಂಪರೆ, ತನ್ನ ಸುತ್ತಲಿನ ಸ್ಥಾಪಿತ ಮೌಲ್ಯಗಳು ತನ್ನ ಬದುಕಿಗೆ ಅರ್ಥಪೂರ್ಣವಾದ ನಿಜವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾ ಒಂದು ಪರ್ಯಾಯ ಮಾನದಂಡದ ಕಡೆಗೆ ಇಂದಿನ ಮಹಿಳಾಕಾವ್ಯ ಹೊರಳುತ್ತಿದೆ'. (ವಿಜಯದಬ್ಬೆ ಮಹಿಳಾ ಸಾಹಿತ್ಯ ಸಮಾಜ-೯೮) ಇದನ್ನು ಇತ್ತೀಚಿನ ಮಹಿಳಾ ಕಾವ್ಯದಲ್ಲಿ ಗುರುತಿಸಬಹುದಾಗಿದೆ. ಬದುಕಿನೊಂದಿಗೆ ತಾದ್ಯಾತ್ಮ

ಹೊಂದುವುದರ ಜೊತೆಗೆ ಬದುಕನ್ನು ತಿಳಿಯುವ ಕ್ರಿಯೆಯಲ್ಲಿ ತೊಡಗಿದ ಮಹಿಳೆಗೆ ತನ್ನ ನೋವುಗಳಿಗೆ ಪ್ರತಿಭಟನಾತ್ಮಕವಾಗಿ ಕವನ ಬರೆಯಲು ಪ್ರಾರಂಭಿಸಿದಳು. ಇದರಲ್ಲಿ ಭಾವನೆಗಳನ್ನು ವ್ಯಕ್ತಪಡಿಸಿದಳು. ಹೀಗೆ ಮಹಿಳಾ ಕಾವ್ಯವನ್ನು ನೋಡಿದಾಗ ಹೆಣ್ಣಿನ ಚಿತ್ರಣವನ್ನು ಹೆಣ್ಣೇ ಮಾಡಿರುವುದರಿಂದ ಸಹಜವಾದ ಧ್ವನಿ ಮೂಡಿದೆ. ಹಾಗೆಯೇ ನೈಜ ಚಿತ್ರಣವಿದೆ.

ಆಧುನಿಕ ಮಹಿಳಾ ಕಾವ್ಯ ರಚನಾಕ್ರಮವನ್ನು ನೋಡಿದಾಗ ಆಧುನಿಕ ಕಾವ್ಯದ ಆರಂಭದ ಮಹಿಳೆಯರು (ಬೆಳಗೆರೆ ಜಾನಕಮ್ಮ, ಲಲಿತದೇವಿ ಲಿಗಾಡೆ, ತಿರುಮಲೆ ರಾಜಮ್ಮ) ದಲಿತ ಬಂಡಾಯ ಚಳುವಳಿಗಳಿಂದ ಪ್ರೇರಿತರಾಗಿ ಪುರುಷ ಪ್ರಧಾನ ಸಾಮಾಜಿಕ ರೀತಿ-ನೀತಿ ಸಂಪ್ರದಾಯಗಳನ್ನು ಧಿಕ್ಕರಿಸಿದ್ದನ್ನು ಕಾಣುತ್ತೇವೆ. ಎರಡನೆ ಹಂತದಲ್ಲಿ ಪುರುಷನಿಗಿಂತ ಭಿನ್ನವಾದ ಹಾಗೂ ಸ್ವತಂತ್ರವಾದ ತನ್ನ ಅಸ್ಥಿತ್ವವನ್ನು ಸ್ಥಾಪಿಸುವ ಸ್ಪಷ್ಟ ಧೋರಣೆಗಳನ್ನು ಕಂಡುಕೊಂಡಿದ್ದನ್ನು ಕಾಣುತ್ತೇವೆ. ಮೂರನೆಯ ಹಂತದಲ್ಲಿ ವ್ಯವಸ್ಥೆಯ ವಿರುದ್ಧ ತಾವು ಪ್ರತಿಭಟಿಸುವ ಹಳಸಲಾದ ಮೌಲ್ಯಗಳಿಗೆ ಪರ್ಯಾಯವಾಗಿ ತಾವು ಕಂಡುಕೊಂಡ ಮಾರ್ಗ ಸೃಷ್ಟಿಸಿಕೊಂಡು ತಮ್ಮ ಮಾರ್ಗವನ್ನು ಸ್ಪಷ್ಟಪಡಿಸಿಕೊಂಡಿರುವುದನ್ನು ಕಾಣಬಹುದು. ಒಟ್ಟಾರೆ ಎಲ್ಲಾ ಹೊಸಗನ್ನಡ ಮಹಿಳಾ ಕಾವ್ಯಗಳಿಗೆ ಬೆನ್ನೆಲುಬು ಎನಿಸಿದ್ದು ಸ್ತ್ರೀ ಸಂವೇದನೆ.

ಈ ಪ್ರಬಂಧದಲ್ಲಿ ಒಟ್ಟಾರೆ ಒಂಬತ್ತು ಅಧ್ಯಾಯಗಳಿವೆ.

ಮೊದಲನೇ ಭಾಗದಲ್ಲಿ ಪ್ರಬಂಧದ ಉದ್ದೇಶ ಮತ್ತು ಸ್ವರೂಪವನ್ನು ಹೇಳಲಾಗಿದೆ. ಮಹಿಳಾ ಕಾವ್ಯದ ರೂಪುರೇಷೆ ಜೊತೆಗೆ ವ್ಯಾಪ್ತಿಯನ್ನು ಗುರುತಿಸಿ ಹೇಳಲಾಗಿದೆ.

ಎರಡನೇ ಭಾಗದಲ್ಲಿ ಅಧುನಿಕ ಮಹಿಳಾ ಕಾವ್ಯದಲ್ಲಿ 'ಆದರ್ಶ ಪುರುಷ' ನ ವ್ಯಾಖ್ಯೆಗಳು ಪ್ರಬಂಧವನ್ನು ಗ್ರಹಿಸಲು ಅದರ ನಿಶ್ಚಿತವಾದ ಅರ್ಥವನ್ನು ತಿಳಿಸಬೇಕಾಗುತ್ತದೆ. 'ಆದರ್ಶ' ಪದದ ಅರ್ಥ ಅದನ್ನು ಗ್ರಹಿಸುವ ಬಗ್ಗೆ ಅದನ್ನು ವಿದ್ವಾಂಸರು ಹೇಳಿರುವ ಬಗೆಯನ್ನು ಚರ್ಚಿಸಲಾಗಿದೆ.

ಮೂರನೇ ಭಾಗದಲ್ಲಿ ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ಮಾಡಲಾಗಿದೆ. ಮಹಿಳಾ ಕಾವ್ಯಗಳನ್ನು ಕುರಿತು ಅಮೂಲಾಗ್ರವಾಗಿ ಚರ್ಚಿಸಿದ ಪುಸ್ತಕಗಳ ಸಂಖ್ಯೆ ಕಡಿಮೆಯಾದರೂ ಈ ಪ್ರಬಂಧಕ್ಕೆ ಮೂಲ ಪ್ರೇರಣೆಯನ್ನು ಕೊಡುವಲ್ಲಿ ಅವುಗಳ ಸಹಾಯವನ್ನು ಮರೆಯುವಂತಿಲ್ಲ.

ನಾಲ್ಕನೇ ಭಾಗದಲ್ಲಿ ಹೊಸಗನ್ನಡ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ ಮತ್ತು ಮಹಿಳಾ ಸಂವೇದನೆ ಎಂಬುದಾಗಿದೆ. ಮಹಿಳಾ ಸಂವೇದನೆ ಇಡೀ

ಪ್ರಬಂಧದ ಪ್ರಸ್ತುತತೆಯಲ್ಲಿ ಎಷ್ಟು ಪ್ರಾಮುಖ್ಯತೆ ಮತ್ತು ಅದರ ಅವಶ್ಯಕತೆ ಏನು ಎಂಬುದರ ಬಗ್ಗೆ ಬೆಳಕುಚೆಲ್ಲಿದೆ. ಪುರುಷ ವಿರೋಧಿ ನೆಲೆಯಲ್ಲಿ 'ಆದರ್ಶ ಪುರುಷ' ನ ನೆಲೆಯ ಹುಡುಕುವಿಕೆಯ ಬಗ್ಗೆ ಚರ್ಚಿಸಲಾಗಿದೆ. ಅಂತಿಮದಲ್ಲಿ ಆದರ್ಶ ಪುರುಷನ ಅರ್ಥ ಸ್ಪಷ್ಟತೆಯಲ್ಲಿ (ಹುಡುಕಾಟದಲ್ಲಿ) ಮಹಿಳಾ ಸಂವೇದನೆಯ ಸಿದ್ಧಾಂತಗಳು ವಹಿಸಿದ ಪಾತ್ರಗಳ ವಿಶ್ಲೇಷಣೆಯಿದೆ. ಈ ಭಾಗದಲ್ಲಿ ಅಂತಿಮವಾಗಿ ಮಹಿಳಾ ಕಾವ್ಯದಲ್ಲಿ ಮಹಿಳಾ ಸಂವೇದನೆಯ ಒಟ್ಟಾರೆ ಪ್ರಭಾವವನ್ನು ಬಿಡಿಸಿ ಹೇಳಲಾಗುತ್ತಿದೆ.

ಐದನೇ ಭಾಗದಲ್ಲಿ ಸಂಬಂಧವಾಚಕಗಳ ಮೂಲಕ 'ಆದರ್ಶ ಪುರುಷ'ನ ಹುಡುಕಾಟದ ಪರಿಶೋಧನೆಯಲ್ಲಿ ತೊಡಗಲಾಗಿದೆ. ಇಲ್ಲಿ ಪುರುಷನ ಹಲವು ರೂಪಗಳಾದ 'ತಂದೆ, ಮಗ, ಪ್ರೇಮಿ, ಶತ್ರು' ಪಾತ್ರಗಳ ಮೂಲಕ ಆದರ್ಶದ ಹುಡುಕಾಟವನ್ನು ನೋಡಬಹುದು.

ಆರನೆಯ ಭಾಗದಲ್ಲಿ ಜಾಗೃತಿಯ ಪರಿಕಲ್ಪನೆಯಡಿಯಲ್ಲಿ ಚರ್ಚಿಸಲಾಗಿದೆ. ಪಿತೃಮೌಲ್ಯ ಕವನಗಳಿಗಿಂತ ಭಿನ್ನವಾದ ಚೌಕಟ್ಟನ್ನು ಈ ಜಾಗೃತಿ ಮಹಿಳಾ ಕಾವ್ಯದಲ್ಲಿ ಕಾಣಬಹುದು. ಸಾಮಾಜಿಕ ಪಿತೃವ್ಯವಸ್ಥೆ ಲಿಂಗಾಧಾರಿತ ಸಾಮಾಜೀಕರಣ ವ್ಯವಸ್ಥೆಗಳು ಸೃಷ್ಟಿಸಿದ ನಿಯಮದ ಕಟ್ಟಲೆ ಸಂಪ್ರದಾಯಗಳು, ಇವುಗಳನ್ನು ಹಿಂಬಾಲಿಸಿದ ವರದಕ್ಷಿಣೆ, ಅತ್ಯಾಚಾರಾ, ಲೈಂಗಿಕ ಕಿರುಕುಳ ಹೀಗೆ ಎಲ್ಲವನ್ನು ತನ್ನ ಸ್ತ್ರೀ ಸಂವೇದನೆಯಿಂದ ನೋಡಿದ್ದಾಳೆ. ಇಲ್ಲಿ ಆದರ್ಶ ಪುರುಷ ಹುಡುಕಾಟ ಕವನದಲ್ಲಿ ಆತನ ಆದರ್ಶ ಗುಣಗಳನ್ನು ಹೇಳುವ ಜೊತೆಗೆ ಆತನ ಆದರ್ಶವಲ್ಲದ ಗುಣಗಳನ್ನು ತೌಲನಿಕವಾಗಿ ಚರ್ಚಿಸಲಾಗಿದೆ

ಏಳನೇ ಭಾಗದಲ್ಲಿ ಪಿತೃಪ್ರಧಾನ ಮೌಲ್ಯ ಪ್ರತಿಬಿಂಬಿಸುವ ಮಹಿಳಾ ಕಾವ್ಯದಲ್ಲಿ ಆದರ್ಶದ ಹುಡುಕಾಟ ನಡೆಸಲಾಗಿದೆ. ನಮ್ಮ ಒಟ್ಟು ಸಾಮಾಜಿಕ ವ್ಯವಸ್ಥೆಯು ಪುರುಷ ಪ್ರಧಾನವಾದ್ದರಿಂದ ನಮ್ಮ ಶಿಕ್ಷಣ ನೀತಿಶಾಸ್ತ್ರ ಕಾನೂನು, ಆಡಳಿತ, ಉದ್ಯೋಗ ಈ ಎಲ್ಲಾ ಕ್ಷೇತ್ರದಲ್ಲಿ ಗಂಡಿಗೊಂದು ಹೆಣ್ಣಿಗೊಂದು ಪ್ರತ್ಯೇಕ ಮಾನದಂಡ ಏರ್ಪಟ್ಟಿರುವುದು ಸಹಜವೇ ಆಗಿದೆ. ಪಿತೃಪ್ರಧಾನ ಮೌಲ್ಯಗಳಿಂದ ಆವರಿಸಲ್ಪಟ್ಟ ಸಮಾಜದಲ್ಲಿ ಬೆಳೆದ ಹೆಣ್ಣು ಈ ಮೌಲ್ಯಗಳಿಂದ ಪ್ರಭಾವಿ ಅಗಿರುತ್ತಾಳೆ. ಅವುಗಳನ್ನು ನಂಬಿರುತ್ತಾಳೆ. ಇಂತಹ ವಾದದಲ್ಲಿ ಬೆಳೆದ ಕವಿಯತ್ರಿಯೊಬ್ಬಳು ಕಾವ್ಯವು ಸಾಮಾನ್ಯವಾಗಿ ಪಿತೃಪ್ರಧಾನ ಮೌಲ್ಯಕ್ಕೆ ಜೋತು ಬಿದ್ದಿರುತ್ತದೆ.

ಈ ವಾತಾವರಣದ ಕವನಗಳು ಗಂಡಿನ, ಮೇಲಸ್ತರ, ದೈವಿಭಾವನೆ, ಪತಿಸೇವೆ, ಇಂತಹ ಮೌಲ್ಯಗಳನ್ನು ಎತ್ತಿ ಹಿಡಿಯುತ್ತದೆ. ಇದರಲ್ಲಿ ಯಾವುದೇ ರೀತಿಯ ಶೋಷಣೆಯ,

ದಬ್ಬಾಳಿಕೆಯ ಅಸ್ತಿತ್ವಕ್ಕೆ ಬೆಲೆ ಇಲ್ಲ. ಈ ಭಾಗದಲ್ಲಿ ಸಮರ್ಪಣೆ, ಆಶಯ-ಕನಸು, ನಿರೀಕ್ಷೆ, ನಿವೇದನೆಗಳ ವಿಭಾಗ ನೋಡಬಹುದು – ಈ ಎಲ್ಲಾ ಭಾವಗಳು ಹೆಣ್ಣು ತನ್ನ ಆದರ್ಶ ಪುರುಷನಿಗೆ ತಕ್ಕುದ್ದಾಗಿ ನಡೆದುಕೊಳ್ಳುವ ಭಾವವಾಗಿದೆ.

ಎಂಟನೇ ಭಾಗದಲ್ಲಿ ಪುರಾಣ ಪಾತ್ರಗಳ ಮೂಲಕ ಹುಡುಕಾಟ ನಡೆಸಿದೆ. ಆಧುನಿಕ ಕವಿಯತ್ರಿಯರ ಬಂಡಾಯಕ್ಕೆ ಸಮೀಪವಾದ ಮನೋಧರ್ಮದಿಂದ ಕಾವ್ಯ ರಚಿಸುತ್ತಿದ್ದಾರೆ. ಹಿಂದಿನಿಂದಲೂ ಪೌರಾಣಿಕ ಸ್ತ್ರೀ ಸುತ್ತಾ ಹೆಣೆಯಲಾದ ವಿಚಾರ, ಸಂಪ್ರದಾಯ, ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸುವುದರ ಮೂಲಕ ತನ್ನ ಪರಿಕಲ್ಪನೆಯನ್ನು ಅಭಿವ್ಯಕ್ತಗೊಳಿಸಿದ್ದಾರೆ. ಇಲ್ಲಿ ಕಂಡು ಬರುವ ಹೆಣ್ಣಿನ ಚಿತ್ರಗಳು ಭೂತಕಾಲದ ಆದರ್ಶವೆನಿಸುವ, ಇಂದಿನ ಜನಾಂಗಕ್ಕೆ ಅನುಕರಿಸುವಂತಹ ಪಾತ್ರಗಳಂತೆ ಚಿತ್ರಿತಗೊಂಡಿದ್ದರೂ ಕೂಡ ಇಂದಿನ ಜಾಗೃತ ಸ್ತ್ರೀ ಕವಿಯತ್ರಿಯರು ಅಂತಹ ಆದರ್ಶ ಪಾತ್ರಗಳನ್ನು ಪುನರ್ ವಿಮರ್ಶಿಸಿದ್ದಾಳೆ.

ಪೌರಾಣಿಕ ಪುರುಷ ಮತ್ತು ಪ್ರಭುತ್ವದ ನೆಲೆಗಳು, ಪೌರಾಣಿಕ ಪುರುಷ ಮತ್ತು ಪ್ರಸ್ತುತತೆ ಮತ್ತು ಪುರಾಣ ಸ್ತ್ರೀಯರು ಮತ್ತು ಅವರ ಕಲ್ಪನೆಯಲ್ಲಿ ಆದರ್ಶ ಪುರುಷನ ವಿಮರ್ಶೆ ಹೀಗೆ ಹಲವು ಹಂತದಲ್ಲಿ ಪೌರಾಣಿಕ ಪುರುಷನಲ್ಲಿ ಆದರ್ಶವನ್ನು ಹುಡುಕಲಾಯಿತು.

ಒಂಭತ್ತನೇ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳು ಮತ್ತು ಉಪಸಂಹಾರ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ ಮತ್ತು ಆಯ್ಕೆಯ ಹಿಂದಿನ ನೆಲೆಗಳು

ಆಧುನಿಕ ಕಾವ್ಯದ ವ್ಯಾಪ್ತಿ ಸಾಕಷ್ಟು ವಿಸ್ತೃತವು ವೈವಿದ್ಯಯವು ಆಗಿದೆ. ಸ್ವಾತಂತ್ರ್ಯ ನಂತರದಲ್ಲಿ ಆಧುನಿಕ ಮಹಿಳಾ ಕಾವ್ಯವು ಪ್ರಬುದ್ಧತೆಗೆ ಬಂದಿತು. ಈ ಕಾಲಮಾನವನ್ನು ಆಧಾರವಾಗಿಟ್ಟುಕೊಂಡು ಆಧುನಿಕ ಮಹಿಳಾ ಕಾವ್ಯದ ಕಾಲವನ್ನು ನಿಗದಿಪಡಿಸಿದೆ.

೧. ಆಧುನಿಕ ಮಹಿಳಾ ಕಾವ್ಯದ ಸಂಪೂರ್ಣ ಸಮೀಕ್ಷೆಯು ಈ ಮಹಾಪ್ರಬಂಧದ ವ್ಯಾಪ್ತಿಯನ್ನು ಮೀರಿರುವುದರಿಂದ ಪ್ರಾತಿನಿಧಿಕ ಕವಿಯತ್ರಿಯರ ಸ್ತ್ರೀವಾದಿ ವಿಮರ್ಶೆಯನ್ನಷ್ಟೆ ಕೈಗೆತ್ತಿಕೊಳ್ಳಲಾಗಿದೆ.

೨. ಸ್ವಾತಂತ್ರ್ಯ ನಂತರದ ಮಹಿಳಾ ಕಾವ್ಯ ಆಧುನಿಕ ಮಹಿಳಾ ಕಾವ್ಯವಾಗುತ್ತದೆ. ಈ ಆಧುನಿಕ ಮಹಿಳಾ ಕಾವ್ಯದ ಹಿನ್ನಲೆಯಲ್ಲಿ ಆದರ್ಶ ಪುರುಷನನ್ನು ಹುಡುಕಲಾಗಿದೆ.

೩. ಆದರ್ಶ ಎಂಬ ಪದವನ್ನು ಅರ್ಥೈಯಿಸುವಲ್ಲಿ ವೈಯಕ್ತಿಕವಾಗಲಿ ವಿದ್ವಾಂಸರ ದೃಷ್ಟಿಯಿಂದಾಗಲಿ ಅರ್ಥೈಯಿಸಿಲ್ಲ. ಆಧುನಿಕ ಮಹಿಳಾ ಕಾವ್ಯ ಸ್ತ್ರೀವಾದದ ಧೋರಣೆಗಳು

ಹೆಚ್ಚು ಪ್ರಚಲಿತವಾದ್ದರಿಂದ ಆದರ್ಶದ ಅರ್ಥೈಸುವಿಕೆಯನ್ನು ಸ್ತ್ರೀವಾದದ ಧೋರಣೆಯಡಿಯಲ್ಲಿ ಗುರುತಿಸಲಾಗಿದೆ.

೪. ಆಧುನಿಕ ಮಹಿಳಾ ಕನ್ನಡ ಕಾವ್ಯದ ಆಧ್ಯಯನದಲ್ಲಿ ರೂಢಿಗಳ ವಿಭಾಗ ಕ್ರಮವಾದ ನವ್ಯ, ಪ್ರಗತಿಶೀಲ, ಬಂಡಾಯ, ದಲಿತ ಕ್ರಮವನ್ನು ಬಳಸಿಲ್ಲ. ಕಾವ್ಯದ ಸಮಯ, ಸಾಹಿತ್ಯ ಚಳುವಳಿಗಳು ಪುರುಷನನ್ನು ಹುಡುಕುವಲ್ಲಿ ಅನುಕೂಲವಾಗುವಂತೆ ಹೆಚ್ಚು ಒತ್ತು ನೀಡಲಾಗಿದೆ.

೫. ಮಹಿಳಾ ಕಾವ್ಯರಚನೆಯ ಕಾಲಘಟ್ಟದ ಆರಂಭದಿಂದ ಈವರೆಗಿನ ಕಾವ್ಯಗಳವರೆಗೂ ಆದರ್ಶ ಪುರುಷ ವಿಭಿನ್ನ ಸ್ವರೂಪಗಳು ಹೇಗೆ ಕಂಡುಬಂದಿವೆ? ಅವುಗಳಲ್ಲಿನ ಸೂಕ್ಷ್ಮಗಳು ಎಂತವುಗಳು ಎಂಬುದನ್ನು ತಿಳಿಯುವುದು ಅಧ್ಯಯನದ ಉದ್ದೇಶವಾಗಿದೆ.

೬. 'ಆದರ್ಶ' ಎನ್ನುವ ಪರಿಕಲ್ಪನೆಯಲ್ಲಿ ಬರುವ ಕಾವ್ಯಗಳನ್ನು ನೇರವಾಗಿ ಗುರುತಿಸಲಿಲ್ಲ. ಆಧುನಿಕ ಮಹಿಳಾ ಕಾವ್ಯ ಆದರ್ಶ ಪುರುಷನನ್ನು ಗುರುತಿಸಿರುವುದಕ್ಕಿಂತ ದ್ವಂದ್ವಾತ್ಮಕವಾಗಿ (ನೇರವಾಗಿ ಹೇಳಿದಲೇ ಇರುವುದು) ಹೇಳಲಾಗಿದೆ. ನಕಾರಾತ್ಮಕವಾಗಿಯೇ ಪುರುಷನನ್ನು ಹೆಚ್ಚು ಪ್ರತಿಬಿಂಬಿಸಿದ ಕಾರಣ. ಈ ನಕಾರಾತ್ಮಕತೆಯಲ್ಲಿ ಕವಿಯತ್ರಿಯರು ಬಯಸುವ ಆದರ್ಶ ಗುಣಗಳನ್ನು ಧ್ವನ್ಯಾತ್ಮಕವಾಗಿ ಹೇಳಲಾಗಿದೆ.

೭. ಹೊಸಗನ್ನಡ ಮಹಿಳಾ ಕಾವ್ಯ ಬೆಳೆದು ಬಂದ ಹಿನ್ನಲೆ, ಪ್ರಭಾವಗಳು ಇವುಗಳನ್ನು ಸ್ತ್ರೀವಾದದ ಹಿನ್ನಲೆಯಲ್ಲಿ ಚರ್ಚಿಸಲಾಗಿದೆ.

ಹೀಗೆ ಆಧುನಿಕ ಮಹಿಳಾ ಕಾವ್ಯದಲ್ಲಿ 'ಆದರ್ಶ ಪುರುಷನ' ಹುಡುಕಾಟದಲ್ಲಿ ನಿಶ್ಚಿತ ದೋರಣೆಗಳನ್ನು ಇಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

ಮಹಿಳಾ ಕಾವ್ಯವೆಂಬುದು ಮಹಿಳೆಯ ಅಂತರ್ಯದ ಸಂಪೂರ್ಣ ಚಿತ್ರಣವಾಗಿದೆ. ಕವಿಯೊಬ್ಬನ ಬರಹ ಅನುಭಾವ ಸಾಹಿತ್ಯವಾದರೆ (ಅನುಭಾವ–ಬೇರೆಯವರ ಭಾವವನ್ನು ತನ್ನದಾಗಿಸುವುದು) ಕವಿಯತ್ರಿಯದು ಅನುಭವ ಸಾಹಿತ್ಯ. ತಾನು ಅನುಭವಿಸಿದ್ದನ್ನು, ಬಯಸಿದ್ದನ್ನು ಕಾವ್ಯವಾಗಿಸಿದ್ದು ಅವಳ ಹಿರಿಮೆ. ಇಂತಹ ಮಹಿಳಾ ಕಾವ್ಯದಲ್ಲಿ ಹಲವು ಧ್ವನಿ ಸಾಧ್ಯತೆಗಳ ನಡುವೆ ಒಂದು ಧ್ವನಿ ಸಾಧ್ಯತೆಯನ್ನು ಹೇಳ ಹೊರಟಿದೆ. ಈ ಪ್ರಯತ್ನದ ಫಲವೇ ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ. 'ಸ್ತ್ರೀ ವಾದ ಮಾನವತಾವಾದದ ಒಂದು ಭಾಗವೇ ಆಗಿದೆ. ಮತ್ತೊಬ್ಬ ವ್ಯಕ್ತಿಯ ಘನತೆ ಅಂತಸತ್ವ ಸ್ವಾತಂತ್ರ್ಯವನ್ನು ತಕ್ಕ ವಿಶ್ವಾಸ ಗೌರವದಿಂದ ಮಾನ್ಯಮಾಡಬೇಕೆಂದೇ ಈ ವಾದದ ಒಳತಿರುಳು

ಆಗಿದೆ'(ವಿಜಯಾದಬ್ಬೆ ಮಹಿಳಾ ಸಾಹಿತ್ಯ ಸಮಾಜ-೧೯೮೯). ಆದರ್ಶ ಪುರುಷನ ರೂಪು ರೇಷೆಯನ್ನು ಈ ಸ್ತ್ರೀ ವಾದಿನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಮಹಿಳಾ ಕಾವ್ಯದಲ್ಲಿ ಹೆಣ್ಣು ಬದುಕಿನ ಮೌಲ್ಯಗಳನ್ನು ಕುರಿತಾದ ಸ್ಪಂದನ, ಚಿಂತನಾ, ಪ್ರತಿಕ್ರಿಯೆಗಳು ಹಿಂದೆಂದು ಇಲ್ಲದಷ್ಟು ಈಗ ವಿಪುಲವಾಗಿದೆ, ವಿಭಿನ್ನವಾಗಿದೆ. ಮಹಿಳೆಯರ ಬದುಕನ್ನು ಕುರಿತ ಸಮಾಜದ ದೃಷ್ಟಿಕೋನದಲ್ಲಿ ವ್ಯತ್ಯಾಸ ಆಗುತ್ತಿವೆ. ಮಹಿಳಾ ಕಾವ್ಯ ಹೊಸ ಸವಾಲುಗಳನ್ನು ಎದುರಿಸುತ್ತಾ ವಿಶಿಷ್ಟವಾಗಿ ಸ್ವತಂತ್ರ್ಯವಾಗಿ ಬೆಳೆಯುತ್ತಿರುವ ಸಂದರ್ಭದಲ್ಲಿ ಬದಲಾಗುತ್ತಿರುವ ಮಹಿಳೆಯರ ಬಾಹ್ಯ ಮತ್ತು ಆಂತರಿಕ ಜಗತ್ತಿಗೆ ಧ್ವನಿಯಾಗಿ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಪರಿಕಲ್ಪನೆ ವಿಭಿನ್ನವಾಗಿ ಮೂಡಿಬರುತ್ತಿದೆ. ಬದಲಾದ ಮಹಿಳಾ ಜಗತ್ತಿನ ರೀತಿಯಲ್ಲಿ ಆದರ್ಶ ಪುರುಷನು ಕಾಲಮಾನದಿಂದ ಬದಲಾಗುತ್ತಾ ಹೋಗುತ್ತಾನೆ. ಆದರ್ಶದ ರೂಪುರೇಷೆಗಳು ಕಾಲಕ್ಕೆ ತಕ್ಕಂತೆ ರೂಪಾಂತರ ಹೊಂದುತ್ತದೆ.

ಅಧ್ಯಾಯ ೨

ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಅರ್ಥ, ವ್ಯಾಖ್ಯೆ

೨

ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಅರ್ಥ, ವ್ಯಾಖ್ಯೆ

'ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ' ಎನ್ನುವ ಪ್ರಸ್ತುತ ಪ್ರಬಂಧವನ್ನು ಅವಲೋಕಿಸಿದಾಗ, ಪ್ರಬಂಧಧ ಒಳದಾರಿಯಲ್ಲಿ ನಡೆಯುವ ಪೂರ್ವದಲ್ಲಿ ನಾವು ಪ್ರಾಥಿನಿಧಿಕವಾಗಿ ಆದರ್ಶಪುರುಷ ಎಂಬ ಪದದ ಅರ್ಥವನ್ನು ಸ್ಪಷ್ಟಪಡಿಸಿ ಕೊಳ್ಳಬೇಕಾಗುತ್ತದೆ.

ಆದರ್ಶ ಪುರುಷನೆಂದರೆ ಯಾರು? ಅದರ ಅರ್ಥವಂತಿಕೆ ಏನು?
ಆದರ್ಶ ಪುರುಷ ಮಹಿಳಾ ಕಾವ್ಯದಲ್ಲಿ ಕಂಡುಬರುವುದು ಹೇಗೆ?
ಆದರ್ಶ ಪುರುಷನನ್ನು ಗುರುತಿಸುವ ಮಾನದಂಡ (*Identity*) ಏನು?
ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟವೆಂದರೇನು?
ಹುಡುಕಾಟದ ವಿಧಾನವೇನು?

ಹೀಗೆ ಹಲವು ಪ್ರಶ್ನೆಗಳು ಕಂಡುಬರುತ್ತದೆ. ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನನ್ನು ಹುಡುಕಲು ಹೊರಟಾಗ ನಾವು ಪ್ರಾಥಮಿಕವಾಗಿ ಆಧುನಿಕ ಪುರುಷನ ಅರ್ಥವಂತಿಕೆಯನ್ನು ಆದರ್ಶ ಪುರುಷನೆಂದರೆ ಯಾರು ಎಂಬುದರ ಜಿಜ್ಞಾಸೆ ಮತ್ತು ಆತನನ್ನು ಮಹಿಳಾ ಕಾವ್ಯದಲ್ಲಿ ಗುರುತಿಸಿಕೊಂಡ ಮಾನದಂಡವನ್ನು ನೋಡಬೇಕಾಗುತ್ತದೆ.

ಹಾಗಾದರೆ ಆದರ್ಶ ಪುರುಷನೆಂದರೆ ಯಾರು?

ಆದರ್ಶ ಪುರುಷನೆಂಬ ಪದವನ್ನು ಒಡೆದು ನೋಡಿದಾಗ ಆದರ್ಶದ ಮೂಲ ಅರ್ಥ ನೋಡಬೇಕಾಗುತ್ತದೆ. ಆದರ್ಶವೆಂದರೆ ಉತ್ತಮವಾದ ಗುಣ, ಇನ್ನೊಬ್ಬರು ಅನುಕರಿಸುವ ಮಾದರಿ ಉಳ್ಳದ್ದು ಎಂಬ ಮೂಲಾರ್ಥವನ್ನು ಗ್ರಹಿಸಬಹುದು. ವ್ಯಾಕರಣಬದ್ಧವಾಗಿ ಸಮಾಲೋಚಿಸಿದಾಗ ಆದರ್ಶ ಪ್ರಾಯವಾದ, ಆದರ್ಶಬದ್ಧವಾದ, ಆದರ್ಶನೀಯ ಎಂಬುದಾಗಿ ಹಲವು ಕ್ರಿಯಾಪದಗಳಿಂದ ಕೂಡಿರುವಂತದ್ದು, ಆದರ್ಶವ್ಯಕ್ತಿ, ಆದರ್ಶವಂತ,ಎನ್ನುವ ನಾಮಪದಗಳೊಂದಿಗೆ ಗುರುತಿಸಿಕೊಂಡು ಆದರ್ಶದ ಜಗತ್ತು ಆದರ್ಶದ ಮದುವೆ, ಆದರ್ಶ ಜೀವನ... ಹೀಗೆ ಆದರ್ಶವನ್ನು ಅಂಟಿಸಿಕೊಂಡ ಪದಗಳು ಕನ್ನಡದಲ್ಲಿ ಬಳಕೆಗೊಂಡಿವೆ.

ಆದರ್ಶ ಎಂಬ ಪದವನ್ನು ಕುರಿತಂತೆ ಕನ್ನಡ ಸಾಹಿತ್ಯ ಪ್ರಕಟಿತ ಕನ್ನಡ ಇಂಗ್ಲೀಷ್ ನಿಘಂಟಿನಲ್ಲಿ ಕನ್ನಡಿ, ಧ್ಯೇಯ, ಗುರಿ ಎಂದು ಹೇಳಲಾಗಿದೆ[೧]

ಆದರ್ಶ ಪುರುಷನೆನ್ನುವ ಪದ ಮೂಲವಾಗಿ ಗುಣಾವಳಿಯನ್ನು ತಿಳಿಸುವ ಪದ. ಆದರ್ಶ ಪುರುಷ ಇಲ್ಲಿ ಆದರ್ಶಹೊಂದಿರುವ 'ಮಾದರಿ ಪುರುಷ' ಎನ್ನುವ ಅರ್ಥದಲ್ಲಿ ಒಳಕೆಗೊಂಡಿದೆ. ಗುಣಾವಳಿ ಪುರುಷವಾಚಕವನ್ನು ಒಳಗೊಂಡಿದೆ. ಉದಾ :- ರಾಮ ಪುರುಷ ಆತನ ಶೌರ್ಯ, ಪಿತೃಭಕ್ತಿ, ತಂದೆಯ ಮಾತಿಗಾಗಿ ೧೪ ವರ್ಷ ವನವಾಸ ಇವುಗಳು ಆದರ್ಶ. ಇಂಥಾ ಆದರ್ಶವನ್ನು ಒಳಗೊಂಡ ಪುರುಷ ಆದರ್ಶ ಪುರುಷ, ಹೀಗೆ ಆದರ್ಶದ ಪರಿಕಲ್ಪನೆಯನ್ನು ಹೇಳಬಹುದು. ಆದರ್ಶವೆಂದರೆ ಒಟ್ಟಾರೆ ಮಾನವೀಯತೆ, ಪ್ರೀತಿ ನೈತಿಕತೆ, ಸಂಯಮ ಹೃದಯ ವೈಶಾಲ್ಯಗಳ ಮೊತ್ತ. ಆದರ್ಶ ಪುರುಷನನ್ನು ಕುರಿತಂತೆ ಹಲವು ವಿಮರ್ಶಕರು, ಚಿಂತಕರು, ಸುದೀರ್ಘವಾದ ಚರ್ಚೆ ನಡೆಸಿದ್ದಾರೆ.

ವಿವಿಧ ವಿದ್ವಾಂಸರ ದೃಷ್ಟಿಯಲ್ಲಿ ಆದರ್ಶ ಅರ್ಥದ ಕುರಿತು ಚರ್ಚೆ

ಆದರ್ಶದ ಬಗ್ಗೆ ಸ್ಪಷ್ಟವಾಗಿ ಚರ್ಚೆಮಾಡಿದವರು ಕಡಿಮೆಯೇ ಓ.ಎಲ್. ನಾಗಭೂಷಣ ಸ್ವಾಮಿಯವರು ವಿಮರ್ಷೆಯ ಪರಿಭಾಷೆಯಲ್ಲಿ 'ಆದರ್ಶ' ಎಂಬ ಪದವನ್ನು ಈ ರೀತಿ ವಿವರಿಸುತ್ತಾರೆ.

"ಸಮಾನ ಗುಣಗಳಿರುವ ಹಲವಾರು ವ್ಯಕ್ತಿಗಳನ್ನು ಆಯ್ದುಕೊಂಡು ಅವರು ಯಾವ ಗುಣಗಳಿಗೆ ಉದಾಹರಣೆಯಂತಿರುತ್ತಾರೋ ಆ ಗುಣಗಳ ಪರಿಪೂರ್ಣ ಆದರ್ಶ ಲೋಪವೊಂದನ್ನು ಸಾಮನ್ಯೀಕರಣದ ಮೂಲಕ ಕಲೆಯಲ್ಲಿ ಸಾಧಿಸುವ ವಿಧಾನ ಬಾಹ್ಯಗುಣ ಲಕ್ಷಣಗಳನ್ನು ನಿರ್ಲಕ್ಷಿಸಿ ನಿಜವಾದ ವ್ಯಕ್ತಿತ್ವ ಸ್ವಭಾವವನ್ನು ಮತ್ತು ರೂಪವನ್ನು ಅನ್ವೇಶಿಸುವುದು. ಪರಿಪೂರ್ಣಗೊಂಡ ಅಂತಃಸತ್ವದ ಸಮರ್ಪಣೆ ಅಭಿವ್ಯಕ್ತಿಯನ್ನು ಅಸಮಗ್ರ ಭೌತಿಕ ವಿಶಿಷ್ಠತೆಗಳ ಮೂಲಕ ಸಾಧಿಸುವುದು ಆದರ್ಶಕತೆ ಎನಿಸಿಕೊಳ್ಳುತ್ತದೆ" ಎಂದಿದ್ದಾರೆ.

ಅವರೆ ನೀಡಿದ ಉದಾಹರಣೆ ಹೀಗಿದೆ (ಮರಳಿ ಮಣ್ಣಿಗೆಯ ನಾಗವೇಣಿ) ಇಂಥಾ ಪಾತ್ರ ಬದುಕಿನಲ್ಲಿ ಸಾಹಿತ್ಯದಲ್ಲೂ ದೊರೆಯುವುದು ವಿರಳ. ವಾಸ್ತವಿಕ ಲೋಕದಲ್ಲಿ ಕಾರಂತರು ಕಂಡಿರಬಹುದಾದ ಒಂದು ವ್ಯಕ್ತಿ ನಾಗವೇಣಿಯ ಪಾತ್ರ ರಚನೆಯಲ್ಲಿ ಆದರ್ಶ ಕೃತವಾಗಿ ಹೃತ್ಸೌಂದರ್ಯದಿಂದ ಬೆಳ್ಳಿಯಂತೆ ಬೆಳಗುತ್ತಿದೆ".[೨]

ಹೀಗೆ ಆದರ್ಶಕ್ಕೆ ಸ್ಪಷ್ಟವಾದ ಧೋರಣೆ ಕೊಡುವಲ್ಲಿ ಓ.ಎಲ್.ನಾಗಭೂಷಣ್ ರವರು ಪ್ರಯತ್ನಿಸಿದ್ದಾರೆ. ಆದರ್ಶದ ವಿರುದ್ಧದ ಪದ ವಾಸ್ತವವಾದ ಆದರ್ಶವೆಂದರೆ ಇರಬೇಕಾಗಿದ್ದು (ಇರಬಹುದು, ಇಲ್ಲದಿರಲೂ ಬಹುದು).

ಪ್ರಗತಿಶೀಲರು ವಾಸ್ತವವಾದಕ್ಕೆ ಹೆಚ್ಚಿನ ಒತ್ತನ್ನು ನೀಡಿದರು. ಹಾಗಾಗಿ ಆದರ್ಶದ ಅರ್ಥ ತಿಳಿಯಲು ವಾಸ್ತವವಾದದ ಕಡೆ ಗಮನ ಹರಿಸಬೇಕಾಗುತ್ತದೆ. ಅ.ನ.ಕೃ. ಅವರು ಕನ್ನಡ ಸಾಹಿತ್ಯಕ್ಕೆ ವಾಸ್ತವತೆ ಎಂಬುದು ಹೊಸತೆಂದು ಅಭಿಪ್ರಾಯ ಪಡೆಯುತ್ತಾರೆ. 'ಕನ್ನಡ ಕಾಂದಬರಿಯಲ್ಲಿ ವಾಸ್ತವಿಕತೆ' ಎಂಬ ಲೇಖನದಲ್ಲಿ ಅ.ನ.ಕೃ.ರವರು ನೀಡಿರುವ ಸೂಚನೆಗಳನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. "ಭಾರತೀಯ ಜೀವನಕ್ಕೆ ಆದರ್ಶ, ವಾಸ್ತವವೆಂಬ ವಿಂಗಡನೆ ಹೊಸದು ಕಣ್ಣಿಗೆ ಕಾಣುವುದು ವಾಸ್ತವ ಕಾಣಬೇಕಾದುದು ಆದರ್ಶ ಇರುವುದು ವಾಸ್ತವ ಇರಬೇಕಾದುದು ಆದರ್ಶ ಎಂದಿದ್ದಾರೆ".[೨]

ಒಟ್ಟಾರೆಯಾಗಿ ಆದರ್ಶ ಪುರುಷ ಎನ್ನುವ ಪದ ಗುಣಾವಳಿ ಸೂಚಿಸುವ ಪದ. ಇನ್ನು ಇಂಥಾ ಆದರ್ಶಪುರುಷನ ಹುಡುಕಾಟವನ್ನು ಆಧುನಿಕ ಮಹಿಳಾ ಕಾವ್ಯದಲ್ಲಿ ಹುಡುಕಲು ತೊಡಗಿದಾಗ ಹಲವು ಮಾನದಂಡಗಳ ಅವಶ್ಯಕತೆಯಿದೆ.

ಆಧುನಿಕ ಮಹಿಳಾ ಕಾವ್ಯ ಪ್ರಜ್ಞೆ ತಾತ್ವಿಕ ಸ್ವರೂಪ ಒಳಗೊಂಡಿರುವುದು ತಾತ್ವಿಕತೆಗಳು ಮುಖ್ಯವಾಗುತ್ತದೆ. ರೂಪು-ರೇಷೆಗಳ ಅರಿವಿರಬೇಕಾಗುತ್ತದೆ. ಹುಡುಕಾಟದ ವಿಧಾನ, ಹೊಸದಾಗಿರುವ ವಿಭಿನ್ನ ಮಾದರಿಯ ಬಳಿಕ ಹಲವು ವಿಭಾಗಗಳು ಮಾಡಿಕೊಂಡು ಹುಟುಕಾಟದ ಸಾಮಾಗ್ರಿ ಹೊಂದಿಸಿಕೂಳ್ಳಬೇಕಾಗುತ್ತದೆ.

ಇಲ್ಲಿ ಆದರ್ಶ ಪುರುಷ ಎಂಬ ಪದದ ಶಬ್ದಾರ್ಥಕ್ಕೆ ನಿಶ್ಚಿತವಾದ ಅರ್ಥ ದೊರಕಿತೇ ಹೊರತು ಆಧುನಿಕ ಮಹಿಳಾ ಕಾವ್ಯದಲ್ಲಿ ಪುರುಷನ ಹುಡುಕಾಟದಲ್ಲಿ ತೊಡಗಿದಾಗ, ಆದರ್ಶ ಪುರುಷ ಅರ್ಥ ಬೇರೆಯಾಗುತ್ತದೆ. ಆದರ್ಶ ಪುರುಷನೆಂದರೆ 'ಆದರ್ಶ ಗುಣಗಳನ್ನು ಹೊಂದಿರುವ' ಎಂಬ ಅರ್ಥದ ಜೊತೆಗೆ ಈ ಪದ ಮಹಿಳಾ ಕಾವ್ಯದ ಜೊತೆಗೆ ಗುರುತಿಸಿಕೊಂಡಿರುವುದರಿಂದ ಇದು ಬೇರೆಯದೆ ವಿಶಿಷ್ಟ ಅರ್ಥ ಪಡೆಯುತ್ತದೆ. ಮಹಿಳಾ ಕಾವ್ಯ ತಾತ್ವಿಕ ಸ್ವರೂಪ ಅದರ ವಿಶಿಷ್ಠತೆಗಳು ಈ ಆದರ್ಶ ಪುರುಷನಡೆಗೆ ಗಮನ ಬೀರುತ್ತದೆ.

ಮೂಲತಃ ಮಹಿಳಾ ಕಾವ್ಯಗಳಲ್ಲಿ ಒಡಮೂಡಿದ ಆದರ್ಶ ರೂಪುರೇಖೆ ತಾತ್ವಿಕತೆಗಳು ಸಂಪೂರ್ಣವಾಗಿ ಮಹಿಳಾ ಸಂವೇದನೆಯಡಿಯಲ್ಲಿ ಸ್ತ್ರೀವಾದವನ್ನು ಒಳಗೊಂಡಿರುತ್ತವೆ. ಒಟ್ಟಾರೆ ಮಹಿಳಾ ಕಾವ್ಯಗಳ ವಿಷಯ, ವಿಶಾಲತೆ, ಸ್ವರೂಪ ಈ ಸ್ತ್ರೀವಾದವನ್ನು ಬಿಟ್ಟು ಹೊರಬಂದಿಲ್ಲ. ನೂರರಲ್ಲಿ ಕೆಲವು ಶೇಕಡ ೨ ರಷ್ಟು ಮಾತ್ರ ಮಹಿಳಾ ಕವಿಯತ್ರಿಯರು ದೇವಸ್ತುತಿ, ಭಜನೆ, ದೇಶಪ್ರೇಮ, ಕುರಿತಾದಾ ಕಾವ್ಯ ಬರೆದ್ದಿದಾರೆ ಹೊರತು ಒಟ್ಟಾರೆ ಉಳಿದಂತೆ ಎಲ್ಲ ಕಾವ್ಯಗಳು ಮಹಿಳಾ ಸಂವೇಧನೆ ಸ್ತ್ರೀವಾದ ಪ್ರಭಾವವುಳ್ಳ ಜಾಗೃತಿ ಕಾವ್ಯಗಳಾಗಿವೆ. ಒಟ್ಟಾರೆ ಮಹಿಳಾ ಕಾವ್ಯವನ್ನು ನೋಡಿದಾಗ ಶತಮಾನದಲ್ಲಿ ಮಹಿಳಾ ಚರಿತ್ರೆಯನ್ನು ಬಿಡಿಸುತ್ತಾ ಹೊಂಟಿರುವುದು ಕಾಣಬಹುದು.

ಆದರ್ಶ ಪುರುಷನನ್ನು ಮಹಿಳಾ ಕಾವ್ಯದಲ್ಲಿ ಹುಡುಕುವುದಕ್ಕೆ ಮುಂಚೆ, 'ಪುರುಷ' ಮಹಿಳಾ ಕಾವ್ಯದಲ್ಲಿ ಕಂಡು ಬರುವ ಸ್ವರೂಪವನ್ನು ನೋಡಬಹುದು. 'ಪುರುಷ' ಮಹಿಳಾ ಕಾವ್ಯದ ಕೇಂದ್ರ ಬಿಂದು, ಅಚ್ಚರಿ ಎಂಬಂತೆ ಪ್ರೇಮ ಕವನಗಳು ಪುರುಷ ಕವಿಗಳು ರಚಿಸಿದಷ್ಟು ಕವಿಯತ್ರಿಯಿಂದ ರಚಿತವಾಗಿಲ್ಲ. ಬದಲಾಗಿ ಕವಿಯತ್ರಿಯರ ಕವನಗಳಲ್ಲಿ ಪುರುಷ ವಿರೋಧಿ ಭಾವವಿರುವುದು ಕಾಣುತ್ತದೆ. ಪುರುಷ ವಿರೋಧಿ ಭಾವಗಳು ಎನ್ನುವುದಕ್ಕಿಂತ ಪುರುಷ ಪ್ರಭುತ್ವದ ನಿರಾಕರಣೆ ಹೆಚ್ಚು ಕಂಡುಬರುತ್ತದೆ.

ಇದನ್ನು ಸ್ತ್ರೀವಾದದ ಪ್ರಭಾವ ಎನ್ನುವ ಧೋರಣೆಗಿಂತ ಮಹಿಳೆ ಮೇಲೆ ಶತಮಾನಗಳಿಂದ ಪುರುಷ ಪ್ರಭುತ್ವದಿಂದ ಶೋಷಿಸಿದ್ದನ್ನು ಗುರುತಿಸಬಹುದು. ಅಕ್ಷರ ಪ್ರಪಂಚ ಅವಳಿಗೆ ದೊರಕಿತು. ಬರೆಯುವ ಸ್ವಾತಂತ್ರ್ಯ ಬಂದಿತು ಅವಳು ತನ್ನತನದ ಅರಿವಿನ ಪ್ರಜ್ಞೆಯಿಂದ ಅಲ್ಲಿಯವರಿಗೆ ಅದುಮಿಟ್ಟ ಭಾವನೆಗಳನ್ನು ಬರೆಯಲಾರಂಭಿಸಿದಳು ಹೊರತು ಅವಳ ಕಾವ್ಯಗಳೆಂದರೆ ಪುರುಷ ವಿರೋಧವೇ ಆಗಿರಬೇಕೆಂದೇನು ಅಲ್ಲ.

ಮಹಿಳಾ ಸಂವೇಧನೆ, ಸ್ತ್ರೀವಾದ, ಮಹಿಳಾ ಅಧ್ಯಯನ ಮಹಿಳಾ ಕಾವ್ಯದ ಮೇಲೆ ಪ್ರಭಾವ ಬೀರಿದವು. ಮಹಿಳಾ ಸ್ತ್ರೀವಾದದ ಉದ್ದೇಶ ಸಾಮಾಜಿಕ ವಾಸ್ತವಿಕತೆಯನ್ನು ಮಹಿಳಾ ದೃಷ್ಟಿಕೋನದಿಂದ ಅರ್ಥ ಮಾಡಿಕೊಂಡು ಸಾಮಾಜಿಕ ಲಿಂಗಸಮಾನತೆಯನ್ನು ತರುವುದೇ ಆಗಿದೆ. ಇದರ ಧೋರಣೆಗಳಾದ ಮಹಿಳಾ ಸ್ವಾತಂತ್ರ್ಯ (*Womens Freedom*) ವ್ಯಕ್ತಿತ್ವದ ಪ್ರಜ್ಞೆ (*Feminist Concern*) ಲೈಂಗಿಕ ಸ್ವಾತಂತ್ರ್ಯ (*Jender Justice*) ದುಡಿಯುವ ಸ್ವಾತಂತ್ರ್ಯ, ಸಾಮಾಜಿಕ ಅಧಿಕಾರದ ಶಕ್ತಿ (*Dominance*) ಮಹಿಳಾ ಸಂಘಟನೆ (*Women's Unity*) ಗಂಡಿನ ನಿರಾಕರಣೆ, ದ್ವಿದಾವೃತ್ತಿ (*Duality*) ಸ್ಥಾನ ನಿರ್ದೇಶಕ (*Estimate*) ಮುಂತಾದ ಸಿದ್ಧಾಂತಗಳನ್ನು ಒಳಗೊಂಡಿರುತ್ತದೆ.

ಆಧುನಿಕ ಮಹಿಳಾ ಕಾವ್ಯ 'ಆದರ್ಶ ಪುರುಷ'ನ ಹುಡುಕಾಟಕ್ಕೆ ತೊಡಗಿದಾಗ ತೊಡಕಾಗುವ ಸಮಸ್ಯೆಯೇ ಇದಾಗಿದೆ. ಎಲ್ಲಾ ೯೦% ಕವನಗಳು ಪುರುಷ ವಿರೋಧಿ ನಿಲುವನ್ನು ತಳೆದರೆ ಆದರ್ಶ ಪುರುಷನನ್ನು ಹುಡುಕುವುದು ಹೇಗೆಂಬ ಪ್ರಶ್ನೆ ಮೂಡುತ್ತದೆ. ಆಧುನಿಕ ಮಹಿಳಾ ಕಾವ್ಯ ಕವಿಯತ್ರಿ ಒಡಮೂಡಿಸಿದ ಪುರುಷ ವಿರೋಧಿ ನಕರಾತ್ಮಕ ಧೋರಣೆಗಳೇ ಸಕರಾತ್ಮಕ ಧೋರಣೆಯಾಗಿ ಆದರ್ಶವಾಗುತ್ತದೆ.

ಉದಾ:- ನಿನ್ನ ನಯಗಾರಿಕೆಯ ಪದರ-ಪದರ ಗಳನರಿತಾಗ
ಸೀತೆ ಸಾವಿತ್ರಿಯರ ಕೆಡಗಿ ಮಂಡೋಧರಿಯಾದೆ.
ನಿನ್ನ ಮನದಾಸೆಯ ಹಿಡಿಂಬೆಯಾಗಲಣಿಸಿದೆ

ನನ್ನ ಸಾಮಾಜಿಕ ನ್ಯಾಯದಲ್ಲಿ ಹಿಡಿದಿಟ್ಟ ಪಾತಿವ್ರತೆಯ
ಗಿಲೀಟು ಒಡವೆ ತೊಡಸಿ ಬಂಗಾರವೆಂದೆ. ಸಿಂಗರಿಸಬಂದೆ.

(ಬಾ.ಹ. ರಮಾ ಕುಮಾರಿ –ಪುಟ ೧೭ ೧೯೯೯)

ಇಡೀ ಕವನವನ್ನು ನೋಡಿದಾಗ ದ್ವಂದ್ವಾತ್ಮಕತೆ ಕಂಡುಬರುವುದು. ತನ್ನ ತನದ ಅರಿವುಳ್ಳ ಪ್ರಜ್ಞಾವಂತ ಹೆಣ್ಣು ತನ್ನ ಮೇಲಾಗುವ ಶೋಷಣೆಯನ್ನು ಮಾಡುವ ಪುರುಷನನ್ನು ವಿರೋಧಿಸಿದ್ದಾಳೆ. ಶತಮಾನಗಳಿಂದ ಪಾತಿವ್ರತ್ಯ ಕ್ಷಮಾಯಾಧರಿತ್ರಿ ಹೀಗೆ ಹಲವು ರೀತಿಯಲ್ಲಿ ನಾಜೂಕಿನ ಪಟ್ಟವನ್ನ ಹೊರಿಸಿರುವುದರ ಮೂಲಕ ಅವಳನ್ನು ತನ್ನ ಗುಲಾಮಳಂತೆ ನಡೆಸಿಕೊಂಡಿದ್ದಾನೆ ಪುರುಷನನ್ನು ವಿರೋಧಿಸಿ ಮಂಡೋದರಿ ಅವತಾರ ಮತ್ತು ಹಿಂಡಂಬಿ ರೂಪ ತಳೆದಾಗ(ಸಾಥ್ವಿಕತೆಯನ್ನು ಕಳೆದು)ಸಾತ್ವಿಕ ಹಣೆಪಟ್ಟಿಯ ಕಳಚಿ ವಿರೋಧಸಿದ ಹೆಣ್ಣನ್ನು ಸಾಮಾಜಿಕ ನ್ಯಾಯ (ಕುಟುಂಬ ಕಲ್ಪನೆ, ಹೆಣ್ಣು ಹೆಣ್ತನ, ತಾಯ್ತನ) ದಲ್ಲಿ ಹಿಡಿದಿಟ್ಟ ಪುರುಷನ ವರ್ತನೆಯನ್ನು ಖಂಡಿಸಿದ್ದಾರೆ.

'ಆದರ್ಶ'ವೆಂಬುದು ಅಮೂರ್ತವಾದುದು. ಹೊರನೋಟಕ್ಕೆ ದಕ್ಕಿದಕ್ಕಿಂತ ಬುದ್ಧಿ, ಭಾವಗಳಿಗೆ ಸಂಬಂಧಿಸಿದ್ದು. ವ್ಯಕ್ತಿಯ ರೂಪ ನಿಲುವಿನಂತಹ ಬಾಹ್ಯ ಲಕ್ಷಣಗಳಿಗೆ ಹೊರತಾಗಿ ಆತನ ವ್ಯಕ್ತಿತ್ವಕ್ಕೆ ಸಂಬಂಧಿಸಿದ್ದು. 'ಆದರ್ಶ'ವೆಂಬುದು ನಿಶ್ಚಿತವಾದ ಗುಣಲಕ್ಷಣಗಳಿಗೆ ಸೀಮಿತವಾದುದಲ್ಲ. ಒಂದು ಕಾಲದಲ್ಲಿ 'ಆದರ್ಶ'ವೆನಿಸಿದ ವಿಚಾರಗಳು ನಂತರದ ದಿನಗಳಲ್ಲಿ ಅರ್ಥಹೀನವೆನಿಸಬಹುದು. ಆದರ್ಶದ ಸ್ವರೂಪದ ಬಗೆಗೆ ಒಂದು ನಿಶ್ಚಿತ ಚಿತ್ರಣವಿಲ್ಲ. ಆದರೆ ಅದರ ವಿವಿಧ ಆಯಾಗಳ ಅಧ್ಯಯನ ಮನುಷ್ಯನ ಆಲೋಚನಾ ಕ್ರಮಗಳ ನಿರಂತರತೆಯಾಗಿದೆ. ಹಾಗೆ ಬೆಳವಣಿಗೆಯೂ ಕೂಡ(ಸಮಾಜ ಬದ್ಧವಾದ ಕೆಲರೂಢಿ ಸಂಪ್ರದಾಯಗಳು). 'ಆದರ್ಶ ಪುರುಷ'ನ ಹುಡುಕಾಟ ಪುರುಷ ತನಗೆ ತಾನೆ ರೂಪಿಸಿಕೊಂಡ, ನಂಬಿಕೊಂಡು ಬಂದ ಆದರ್ಶಗಳನ್ನು ಒಪ್ಪಿಕೊಳ್ಳುವ ನೆಲೆಯದ್ದಲ್ಲ. ಪುರುಷ ತನ್ನ ಜೀವನೋನ್ನತಿಗಾಗಿ, ಪ್ರಸಿದ್ಧಿಗೆ, ಹುಟ್ಟಿನಿಂದಲೇ ರೂಢಿಸಿಕೊಂಡ ಪುರುಷವಾದಿತನವನ್ನು ವಿಮರ್ಶೆಗೆ ಒಳಗು ಮಾಡುವುದೇ ಇಲ್ಲಿನ ಕೇಂದ್ರ ವಿಷಯವಾಗಿದೆ. ಪುರುಷ ತನಗೆ ತಾನೇ ಅಧಿಕೃತಗೊಳಿಸಿಕೊಂಡ ನಿರ್ಧಾರಗಳನ್ನು ಸ್ತ್ರೀವಾದಿ ಹಿನ್ನೆಲೆಯಲ್ಲಿ ಪ್ರಶ್ನಿಸುವ, ವಿಮರ್ಶಿಸುವ ನೆಲೆಯಲ್ಲಿಯೇ ಇಲ್ಲಿನ ಕಾವ್ಯಗಳ ಧ್ವನಿಯನ್ನು ಗುರುತಿಸಲಾಗಿದೆ.

ಪುರುಷನಲ್ಲದಂತಹದ ಪ್ರತಿಯಾಗಿ(ಸ್ತ್ರೀ) ಪುರುಷನ ಆದರ್ಶಗಳನ್ನು ಗ್ರಹಿಸುವ ರೀತಿಯೇ ಭಿನ್ನವಾಗಿರುವಂತಹದ್ದು. ಕೆಲವೇಳೆ ಪುರುಷವಾದಿ ಹಿನ್ನೆಲೆಯ ಆದರ್ಶಗಳನ್ನು ಒಪ್ಪುವ ಮಹಿಳಾ ಕಾವ್ಯಗಳು ಇಲ್ಲವೆನ್ನಲಾಗದು. ಪುರುಷವಾದಿ ಆದರ್ಶದ ಸ್ವರೂಪವನ್ನು

ಸ್ತ್ರೀ ಕಾವ್ಯದಲ್ಲಿ ಕಂಡುಕೊಳ್ಳುವುದು ಸ್ತ್ರೀವಾದಿ ಹಿನ್ನೆಲೆಯೊಂದು ತೆರೆದಿಡುವ ವಿಭಿನ್ನ ಆದರ್ಶದ(ವ್ಯಾಖ್ಯಾನವೇ ಆಗಿದೆ). ಸ್ವರೂಪವೇ ಆಗಿದೆ. ಸ್ತ್ರೀ ಅಸ್ತಿತ್ವ ತನಗೆ ಒಪ್ಪಿತವಾಗುವ, ತಾನು ಬಯಸುವ ರೀತಿಯಲ್ಲಿ ಪುರುಷನ ಆದರ್ಶವನ್ನು ಒಪ್ಪಿಕೊಳ್ಳುವುದೇ ಆಗಿದೆ. ಪುರುಷನಲ್ಲಿ ಆಕೆ ಬಯಸುವ ಆದರ್ಶದ ಸ್ವರೂಪವೂ ಕೂಡ ವಿಭಿನ್ನವಾಗಿರುವಂತಹದ್ದು. ಕಾಲದಿಂದ ಕಾಲಕ್ಕೆ ಸ್ತ್ರೀ ಬದುಕಿನಲ್ಲಿ ಉಂಟಾದ ಸ್ಥಿತ್ಯಾಂತರಗಳು, ಜೀವನ ಶೈಲಿ, ಆಲೋಚನ ಕ್ರಮದಲ್ಲಾದ ಬದಲಾವಣೆಗಳೆಲ್ಲವೂ ಈ 'ಹುಡುಕಾಟ'ದ ಪ್ರಕ್ರಿಯೆಯನ್ನು ಪ್ರಭಾವಿಸಿವೆ. ಹುಡುಕಾಟದ ಅಂತ್ಯದಲ್ಲಿ ಸ್ತ್ರೀ ಬಯಸುವ ಆದರ್ಶನ ಪುರುಷನ ಪೂರ್ಣ ಚಿತ್ರಣಗಳನ್ನು ತೋರುತ್ತವೆ. ಆದರೂ ಅವೆಲ್ಲವುಗಳು ಸ್ತ್ರೀ ಕಂಡುಕೊಳ್ಳಬಯಸುವ, ಆದರ್ಶಗಳು.

ಒಟ್ಟಾರೆ ಕವನ ಸಂಕಲವನ್ನು ನೋಡಿದಾಗ ಆದರ್ಶವಲ್ಲದ ಸ್ತ್ರೀ ವಿರೋಧ ನಿಲುವಿನ ಪುರುಷನನ್ನು ಕಾಣಬಹುದು. ಹಾಗಾದರೆ ಇಲ್ಲಿ ಆದರ್ಶ ಪುರುಷನನ್ನು ಹುಡುಕುವುದು ಹೇಗೆ? ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಇದಕ್ಕೆ ಉತ್ತರವನ್ನು ಹೀಗೆ ಹೇಳಬಹುದು. ಈ ಪಾತ್ರದ ವಿರೋದಭಾವವಾಗಿ ಅಂದರೆ; ಶತಮಾನಗಳಿಂದ ಶೋಷಿಸಿಕೊಂಡ ಅವಳಿಗೆ ಸಾಮಾಜಿಕ ವರ್ತುಲದಲ್ಲಿ ಪಾತಿವ್ರತ್ಯ ತನ್ನತನಗಳಿಗೆ ಬೆಲೆ ಕೊಡುವುದು ಸಾಮಾಜಿಕದ ಎಲ್ಲಾ ಅವಕಾಶ ಕೊಡುವವ ಆದರ್ಶ ವ್ಯಕ್ತಿಯಾಗುತ್ತಾನೆ. ಆದ್ದರಿಂದ ಮಹಿಳಾ ಕಾವ್ಯದ ಆದರ್ಶ ಪುರುಷನೆಂದರೆ ಮಹಿಳಾವಾದ. ಸ್ತ್ರೀವಾದದ ಸಿದ್ದಾಂತಗಳಿಗೆ ತಕ್ಕನಾದವನೇ ಆದರ್ಶ ಪುರುಷ ಎಂದಾಗುತ್ತದೆ.

ಆದರ್ಶ ಪುರುಷನ ಹುಡುಕಾಟದ ವಿಧಾನವೆಂದರೆ ಮಹಿಳಾ ಕಾವ್ಯದಲ್ಲಿ ಒಡ ಮೂಡಿದ ಪುರುಷ ವಿರೋಧಿ ನಿಲುವಿನ ಸಕಾರಾತ್ಮಕ ಗುಣಗಳು ಆದರ್ಶವಾಗುತ್ತದೆ. ಪ್ರಸ್ತುತ ಅಧ್ಯಾಯ ಮತ್ತು ಮುಂದಿನ ಅಧ್ಯಾಯದಲ್ಲಿ ಆದರ್ಶ ಹುಡುಕಾಟದ ವಿವಿಧ ಮಾದರಿಗಳನ್ನು ನೋಡಬಹುದು. ಆದರ್ಶಪುರುಷನ ನಕಾರಾತ್ಮಕ ಧೋರಣೆಗಳಿಗೆನಿಟ್ಟುಕೊಂಡು ಕವಿಯತ್ರಿ ಬಯಸುವ ಆದರ್ಶವನ್ನು ಹುಡುಕಲು ಪ್ರಯತ್ನಿಸಲಾಗಿದೆ.

ಟಿಪ್ಪಣಿಗಳು

೧. ಸಂಕ್ಷಿಪ್ತ ಕನ್ನಡ ಇಂಗ್ಲೀಷ್ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ೨೦೦೪

೨. ನಾಗಭೂಷಣಸ್ವಾಮಿ ಓ.ಎಲ್., ವಿಮರ್ಶೆಯ ಪರಿಭಾಷೆ, ಅಂಕಿತ ಪ್ರಕಾಶನ, ೧೯೯೮

೩. ಅಶೋಕ ಟಿ.ಪಿ., ವಾಸ್ತವವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಪುಟ.೪೧

ಅಧ್ಯಾಯ ೨

ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ

೩

ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ

'ಅಧ್ಯಯನ' ಪದದ ಅರ್ಥ ವಿಶಾಲವಾದದು. ಆಳವಾಗಿ ಅಭ್ಯಸಿಸು, ಹುಡುಕುವುದು, ತೌಲನಿಕವಾಗಿ ವಿಮರ್ಶಿಸುವುದು, ಅಲೋಚಿಸುವುದು ಮುಂತಾದ ಅರ್ಥಗಳನ್ನು ಪಡೆದುಕೊಳ್ಳುತ್ತಾ ಹೋಗುತ್ತದೆ. ಸ್ವಂತ ಸೃಷ್ಟಿ, ಸ್ವಅಧ್ಯಯನ ಎಂಬುದು ಅಗತ್ಯವೆನಿಸಿದರೂ ಗುರುವಿಲ್ಲದ ವಿದ್ಯೆ ದಕ್ಕುವುದು ಕಷ್ಟವೇ–ಅನುಭವ ಮತ್ತು ಅನುಭಾವ(ಅನುಭವ=ಸ್ವಂತವಾಗಿ ಅನುಭವಿಸುವುದು, ಅನುಭಾವ=ಬೇರೆಯವರ ಅನುಭವವನ್ನು ತಮ್ಮ ಅನುಭವವನ್ನು ಅನುಭಾವವಾಗಿಸಿಕೊಳ್ಳುವುದು) ಎರಡೂ ಕೂಡ ಅಭ್ಯಸಿಗನಿಗೆ ಮುಖ್ಯ.

ಹೊಸಗನ್ನಡ ಮಹಿಳಾ ಕಾವ್ಯದಲ್ಲಿ 'ಆದರ್ಶ ಪುರುಷನನ್ನು ಹುಡುಕುತ್ತಾ ಹೋದಂತೆ ಇದಕ್ಕೆ ಮೂಲವಾಗಿರುವ ಮಹಿಳಾ ಕಾವ್ಯವು ನಡೆದು ಬಂದ ದಾರಿಯನ್ನು ಗಮನಿಸಬೇಕಾಗುತ್ತದೆ. ಮಹಿಳಾ ಕಾವ್ಯದ ಮೂಲ ತಾತ್ವಿಕ ಶೋಧನೆಗೆ ತೊಡಗಿದಾಗ 'ಆದರ್ಶ ಪುರುಷನ' ನೆಲೆಗಟ್ಟು ತಿಳಿಯುವುದು ಕಷ್ಟವಾಗುವುದಿಲ್ಲ. ಮಹಿಳಾ ಕಾವ್ಯದ ಇತಿಹಾಸ ತುಂಬಾ ಹಳೆಯದು. ಜಾನಪದದ ಗರತಿಯ ಹಾಡುಗಳಿಂದ ಆರಂಭವಾಗಿ ವಚನ ಸಾಹಿತ್ಯ, ದಾಸ ಸಾಹಿತ್ಯದಿಂದ ಇತ್ತೀಚಿನ ಮಹಿಳಾ ಕಾವ್ಯದವರೆಗೂ, ಸ್ತ್ರೀ ಸಾಹಿತ್ಯದಲ್ಲಿ ಮುಗ್ದತೆ, ಆದರ್ಶತೆ, ಬಂಡಾಯದ ಸ್ವರೂಪದ ಅಭಿವ್ಯಕ್ತಿಯನ್ನು ಕಾಣಬಹುದಾಗಿದೆ.

ಮಹಿಳಾ ಕಾವ್ಯದ ಆರಂಭದಿಂದ ಇತ್ತೀಚಿನವರೆಗಿನ ಸ್ತ್ರೀ ಕಾವ್ಯದಲ್ಲಿ 'ಪುರುಷ' (*Subject*)ನನ್ನು ಕುರಿತ ಅಭಿವ್ಯಕ್ತಿಯಲ್ಲಿ ಮಹಿಳಾ ಕಾವ್ಯದ ಬಗ್ಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ ಮುಖ್ಯವಾಗುತ್ತದೆ.

ಡಾ. ಸಿ.ವೀರಣ್ಣನವರ 'ಕನ್ನಡ ಕಾವ್ಯ ಹೆಣ್ಣು'ಎಂಬ ಕೃತಿಯಲ್ಲಿ ಒಟ್ಟಾರೆ ಸ್ತ್ರೀ ಕಾವ್ಯದಲ್ಲಿ ವಿಶ್ಲೇಷಣೆಯ ವಿಮರ್ಶೆಯ ಹಂತದವರೆಗೂ ಹೋಗಿದೆ. ಆದರೆ ಪರದಿಯಾಚೆಗಿನ ಸ್ತ್ರೀ ಕಾವ್ಯದ ಹುಟ್ಟು, ಬೆಳವಣಿಗೆ ಸ್ತ್ರೀ ಕಾವ್ಯದ ಉದ್ದೇಶ ಕಾವ್ಯದ ಆರಂಭದ ಕಾಲಕ್ರಮಣತೆ, ಅದು ಮುಂದುವರೆದ ಬಗೆ, ಅದರ ಹಿಂದಿನ ಪ್ರಭಾವಗಳು, ಪರಿಣಾಮಗಳು ಮುಖ್ಯವಾಗಿ

ಕನ್ನಡ ಕಾವ್ಯದಲ್ಲಿ ಹೆಣ್ಣನ್ನು ಕುರಿತ ಚಿತ್ರಣ ಹೇಗೆ ಮೂಡಿದೆ ಎಂಬುದರ ಉತ್ತಮ ವಿಮರ್ಶೆಯಾಗಿದೆ.

೧೫೦೦ ವರ್ಷದಷ್ಟು ಇತಿಹಾಸವುಳ್ಳ ಕನ್ನಡ ಕಾವ್ಯವು ಅನೇಕ ಮಜಲುಗಳನ್ನು ಹೊಂದಿರುವುದನ್ನು ಇಲ್ಲಿ ಗುರುತಿಸುತ್ತಾರೆ. ಸಾಮಾಜಿಕ ಬದಲಾವಣೆಯನ್ನು ಅನುಸರಿಸಿ ಕಾವ್ಯ ಲೋಕದಲ್ಲೂ ಬದಲಾವಣೆಗಳನ್ನು ಗಮನಿಸಿದ್ದಾರೆ. ಕಾವ್ಯಲೋಕದಲ್ಲಿ ಆದ ಈ ಬದಲಾವಣೆ ಗುರುತಿಸುತ್ತಾ ಬೇರೆ-ಬೇರೆ ಘಟ್ಟದಲ್ಲಿ ಹೆಣ್ಣನ್ನು ಕುರಿತ, ಹುಟ್ಟಿಕೊಂಡ ಅಲೋಚನೆಗಳನ್ನು ಅಭಿಪ್ರಾಯಗಳನ್ನು ಚಾರಿತ್ರಿಕ ನೆಲೆಯಿಂದ ಅಧ್ಯಯನ ಮಾಡಿದ್ದಾರೆ. ಹಾಗಾಗಿ ಇದು ಒಂದು ಸಾಂಸ್ಕೃತಿಕ ಶೋಧನೆಯೂ ಆಗಿದೆ. ಕನ್ನಡ ಕಾವ್ಯವನ್ನು ವಿವಿಧ ಕಾಲಘಟ್ಟಗಳಾಗಿ ವಿಭಾಗಿಸಿಕೊಳ್ಳಲಾಗಿದೆ. ಹೀಗೆ ವಿಭಾಗಿಸಿಕೊಂಡ ನಿರ್ದಿಷ್ಟ ಕಾಲಾವಧಿಯಲ್ಲಿ ರಚಿತವಾದ ಎಲ್ಲಾ ಕೃತಿಗಳನ್ನು ಗಮನಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಪ್ರಾತಿನಿಧಿಕ ಕೃತಿಯನ್ನು ದೃಷ್ಟಿಯಲ್ಲಿರಿಸಿಕೊಂಡು ಅಧ್ಯಯನವನ್ನು ರೂಪಿಸಲಾಗಿದೆ.

ಸಾಮಾನ್ಯವಾಗಿ ಸ್ತ್ರೀ ಕಾವ್ಯದ ವಿಮರ್ಶಾ ಮಾದರಿಯು ಪ್ರಾರಂಭದಿಂದ ಹಿಡಿದು ಸಮಕಾಲೀನ ಕೃತಿವರೆಗೆ ಕನ್ನಡ ಕಾವ್ಯ ಹೆಣ್ಣಿನ ಬಗ್ಗೆ ನಡೆದಿರುವ ಚಿಂತನೆಯನ್ನು ಅರ್ಥೈಸುವ ಕಾರ್ಯದಲ್ಲಿ ತೊಡಗಿದೆ. ಈಗಾಗಲೇ ನಡೆದಿರುವ ಹಲವು ಪಾರ್ಶ್ವ ಪ್ರಯತ್ನಗಳಿಗಿಂತ ಭಿನ್ನವಾದ ಆಧ್ಯಯನ ವಿಧಾನವನ್ನು ರೂಪಿಸುವುದು. ಈ ಪ್ರಯತ್ನದ ಉದ್ದೇಶವಾಗಿದೆ. ಮನುಷ್ಯನ ಚರಿತ್ರೆಯ ಗತಿಯೊಂದಿಗೆ ಹೊಸ ಸ್ಥಾನವು ಬದಲಾಗಿರುವುದನ್ನು ಗುರುತಿಸಬೇಕಾದ ಅಗತ್ಯವಿದ್ದು, ಅದನ್ನು ಕಾವ್ಯದ ಮೂಲಕ ಮಾಡಲು ಇಲ್ಲಿ ಯತ್ನಿಸಲಾಗಿದೆ. ಹೆಣ್ಣಿನ ಬಗ್ಗೆ ಸಮಾಜ ವರ್ತಿಸಿರುವ ಬಗೆ ಆ ವರ್ತನೆಗೆ ಕಾರಣವಾದ ಆಂಶಗಳು ಸಮಾಜದ ನಿಲುವಿಗೆ ಆಯಾ ಕಾಲಘಟ್ಟದ ಹೆಣ್ಣು ತೋರಿಸಿರುವ ಪ್ರತಿಕ್ರಿಯೆ ಮುಂತಾದವು ಈ ಅಧ್ಯಯನದ ಉದ್ದೇಶವಾಗಿದೆ.

ಮಾನವ ಸಮಾಜದ ಪ್ರಾರಂಭ ಅಧ್ಯಾಯದಲ್ಲಿ ಆಸ್ತಿಯ ಬೆಳವಣಿಗೆ ಮಾತೃಪ್ರಧಾನ, ಬೇರುಗಳನ್ನು ಅಲ್ಲಾಡಿಸಿತು ಎಂದು ಗುರುತಿಸಿದ್ದಾರೆ. ಭಾರತೀಯ ಸಾಮಾಜಿಕ ಹಿನ್ನೆಲೆಯಲ್ಲಿ ವೇದಕಾಲೀನ ಸಮಾಜವನ್ನು ವಿಶ್ಲೇಷಿಸಿದ್ದಾರೆ. ಗಂಡು-ಹೆಣ್ಣು ಸ್ಥಾನಮಾನ, ಸ್ತ್ರೀ ಹಕ್ಕುಗಳು ಮದುವೆ ಮುಂತಾದವುಗಳ ಬಗ್ಗೆ ವೇದಗಳು ನಿರ್ದೇಶಿಸಿದ ಬಗೆಯನ್ನು ಹೇಳುತ್ತಾರೆ. ಧರ್ಮಗಳ ಹಿನ್ನೆಲೆಯಲ್ಲಿ ಬೌದ್ಧ ಮತ್ತು ಜೈನ ಧರ್ಮಗಳನ್ನಿಟ್ಟುಕೊಂಡು ವಿವರಿಸಲಾಗಿದೆ.

ಸ್ತ್ರೀ ಸ್ಥಾನಮಾನದ ವಿಷಯದಲ್ಲಿ ವ್ಯವಹಾರಿಕ ಜಗತ್ತಿನಲ್ಲಿ ಹೆಚ್ಚಿನ ಸ್ಥಾನದ ಬಗ್ಗೆ ವೈದಿಕ ಪರಂಪರೆಗಿಂತ ಭಿನ್ನವಾದ ನಿಲುವನ್ನು ತಳೆಯಲು ಬುದ್ಧನಿಗೆ ಸಾಧ್ಯವಾಗಲಿಲ್ಲ. ಜೈನಧರ್ಮವು ಬೌದ್ಧ ಧರ್ಮಕ್ಕಿಂತ ಭಿನ್ನವಲ್ಲ. ಸ್ತ್ರೀಯನ್ನು ನಕಾರಾತ್ಮಕವಾಗಿ ಚಿತ್ರಿಸಿದೆ. ಮಹಾಕಾವ್ಯಗಳ ದ್ಯೂತ ಪ್ರಸಂಗ, ಸ್ವಯಂವರ ಮುಂತಾದ ಕಡೆಗಳ ಉದಾಹರಣೆ ಸಹಿತ ಸ್ತ್ರೀ ಸಮಾನತೆಯನ್ನು ಹೇಳುತ್ತಾರೆ. ಹೆಣ್ಣನ್ನು ಕುರಿತು ಮಹಾ ಕಾವ್ಯಗಳಲ್ಲಿ ಮಹತ್ತರವಾದ ಗಮನಾರ್ಹ ಅಂಶಗಳಿವೆ. ರಾಮಾಯಣದಲ್ಲಿ ಕೌಸಲ್ಯೆಯನ್ನು ಮಂತ್ರಪ್ರದ (ಮಂತ್ರ ಬೋಧನೆ ಮಾಡುವಳು) ಎಂಬುದಾಗಿ ಸಂಬೋಧಿಸಲಾಗಿದೆ. ಈ ಕಾಲದಲ್ಲಿ ಹೆಣ್ಣನ್ನು ಮಾತೃ ಸ್ಥಾನದಲ್ಲಿ ಇರಿಸುತ್ತಿದ್ದರು.

ಈ ಸುತ್ತಿನ ಅಧ್ಯಯನದ ನಂತರ ಸಿ.ವೀರಣ್ಣ ಅವರು ಕಾವ್ಯಗಳ ಬಗೆಗೆ ಚಿಂತಿಸುತ್ತಾರೆ. ಜಾನಪದ ಕಾವ್ಯ ಮತ್ತು ಶಾಸನ ಕಾವ್ಯದ ಬಗ್ಗೆ ಚರ್ಚೆ ಮುಂದುವರೆಯುತ್ತದೆ. ವಚನ ಸಾಹಿತ್ಯ ಕುರಿತಂತೆ ಕನ್ನಡ ಕಾವ್ಯ ಕ್ಷೇತ್ರದಲ್ಲಿ ಮೊದಲ ಬಾರಿಗೆ ಹೆಣ್ಣು ಗಂಡನೊಂದಿಗೆ ಸರಿಸಮನಾಗಿ ಕಾವ್ಯ ರಚಿಸಿದ್ದನ್ನು ಸಿ.ವೀರಣ್ಣನವರು ಗುರುತಿಸುತ್ತಾರೆ.

ಡಾ॥ಸಿ.ವೀರಣ್ಣನವರು ಅರ್ಧನಾರೀಶ್ವರ ತತ್ವವನ್ನು ಎತ್ತಿ ಹಿಡಿದಿದ್ದಾರೆ. ಜಗತ್ತಿನ ಚಲನೆ ಬೆಳವಣಿಗೆಯಲ್ಲಿ ಪ್ರಕೃತಿ-ಪುರುಷ-ಶುದ್ಧಿ ಅರ್ಧಗಳೆಂದು ಕರೆಸಿಕೊಂಡು ಸಮಸ್ಥಾನವನ್ನು ಪಡೆದ ಗಂಡು-ಹೆಣ್ಣುಗಳ ನಡುವೆ ಮೇಲು-ಕೀಳು ಭಾವ ಯಾವ ಕಾರಣಕ್ಕೆ ಸೃಷ್ಠಿಯಾಯಿತು? ಎಂದು ಪ್ರಶ್ನಿಸಿದ್ದಾರೆ. ಜೊತೆಯಲ್ಲಿ ಬದುಕಿ ಎಲ್ಲಾ ಬಗೆಯ ಸೇವೆಗಳನ್ನು ಪಡೆದು 'ಗಂಡು ಅರ್ಧನಾರೀಶ್ವರ ತತ್ವ'ದ ಕಲ್ಪನೆಯನ್ನು ಚೂರು-ಚೂರು ಮಾಡಿ ಹೆಣ್ಣನ್ನು ಕೀಳಾಗಿ ಕಾಣುವುದಕ್ಕೆ ಅವಳು ಮಾಡಿದ ಅಪರಾಧವಾದರೂ ಏನು? ಸಮಾಜದಲ್ಲಿ ಅತ್ಯಾಕರ್ಷಕವಾದ ಈ ವಿಚಾರವನ್ನು ಅರ್ಥೈಸಲು ಅನೇಕರು ಶ್ರಮಿಸಿದ್ದಾರೆ. ಅವರ ಶ್ರಮದ ಬೆಳಕಿನಲ್ಲಿ ಕನ್ನಡ ಕಾವ್ಯದಲ್ಲಿ ಹೆಣ್ಣಿನ ಪರಿಕಲ್ಪನೆಯನ್ನು ಗ್ರಹಿಸಲು ನಮಗೆ ಸಾಧ್ಯವಾಗಿದೆ. ಹೆಣ್ಣಿನ ಬಗ್ಗೆ ಅವರ ನಿಲುವುಗಳು ಅದರ ಸಾಮಾಜಿಕ ಹಾಗೂ ಚಾರಿತ್ರಿಕವಾಗಿ ಮುಂದಿನ ಅಧ್ಯಯನಗಳಿಗೆ ಅನುಕೂಲವಾಗಿವೆ.

ಸಾಮಾಜಿಕ ಸಿದ್ಧಾಂತ ಮತ್ತು ಹೋರಾಟ : ಡಾ.ಆರ್ಕೆ(೧೯೮೫)

ಡಾ ಆರ್ಕೆಯವರು ಮಹಿಳಾ ಪ್ರಜ್ಞಾ ಮತ್ತು ಕಾವ್ಯದ ಬಗ್ಗೆ. ಭಾರತೀಯ ಸಾಮಾಜಿಕ ಮತ್ತು ಧಾರ್ಮಿಕ ಹಿನ್ನೆಲೆಯಲ್ಲಿ ಸ್ತ್ರೀ ಮನೋಧರ್ಮ ಅವಳ ಸ್ಥಿತಿ-ಗತಿಗಳ ವಿಶ್ಲೇಷಣೆ ಮೂಲಕವೇ ಹೇಳಲಾಗಿದೆ. ದೀರ್ಘವಾದ ಪ್ರಸ್ತಾವನೆಯಲ್ಲಿ ಭಾರತೀಯ ಸ್ತ್ರೀಯೊಬ್ಬಳ ಸಾಮಾಜಿಕ, ಧಾರ್ಮಿಕ, ಅರ್ಥಿಕ ಸ್ಥಿತಿಗತಿಗಳ ವಿಶ್ಲೇಷಣೆಯಿದೆ. ನಂತರದಲ್ಲಿ ಮಹಿಳಾ ಕಾವ್ಯವನ್ನು ಕುರಿತು ಆಳವಾದ ಹೇಳಿಕೆ ನೀಡಿದ್ದಾರೆ.

ಸ್ತ್ರೀ ಸಾಹಿತ್ಯ ಕುರಿತಂತೆ 'ಸಾಂಪ್ರಾದಾಯಿಕ ಸಿಗ್ಗು-ತಗ್ಗು ಸಂಕೋಚಗಳನ್ನು ಪುರುಷ ನಿಯಮಿತವಾದ ಕಟ್ಟು-ಪಾಡುಗಳನ್ನು ಕಿತ್ತೊಗೆದು ಮುಕ್ತವಾಗಿ ಸಂಗಾತಿಯೊಡನೆ ಸಂಭಾಷಿಸುವ ಆತ್ಮೀಯ ಲಹರಿ ಬರೆಯುತ್ತಿರುವ ಇವರ ಸಂವೇದನ ಮೂಲವನ್ನು ಶೋಧಿಸುತ್ತಾ ಹೋದಂತೆ ಇವರಲ್ಲಿ ಕೆಲವರ ಪ್ರಾಮಾಣಿಕವಾದ ಸಾಧನೆಗಳನ್ನು ಗುರುತಿಸುವಂತಿಲ್ಲ. ವೈಯಕ್ತಿಕ ಪ್ರವೃತ್ತಿಗಳ ಮತ್ತು ಪರಿಸರ ಅನುಭಾವಗಳ ನಡುವೆ ಸಂಘರ್ಷವು ಭಾಷೆಯಲ್ಲಿ ಮೈತೊಳೆಯುವ ಈ ಪ್ರಕ್ರಿಯೆಯಲ್ಲಿ ಎಲ್ಲರೂ ಒಂದು ಸಾಲಿನಲ್ಲಿ ನಿಲ್ಲಲಾರರು. ಸಾಮಾನ್ಯ ವರ್ಗ ಹಿನ್ನೆಲೆ ಮತ್ತು ಸಮಾನ ವಸ್ತುಗಳನ್ನಿಟ್ಟು ಬರೆಯುವಾಗಲು ಈ ವ್ಯಕ್ತಿ ವಿಶಿಷ್ಟತೆ ಕೆಲಮಟ್ಟಿಗಾದರೂ ಉಳಿದಿರುವುದು. ಇದರಲ್ಲಿ ಗಟ್ಟಿತನ ಬೇಕಾಗುತ್ತದೆ' ಎಂದು ಅಭಿಪ್ರಾಯ ತಿಳಿಸಿದ್ದಾರೆ.

ಇದೇ ಪ್ರಬಂಧದಲ್ಲಿ ಆರ್ಕೆ ಅವರು ಕಾವ್ಯದಲ್ಲಿ ಲೈಂಗಿಕ ಸ್ವಚ್ಛಂದತೆ ಅಭಿವ್ಯಕ್ತಿಕತೆಯ ಬಗ್ಗೆ ಹೇಳುತ್ತಾ ಲೈಂಗಿಕ ಸ್ವಚ್ಛಂದತೆಯ ಬಯಕೆಯನ್ನು ಕಾವ್ಯದ ಪ್ರೇರಣೆಯಾಗಿಟ್ಟುಕೊಂಡಾಗ ತಳೆಯಬಹುದಾದ ವಿವೇಕ ಮತ್ತು ನಿಗ್ರಹದ ಅವಶ್ಯಕತೆ ಬಗೆಗೆ ವಿವರಿಸಿದ್ದಾರೆ.

ಒಂದೆಡೆ ಹೆಣ್ಣನ್ನು ಪೂಜಿಸಿ ಪತಿವ್ರತೆಯರ ಪಟ್ಟಕ್ಕೇರಿಸಿ ಇನ್ನೊಂದೆಡೆ ಕಾಮದ ಸರಕ್ಕಾಗಿ ಕಾಣುವ ಪುರುಷ ಪ್ರಪಂಚವನ್ನು ಕಣ್ಣು ತೆರೆಸುವಲ್ಲಿ ಕವಿಯತ್ರಿಯರು ಸಿದ್ಧರಾಗಬೇಕೆಂದು ಹೇಳಿದ್ದಾರೆ. ಸ.ಉಷಾ ಪ್ರತಿಭಾ ನಂದಕುಮಾರ್, ಮುಕ್ತಾಯಕ್ಕ ಶಶಿಕಲಾ ವಸ್ತ್ರದ, ವೇದವತಿ, ಮಾಲತಿಪಟ್ಟಣಶೆಟ್ಟಿ, ಲಲಿತಾನಾಯಕ್, ಭಾಗ್ಯ, ಸುಕನ್ಯಾ ಮಾರುತಿ, ಸುಮನ ಬಾಗಲಕೋಟೆ, ಪೂರ್ಣಿಮಾ ಗುಡಿಬಂಡೆ ಮುಂತಾದವರ ಕವನಗಳನ್ನು ಉದಾರಿಸಿ ಸ್ತ್ರೀ ಕಾವ್ಯದ ಮಜಲುಗಳನ್ನು ಗುರುತಿಸಿದ್ದಾರೆ.

ಮಹಿಳಾ ಸಾಹಿತ್ಯ : ಚಿ.ನಾ.ಮಂಗಳ(೧೯೮೮)

ಈ ಕೃತಿಯಲ್ಲಿ ನಾಲ್ಕು ವರ್ಷದ ಅವಧಿಯಲ್ಲಿನ ೧೯ ಕವನ ಸಂಕಲನಗಳ ಸಮೀಕ್ಷೆ ನಡೆಸಿದ್ದಾರೆ. ೧೯೮೦-೮೩ ವರೆಗಿನ ಕವನ ಸಂಕಲನ ಸಮೀಕ್ಷೆ ಮಾಡಿದ್ದಾರೆ.

ಈ ಹಂತದಲ್ಲಿ ಬಂದ ಕವಿತೆಗಳು ಲವಲವಿಕೆಯಿಂದ ಕೂಡಿವೆ. ಮಧ್ಯಮವರ್ಗದ ಹೆಣ್ಣಿನ ಪ್ರತಿಭಾ ಆತ್ಮಾಪ್ರಯತ್ನ ಮೂಲದಿಂದ ಬದುಕನ್ನು ತೆರೆದ ಕಣ್ಣುಗಳಿಂದ ನೋಡುವ ತೆರೆದೆದೆಯಿಂದ ಅನುಭವಗಳನ್ನು ಬಣ್ಣಿಸಿಕೊಂಡು ತೀವ್ರವಾಗಿ ಸ್ಪಂದಿಸುವಲ್ಲಿ ಸದ್ಯದ ಕವಿಯತ್ರಿಯರು ಗಮನಾರ್ಹರು.

ಹೀಗೆ ಈ ಎಲ್ಲಾ ೧೯ ಸಂಕಲನಗಳನ್ನು ವೈವಿಧ್ಯತೆಯಿಂದ ತಂತ್ರಕೌಶಲ್ಯ ಭಾಷಾ ಪ್ರಯೋಗಗಳಿಂದ ಬಹಳಷ್ಟು ಕಡೆಗೆ ಕಾವ್ಯವಾಗಬಲ್ಲ ಗುಣಮಟ್ಟವನ್ನು ಪಡೆದಿದ್ದರೂ ಕೂಡ ಒಟ್ಟಾರೆಯಾಗಿ ಯಾಕೆ ಸಹೃದಯರನ್ನು ಇಡಿಯಾಗಿ ಹಿಡಿದು ಗಾಢವಾಗಿ ಸ್ಥಾಪಿತಗೊಳ್ಳುವುದಿಲ್ಲ? ಎನ್ನುವ ಅನೇಕ ಪ್ರಶ್ನೆ ಪ್ರತಿ-ಸಂಕಲನಕ್ಕೂ ಅನ್ವಯಿಸುತ್ತದೆ. ಯಾವುದೇ ಸಾಹಿತ್ಯ ಮಾಧ್ಯಮ ಒಂದು ಸಾಂಸ್ಕೃತಿಕ ಕೊಡುಗೆಯಾಗುವುದರಿಂದ ಅಂಥ ಕಾಣಿಕೆಯ ಬಗ್ಗೆ ಗಂಭೀರವಾಗಿ ಯೋಚಿಸುವುದು ಅಗತ್ಯವಾಗಿದೆ ಎಂದಿದ್ದಾರೆ.

ಶಶಿಕಲಾ ವಸ್ತ್ರದ ನಾಲ್ಕು ವರ್ಷದ ಕವನ ಸಂಕಲನಗಳ ತೌಲನಿಕವಾಗಿ ವಿಶ್ಲೇಷಿಸಿದ ನಂತರ ಹಲವು ಸಮಕಾಲೀನ ಕೊರತೆಗಳನ್ನು ಎತ್ತಿ ಹಿಡಿದಿದ್ದಾರೆ.

೧. ಅಕ್ಕಮಹಾದೇವಿಯಂತೆ ಮಹಾದೇವಿ ವರ್ಮಾರಂತೆ ಅಮೃತ ಪ್ರೀತಮ್‌ರಂತೆ ಕಮಲಾದಾಸ್‌ರಂತೆ ಯಾಕೆ ನಮ್ಮಲ್ಲಿ ದಾಖಲಾಗಲಿಲ್ಲ.

೨. ಅನೇಕ ವಿಮರ್ಶಕರು ಹೇಳುವಂತೆ 'ಕತೆ-ಕಾದಂಬರಿಗಳಿಗಿಂತ ವೈಚಾರಿಕ ಪ್ರಬುದ್ಧತೆಯನ್ನು ಕವಿಯತ್ರಿಯರಲ್ಲೇ ಹೆಚ್ಚು ಕಾಣಬಹುದಾಗಿದೆ ಎಂಬ ಮಾತು ಸಮಾಧಾನ ತಂದರೂ ಅದು ಸಮಾಧಾನದ ಮೊದಲ ಮೆಟ್ಟಿಲು ಮಾತ್ರ. ಅಕ್ಕನ ವಚನ 'ಒಮ್ಮೆ ಕಾಮನ ಕಾಲ ಹಿಡಿವೆ. ಒಮ್ಮೆ ಚಂದ್ರಮಂಗೆ ಸೆಡೆಗೊಡ್ಡಿವೆ. ಸುಡು ಅರಿಗೆ ದೃತಿಗೆಡುವೆ ಎನ್ನುವ ವಿರಹೋತ್ಕಟ ಇಂದಿನ ಲೇಖಕಿಯರಿಗಿಲ್ಲ. ಜಾನಪದದ ಹೆಣ್ಣು ಮೆಣಸಿನಕಾಯಿ ಕಣ್ಣೀರು ಕೆಂಪಗಸನ್ಯಾಕೆ ದಿನ ನೆಗಣ್ಣಿ ಆಕಿ ಮಾತು- ಬೆಣ್ಯಾಗ ಮುಳ್ಳು ಮುರುದಾಂಗ ಎಂಬಂಥ ಸುಲಭವಾದ ವಿಶ್ಲೇಷಣೆಗೆ ದಕ್ಕದ ಅರ್ಥ ವಿವರಣೆಗೆ ತಕ್ಕಂತೆ ಸಾಲದ ಇಂಥ ಪ್ರತಿಮೆಗಳ ಬಳಕೆಯಾಗಲಿ ಅಂತಹ ಪ್ರಬುದ್ಧತೆ ಕಾಣದಿರುವುದಕ್ಕೆ ಬೇಸರಗೊಂಡಿದ್ದಾರೆ.

೩. ವಸ್ತುವಿನ ಆಯ್ಕೆಯಲ್ಲಿ ಮಹಿಳೆಯರು ಬಹಳಷ್ಟು ಪುರುಷ ವಿರೋಧಿ ಮನೋ ಧರ್ಮವನ್ನು ಹೆಚ್ಚು ಇಟ್ಟುಕೊಂಡಿದ್ದರ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ.

ಶತಮಾನಗಳಿಂದ ನಲುಗಿದ ಹೆಣ್ಣು ತನ್ನ ಮೇಲಾದ ದೌರ್ಜನ್ಯವನ್ನು ಹೊರಗೆಳೆಯುವುದು ತಪ್ಪಲ್ಲದಿದ್ದರೂ ಅವನನ್ನೇ ಕಾವ್ಯದ ಗುರಿಯಾಗಿಟ್ಟುಕೊಂಡು ಬರೆಯುವುದು ಮಾತ್ರ ನಿಜಕ್ಕೂ ಕಾವ್ಯದ ದೃಷ್ಟಿಯಿಂದ ಅಪಾಯಕಾರಿ ಎಂಬುದು ವಸ್ತ್ರದ ಅವರ ಅಭಿಪ್ರಾಯ.

ಪುರುಷ ಸಾಹಿತ್ಯ ಈ ವರೆಗೆ ತನ್ನನ್ನು ಭಾವಿಸಿದಂತೆ ಕಾಣಿಸಿಕೊಳ್ಳುತ್ತಾ ಬಂದು ಮಹಿಳೆ ಇದೀಗ ಎಚ್ಚೆತ್ತು ಸಿದ್ಧ ಮೌಲ್ಯಗಳನ್ನು ತಟ್ಟನೆ ಸ್ವೀಕರಿಸಿ ಪರೀಕ್ಷೆಗೊಡ್ಡುವ ಸಾಹಸಕ್ಕೆ ಕೈ ಹಾಕಿದ್ದಾಳೆ. ಸಾಂಪ್ರದಾಯದ ಹೊಸ್ತಿಲೊಳಗೊಂದು ಹೊರಗೊಂದು ಕಾಲಿಟ್ಟಿರುವ ಅವಳ

ಇಬ್ಬಂದಿತನವನ್ನು ಕಾವ್ಯದ ಮೂಲಕ ತನ್ನನ್ನು ತಾನು ಕಂಡು ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ಸಹಾಯವಾಗಿದೆ. ನಿರ್ಭೀತಿಯಿಂದ ಅಭಿವ್ಯಕ್ತತೆಯನ್ನು ಹೊರಗೆಳೆಯಲು ಹಿಂಜರಿಯುತ್ತಾಳೆ. ಹಾಗೆ ನಿರ್ಭೀತವಾಗಿ ಹೇಳುವುದರಿಂದ ಸಮಾಜ ನನ್ನನ್ನು ಎಲ್ಲಿ ನಿರಾಕರಿಸುತ್ತದೋ ಎಂಬ ಅನಗತ್ಯ ಭೀತಿಯಲ್ಲಿ ತನಗೆ ತಾನೇ ಹುಸಿಯಾಗಿ ಆತ್ಮ ವಂಚನೆ ಮಾಡಿಕೊಳ್ಳುವುದಕ್ಕಿಂತಲೂ ಆರೋಗ್ಯಕರವಾದ ನಿಲುವಿನಲ್ಲಿ ಹುಡುಕುವುದರ ಮೂಲಕ ಕಾವ್ಯಕ್ಕೊಂದು ಹೊಸ ಆಯಾಮವನ್ನು ಹುಡುಕುವಲ್ಲಿ ಮುಂದಾಗಬೇಕಾಗಿದೆ. ನಿರಂತರ ಪ್ರವಾಹದ ಅಲೆಯಂತಿರುವ ತನ್ನ ಪರಿಸರದ ಸ್ಪಂಧನಗಳನ್ನು ದಟ್ಟವಾಗಿ ಹೇಳುತ್ತಾ ಕಾವ್ಯ ಶೋಧನೆಯಲ್ಲಿ ತನ್ನ ಗುರುತನ್ನು ಸರ್ವಕಾಲಿಕ ಕಾವ್ಯ ಪ್ರಯೋಜನವನ್ನು ಕವಿಯತ್ರಿಯರು ಸಾಧಿಸಬೇಕಾಗುತ್ತದೆ ಎಂದಿದ್ದಾರೆ.

ಸಾಹಿತ್ಯ ಮತ್ತು ಮಹಿಳೆ : ವಿಜಯಶ್ರೀ ಸಬರೆದ(೧೯೯೮)

ಮಹಿಳಾ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆಯನ್ನು ವಿಜಯಶ್ರೀ ಸಬರದ ಅವರು ಈ ಪುಸ್ತಕದಲ್ಲಿ ಗುರುತಿಸಿದ್ದಾರೆ ಮಹಿಳಾ ಕಾವ್ಯದಲ್ಲಿನ ಸಾಮಾಜಿಕ ಪ್ರಜ್ಞೆಯನ್ನು ವಚನಯುಗದಿಂದ ಆರಂಭಿಸುತ್ತಾರೆ. ೧೨ ಶ. ಕಾಳವ್ವೆ-ಸಂಕವ್ವೆಯವರ ವಚನಗಳಲ್ಲಿ ಸಾಮಾಜಿಕ ಕಳಕಳಿಯನ್ನು ಗುರುತಿಸದ್ದಾರೆ. ನವೋದಯ ಪ್ರಗತಿಶೀಲ, ನವ್ಯಸಾಹಿತ್ಯ ಚಳುವಳಿಗಳಿಗಿಂತ ಬಂಡಾಯ-ದಲಿತ-ಚಳುವಳಿಯ ಸಂದರ್ಭದಲ್ಲಿ ಮಾತ್ರ ಮಹಿಳೆ ಕಾವ್ಯಕ್ಷೇತ್ರದಲ್ಲಿ ತನ್ನನ್ನು ತೀವ್ರವಾಗಿ ತೊಡಗಿಸಿಕೊಂಡು ಬಂದಿರುವುದು ಕಂಡುಬರುತ್ತದೆ ಎಂಬುದು ಲೇಖಕಿಯ ಅಭಿಪ್ರಾಯ. ಯಜಮಾನ ಸಂಸ್ಕೃತಿಯ ಸೋಗಲಾಡಿತನ, ಶತಮಾನಗಳಿಂದ ನಡೆದ ಶೋಷಣೆ, ಸಾಮಾಜಿಕ ಅಸಮಾನತೆ, ವರದಕ್ಷಿಣೆ ಪದ್ಧತಿ, ನಿರುದ್ಯೋಗ ಸಮಸ್ಯೆ, ಅಡ್ಡಗಟ್ಟಿದ ಜಾತಿಗೋಡೆಗಳು ಇವೆಲ್ಲಾ ಇಂದಿನ ಮಹಿಳೆಯರಲ್ಲೂ ಕಾಡುತ್ತವೆ. ಮಹಿಳಾ ಸಾಹಿತ್ಯ ಬದುಕು ಮುಖ್ಯವಾದ್ದರಿಂದ ಇಂದಿನ ಮಹಿಳಾ ಕಾವ್ಯಗಳಲ್ಲಿ ಸಾಮಾಜಿಕ ಕಳಕಳಿಯು ಅತ್ಯಂತ ಸಹಜವಾಗಿ ಮತ್ತು ಅಷ್ಟೇ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಅಂತೆಯೇ ೮೦ ರ ದಶಕದ ಮಹಿಳಾ ಕಾವ್ಯದ ಮಹತ್ವಪೂರ್ಣ ಹೊಸಹೆಜ್ಜೆ ಎಂದು ಗುರುತಿಸಿದ್ದಾರೆ.

ಸಾಹಿತ್ಯ ಚೈತ್ರ : ಚೆನ್ನಕ್ಕ ಪಾವಟೆ(೧೯೯೩)

ಮಹಿಳಾ ಕಾವ್ಯದಲ್ಲಿ ಸಾಧನೆಗಳನ್ನು ಅವರ ಇತಿಹಾಸದ ಹೆಜ್ಜೆಗಳನ್ನು ಗುರುತಿಸುವ ಒಂದು ಅಲ್ಪ ಪ್ರಯತ್ನ ಇದಾಗಿದೆ. ಪ್ರಾತಿನಿಧಿಕ ಮಹಿಳಾ ಕಾವ್ಯ ಇದಾಗಿದ್ದು ಅಧ್ಯಯನ ದೃಷ್ಟಿಯಿಂದ ಕಾಲಮಿತಿಗೆ ಒಳಪಟ್ಟಿದೆ. ಪ್ರಾಚೀನ ಬರಹಗಾರ್ತಿಯರ ಪ್ರಸ್ತಾಪದಿಂದ ಈ

ಸಮೀಕ್ಷೆ ಆರಂಭಗೊಂಡಿದ್ದು ನಂತರದಲ್ಲಿ ವಚನ ಸಾಹಿತ್ಯದವರೆಗೂ ಬದಲಾದ ಪರಿಸ್ಥಿತಿಯನ್ನು ಹೇಳುತ್ತದೆ. ವಚನಯುಗದ ಪ್ರಾಮುಖ್ಯತೆಯೆಂದರೆ ಮೊಟ್ಟಮೊದಲು ಹೆಣ್ಣಿಗೆ ಧ್ವನಿ ಬಂದುದು ವಚನ ಯುಗದಲ್ಲಿ. ಯಜಮಾನ ಸಂಸ್ಕೃತಿಯಲ್ಲಿ ಭೋಗದ ವಸ್ತುವಾಗಿ ಶೋಷಣೆಗೊಳಿಸಲ್ಪಟ್ಟ ಸ್ತ್ರೀಗೆ ಸಂಪೂರ್ಣ ಸ್ವಾತಂತ್ರ್ಯ ಮತ್ತು ಪೂರ್ಣಗೌರವ ದೊರಕಿಸಿಕೊಟ್ಟಿದ್ದು ವಚನಯುಗ. ಅತ್ಯಂತ ಕೆಳವರ್ಗದ ಮಹಿಳೆಯರು ಅಧಿಕ ಮಟ್ಟದಲ್ಲಿ ಸಾಮೂಹಿಕವಾಗಿ ಸ್ಪಂದಿಸಿದುದು ಗಮನಾರ್ಹ ಅದರಲ್ಲಿ ಗೊಗ್ಗವ್ವೆಯಂತಹ ಓರ್ವ ದಲಿತ ವಚನಕಾರ್ತಿಯು ಒಬ್ಬಳು.

ನಂತರದ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರ ಕಾಲಘಟ್ಟದಲ್ಲಿ ಮಹಿಳಾ ಸಾಹಿತ್ಯ ಬದಲಾದ ಕ್ರಮದ ಬಗ್ಗೆ ತಿಳಿಸುತ್ತಾ 'ಇಂಗ್ಲೀಷ್ ಸಾಹಿತ್ಯ ಪ್ರಭಾವದಿಂದ ಅಧುನಿಕ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮ ದೊರೆತು ವಿಭಿನ್ನ ರೀತಿಯ ಸಾಹಿತ್ಯ ರಚನೆಯಾಯಿತು. ಈ ಆಯಾಮದಿಂದ ಕನ್ನಡ ಸಾಹಿತ್ಯದ ಹಳೆಯ ಪರೆಕಳಚಿ ಹೊಸ ಕಾವ್ಯ ಶ್ರೇಷ್ಠತಾ ವೈವಿಧ್ಯತೆ ಶ್ರೀಮಂತಿಕೆ ತಂದುಕೊಟ್ಟಿತು' ಎಂದಿದ್ದಾರೆ.

ನವೋದಯ ಕಾಲದ ಮಹಿಳಾ ಕಾವ್ಯದ ಕೃಷಿ ಸೀಮಿತವಾಗಿದ್ದು, ವೈವಿಧ್ಯತೆಯ ಕೊರತೆಯನ್ನು ಹೊಂದಿದೆ. ಆ ಕಾಲದಲ್ಲಿಯ ಮಹಿಳೆಯರು ಅಷ್ಟು ಸ್ಪಂದಿಸಿದ್ದಾರೆಂಬುದು ಮಹತ್ವಪೂರ್ಣ. ಸಂಪ್ರದಾಯ ಸಾಮಾಜಿಕ ಪ್ರಜ್ಞೆ, ದೇಶಪ್ರೇಮ ದಾಂಪತ್ಯ ಜೀವನದಂತಹ ವಿಷಯಗಳ ನೇರ ನಿರೂಪಣೆಗಳನ್ನು ನವೋದಯ ಸಾಹಿತ್ಯ ಸಂದರ್ಭದ ಮಹಿಳಾ ಕಾವ್ಯದಲ್ಲಿನ ವಿಶ್ಲೇಷಣೆಗಳು ಎಂದಿದ್ದಾರೆ.

ನವೋದಯ ಕಾಲದ ಮಹಿಳೆಯರ ಸಾಮಾಜಿಕ ಅಭಿವ್ಯಕ್ತಿಗೆ ಕಾವ್ಯ ಸರಳ ಮಾಧ್ಯವೆನಿಸಿತು. ಈ ಪ್ರಯತ್ನದಲ್ಲಿ ಮೂದಲ ಬಾರಿಗೆ ಸ್ಪಂದಿಸಿದ ಕವಿಯತ್ರಿ ತಿರುಮಲಾಂಭ (೧೮೮೭-೮೨) ತಿರುಮಲೆ ರಾಜಮ್ಮ ಇವರಿಬ್ಬರದು ಕನ್ನಡ ಕಾವ್ಯ ಕ್ಷೇತ್ರದಲ್ಲಿ ಇಟ್ಟ ಮೊದಲ ಹೆಜ್ಜೆ ಎನ್ನಬಹುದು.

ಚೆನ್ನಕ್ಕ ಪಾವಟೆ ಪ್ರಕಾರ ಸ್ತ್ರೀ ಕಾವ್ಯ ಕುರಿತಂತೆ ನಾವೀಗ ಹೊಸ ಅಭಿವ್ಯಕ್ತಿ ಮಾಧ್ಯಮ ಹುಡುಕಬೇಕು ಜನಸಾಮಾನ್ಯರಿಗೆ ತಲುಪುವಂತಹದು ಅದಾಗಿರಬೇಕು ಹೊಸ-ಹೊಸ ವಸ್ತುಗಳು ನಮ್ಮ ಬರವಣಿಗೆಗೆ ಆಧಾರವಾಗಬೇಕು. ಸಮಾಜದ ದೀನದಲಿತರು. ಹಳ್ಳಿ-ಜನಪದ ಕೊಂಪೆ ಜನರು ನಿರ್ಗತಿಕರು ಅಸಾಯಕರು ಇವರೆಲ್ಲರ ಬಗ್ಗೆ ವಾಸ್ತವಿತೆಯ ನೆಲಗಟ್ಟಿನ ಮೇಲೆ ಕಲಾತ್ಮಕವಾದ ಕೃತಿ ರಚನೆಯಾಗಬೇಕು. ಮಹಿಳಾ ಕಾವ್ಯ ಕ್ಷೇತ್ರಕ್ಕೆ ಅಂಟಿದ ಶಾಪದಿಂದ ಮುಕ್ತರಾಗಬೇಕು. ತಮ್ಮ ಸುತ್ತ ರಚಿಸಿಕೊಂಡಿದ್ದ ಹತ್ತಾರು ಸಾಂಪ್ರಾದಾಯದ

ಬೇಲಿಯನ್ನು ಕಿತ್ತೊಗೆದು ಚಾರಿತ್ರಿಕ ಪ್ರಜ್ಞಾವಂತಿಕೆಯಿಂದ ಕಾವ್ಯ ಬರೆದರೆ ಹೆಚ್ಚು ಸಫಲತೆ ಉಂಟಾಗುವುದು. ಸ್ವಾಭಿಮಾನ ಹೆಣ್ಣಿನ ಆಶಯ ಈ ಸ್ವಾಭಿಮಾನ ಹೇಡಿಯು ಹಿಂದೇಟು ಅಲ್ಲ. ಗೌರವ ಬದುಕಿನ ಅಭಿಮಾನದ ಮುಂದೇಟು ವಚನಚಳುವಳಿಯಲ್ಲಿ ಶರಣ-ಶರಣೆಯರ ಸ್ವಾಭಿಮಾನ ಜನಪರ ಮೌಲ್ಯವಾಗಿ ಹೊರಹೊಮ್ಮಿದನ್ನು ಗಮನಿಸಬೇಕು. ಆವರ ಸ್ವಾಭಿಮಾನದ ಮೂಲ ಆಶಯ ಸ್ತ್ರೀ ಪುರುಷ ಎಂಬ ವರ್ಣ ಬಡವ-ಬಲ್ಲಿದ ಎಂಬ ವರ್ಗ ಪರ ಘೋಷಣೆಯಾಗಿರದೇ ಮಾನವೀಯತೆಯ ಪರವಾಗಿದೆ. ಅವರ ಸಾತ್ವಿಕ ಸಿಟ್ಟಿನಲ್ಲಿ ಮಾನವೀಯತೆಯ ಯೋಗಕ್ಷೇಮ ಅಡಗಿದೆ. ಆದರೆ ಇಂದಿನ ಕವನಗಳಲ್ಲಿಯ ಸಿಟ್ಟು-ಸೆಡವು ಅಶ್ಲೀಲಪದ ಬಳಕೆಗಿಂತ ಅಂತರಂಗದ ಗಾಢ ಸಂಬಂಧಗಳನ್ನು ಬೆಸೆವ ಜೀವನೋತ್ಸಾಹದ ಪದ ಬಳಕೆಯಾಗಲಿ. ಸ್ವಾಭಿಮಾನದ ಆಶಯ ನಮ್ಮ ಜೀವನ ಕಾವ್ಯದ ಮುಖ್ಯ ಪೇರಣೆಯಾಗಲಿ. ಈ ನಿಟ್ಟಿನಲ್ಲಿ ಮಹಿಳಾ ಕಾವ್ಯಕ್ಷೇತ್ರದಲ್ಲಿ ಇಟ್ಟ ಹೆಜ್ಜೆ ಇತಿಹಾಸದಲ್ಲಿ ಸ್ಪಷ್ಟ ಹೆಜ್ಜೆಗಳನ್ನು ಮೂಡಿಸಲು ಸಾಧ್ಯ ಎಂಬುದು ಆಶಾದೃಷ್ಟಿ.

ಚೆನ್ನಕ್ಕ ಪಾವಟೆಯವರು ಇಂದಿನ ಕವಿಯತ್ರಿಯರು ಸಾಹಿತ್ಯಕವಾಗಲು ಸ್ಪಂದಿಸಿದ ಕೆಲ ಅಂಶಗಳನ್ನು ಇಲ್ಲಿ ಸಂಗ್ರಹಿಸಿದ್ದಾರೆ.

ಕವಿಯತ್ರಿಯರ ಸಾಹಿತ್ಯ ತನ್ನ ಆಶಯ ಆಕಾರಗಳ ಮುಗ್ದತೆಯನ್ನು ಕಳೆದುಕೊಂಡು ಪ್ರಬುದ್ದತೆಯನ್ನು ಸಾಧಿಸುತ್ತದೆ. ಸಮಗ್ರವಾಗಿ ನೋಡುವ ಸಂಕೀರ್ಣ ದೃಷ್ಠಿಯನ್ನು ಪಡೆದು ಕೊಳ್ಳುತ್ತಿದೆ. ಜೀವನ ಶ್ರದ್ದೆ, ಸೃಜನಶೀಲತೆ ಜೀವನದರ್ಶನ ಇಂದಿನ ಸಾಹಿತ್ಯ ಸೃಷ್ಠಿಯ ಮೂಲ ಮುಖ್ಯ ಲಕ್ಷಣವಾಗುತ್ತಿದೆ.

ಅಂತಿಮದಲ್ಲಿ ಚೆನ್ನಕ್ಕ ಪಾವಟೆಯವರು ಉತ್ತಮವಾದ ನಿರ್ಧಾರಕ್ಕೆ ತಲುಪಿದ್ದಾರೆ. ಲೇಖಕಿಯಾದ ಮಹಿಳೆ ಸೂಕ್ಷ್ಮ ದೃಷ್ಠಿಯನ್ನು, ಸೂಕ್ಷ್ಮ ವಿವೇಚನಾಶಕ್ತಿಯನ್ನು ಬಳಸಿಕೊಂಡಾಗ ಜನ, ಸಮಾಜ ಏನೆನ್ನಬಹುದು ಎನ್ನುವ ತೊಳಲಾಟಕ್ಕೆ ಸಿಕ್ಕಿ ತಮ್ಮ ನೈಜಭಾವಾನೆಗಳನ್ನು ಹತ್ತಿಟ್ಟುಕೊಳ್ಳದೆ ಮನಸ್ಸಿನಲ್ಲೇಳುವ ವಿಚಾರಗಳಿಗೆ ಅಭಿವ್ಯಕ್ತಿಕೂಡುವ ಸಾಮರ್ಥ್ಯ ಬೆಳೆಸಿಕೊಂಡಾಗ ನಿಜವಾದ ಮಹಿಳಾ ಸಾಹಿತ್ಯದ ನಿರ್ಣಯವಾಗುತ್ತದೆ. ಇದು ಪುರುಷ ನಿರ್ಮಿಸುತ್ತಿರುವ ಸಾಹಿತ್ಯಕ್ಕೆ ವಿರೋಧಿಯೇನಲ್ಲ. ಬದಲಿಗೆ ಅದಕ್ಕೆ ಪೂರಕವಾಗುತ್ತದೆ. ಈಗ ಪುರುಷನ ದೃಷ್ಟಿಯಿಂದಷ್ಟೇ ನೋಡಲಾಗುತ್ತಿರುವ ಸಮಸ್ಯೆಗಳಿಗೆ ಹೊಸ ರೂಪ ಬರುತ್ತದೆ. ಜೀವನದಲ್ಲಿ ಹೇಗೋ ಹಾಗೆಯೇ ಸಾಹಿತ್ಯದಲ್ಲೂ ಸ್ತ್ರೀ ದೃಷ್ಟಿ ಪುರುಷ ದೃಷ್ಟಿಗಳೆರಡರ ಸಂಯೋಗದಿಂದ ಸ್ತ್ರೀ ಪುರುಷರಿಬ್ಬರ ವ್ಯಕ್ತಿತ್ವದ ಪೂರ್ಣ ದರ್ಶನ ದೊರೆಯುವಂತಾಗುತ್ತದೆ ಎಂದು ಹೇಳಿದ್ದಾರೆ.

ಹೊಸಗನ್ನಡ ಸಾಹಿತ್ಯ ಚರಿತ್ರೆ: ಎಲ್.ಎಸ್.ಶೇಷಗಿರಿರಾವ್

ಮಹಿಳಾ ಕಾವ್ಯದಲ್ಲಿಯ ಮುಕ್ತತೆ ಕುರಿತಂತೆ ಶೇಷಗಿರಿರಾವ್ ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚಿಕ್ಕದಾದ ಚೊಕ್ಕಟವಾಗಿ ವಿಮರ್ಶಿಸಿದ್ದಾರೆ.

ಮಹಿಳಾ ಕಾವ್ಯದಲ್ಲಿ ಮುಕ್ತ ಅಭಿವ್ಯಕ್ತಿಯನ್ನು ಕಾಣಬಹುದು 'ನಾನು ನಿನ್ನನ್ನ ಪ್ರೀತಿಸುತ್ತೇನೆ ಎಂದು ರಾಧಕೃಷ್ಣನಿಗೆ ದಮಯಂತಿ ನಳಿನಿಗೆ ಹೇಳುತ್ತಾಳೆ. ಹೀಗೆ ದೇವತೆಗಳು ಮತ್ತು ದೇವತಾ ಸದೃಶರು ಆದ ಹೆಣ್ಣುಗಳು ಮಾತ್ರ ಗಂಡಸರಿಗೆ ಸಾಹಿತ್ಯದಲ್ಲಿ ಹೇಳಬಹುದು ಸಾಮಾನ್ಯ ಹೆಂಗಸರು ಸಾಮಾನ್ಯ ಗಂಡಸರಿಗೆ ಹೇಳತಕ್ಕದ್ದಲ್ಲ ಎನ್ನುವ ಭಾವನೆ ಹೋಗಿ ಹೆಣ್ಣು ತನ್ನ ಪ್ರೇಮವನ್ನು ಹೇಳಿಕೊಳ್ಳುವುದು ಸಾಧ್ಯವಾಗಿದೆ. ಇದರಿಂದ ಹಲವು ಒಳ್ಳೆಯ ಪ್ರೇಮ ಕವನಗಳು ದಕ್ಕಿವೆ. ಜೊತೆಗೆ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಅನುಭವಿಸು ತ್ತಿರುವ ಶೋಷಣೆ, ನೋವುಗಳಿಗೂ ದನಿ ದೊರೆತಿದೆ. ಹಲವೊಮ್ಮೆ ಇಂತಹ ಕವನದಲ್ಲಿ ಆವೇಶ ಬಿಟ್ಟು ಏನು ಇಲ್ಲ ಎನಿಸಬಹುದು. ಆದರೆ ಈ ಕವನ ಪಕ್ವವಾಗುತ್ತಿದೆ. ಪುರುಷ ರಂತೆಯೇ ತಾವು ಬರೆಯಬೇಕೆಂಬ ಭಾವನೆಯನ್ನು ಬಿಟ್ಟುಕೊಟ್ಟು ಪುರುಷನಂತೆ ತಾವು ಸ್ವತಂತ್ರವಾಗಿ ಬರೆಯಲು ಮಹಿಳೆಯರು ಪ್ರಾರಂಭಿಸಿದ ನಂತರ ಅವರ ಕಾವ್ಯ ಪಕ್ಷಿ ಬಿಚ್ಚಿ ಹಾರಲಾರಂಭಿಸಿತು.

ಮಹಿಳಾ ಸಾಹಿತ್ಯ ಸಮೀಕ್ಷೆ: ಆರ್ಯಾಂಬ ಪಟ್ಟಾಭಿ(೨೦೦೪)

ಆರ್ಯಾಂಬ ಪಟ್ಟಾಭಿಯವರು ಇಂದಿನ ಬದಲಾದ ಕಾವ್ಯ ಜಗತ್ತನ್ನು ಕುರಿತು ಹೇಳುವಂತೆ ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಬದುಕು, ಮೌಲ್ಯಗಳನ್ನು ಕುರಿತಾದ ಸ್ಪಂದನೆ ಚಿಂತನೆ ಪ್ರತಿಕ್ರಿಯೆಗಳು ಎಂದೆಂದೂ ಇಲ್ಲದಷ್ಟು ಈಗ ವಿಫಲವಾಗಿವೆ, ವಿಭಿನ್ನವಾಗಿವೆ. ಮಹಿಳೆಯರ ಬದುಕನ್ನು ಕುರಿತ ಸಮಾಜದ ದೃಷ್ಟಿಕೋನದಲ್ಲಿ ವ್ಯತ್ಯಾಸಗಳು ಆಗುತ್ತಿವೆ. ಮಹಿಳಾ ಕಾವ್ಯ ಹೊಸ ಸವಾಲುಗಳನ್ನು ಎದುರಿಸುತ್ತಾ ವಿಶಿಷ್ಟವಾಗಿ, ಸ್ವತಂತ್ರವಾಗಿ ಬೆಳೆಯುತ್ತಿರುವ ಇಂದಿನ ಸಂದರ್ಭದಲ್ಲಿ ಬಾಹ್ಯ ಮತ್ತು ಆಂತರಿಕ ಜಗತ್ತಿಗೆ ಧ್ವನಿಯಾಗಿ ಕಾವ್ಯಗಳು ಮೂಡಿಬರುತ್ತಿವೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ, ಪ್ರಗತಿಶೀಲ, ನವ್ಯ ಪಂಥಗಳು ಬೆಳೆದು ಬಂದಿದೆ. ಬೆರಳೆಣಿಕೆಯಷ್ಟು ಜನ ಮಹಿಳೆಯರನ್ನು ಮಾತ್ರ ಸಾಹಿತ್ಯ ನಿರ್ಮಾಣ ಮಾಡಿದ್ದಾರೆ. ಆದರೆ ನವೋತ್ತರ ಸಾಹಿತ್ಯವನ್ನು ಅವಲೋಕಿಸಿದಾಗ ಹೊಸತರಹದ ಸಂವೇದನೆಗಳು ಮೂಡಿಬರುತ್ತವೆ. ಇದಕ್ಕೆ ಕಾರಣ ಮಹಿಳಾ ಸಾಹಿತ್ಯ ಕ್ಷೇತ್ರದಲ್ಲಿ ತನ್ನನ್ನು ತೀವ್ರವಾಗಿ ತೊಡಗಿಸಿಕೊಂಡಿರುವುದು. ಮಹಿಳಾ ಸಾಹಿತ್ಯಕ್ಕೆ ಅದರದೇ ಆದ ಒಂದು ಪರಂಪರೆ ಇದೆ.

ಹನ್ನೆರಡನೇ ಶತಮಾನದ ಅಕ್ಕಮಹಾದೇವಿ, ಮುಕ್ತಾಯಕ್ಕ, ಕಾಳವ್ವ ಅನಂತರ ಕಾಲದ ಹೆಳವನಕಟ್ಟೆ ಗಿರಿಯಮ್ಮ, ಹರಪ್ಪನಹಳ್ಳಿ ಭೀಮಮ್ಮ, ಸಂಚಿಹೊನ್ನಮ್ಮ ಮೊದಲಾದವರು ಆಗಿನ ಕಾಲದಲ್ಲಿಯೇ ಸಾಹಿತ್ಯಕ್ಕೆ ಅಡಿ ಇಟ್ಟವರು. ಇವರಲ್ಲಿ ಸಾಮಾಜಿಕ ಕಳಕಳಿ ಮತ್ತು ಆಧ್ಯಾತ್ಮಿಕ ಭಾವನೆಗಳನ್ನು ಗುರುತಿಸಬಹುದು. ಆದರೆ ಇಂದಿನ ಮಹಿಳೆಯರು ಸ್ತ್ರೀ ಸಂವೇದನೆಯನ್ನು ಪ್ರತಿಬಿಂಬಿಸುವ ಭಾವನೆಗಳನ್ನು ಕಾವ್ಯ ರೂಪದಲ್ಲಿ ಭಟ್ಟಿ ಇಳಿಸಲು ಪ್ರಾರಂಭಿಸಿದ್ದಾರೆ.

ಕನ್ನಡ ಕಾವ್ಯಕ್ಷೇತ್ರಕ್ಕೆ ಸಾವಿರ ವರ್ಷಗಳಿಗಿಂತ ಹೆಚ್ಚಿನ ಇತಿಹಾಸವಿದೆ. ಇಷ್ಟು ಸುದೀರ್ಘವಾದ ಕಾವ್ಯ ಪರಂಪರೆಯಲ್ಲಿ ಇಪ್ಪತ್ತನೇ ಶತಮಾನಕ್ಕೆ ಸ್ತ್ರೀ ತಮ್ಮನ್ನು ಸಾಹಿತ್ಯ ಕ್ಷೇತ್ರದಲ್ಲೂ ತೊಡಗಿಸಿಕೊಂಡಿರುವುದರಿಂದ ಹೊಸ ದೃಷ್ಟಿಯಿಂದ ಸಮಾಜವನ್ನು ನೋಡಲು ಸಾಧ್ಯವಾಗಿದೆ.

ಮಹಿಳೆಯ ಕಾವ್ಯವನ್ನು ಒಟ್ಟಾಗಿ ಗಮನಿಸಿದಾಗ ಅವರ ಬರವಣಿಗೆಯಲ್ಲಿ ವಿಭಿನ್ನ ವಸ್ತುವಿನ ಆಯ್ಕೆ ಮತ್ತು ಅಭಿವ್ಯಕ್ತಿಯ ರೀತಿಯಲ್ಲಿ ವೈವಿಧ್ಯತೆಯನ್ನು ಗುರುತಿಸಬಹುದು. ಅಂದರೆ ಕೆಲವು ಆಧ್ಯಾತ್ಮಿಕ ನೆಲೆಗಟ್ಟಿಗೆ ಹೆಚ್ಚಿಗೆ ಪ್ರಾಮುಖ್ಯತೆಯನ್ನು ನೀಡಿರುವುದು, ಮತ್ತೆ ಕೆಲವರು ಹೆಣ್ಣಿನ ಭಾವನೆಗಳಿಗೆ ಸ್ಪಂದಿಸುತ್ತಿದ್ದರೂ ಒಂದು ರೀತಿ ಇಬ್ಬಂದಿತನದಲ್ಲಿ ಕವನ ರಚಿಸುವುದು, ಕೆಲವರು ಪುರುಷ ಪ್ರಧಾನ ಸಮಾಜ ಹಾಕಿದ ಚೌಕಟ್ಟಿನೊಳಗೆ ಇರುವ ಸಿದ್ಧ ಪಾತ್ರಗಳಿಗೆ ಜೀವಂತಿಕೆಯನ್ನು ನೀಡಿರುವುದು. ಮತ್ತೆ ಕೆಲವರು ತಮ್ಮ ಮನಸ್ಸಿನಲ್ಲಿ ಬಹಳ ಕಾಲದಿಂದ ಅದುಮಿಟ್ಟಿದ್ದ ಎಲ್ಲಾ ಭಾವನೆಗಳನ್ನು ನಿರ್ಭೀತಿ ನಿರ್ವಂಚನೆಯಿಂದ ಕಾವ್ಯದಲ್ಲಿ ಕಲಾತ್ಮಕವಾಗಿ ಅಭಿವ್ಯಕ್ತಿಸಿರುವುದನ್ನು ಕಾಣಬಹುದು.

ಇತ್ತೀಚಿನ ದಶಕದಲ್ಲಿ ಹೆಣ್ಣು ತನ್ನತನವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದು, ಹೆಚ್ಚಿನ ಕವಿಯತ್ರಿಯರ ಬರವಣಿಗೆ ಸ್ತ್ರೀಪರ ನೆಲಗಟ್ಟಿನಲ್ಲಿಯೇ ಹೊರಹೊಮ್ಮುತ್ತಿವೆ. ಸಮಾಜ ವ್ಯವಸ್ಥೆಯನ್ನು ಕುರಿತಂತೆ ವಿಡಂಬನಾತ್ಮಕವಾಗಿ ಪ್ರತಿಭಟನಾತ್ಮಕವಾಗಿ ಕಾವ್ಯಗಳು ರೂಪುಗೊಂಡಿವೆ. ಜೊತೆಗೆ ಪೌರಾಣಿಕ ಸ್ತ್ರೀಯರ ವ್ಯಕ್ತಿತ್ವವನ್ನು ಬಿಂಬಿಸಿ ಅದರ ಬಗ್ಗೆ ವ್ಯಾಖ್ಯಾನ ಬರೆಯುವ ಪರಿಪಾಠವನ್ನು ಕಾಣಬಹುದು. ಅವತ್ತಿನ ಸುಪ್ತಮನಸ್ಸಿನ ಗುಪ್ತ ಭಾವನೆಗಳಿಗೆ ಸ್ಪಂದಿಸದ ಸಮಾಜವನ್ನು ಕುರಿತು ವಿಡಂಬಿಸುತ್ತಾ ಹೆಣ್ಣಿನಲ್ಲಿದ್ದ ತ್ಯಾಗ ಸಹನೆಯನ್ನು ಪುರುಷರು ತಮಗೆ ಬೇಕಾದ ಹಾಗೆ ಉಪಯೋಗಿಕೊಂಡ ರೀತಿಯನ್ನು ಕಟುವಾಗಿ ಟೀಕಿಸಿದ್ದಾರೆ.

ಇಂದಿನ ಮಹಿಳಾ ಕಾವ್ಯದಲ್ಲಿ ವಸ್ತುವಿನ ಆಯ್ಕೆ ಆಲೋಚನಾ ಕ್ರಮ ಮತ್ತು ಅಭಿವ್ಯಕ್ತಿ ಕ್ರಮದಲ್ಲಿ ತನ್ಮಯತೆ, ಧೃಡತೆ, ಪರಿಪಕ್ವತೆಗಳು ಕಾಣಿಸಿಕೊಳ್ಳುತ್ತಿರುವುದು ಮಹಿಳಾ ಸಾಹಿತ್ಯದ ಒಳ್ಳೆಯ ಸೂಚನೆ ಎಂದಿದ್ದಾರೆ. ಹಾಗೆಯೇ ವಿಚಾರ, ಭಾವ, ಅನುಭವಗಳು ವ್ಯಕ್ತಿಮಟ್ಟವನ್ನು

ದಾಟಿ ಸಮಷ್ಟಿಯತ್ತ ಹೊರಳಿದೆ. ಒಟ್ಟಾಗಿ ಹೇಳುವುದಾದರೆ ಮಹಿಳೆಯರು ಕೃತಿಯ ಸಂಖ್ಯೆಯನ್ನು ಹೆಚ್ಚಿಸುವುದಕ್ಕಿಂತ ಕೃತಿಯ ಗುಣಮಟ್ಟವನ್ನು ಹೆಚ್ಚಿಸುವುದು ಅನಿವಾರ್ಯ, ಜೊತೆಗೆ ಓದುಗನ ಮನಮುಟ್ಟುವಂಥ ಕಾವ್ಯವನ್ನು ಇನ್ನೂ ಹೆಚ್ಚು ಮೂಡಿರಬೇಕಾಗಿದೆ ಎಂಬುದು ಆರ್ಯಾಂಬ ಪಟ್ಟಾಬಿಯವರ ಅಭಿಪ್ರಾಯ.

ಆರಂಭ ಪಟ್ಟಾಭಿ ಅವರ 'ಮಹಿಳಾ ಸಾಹಿತ್ಯ ಸಮೀಕ್ಷೆ' ಒಟ್ಟಾರೆ ಮಹಿಳಾ ಪ್ರಕಾರಗಳನ್ನು (ಸಣ್ಣಕಥೆ, ಕಾವ್ಯ, ಕಾದಂಬರಿ, ಶಿಶುಕಾವ್ಯ ಜಾನಪದ, ನಾಟಕ, ಪ್ರಬಂಧ) ಅಮೂಲಾಗ್ರವಾಗಿ ಸಂಗ್ರಹಿಸಿದ್ದಾರೆ. ಮಹಿಳಾ ಕಾವ್ಯ ಕುರಿತಂತೆ ಡಾ॥ಬಿ.ಪಿ. ಆಶಾಕುಮಾರಿಯ ಲೇಖನದಲ್ಲಿ ಮಹಿಳಾ ಕಾವ್ಯದ ಸಮಗ್ರ ಮಾಹಿತಿ ಒಳಗೊಂಡಿದೆ. ತಿರುಮಲಾಂಭ ನಂತಗ ಸ್ವಾತಂತ್ರ್ಯ ಪೂರ್ವ ಕವಿಯತ್ರಿಯಿಂದ ಹಿಡಿದು ಹೊಸ ಪೀಳಿಗೆಯ ಪ್ರತಿಭಾ ನಂದಕುಮಾರವರೆಗೆ ಅಮೂಲಾಗ್ರ ಚಿಂತನೆ ಮಾಡಿದ್ದಾರೆ.

ಈ ಶತಮಾನದ ಕನ್ನಡ ಕವಿಯತ್ರಿಯರು: ಕುಲಶೇಖರಿ(೧೯೯೯)

ಉಷಾದೇವಿ ಅವರ ಈ ಶತಮಾನದ ಕನ್ನಡ ಕವಿಯತ್ರಿಯರು ಮಹಿಳಾ ಕಾವ್ಯದ ಹಿನ್ನೆಲೆ ಪರಂಪರೆ ನಡೆದು ಬಂದ ದಾರಿ, ಆಗಬೇಕಾದ ಬದಲಾವಣೆಗಳು, ನಾಟಕ ಪ್ರಬಂಧಗಳಿಗಿಂತ ಭಿನ್ನವಾದ ವಿಶೇಷವಾದ ಗುಣಗಳನ್ನು ಕಾವ್ಯಮಾಧ್ಯಮದಲ್ಲಿ ಗುರುತಿಸಿದ್ದಾರೆ. ಅದು ಸಂಕ್ಷಿಪ್ತ ಹಾಗೂ ಸಂಗ್ರಹ ರೂಪದಲ್ಲಿ ನಿಗೂಢ ಅರ್ಥ ಸ್ಮರಿಸುವ ಅಗಾಧತೆ, ಅಮೋಘತೆಗಳನ್ನು ಮೈಗೊಂಡಿವೆ ಕಾವ್ಯ. ರೂಪಕವಾದ ಪ್ರತಿಮೆಗಳ ಮೂಲಕ ಶಬ್ದ ಅರ್ಥಗಳ ಸೀಮೆಯ ನೆಲೆಯನ್ನು ಮೀರಿ ಹೊಸ ಬಗೆಯ ಅರ್ಥ ಸಾಮರ್ಥ್ಯ ಪಡೆದಿದೆ. ಹಾಗಾಗಿ ನವೋನ್ಮೇಷಶಾಲಿನಿ ಇದಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ.

ಮಹಿಳಾ ಕಾವ್ಯದ ಹಿನ್ನೆಲೆಯನ್ನು ಹೇಳುತ್ತಾ ವೇದಕಾಲ, ಜೈನ, ಬೌದ್ಧ ಕಾಲ, ಶಿವಶರಣೆಯರ ಕಾಲದಲ್ಲಿ ಕಾವ್ಯ ಬದಲಾದ ಪರಿಸ್ಥಿತಿಯನ್ನು, ಮತ್ತು ಅದರ ಹಿಂದಿನ ಸಾಮಾಜಿಕ ಪರಿಸ್ಥಿತಿಯನ್ನು ವಿವರಿಸುತ್ತಾರೆ.

ಮಹಿಳಾ ಕಾವ್ಯ ನವೋದಯ ನವ್ಯ, ಬಂಡಾಯ, ದಲಿತ ಮುಂತಾದವು ಯವುದೇ ಸೀಮಿತ ಹಣೆಪಟ್ಟಿಯನ್ನು ಅಂಟಿಸಿಕೊಳ್ಳದೇ ತನ್ನದೇ ಆದ ವಿಶೇಷ ಪಕ್ವದಿಂದ ಸಿರಿವಂತಿಕೆಯಿಂದ ಉಸಿರಾಡುತ್ತದೆ. ಆರಂಭದಲ್ಲಿ ದೇವತಾಸ್ತುತಿ. ಗಂಡ-ಸಂಸಾರ, ಹೆಣ್ಣಿನ ಕರ್ತವ್ಯಗಳ ಕಡೆಗೆ ಕೇಂದ್ರೀಕೃತವಾದರೆ ನಂತರದ ಸಂದರ್ಭದಲ್ಲಿ ಭಾಷೆಯ ಬಳಕೆಯಲ್ಲಿ ಹೊಸತನ ಜೊತೆಗೆ ಮುಕ್ತತೆಯನ್ನು ಕಾಣಬಹುದು. ಕನ್ನಡ ಭಾಷೆಯ ಸಂಪ್ರದಾಯ ಬುದ್ಧ ಪದಗಳ

ಹೊರತಾಗಿ ಜನಜೀವನಕ್ಕೆ ಹತ್ತಿರವಾದ ಸಾಮಾನ್ಯವಾದ ಭಾಷೆಯ ಬಳಕೆಯಾಯಿತು. ಸಂಗತಿಗಳ ಆಯ್ಕೆ ಆಧುನಿಕವಾಯಿತು. ಗಂಡ-ಸಂಸಾರ ಜವಾಬ್ದಾರಿಗಳು ಈ ಹಂತದಲ್ಲಿ ಪ್ರಶ್ನಿಸಲಾರಂಭಿಸಿದಳು. ದೊರೆತ ಉನ್ನತ ಶಿಕ್ಷಣದ ಫಲವಾಗಿ ಮಾನವೀಯ ಸಂಬಂಧಗಳು ಬದಲಾಗುತ್ತಿರುವ ಈ ಕಾಲದಲ್ಲಿ ಸಂಸಾರದ ಬಂಧಗಳು ಸಡಿಲವಾಗುತ್ತಿರುವಾಗ ನೈತಿಕ ಪ್ರಶ್ನೆಗಳು ಅವಳನ್ನು ಕಾಡುತ್ತವೆ. ವೈಜ್ಞಾನಿಕ ಮುನ್ನಡೆಯಿಂದ ಉದ್ಭವಿಸಿದ ಅನೇಕ ಹೊಸ ಸಮಸ್ಯೆಗಳ ಬಗೆಗೆ ಮುಕ್ತ ಮನದಿಂದ ಬಿಚ್ಚು ಮನದ ಅನಿಸಿಕೆಗಳನ್ನು ನಿರ್ಭೀತಿಯಿಂದ ಪ್ರತಿಪಾದಿಸಿದ್ದಾಳೆ. ಸಣ್ಣ-ಸಣ್ಣ ವಿಷಯಗಳು ಚರ್ಚಿತವಾಗಿವೆ. ಹೆಣ್ಣು-ಹೆಣ್ತನ ಜವಾಬ್ದಾರಿಗಳು ಸೇವೆ ಎನ್ನುವ ಪದಗಳ ಸ್ಥಾನದಲ್ಲಿ ಸ್ವಾಭಿಮಾನ ಸ್ವಂತಿಕೆಗಳು ಬಳಕೆಯಾಗುತ್ತದೆ.

ಕುಲಶೇಕರಿಯವರ ಪ್ರಕಾರ ಕವಿಯತ್ರಿಯ ಕಾವ್ಯದಲ್ಲಿ ಒಡಮೂಡಿದ ಹಲವು ಸಂಗತಿಗಳು ಅವಳು ಬೆಳೆದು ಬಂದ ಪರಿಸರ, ಹುಟ್ಟಿದ ಜಾತಿ, ಆಚರಿಸುವ ಧರ್ಮ ನಡುವಳಿಕೆಯ ನೀತಿಗಳು ಪ್ರಮುಖ ಪಾತ್ರವಹಿಸುತ್ತವೆ. ಚಿಕ್ಕಂದಿನಿಂದಲೇ ಧಾರ್ಮಿಕ, ಸಾಮಾಜಿಕವಾಗಿ ತಾನು ಎಷ್ಟು ವಿದ್ಯಾವಂತಳಾದರೂ ಅರಿವುಳ್ಳವಳಾಗಿದ್ದರೂ ಇವುಗಳಿಂದ ಅವಳು ಬಿಡಿಸಿಕೊಳ್ಳಲು ತುಸು ಕಷ್ಟವೇ. ಹುಟ್ಟಿದ ಜಾತಿ, ಬೆಳೆದು ಬಂದ ಪರಿಸರ, ಪರಿಸರ-ಆಚರಿಸುವ ಧರ್ಮ, ನಡುವಳಿಕೆ ರೀತಿ-ನೀತಿಗಳು ಪ್ರಮುಖ ಪಾತ್ರ ವಹಿಸುತ್ತವೆ.

ಬಂಡಾಯದಂತೆ ಆವೇಶ ಪೂರಿತವಾಗಿ ಹೊಡಿರೆಲಾ, ಬಡಿರೆಲಾ ಎಂದು ಗೊಂದಲ ವೆಚ್ಚಿಸುವುದಕ್ಕೆ ಬದಲಾಗಿ ಕೊರಗುವ ಸೊರಗುವ ಮಹಾಮೌನಕ್ಕೆ ಶರಣಾಗುವ ಮಹಿಳೆ ಈಗ ಪದಶಕ್ತಿಯ ಸಶಕ್ತಳಾಗಿ ಶೋಷಣೆಯನ್ನು ಪ್ರತಿಭಟಿಸುವ ಪ್ರಯತ್ನ ನಡೆಸಿದ್ದಾಳೆ. ಅಸಹಾಯಕತೆಯ ಕಣ್ಣೀರ ಕಾವ್ಯದ ಬದಲು ಮಹಿಳಾಪರ ಧೋರಣೆಯನ್ನು ಪ್ರತಿಪಾದಿಸುತ್ತಾ ನೇರನುಡಿಗಳಿಂದ ಅಭಿಪ್ರಾಯವನ್ನು ಅನಾವರಣಗೊಳಿಸಿದ್ದಾಳೆ.

ಹಳೆಯ ಕಾಲದ ಪೌರಾಣಿಕ ಪಾತ್ರಗಳು ಹೊಸ ಆಯಾಮದೊಂದಿಗೆ ಬರಹಕ್ಕೂ ಆರಂಭಿಸಿದ್ದಾಳೆ. ಕುಲಶೇಖರಿಯವರು ಒಟ್ಟಾರೆ ಮಹಿಳಾ ಕಾವ್ಯದ ಒಳ-ಹೊರಗು ಎಲ್ಲವನ್ನು ಈ ಮೇಲಿನಂತೆ ವಿಸ್ತಾರವಾಗಿ ವಿವರಿಸಿ ವಿಮರ್ಶಿಸಿದ್ದಾರೆ.

ಆಧುನಿಕ ಕನ್ನಡ ಕಾವ್ಯ, ಸಮಾಜ, ಸಂಸ್ಕೃತಿ : ಲೋಕೇಶ ಅಗಸನಕಟ್ಟೆ

ಲೋಕೇಶ ಅಗಸಕಟ್ಟೆ ಮಹಿಳಾಕಾವ್ಯವನ್ನು ಸಾಮಾಜಿಕ ಸಂಸ್ಕೃತಿಯಾಗಿ ಅವಲೋಕಿಸಿದ್ದಾರೆ. ಬಂಡಾಯ ಕಾವ್ಯದಲ್ಲಿ ಮಹಿಳಾ ಕಾವ್ಯವಹಿಸಿದ ಪಾತ್ರವನ್ನು ಹೇಳುತ್ತಾರೆ.

ಜಾತಿಭೇದ ಮತ್ತು ವರ್ಗಭೇದ ದಲಿತ-ಬಂಡಾಯ ಕವಿಗಳನ್ನು ತೀವ್ರವಾಗಿ ಕಾಡದೆ, ಲಿಂಗಭೇದ, ಶೋಷಿತರಲ್ಲಿಯೇ ಶೋಷಿತಳಾಗಿರುವ ಹೆಣ್ಣು! ದಲಿತ ಬಂಡಾಯದವರನ್ನು

ಕಾಡಿದೆ. ಇಲ್ಲಿ ಸ್ತ್ರೀಯರೇ ತಮ್ಮ ನೋವುಗಳನ್ನು ಹೇಳಿಕೊಂಡಿರುವುದು ತುಂಬಾ ಕುತೂಹಲಕಾರಿಯಾಗಿದೆ ಎಂಬುದು ಅಗಸನಕಟ್ಟೆ ಅವರ ಅಭಿಪ್ರಾಯ.

ಹೆಣ್ಣನ್ನು ಕುರಿತಂತೆ ನವ್ಯಕಾವ್ಯದ ದೃಷ್ಟಿಕೋನ ಹೆಣ್ಣಿನ ಸ್ಥಾನಮಾನ ತಟ್ಟನೆ ಮಾರ್ಪಾಡಾದ ಒಂದು ಬದಲಾವಣೆಯನ್ನು ಬಂಡಾಯ ಚಳುವಳಿಯಲ್ಲಿ ಗಮನಿಸಬಹುದು. ನವೋದಯದ ಕಾವ್ಯದಲ್ಲಿ ಅನಾವಶ್ಯಕವಾಗಿ ಆಕರ್ಷಕವಾಗಿ ಸ್ತ್ರೀಯನ್ನು ವರ್ಣಿಸಿದರೆ, ನವ್ಯದಲ್ಲಿ ಹೆಣ್ಣನ್ನು ಕಾಮವನ್ನು ಪ್ರತಿನಿಧಿಸುವ ಒಂದು ಭೋಗದ ವಸ್ತುವಾಗಿ ಮಾತ್ರ ಬಿಂಬಿಸಲಾಗಿದೆ. ಇಲ್ಲಿರುವ ನ್ಯಾಯ ಪಕ್ಷಪಾತದ ನ್ಯಾಯದಂತೆ ತೋರುತ್ತದೆ.

ಬಂಡಾಯದ ಉಗಮ ನಮ್ಮ ಬಹುಪಾಲು ಕವಿಯತ್ರಿಯರಿಗೆ ಒಂದು ಹೊಸ ಜಗತ್ತನ್ನು ತೆರೆದು ತೋರಿದೆ. ಸಾವಿರಾರು ವರ್ಷಗಳ ಪುರುಷ ಪ್ರಧಾನ ಸಮಾಜದ ವಿರುದ್ಧ ಅವರ ದೋಷಗಳತ್ತ ಮತ್ತು ಪುನರ್ ಮೌಲ್ಯೀಕರಣದತ್ತ ಕೆಲವು ಧ್ವನಿಗಳಾದರೂ ಇಲ್ಲಿ ಕೇಳಿಬಂದವು.

ದಲಿತ ಬಂಡಾಯವು ಮೂಲಭೂತವಾಗಿ ಜಾತಿಭೇದ, ಲಿಂಗಭೇದವನ್ನು ನಿರಾಕರಿಸಿ ಹೊರಟಿತು. ಸ್ತ್ರೀ ಕೇಂದ್ರಿತ ದೃಷ್ಟಿಕೋನದಿಂದ ಬರೆಯುತ್ತಾ ಶ್ರೇಣಿಕೃತ ವ್ಯವಸ್ಥೆಯ ಸಮಾಜದಿಂದ ತಮ್ಮ ಬಿಡುಗಡೆಯ ಆಸೆಯನ್ನು ವ್ಯಕ್ತಪಡಿಸಲಾಗಿದೆ. ಇಬ್ಬಗೆಯ ಬಿಡುಗಡೆ ಯಾಗಿ ಹೋರಾಡುವರ ದೊಡ್ಡ ಸಾಲೇ ದಲಿತ ಬಂಡಾಯದಲ್ಲಿದೆ. ವಿಜಯದಬ್ಬೆ, ಸರ್ವಮಂಗಳಾ, ಉಷಾ, ಮುಕ್ತಾಯಕ್ಕ ಹೇಮಾ ಮಾಲತಿಪಟ್ಟಣಶೆಟ್ಟಿ, ಪ್ರತಿಭಾ ನಂದಕುಮಾರ್, ಪುಷ್ಪ, ವೈದೇಹಿ ಮಲ್ಲಿಕಾಘಂಟಿ, ವಿಜಯಶ್ರೀ ಸಬರದರನ್ನು ಇಲ್ಲಿ ಉಲ್ಲೇಖಿಸಬಹುದು. ಒಟ್ಟಾರೆ ೭೦ನೇ ದಶಕದಲ್ಲಿ ಕಾಣಿಸಿಕೊಂಡ ದಲಿತ ಬಂಡಾಯ ಕಾವ್ಯ ಚಳುವಳಿ ತಮ್ಮ ಕೇಂದ್ರ ಆಶಯ, ಶ್ರೇಣಿಕೃತ ಸಾಮಾಜ ನಿರ್ನಾಮದ, ಸಂಕಲ್ಪ ವರ್ಗರಹಿತ ಸಮಾಜಗ ನಿರ್ಮಾಣದ ಸಂಕಲ್ಪವನ್ನು ಹೊಂದಿ ಕಾವ್ಯದಲ್ಲಿ ನಿಸ್ಸಂಕೋಚವಾಗಿ ಹೇಳಬಹುದು.

ಬಂಡಾಯ ಸಾಹಿತ್ಯ ಸಂವೇದನೆ : ಸಂ.ಡಾ.ರಂಜಾನ್

ರಂಜಾನ್ ದುರ್ಗಾ ಸ್ತ್ರೀ ಕಾವ್ಯದಲ್ಲಿ ಬಂಡಾಯವನ್ನು ಹೇಳಿ ಗುರುತಿಸುತ್ತಾ ಕಾವ್ಯದಲ್ಲಿ ಬಂಡಾಯ ಬೆಳೆದ ರೀತಿಯನ್ನು ಹೇಳುತ್ತದೆ.

ನೇರ ಪ್ರತಿಭಟನೆ ಮಹಿಳಾ ಸಾಹಿತ್ಯ ಗ್ರಹಿಸಿದ ಮೊದಲ ಅನುಭವ ತನ್ನ ಗುಲಾಮಗಿರಿ ಯದು. ಗಂಡು-ಶೋಷಕನ ಪಾತ್ರದಲ್ಲಿದೆ. ಆದ್ದರಿಂದ ಈ ಬಂಡಾಯ ಕಾವ್ಯದಲ್ಲಿ ಆವೇಶ ಹತ್ತಿ ಉರಿಯುತ್ತದೆ.

ಅಯ್ಯೋ ನನಗೊಂದು ಆಸೆ
ಹಾಗೆ-ಹೀಗೆ ಹೆಣ್ಣ ಬುಗುರಿಯಾಡುವ
ಇವುಗಳ ತುಂಡಿಗೆ
ಜಾಡಿಸಿ ಒದೆಯಬೇಕು
ಒಮ್ಮೆಯಾದರೂ

ಒಟ್ಟಾರೆ ರಂಜಾನ ದುರ್ಗಾ ಹೇಳಿರುವಂತೆ ಹೆಣ್ಣಿನ ಅಂತರಂಗದ ಪಿಸುಮಾತುಗಳಿಗೆ ಅಧಿಕೃತತೆ ನೀಡಲು ಬಂಡಾಯ ಸಾಹಿತ್ಯ ಪೂರಕ ವಾತಾವರಣ ನಿರ್ಮಾಣ ಮಾಡಿದೆ ಎಂದು ಹೇಳಿದ್ದಾರೆ. ಒಟ್ಟಾರೆ ಬದಲಾದ ಮಹಿಳಾ ಕಾವ್ಯದಲ್ಲಿ ಹೊಸ ಬದಲಾವಣೆಗಳನ್ನು ಗುರುತಿಸುವಲ್ಲಿ ಸಫಲರಾಗಿದ್ದಾರೆ.

ಅಕ್ಕಕೇಳವ್ವ : ಮಾಲತಿ ಪಟ್ಟಣಶೆಟ್ಟಿ

ಈ ಪ್ರಬಂಧವು ಈ ಶತಮಾನದ ಮಹಿಳಾ ಕಾವ್ಯಕ್ಕೆ ಸಂಬಂಧಿಸಿದ್ದಾದ್ದರಿಂದ ಈ ಕಾಲದಲ್ಲಿ ಮಹಿಳೆ ಕಾವ್ಯದಲ್ಲಿಯ ಸೃಜನಶೀಲತೆಯ ಗತಿಯನ್ನು ಅನುಲಕ್ಷಿಸಿ ವಿವಿಧ ಹಂತಗಳಲ್ಲಿ ವಿಭಜಿಸಿಕೊಂಡು ಈ ಸಾಹಿತ್ಯವು ನೆಡೆದುಬಂದ ದಾರಿಯ ಸ್ಥೂಲ ಪರಿಚಯವನ್ನು ಅಗತ್ಯವಿದ್ದೆಡೆಗಳಲ್ಲಿ ನಡೆದು ವಿಶ್ಲೇಷಣೆಯೊಂದಿಗೆ ಪ್ರಬಂಧದ ಇತಿಮಿತಿಗಳು ಮಂಡಿಸುವ ಪ್ರಯತ್ನಗಳನ್ನು ಮಾಡಲಾಗಿದೆ. ಕನ್ನಡ ಸಾಹಿತ್ಯದ ೧೧ನೇ ಶತಮಾನದಲ್ಲಿ ಕುಂತಿಯ ಪರಿಚಯದ ನಂತರ ಶರಣ ಮತ್ತು ದಾನ ಪಂಥದ ಪರಿಚಯ ಹೇಳುತ್ತದೆ. ನಂತರದಲ್ಲಿ ೧೯೩೭ ನಂತರದಲ್ಲಿ ಸ್ತ್ರೀಗೆ ಬದಲಾದ ಸ್ಥಾನವನ್ನು ಹೇಳುತ್ತದೆ. ನಂತರದಲ್ಲಿ ಇಪ್ಪತ್ತನೆಯ ಶತಮಾನದ ಆರಂಭದ ಸಮಯ. ಮಜಲನ್ನು ಈ ಕೃತಿಯು ತಿಳಿಸುತ್ತದೆ.

ಮಾಲತಿ ಪಟ್ಟಣಶೆಟ್ಟಿ ಮಹಿಳಾ ಕಾವ್ಯದಲ್ಲಿಯ ಪರಿವರ್ತನೆಗಳನ್ನು ಲಕ್ಷಿಸಿ ಕಾಲ ವಿಭಜಿಸಲಾಗಿದೆ. ಕ್ರಮವಾಗಿ ಆಧುನಿಕ ಮಹಿಳಾ ಕಾವ್ಯ, ಜಾಗೃತ ಮಹಿಳಾ ಕಾವ್ಯ, ಪ್ರತಿಭಟನಾತ್ಮಕ ಮಹಿಳಾ ಕಾವ್ಯ ಮತ್ತು ಹೀಗಿನ ಪ್ರಸ್ತುತ ಸಮಯದ ಕಾವ್ಯಗಳನ್ನಾಗಿ ವಿಭಜಿಸಿದ್ದಾರೆ.

೨೦ನೇ ಶತಮಾನದ ಅಂಚಿನಲ್ಲಿ ಮಹಿಳಾ ಕಾವ್ಯದಲ್ಲಿ ಲವಲವಿಕೆ ಕಾಣುತ್ತಿಲ್ಲ ಕೆಲವರು ಕಥೆ ಕಾದಂಬರಿ ಪ್ರಬಂಧ ಪ್ರಕಾರಗಳತ್ತ ವಾಲಿಕೊಂಡಿದ್ದಾರೆ. ಕೆಲವರು ಹಳೆಯ ತಂತಿಯನ್ನು ಮೀಟುತ್ತಾರೆ. ಈ ಶತಮಾನದ ಕೊನೆಯಲ್ಲಿ ನಮ್ಮ ಮಹಿಳಾ ಕಾವ್ಯವಾಹಿನಿ ತನ್ನ ರಭಸ ಗತಿಯನ್ನು ಕಳೆದುಕೊಂಡಿದೆ.

ಮಹಿಳಾ ಕಾವ್ಯವನ್ನು ವಿಮರ್ಶಕರನೇಕರು ಪುರುಷ ಕಾವ್ಯಕ್ಕೆ ಹೋಲಿಸಿ ಮಹಿಳೆಯರ ಸಾಧನೆ ಎಷ್ಟೂ ಇಲ್ಲ. ಮಹಿಳೆಯರಿಂದ ಕಾವ್ಯ ಬರುತ್ತಿಲ್ಲ ಎಂದು ಕೊರತೆಗಳನ್ನು

ಗುರುತಿಸಿದ್ದರೂ ಮಹಿಳಾ ಕವಿಯತ್ರಿಯರು ಅಕ್ಷರ ಕಲಿತು ಲೇಖನಿ ಎತ್ತಿಕೊಂಡಿದ್ದು, ಇದೇ ಶತಮಾನದಲ್ಲಿ. ತಮ್ಮಲ್ಲಿ ಆತಂಕಗಳ ಬೇಲಿ ಮುರಿದು ಮೌನದ ಕಂದರ ಹಾರಿ ಇದೀಗ ಮುಕ್ತವಾಗಿ ಬರೆಯುತ್ತಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ. ವಿಮರ್ಶಕರ ಟೀಕೆ ಟಿಪ್ಪಣಿಗಳಿಗೆ ಹಾಗೂ ಕಾವ್ಯದ ಇಂದಿನ ನಿರಾಶಾದಾಯಕ ವಾತಾವರಣದಿಂದ ಧೃತಿಗೆಡದೆ ಮುನ್ನಡೆಯಬೇಕು. ಮಹಿಳಾ ಸಾಹಿತ್ಯ ವಿಮರ್ಶೆಗೆ ಮಹಿಳಾ ವಿಮರ್ಶಕರು ಇರಬೇಕು. ಸ್ತ್ರೀ ಸಂವೇದನೆಯ ಸೂಕ್ಷ್ಮತೆಗಳನ್ನು ಅರ್ಥ ಮಾಡಿಕೊಂಡು ನ್ಯಾಯಯುತವಾದ ವಿಮರ್ಶೆಯನ್ನು ವಿಮರ್ಶಕಿಯರು ಕೊಡಬಲ್ಲರು ಎಂಬ ಒಂದು ವಾದವು ಇದೆ. ಕಾವ್ಯದ ವಿಮರ್ಶಕಿಯರ ಕೊರತೆ ಈಗ ನಮ್ಮ ಮುಂದಿರುವ ಇನ್ನೊಂದು ಸವಾಲು ಎಂದು ಹೊಸ ಜನಾಂಗದ ಮಹಿಳಾ ಕವಿಯತ್ರಿಯರನ್ನು ಎಚ್ಚರಿಸಿದ್ದಾರೆ.

ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಪರಿಕಲ್ಪನೆ : ಬಿ.ಪಿ.ಆಶಾ ಕುಮಾರಿ(೨೦೦೩)

ಡಾ. ಬಿ.ಪಿ.ಆಶಾಕುಮಾರಿ ಅವರು “ಮಹಿಳಾ ಕಾವ್ಯದಲ್ಲಿ ‘ಹೆಣ್ಣಿನ ಪರಿಕಲ್ಪನೆ’ ಪ್ರಬಂಧದಲ್ಲಿ ಸ್ತ್ರೀ ಕಾವ್ಯದ ಹಲವು ಮಜಲುಗಳನ್ನು ಹೇಳುತ್ತಾರೆ. ಮಹಿಳಾ ಕಾವ್ಯವನ್ನು ಹಲವು ಕಾಲಮಾನದಲ್ಲಿ ವಿಶ್ಲೇಷಿಸಲಾಗುತ್ತದೆ. ಜನಪದ ಕಾವ್ಯಗಳಲ್ಲಿ ಹೆಣ್ಣಿನ ಪರಿಕಲ್ಪನೆ. ೨೦ನೇ ಶತಮಾನದ ಮಹಿಳಾ ಕಾವ್ಯ, ಮಹಿಳಾ ಕಾವ್ಯದ ಮೇಲೆ ಪ್ರೇರಣೆ ಪ್ರಭಾವ ಮತ್ತು ತೌಲನಿಕ ವಿಶ್ಲೇಷಣೆ ಒಳಗೊಂಡಿದೆ.

ಮಹಿಳಾ ಕಾವ್ಯದಲ್ಲಿ ಹೊಸ ಬದಲಾವಣೆ ಗಾಳಿ ಬೀಸಿದ್ದು, ಆಶಾ ಕುಮಾರಿ ಪ್ರಕಾರ ಮಹಿಳೆಯರಲ್ಲಿ ಚಿಂತಿಸುವ ಮನೋಭಾವ ಬೆಳೆದಂತೆ ಚರ್ಚಿಸುವ, ಸೂಕ್ಷ್ಮವಾಗಿ ಗ್ರಹಿಸುವ ಪ್ರವೃತ್ತಿ ಬೆಳೆಯಿತು. ಆಗ ತನ್ನ ವಿವೇಚನೆಗೆ ತೋರಿದುದನ್ನು ಬರವಣಿಗೆಯ ಮೂಲಕ ವ್ಯಕ್ತಪಡಿಸಲು ಪ್ರಾರಂಭಿಸಿದಳು.

ಮಹಿಳಾ ಕಾವ್ಯದಲ್ಲಿ ಬದುಕಿನ ಮೌಲ್ಯಗಳನ್ನು ಕುರಿತಾದ ಸ್ಪಂದನ, ಚಿಂತನ ಪ್ರತಿಕ್ರಿಯೆಗಳು ಹಿಂದೆಂದೂ ಇಲ್ಲದಷ್ಟು ಈಗ ವಿಪುಲವಾಗಿದೆ. ವಿಭಿನ್ನವಾಗಿದೆ. ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಪರಿಕಲ್ಪನೆ ಎಂಬ ವಿಷಯವನ್ನು ಆರಿಸಿಕೊಂಡಿದ್ದು ಅದರಲ್ಲಿ ಏಳು ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ.

ಮಹಿಳಾ ಕಾವ್ಯವನ್ನು ಆರಿಸಿಕೊಂಡು ಅದರಲ್ಲಿ ಹೆಣ್ಣಿನ ಬಗ್ಗೆ ಚಿತ್ರಣ ಮಾಡಿರುವ ಕವನಗಳನ್ನು ಮಾತ್ರ ವೀಕ್ಷಿಸಲಾಗಿದೆ. ಇಪ್ಪತ್ತನೆಯ ಶತಮಾನದವರೆಗೆ ಕೇವಲ ಬೆರಳಣಿಕೆಯಷ್ಟು ಮಾತ್ರ ಕವಿಯತ್ರಿಯರು ಕಂಡುಬರುತ್ತಾರೆ. ಉಳಿದಂತೆ ಆಧುನಿಕ ಕಾಲದಲ್ಲಿ ಅದರಲ್ಲೂ

೮೦ರ ದಶಕದ ಅನಂತರದಲ್ಲಿ ಕವಿಯತ್ರಿಯರು ಗಣನೀಯವಾಗಿ ಕಂಡು ಬರುತ್ತಾರೆ. ಸುಮಾರು ೬೦ಕ್ಕೂ ಮೇಲ್ಪಟ್ಟು ಕವಿಯತ್ರಿಯರು ಕಾವ್ಯ ರಚಿಸುತ್ತಿದ್ದಾರೆ. ಇದರಲ್ಲಿ ಪ್ರಾತಿನಿಧಿಕವಾಗಿ ಕೆಲವು ಜನ ಕವಿಯತ್ರಿಯರ ಕವನ ಸಂಕಲನವನ್ನು ವಿವೇಚಿಸಲಾಗಿದೆ.

೨೦ನೇ ಶತಮಾನದಲ್ಲಿ ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಪರಿಕಲ್ಪನೆಯನ್ನು ಗುರುತಿಸಲಾಗಿದೆ. ಈ ಅಧ್ಯಯನದ ಮೊದಲಲ್ಲಿ ಕಂತಿ ಹಾಗು ವಚನಗಾರ್ತಿಯರಿಂದ ಮಹಿಳಾ ಕಾವ್ಯವನ್ನು ಗುರುತಿಸಬಹುದು. ಅನಂತರ ಹೆಣ್ಣಿನ ಸರ್ವಶ್ರೇಷ್ಠತೆಯನ್ನು ಎತ್ತಿಹಿಡಿದಿರುವ ಸಂಚಿ ಹೊನ್ನಮ್ಮ ರಚಿಸಿದ ಹದಿಬದೆಯ ಧರ್ಮವನ್ನು ವಿಶ್ಲೇಷಿಸಲಾಗಿದೆ. ಇದರಲ್ಲಿ ಆದರ್ಶ ಗೃಹಿಣಿಯ ಚಿತ್ರಣ ಉದ್ದಕ್ಕೂ ಕಂಡುಬರುತ್ತದೆ.

ಆಧುನಿಕ ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಪರಿಕಲ್ಪನೆ ಕುರಿತು ಬರೆದ ನವೋದಯ ಸಂದರ್ಭದಲ್ಲಿ ಬರಹಗಾರ್ತಿಯರು ಇದ್ದರೂ, ಅವರೆಲ್ಲಾ ಕಾದಂಬರಿ ಕತೆಗಳ ಕಡೆ ಹೆಚ್ಚಿನ ಗಮನ ಹರಿಸಿದ್ದಾರೆ ಎಂಬುದನ್ನು ಗುರುತಿಸಿದ್ದಾರೆ. ಆಧುನಿಕ ಕವಿಯತ್ರಿಯರು ಕಾವ್ಯದಲ್ಲಿ ಹೆಣ್ಣಿನ ಚಿತ್ರಣ ಭಿನ್ನ-ಭಿನ್ನ ರೀತಿಯಲ್ಲಿ ಮೂಡಿಬಂಡಿರುವುದನ್ನು ವಿಮರ್ಶಿಸಿದ್ದಾರೆ.

ಮಹಿಳಾ ಕಾವ್ಯದ ಮೇಲಿನ ಪ್ರೇರಣೆ-ಪ್ರಭಾವವನ್ನು ಕುರಿತಂತೆ ಚರ್ಚಿಸಲಾಗಿದೆ. ಕನ್ನಡ ಕವಿಗಳಿಗೆ ಪ್ರೇರಣೆ-ಪ್ರಭಾವ ಬೀರಿದ ಅಂಶಗಳೇ ಕವಿಯತ್ರಿಯ ಮೇಲೂ ಪ್ರಭಾವ ಬೀರಿದೆ. ೧೨ನೇ ಶತಮಾನದಲ್ಲಿ ಬಸವಣ್ಣ, ಜೇಡರದಾಸಿಮಯ್ಯ ಅವರು ಧಾರ್ಮಿಕ ಆಂದೋಲನದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟು ಮಹಿಳೆಯರಲ್ಲಿ ಆತ್ಮಾಭಿಮಾನವನ್ನು ಮೂಡಿಸಿದರು.

೨೦ನೇ ಶತಮಾನದಲ್ಲಿ ಬರಹಗಾರ್ತಿಯರ ಜೀವನವನ್ನು ಹೇಳುತ್ತದೆ. ೨೦ನೇ ಶತಮಾನದ ಸ್ತ್ರೀಯು ಸಾಹಿತ್ಯ ರಂಗಕ್ಕೆ ಪಾದಾರ್ಪಣೆ ಮಾಡಿದ ಸಂದರ್ಭ ಮತ್ತು ಅದರ ಹಿನ್ನಲೆಯನ್ನು ತಿಳಿಸುತ್ತಾರೆ. ಸ್ವಾತಂತ್ರ್ಯ ಚಳುವಳಿ ಸ್ತ್ರೀ ಸುಧಾರಣಾ ಚಳುವಳಿ ಮಹಿಳೆಯರನ್ನು ಸಮಾಜದೊಡನೆ ಸ್ಪಂದಿಸುವಂತೆ ಮಾಡಿತು. ಪ್ರಾರಂಭ ಹಂತದಲ್ಲಿ ಬರವಣಿಗೆಗೆ ತೊಡಗಿದ್ದ ತಿರುಮಾಲಾಂಭ, ಜಾನಕಮ್ಮ, ಕಲ್ಯಾಣಮ್ಮ ಮೊದಲಾದವರ ಕೃತಿಗಳು ಹೆಣ್ಣಿನ ಸಮಸ್ಯೆಗಳತ್ತ ಗಮನ ಹರಿಸಿದುದನ್ನು ಗುರುತಿಸಿದ್ದಾರೆ.

ತೌಲನಿಕ ವಿಶ್ಲೇಷಣೆ ಮಾಡುತ್ತಾ ಮುಖ್ಯವಾಗಿ ಕೆಲವು ಕವಿಗಳು ತಮ್ಮ ಕಾವ್ಯದಲ್ಲಿ ಹೆಣ್ಣಿನ ಬಗ್ಗೆ ಚಿತ್ರಿಸಿರುವುದನ್ನು ಗುರುತಿಸಲಾಗಿದೆ. ಸಾಮಾನ್ಯವಾಗಿ ನವೋದಯ ಕವಿಗಳು ಹೆಣ್ಣಿಗೆ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ. ಈ ಎಲ್ಲಾ ಕಡೆ ಹೆಣ್ಣಿನ ಚಿತ್ರಣವನ್ನು ತಾಯಿಯ ಸ್ವರೂಪದೊಂದಿಗೆ ಹೋಲಿಸಿ ಬರೆಯಲಾಗಿದೆ. ಜಾನಪದ ಮತ್ತು ಶಿಷ್ಟ ಕಾವ್ಯದಲ್ಲಿ ಹೆಣ್ಣಿನ

ಚಿತ್ರಣವನ್ನು ಗಮನಿಸಲಾಗಿದೆ. ಶಿಷ್ಟ ಕಾವ್ಯದಲ್ಲಿ ಹೆಣ್ಣಿನ ಸಮಸ್ಯೆಗಳತ್ತ ಗಮನ ಹರಿಸಲಾಗಿದೆ. ಹಿಂದಿನಿಂದಲೂ ಹೆಣ್ಣನ್ನು ಶೋಷಣೆಗೆ ಒಳಪಡಿಸುತ್ತಿದ್ದ ಪುರುಷ ಪ್ರಧಾನ ಸಮಾಜವನ್ನು ಪ್ರಶ್ನಿಸುವಂತಹ ಧೈರ್ಯವನ್ನು ಕಾವ್ಯದಲ್ಲಿ ತೋರಿಸಿದ್ದಾರೆ. ಕನ್ನಡ ಕವಿಯತ್ರಿಯರ ಕಾವ್ಯಕ್ಕೂ ಮತ್ತು ಬೇರೆ ಭಾಷೆಯ ಕವಿಯತ್ರಿಯರ ಕಾವ್ಯದಲ್ಲಿ ಪ್ರಶ್ನಿಸುವ ಮನೋಭಾವ ಮತ್ತು ಪ್ರತಿಭಟನಾತ್ಮಕವಾದ ಅಂಶ ಹೆಚ್ಚಾಗಿ ಗೋಚರವಾಗುತ್ತದೆ. ಹೇಗೆ ಬೇರೆ-ಬೇರೆ ಕಾವ್ಯಗಳನ್ನು ಇಟ್ಟುಕೊಂಡು ಉಪಸಂಹಾರದಲ್ಲಿ ಪ್ರಸ್ತುತ ಅಧ್ಯಯನದಿಂದ ದೊರೆತ ಫಲಿತಗಳನ್ನು ರೂಪಿಸಲಾಗಿದೆ.

ಮಹಿಳಾ ಕಾವ್ಯದ ಬಗ್ಗೆ ನಡೆದಿರುವ ಸಂಶೋಧನೆಗಳ ಅಧ್ಯಯನ ಮುಖ್ಯವಾದದ್ದು. ಕಾವ್ಯದ ಹಲವು ಮಜಲುಗಳು ನಡೆದು ಬಂದ ದಾರಿ, ಪಡೆದುಕೊಂಡ ಪ್ರೇರಣೆ, ಕಾಲದ ಜೊತೆಯಲ್ಲಿ ಕಾವ್ಯ ಬದಲಾಗುತ್ತ ಬಂದಿರುವುದರೆಡೆಗೆ ಸಮೀಕ್ಷೆಯನ್ನು ನೋಡಬಹುದಾಗಿದೆ.

ಅಧ್ಯಾಯ ೪

ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ ಮತ್ತು ಮಹಿಳಾ ಸಂವೇದನೆ

೪

ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ ಮತ್ತು ಮಹಿಳಾ ಸಂವೇದನೆ

ಆಧುನಿಕ ಮಹಿಳಾ ಕಾವ್ಯ ಮತ್ತು ಮಹಿಳಾ ಸಂವೇದನೆ ಒಟ್ಟಾರೆ ಒಂದನ್ನೊಂದು ಹೊರತಾದ ವಿಷಯಗಳು ಎನಿಸಿದರೂ ಈ ಎರಡು ಅಂಶಗಳು ಮೂಲವಾಗಿ ಒಂದೇ ನಾಣ್ಯದ ಎರಡು ಮುಖಗಳು.

ಮಹಿಳಾ ಕಾವ್ಯದ ಮೂಲ ಮಹಿಳಾ ಸಂವೇದನೆಯೇ. ಮಹಿಳಾ ಕಾವ್ಯ ಪ್ರಪಂಚಕ್ಕೆ ಕಾಲಿಟ್ಟಿದ್ದು ಇತ್ತೀಚಿನ ವರ್ಷಗಳಿಂದೀಚೆಗೆ, ಕಾವ್ಯ ಪ್ರಪಂಚಕ್ಕೆ ಸಾವಿರದಷ್ಟು ಇತಿಹಾಸವಿದ್ದರೂ ಮಹಿಳೆ ಈ ಲೋಕದಲ್ಲಿ ತನ್ನ ಸ್ಥಾನವನ್ನು ಸ್ಥಾಪಿಸಿದ್ದು ಇತ್ತೀಚಿನ ನೂರು ವರ್ಷಗಳಿಂದೀಚೆಗೆ. ಆರಂಭದ ಕಂತಿ ಅಕ್ಕಮಹಾದೇವಿಯ ಅತ್ತಿಮಬ್ಬೆಯ ವಿಚಾರವಿದ್ದರೂ ಒಬ್ಬ ಕವಿಯತ್ರಿಯಿಂದ ಇನ್ನೊಂದು ಕವಿಯತ್ರಿಗೆ ನೂರಾರು ವರ್ಷದ ಅಂತರ ಕಾಣಬಹುದು. ಕಾವ್ಯ ಪ್ರಪಂಚಕ್ಕೆ ಈ ತೆರನಾದ ನಿಧಾನಸ್ಥಿತಿಗೆ ಅವಳ ಬುದ್ಧಿವಂತಿಕೆಯನ್ನು ಅವಳ ಯೋಚನಾ ಲಹರಿಯನ್ನು ಬೆರಳು ಮಾಡಿ ತೋರಿಸುವುದಕ್ಕಿಂತ, ಅವಳಿಗೆ ಸಾಮಾಜಿಕ ಪರಿಸ್ಥಿತಿಗಳು ಸಂಪ್ರಾದಾಯಗಳು ಅವುಗಳನ್ನು ಈ ತೆರನಾಗಿ ವಂಚಿಸಿದವು ಎನ್ನುಬಹುದು.

ನಂತರದಲ್ಲಿ ಸಡಿಲವಾದ ಪ್ರಾಪಂಚಿಕ ಧೋರಣೆಗಳು, ಮಹಿಳೆಯರನ್ನು ಅಕ್ಷರಲೋಕಕ್ಕೆ ಕರೆತಂದಿತು. ಅಲ್ಲಿ ಹೊರಗಿನ ಜ್ಞಾನರ್ಜನೆಯಿಂದ ತನ್ನ ಹಕ್ಕುಗಳು ಸ್ವಾತಂತ್ರ್ಯವನ್ನು ಕಂಡುಕೊಂಡಳು. ಅವುಗಳೆಲ್ಲಾ ತನಗೆ ದಕ್ಕಬೇಕಾದುವುಗಳು ತಾನು ಅದರಿಂದ ವಂಚಿತವಾದ್ದರ ಬಗ್ಗೆ ಜ್ಞಾನೋದಯ ಉಂಟಾಯಿತು.ಈ ಅರಿವುಗಳೇ ಅವಳಲ್ಲಿ ಮಹಿಳಾ ಸಂವೇಧನೆಯನ್ನು ಉಂಟು ಮಾಡಿದವು. ತನಗೆ ದಕ್ಕದೆ ಹೋದುದರ ಬಗ್ಗೆ ಜ್ಞಾನ, ಅವುಗಳನ್ನು ಪಡೆಯುವಲ್ಲಿ ಚಳುವಳಿಗಳು ಆರಂಭವಾಯಿತು. ಮಹಿಳೆಯರು ಪರಿಸ್ಥಿತಿ ಅರ್ಥ ಮಾಡಿಕೊಂಡು ಅವರ ಬೇಡಿಕೆ ಆಸಕ್ತಿಗಳನ್ನು ಎತ್ತಿ ಹಿಡಿಯುವ ಮಹಿಳಾಪರ ಹೋರಾಟವೇ ಸ್ತ್ರೀವಾದ ಹಾಗೂ ಸ್ತ್ರೀಸಂವೇದನೆಯೇ ಆಯಿತು.

ಕಂತಿ–ಅಕ್ಕಮಹಾದೇವಿಯರ ಕಾವ್ಯದಲ್ಲಿ ಮಹಿಳಾ ಸಂವೇದನೆಯನ್ನು ಗುರುತಿಸುವುದು ಸಾಧ್ಯವಾದರೂ, ಅಂತಿಮವಾಗಿ ಮಹಿಳಾಪರ ಧೋರಣೆಯನ್ನು ಸಂಪೂರ್ಣವಾಗಿ ಗ್ರಹಿಸಿದ್ದು ಆಧುನಿಕ ಮಹಿಳಾ ಕಾವ್ಯದಲ್ಲಿ. ಮಹಿಳಾ ಸಂವೇಧನೆ, ಮಹಿಳಾವಾದ, ಮಹಿಳಾ ಅಧ್ಯಯನ ಒಂದಕ್ಕೊಂದು ಪೂರಿತವಾದವು. ಒಂದು ತೆರದಲ್ಲಿ ಒಂದೇ ಹೆಸರಿನ ಹಲವು ಮುಖಗಳು.

ಮಹಿಳಾ ಅಧ್ಯಯನವು ಮಹಿಳಾ ಸಂವೇದನೆಗೆ ಹಲವು ಸ್ಥಿತಿ–ಗತಿ ಚೌಕಟ್ಟನ್ನು ಒದಗಿಸಿಕೊಟ್ಟಿತು. ಈ ಎಲ್ಲಾ ಪರಿಕಲ್ಪನೆಗಳ ಮೂಲ ಉದ್ದೇಶ ಒಂದೇ; ಇಲ್ಲಿಯವರೆಗಿನ ಮಹಿಳೆಯರ ಪರಿಸ್ಥಿತಿಯನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಅರ್ಥಮಾಡಿಕೊಂಡು, ಜಗತ್ತಿನೊಂದಿಗೆ ಮಹಿಳೆಯರ ಸಂಬಂಧ ಮತ್ತು ಅವರ ಕುರಿತ ತಾರತಮ್ಯಕ್ಕೆ ಕಾರಣಗಳನ್ನು ಕಂಡುಹಿಡಿದು ಅವರ ಪರಿಸ್ಥಿತಿಯನ್ನು ಬದಲಾಯಿಸಲು ಪ್ರಯತ್ನಿಸುವುದು. ಇದರ ಜೊತೆಗೆ ಸಮಾಜದ ವಾಸ್ತವಿಕತೆಯನ್ನು ಮಹಿಳಾ ದೃಷ್ಟಿಕೋನದಿಂದ ಅರ್ಥಮಾಡಿಕೊಂಡು ಸಮಾಜದಲ್ಲಿ ಲಿಂಗ ಸಮಾನತೆಯನ್ನು ತರುವುದಾಗಿದೆ.

ಆಧುನಿಕ ಮಹಿಳಾ ಕಾವ್ಯ ಸಂಪೂರ್ಣವಾಗಿ ಮಹಿಳಾ ಸಂವೇದನೆಯ ಎಲ್ಲಾ ನೆಲೆಗಳನ್ನು ಒಳಗೊಂಡಿದೆ. ಈ ಸಂವೇದನೆಯ ಧೋರಣೆ ವಸ್ತು ವಿಷಯ ಪಾರಂಪರಿಕ ವಾಗಿರುತ್ತದೆ. ಈ ರೀತಿಯ ಪ್ರಜ್ಞೆ ಮೂಲತಃ ಉಂಟಾಗಿಲ್ಲ. ಅದು ಮೂಲವಾಗಿ ಆಧುನಿಕ ಪ್ರಪಂಚದ ಬದಲಾದ ಧೋರಣೆಗಳು ಮಹಿಳಾ ಶೈಕ್ಷಣಿಕ ಹಕ್ಕೊತ್ತಾಯಗಳು ಮತ್ತು ಅವಳ ಬದಲಾದ ಜ್ಞಾನ, ಮಹಿಳಾ ಚಳುವಳಿಯ ಪ್ರಭಾವದಿಂದ ಈ ವ್ಯತ್ಯಾಸಗಳಾದವು.

ಮಹಿಳಾ ಸಾಹಿತ್ಯ ಪ್ರಕಾರಗಳಾದ ಕಾದಂಬರಿ, ನೀಳ್ಗಥೆ, ಸಣ್ಣಕಥೆ, ನಾಟಕಗಳಿದ್ದರೂ ಮಹಿಳಾ ಸಂವೇದನೆಯ ಭಾವ ತೀವ್ರತೆಯನ್ನು ಒಳಗೊಂಡಿದ್ದು ಮಹಿಳಾ ಕಾವ್ಯದಲ್ಲೆ, ನೂರು ಪುಟದ ಭಾವನೆಗಳನ್ನು ಒಂದೇ ಸಾಲಿನಲ್ಲಿ ಹೇಳುವ ಶಕ್ತಿ ಕಾವ್ಯಕ್ಕಿದೆ.

ಮಹಿಳಾ ಸಂವೇದನೆಯನ್ನು ಮಹಿಳಾ ಕಾವ್ಯದಲ್ಲಿ ಹುಡುಕುವ ಹಂಬಲವೇಕೆ ಎಂಬ ಪ್ರಶ್ನೆ ಮೂಡುತ್ತದೆ. ಮಹಿಳಾ ಸಂವೇದನೆಯನ್ನು ಕಾವ್ಯ ಹೆಚ್ಚು ಎತ್ತಿ ಹಿಡಿದಿದ್ದು ಕಾವ್ಯವೆಂಬುದು ಸತ್ಯವಾದರೂ ಇದರಲ್ಲಿ ಕವಿಯತ್ರಿಯರಷ್ಟೆ ಪುರುಷ ಕವಿಗಳು ಮಹಿಳಾ ಸಂವೇದನೆರುನ್ನು ಎತ್ತಿ ಹಿಡಿದಿದ್ದು ಸುಳ್ಳಲ್ಲ. ಆದರೂ ಮಹಿಳಾ ಧೋರಣೆ ಕಷ್ಟ–ನಷ್ಟಗಳನ್ನು ಹೆಚ್ಚು ಮನದಟ್ಟಾಗಿ ಮೂಡಿಸಿದ್ದು ಮಹಿಳೆಯರೇ.

'ಹೆರದವಳಿಗೇನು ಗೊತ್ತು ಹೆತ್ತವಳ ಕಷ್ಟ, ಒದಿಸಿಕೊಂಡವರಿಗೆ ಗೊತ್ತು ಒದಿಸಿಕೊಳ್ಳುವುದರ ಕಷ್ಟ ಎಂಬ ಗಾದೆಯ ಮಾತಿನಂತೆ ಅನುಭಾವಕ್ಕಿಂತ(ಬೇರಯವರ ಅನುಭವ ತನ್ನದಾಗಿಸಿ ಕೊಂಡಿರುವುದು) ಅನುಭವವು ಹೆಚ್ಚು ತಾತ್ವಿಕವಾಗಿ ವಿಷಯವನ್ನು ಸ್ಪಷ್ಟಪಡಿಸುತ್ತದೆ.

ನಿಖರಗೊಂಡಿರುತ್ತದೆ. ಕಾವ್ಯದಲ್ಲಿ ಭಾವಾವೇಶವಿದ್ದರೂ ಅದು ಸ್ವಂತದ ಅನುಭವವಾದ್ದರಿಂದ ಹೆಚ್ಚು ನಿಖರತೆ ಒಳಗೊಂಡಿರುವುದಂತೂ ಸತ್ಯ

ಸ್ತ್ರೀ ಸಂವೇದನೆ ಎಂಬುದು ಬೌದ್ಧಿಕ ಕಸರತ್ತು ಏನಲ್ಲ. ಸ್ವಾಭಿಮಾನಿಯಾದ ಹೆಣ್ಣೊಬ್ಬಳು ತನ್ನ ಘನತೆ ಗೌರವದ ಬಗ್ಗೆ ಜಾಗೃತಳಾಗಿ ತನ್ನ ಸುತ್ತೂ ಪರಿಸರದಿಂದ ಅಂತದೇ ಪ್ರಕ್ರಿಯಯನ್ನು ಬಯಸುವಂತಾದ್ದಾಗಿದೆ. ಪ್ರಜ್ಞಾ ಪುರುಷರು, ಸ್ತ್ರೀಯರಿಗೆ ತಕ್ಕ ಘನತೆ ಗೌರವಗಳಿಂದ ಅವರನ್ನು ಕಾಣುವುದು ಸ್ತ್ರೀವಾದವಾಗಿದೆ.[೧]

ಮಹಿಳಾ ಕಾವ್ಯದಲ್ಲಿ ಸ್ತ್ರೀ ಸಂವೇದನೆಯು ಹೆಚ್ಚಾಗಿ ಕಾಣಿಸಿಕೊಂಡಿದ್ದು ೧೯೭೫ ರ ನಂತರದ ಅವಧಿಯಲ್ಲಿ ಕಾವ್ಯದಲ್ಲಿ ಸ್ತ್ರೀ ಸಂವೇದನೆ ಧೋರಣೆ, ಹಕ್ಕು, ವಸ್ತು ವಿನ್ಯಾಸ ಭಾಷೆ ಶಿಲ್ಪ, ಶೈಲಿ, ನಿರೂಪಣಾ ತಂತ್ರ ಎಲ್ಲದರಲ್ಲೂ ಈ ಸಂವೇಧನೆ ಬೆರೆತು ಹೋಯಿತು.

ಈ ಸಂವೇದನೆಯ ಮೂಲ ಆಶಯವಾದ ಭೂತಕಾಲದ ಸ್ತ್ರೀ ಮೇಲಾದ ಅನ್ಯಾಯ, ಕೌರ್ಯ, ದೌರ್ಜನ್ಯಗಳನ್ನು ಬಯಲಿಗೆಳೆಯುವುದು ಇದುವರೆಗಿನ ಅಳುಕು–ಅಂಜಿಕೆಗಳ ಹಿಂಜರಿಕೆಗಳ ಹಂಗನ್ನು ಹರಿದು ಪ್ರಕರ ವೈಚಾರಿಕತೆಯ ನೆಲೆಯಲ್ಲಿ ಪುರುಷ ಪ್ರಧಾನ ಸಂವೇದನೆಯನ್ನು ಪ್ರತಿಭಟಿಸಿ ಹೊಸ ಮಾರ್ಗಗಳತ್ತ ತಾನಿಟ್ಟ ಹೊಸ ಹೆಜ್ಜೆಯ ಕುರುಹುಗಳನ್ನು ಮೂಡಿಸುವ ಮೂಲಕ ತೀವ್ರ ಪ್ರತಿಭಟನೆಯಿಂದ ಕಾವ್ಯ ರಚಿಸಿದ್ದಾರೆ. ಈ ಕಾಲಾವಧಿಯು ಮೂಲತಃ ದಲಿತ ಬಂಡಾಯ ಚಳುವಳಿಗಳಿಂದ ಪ್ರೇರಿತವಾದ ಮಹಿಳೆಯರು ಪುರುಷ ಪ್ರಧಾನ ಸಾಮಾಜಿಕ ರೀತಿ–ನೀತಿ ಸಂಪ್ರದಾಯಗಳು ದಿಕ್ಕರಿಸಿದ್ದನ್ನು ಕಾಣುತ್ತೇವೆ.

ಎರಡನೇ ಹಂತದಲ್ಲಿ ಪುರುಷನಿಗಿಂತ ಭಿನ್ನವಾದ ಹಾಗೂ ಸ್ವತಂತ್ರವಾದ ತನ್ನ ಅಸ್ತಿತ್ವವನ್ನು ಸೂಚಿಸುವ ಸ್ಪಷ್ಟ ಧೋರಣೆಗಳನ್ನು ಕಾಣುತ್ತೇವೆ. ಮೂರನೆ ಹಂತದಲ್ಲಿ ವ್ಯವಸ್ಥೆಯ ವಿರುದ್ಧ ತಾವು ಪ್ರತಿಭಟಿಸಿದ ಹಳಸಾದ ಮೌಲ್ಯಗಳಿಗೆ ಪರ್ಯಾಯವಾಗಿ ತಾವು ಕಂಡುಕೊಂಡ ಮಾರ್ಗ. ಸೃಷ್ಟಿಸಿಕೊಂಡ ದಿಗ್ಸೂಚಿಯನ್ನು ಕಾಣುತ್ತೇವೆ.

೧೯೭೫ ನಂತರದ ಸ್ತ್ರೀ ಕಾವ್ಯದಲ್ಲಿ ಸ್ತ್ರೀಸಂವೇದನೆ ಪ್ರತಿಭಟನಾತ್ಮಕವಾಗಿ ಕಂಡುಬಂತು. ಮಹಿಳೆ ತನಗೊಂದು ಸ್ವಾತಂತ್ರ್ಯ ವ್ಯಕ್ತಿತ್ವವಿದೆಯೆಂದು ಸಾರಿದ್ದಳು. ತನಗನಿಸಿದ್ದನು ಸ್ಪಷ್ಟವಾಗಿ ಹೇಳುವ ಎದೆಗಾರಿಕೆಯನ್ನು ತೋರಿಸಿದ್ದಳು. ಈ ಸಂದರ್ಭದಲ್ಲಿ ಪಾಶ್ಚಾತ್ಯ ಮಹಿಳಾವಾದವು ಇದೇ ಸಮಯದಲ್ಲಿ ಅನೇಕ ಬರಹಗಾರ್ತಿಯರ ಮೇಲೆ ಪ್ರಭಾವ ಬೀರಿತು.

ಸ್ತ್ರೀವಾದಿ ಸಂವೇದನೆ ಸಾಹಿತ್ಯದ ಹಲವು ಪ್ರಕಾರಗಳಾದ ವಿಮರ್ಶೆ, ವೈಚಾರಿಕಾ ಬರಹಗಳಿಗಿಂತ ಕವಿತೆಗಳಲ್ಲಿ ಹೆಚ್ಚಾಗಿ ಹೊರಬರುತ್ತಿರುವುದು ಈ ಸಂವೇದನೆರು ಸ್ವರೂಪ

ಮತ್ತು ಹಿನ್ನೆಲೆಯ ದೃಷ್ಟಿಯಿಂದ ಅರ್ಥಪೂರ್ಣವಾಗಿದೆ. ಇಲ್ಲೂ ಸರ್ವಮಂಗಳ ಮತ್ತು ವೈದೇಹಿ ಇನ್ನು ನವ್ಯ ಪರಿಧಿಯೊಳಗೆ ಸುತ್ತುತ್ತಿದ್ದಾರೆನಿಸುತ್ತದೆ. ಡಿ. ವಿಜಯಾ, ಪ್ರತಿಬಾ, ಶಶಿಕಲಾ ವಸ್ತ್ರದ, ಭಾಗ್ಯ, ಮಾಲತಿ ಪಟ್ಟಣಶೆಟ್ಟಿ ಮುಕ್ತಾಯಕ್ಕಾ, ಸವಿತಾ ನಾಗಭೂಷಣ, ಈ ಒಲವಿನಿಂದ ಬರೆಯುತಿದ್ದರೂ, ಇವೆರಲ್ಲಾ ಬರಿಯ ಸ್ತ್ರೀವಾದಿಗಳಷ್ಟೇ ಎಂದು ವರ್ಣಿಸುವಂತಿಲ್ಲ. ಇವರೆಲ್ಲರಲ್ಲಿ ಭಾಗ್ಯ ಮತ್ತು ಸವಿತಾರ ಸಾಧನೆ ಮಹತ್ವವೆನಿಸುತ್ತದೆ. ಮಲ್ಲಿಕಾಘಂಟಿ ಅವರು ಮಾರ್ಕ್ಸ್‌ವಾದಿ ಅರಿವಿನಿಂದ ಬರೆಯುತ್ತಿದ್ದಾರೆ.

ಹೊಸಗನ್ನಡ ಮಹಿಳಾ ಕಾವ್ಯದಲ್ಲಿ ಆದರ್ಶಪುರುಷ ಹುಡುಕಾಟವನ್ನು ಸ್ತ್ರೀ ಸಂವೇದನೆಯ ರೂಪದಲ್ಲೇ ಹುಡುಕಾಟ ನಡೆಸಲಾಗಿದೆ. ಸ್ತ್ರೀ ಸಂವೇದನೆಯ ಧೋರಣೆ, ಆದರ್ಶಗಳೇ ಈ ಹುಡುಕಾಟದ ಅಳತೆಗೋಲಾಗಿದೆ. ಸ್ತ್ರೀ ಸಂವೇಧನೆಯು ಕಂಡುಕೊಡ ಸ್ತ್ರೀ ಸಮಸ್ಯೆಗಳಾದ ಭಾರತೀಯ ಸಂಪ್ರಾದಾಯ, ಪರಾವಲಂಬಿ, ಸಾಮಾಜಿಕ, ಕಟ್ಟುಪಾಡು, ಸ್ತ್ರೀಯರು ಅನಿವಾರ್ಯದ ಹೊಂದಾಣಿಕೆ(ಅಡ್ಜಮೆಂಟ್), ಅನುಕೂಲ ವರ್ತನೆ, ಗಂಡು ಸಂತಾನದ ಬಯಕೆ, ಸ್ತ್ರೀಪುರುಷ ಪ್ರಮಾಣದ ಏರುಪೇರು(೧೯೦೧ರಲ್ಲಿ ಶೇಕಡ ಪ್ರತಿ ನೂರು ಪುರುಷರಿಗೆ–೯೭.೨ ರಷ್ಟು ೧೯೮೧–ಪ್ರತಿ ನೂರು ಪುರುಷರಿಗೆ–೯೩.೫ ಅದಷ್ಟು ಮಹಿಳಾ ಗಣತಿ ಆಗಿದೆ) ಸ್ತ್ರೀ ಅತ್ಯಾಚಾರ, ವರದಕ್ಷಿಣೆ ಸಮಸ್ಯೆ, ಸ್ತ್ರೀ ಶೈಕ್ಷಣಿಕ ಸಮಸ್ಯೆ, ಮೊದಲಾದ ವಿಶ್ಲೇಷಣೆಯ ಚರ್ಚೆಗೆ ಗ್ರಾಸವಾದ ವಿಷಯಗಳಾದರೆ.....

ಸ್ವಾತಂತ್ರ್ಯ(*Freedom*) ವ್ಯಕ್ತಿತ್ವದ ಪ್ರಜ್ಞೆ(*Feminist Conscience*) ಲೈಂಗಿಕ ಸ್ವಾತಂತ್ರ್ಯ (*Gender Justice*) ದುಡಿಯುವ ಸ್ವಾತಂತ್ರ್ಯ, ಸಾಮಾಜಿಕ ಅಧಿಕಾರಶಕ್ತಿ(*Dominance*) ಮಹಿಳಾ ಸ್ವಾತಂತ್ರ್ಯಕ್ಕಾಗಿ ಸಂಘಟನೆ (*Womans Unity*) ಗಂಡಿನ ನಿರಾಕರಣೆ ದ್ವಿದಾವೃತ್ತಿ (*dulty*) ಸ್ಥಾನ ನಿರ್ದೇಶಕ (*estimate*) ಸ್ತ್ರೀ ಸಂವೇದನಾತ್ಮಕ ಹಕ್ಕುಗಳನ್ನು ಹೇಳಿಕೆಗಳನ್ನು ಕಾವ್ಯಗಳಲ್ಲಿ ಮೂಡಿಸುವುದು ಹಾಗೂ ಒತ್ತಾಯಿಸುವುದರ ಮೂಲಕ ಸ್ತ್ರೀ ಸಂವೇದಾತ್ಮಕ ಹೊಸ ಜಗತ್ತನ್ನು ತೆರೆಯುವುದು ಇನ್ನೊಂದು ರೀತಿಯ ಉದ್ದೇಶವಾಗಿದೆ.

ಇವುಗಳ ಮೂಲಕ ಮಹಿಳಾ ಸಂವೇದನಡಿಯಲ್ಲಿ ಆದರ್ಶ ಪುರುಷ ಹುಡುಕಾಟಗಳಿಗೆ ತೊಡಗಿದಾಗ ಈ ಸಂವೇಧನೆಯ ಹೊರಡಿಸಿದ ಹಲವು ಹಕ್ಕೊತ್ತಾಯ ಹೇಳಿಕೆಗಳಡಿಯಲ್ಲಿ ಆದರ್ಶ ಪುರುಷನನ್ನು ಹುಡುಕಬೇಕಾಗಿದೆ. ಮೇಲೆ ಹೇಳಿದ ಸಮಸ್ಯೆ ಹಾಗೂ ಸೂಚಿಸಲಾದ ಹಕ್ಕೊತ್ತಾಯಗಳ ಮೂಲಕ ಆದರ್ಶ ಪುರುಷನ ಹುಡುಕಾಟವನ್ನು ನಡೆಸಲಾಗಿದೆ. ಎಷ್ಟರ ಮಟ್ಟಿಗೆ ಸ್ತ್ರೀ ಸಂವೇದನೆಯು ಆಧುನಿಕ ಮಹಿಳಾ ಕಾವ್ಯ ಒಡಮೂಡಿದೆ ಎಂಬ ಪ್ರಶ್ನೆಯ ಮುಖ್ಯವಾಗುತ್ತದೆ.

ಮಹಿಳಾ ಸಂವೇಧನೆಯಡಿಯಲ್ಲಿ ಆಧುನಿಕ ಪುರುಷನ ಹುಡುಕಾಟಕ್ಕೆ ತೊಡಗಿ ಎರಡು ರೀತಿಯಲ್ಲಿ ಸ್ತ್ರೀ ಸಂವೇದನೆ ಕಾರ್ಯಗತ ಮಾಡುತ್ತಿದೆ.

೧. ತನ್ನತನದ ಸಮಸ್ಯೆಗಳ ಅರಹುವಿಕೆ (ಸ್ಥಿತಪ್ರಜ್ಞೆ)

೨. ಹಿಂದಿನ ಆಚರಣೆ-ಸಂಪ್ರದಾಯಗಳನ್ನು ಮೀರುವ ತವಕ.

ಮೊದಲನೆಯದಾಗಿ (ಸ್ಥಿತಪ್ರಜ್ಞೆ) ಮಹಿಳಾ ಸಂವೇದನೆ ಕಾವ್ಯ ಜಗತ್ತಿನ ಮೇಲೆ ಮಾಡಿದ ಪ್ರಭಾವ ಆರಂಭಿಕ ಸ್ಥಿತಿಯಾಗಿದ್ದು, ಪರಿಸ್ಥಿತಿಯ ಪ್ರಜ್ಞೆಯ ಅರಿವು ಮಾತ್ರ ಕಾಣಬಹುದಾಗಿದೆ ಹೊರತು, ಸಮಸ್ಯೆಯ ಆಳಕ್ಕೆ ನಿಂತು ವಿರೋಧಿಸುವ ಮಟ್ಟದಲ್ಲಿರಲಿಲ್ಲ. ಸ್ಥಿತಪ್ರಜ್ಞೆಯು ಮೂಲವಾಗಿರುತ್ತದೆ. ಸಮಸ್ಯೆಯನ್ನು ಗ್ರಹಿಸುವ ಹಾಗೂ ಅಭಿವ್ಯಕ್ತಿಸುವ ಮಟ್ಟಕ್ಕೆ ಮಾತ್ರ ಸೀಮಿತವಾಗುತ್ತದೆ ಹೊರತು ವಿರೋಧಿಸುವ ಮಟ್ಟಕ್ಕೆ ನಿಲ್ಲುವುದಿಲ್ಲ.

ಎರಡನೆ ಹಂತದಲ್ಲಿ ಕಾವ್ಯಗಳಲ್ಲಿ ಹಿಂದಿನ ಆಚರಣೆ ಮತ್ತು ಸಂಪ್ರದಾಯಗಳನ್ನು ಮೀರುವ ತವಕವಿದೆ. ಇಲ್ಲಿ ಸಮಸ್ಯೆಗಳನ್ನು ಮೀರುವ ತವಕವಿದೆ ಇಲ್ಲಿ ಸಮಸ್ಯೆಗಳ ಅರಿವಿನ ಜೊತೆಗೆ ಅದನ್ನು ವಿರೋಧಿಸುವ, ಒತ್ತಾಯಿಸುವ ಇನ್ನೊಂದು ರೀತಿಯ ವಿಶೇಷತೆಯನ್ನು ಕಾಣಬಹುದು.

ಅಧುನಿಕ ಮಹಿಳಾ ಕಾವ್ಯದಲ್ಲಿ ಸ್ಥಿತಪ್ರಜ್ಞೆ

'ಸ್ಥಿತಪ್ರಜ್ಞೆ' ಸಾಮಾನ್ಯವಾಗಿ ನವೋದಯ ಕಾಲದ ಕಾವ್ಯಗಳಲ್ಲಿ ಕಾಣಬಹುದು. ತಿರುಮಲೆ ರಾಜಮ್ಮ, ಉಮ್ಮತ್ತೂರು ರಾಜಮ್ಮ, ಬೆಳಗೆರೆ ಜಾನಕಮ್ಮ ಸುಮಿತ್ರಾಬಾಯಿ ತರದವರ ಕಾವ್ಯಗಳು ಈ ಸಾಲಿನಲ್ಲಿ ಹೆಚ್ಚಾಗಿ ಕಂಡುಬರುತ್ತದೆ ಎನ್ನಬಹುದು. ಆದರೂ ನವ್ಯ ಬಂಡಾಯ ಕಾವ್ಯಗಳು ಈ ಪ್ರಜ್ಞೆಯ ಹೊರತಾಗಿಲ್ಲ. ಕೆಲವೊಂದು ಕಾವ್ಯಗಳು ಕಾಲದ ಬದಲಾವಣೆಯಿಂದ ಮಹಿಳಾ ಸಂವೇಧನೆ ಪ್ರಭಾವವಿದ್ದರೂ ಸ್ಥಿತ ಪ್ರಜ್ಞೆ ಹೊರತಾದ ಪ್ರಜ್ಞೆಯನ್ನು ಮುಟ್ಟಲು ಅವಳಿಗೆ ಸಾಧ್ಯವಾಗಿಲ್ಲ.

ಇವನ ಅರಮನೆಗೆ
ಮೇಣಬತ್ತಿಯಾಗಿ
ಸುಟ್ಟುಕೊಳ್ಳುತ್ತಾ
ಒಳಗೆ ಉರಿಯುತ್ತಾ
ಬಿಸಿಗೆ ಕರಗುತ್ತಾ
ಹೆಪ್ಪುಗಟ್ಟುತ್ತಿದ್ದೇನೆ[೧]

(ಶಶಿಕಲಾ ವಸ್ತ್ರದ, ಗುಬ್ಬಿಮನಿ, ಪುಟ-೨೦, ೧೯೭೯)

ಇಲ್ಲಿ ಕವಿಯತ್ರಿಯು ತನ್ನ ಅಸ್ಥಿತ್ವವನ್ನು ಕೆಡವಿಕೊಂಡಿದ್ದಾಳೆ. ಬದುಕಿನುದ್ದಕ್ಕೂ ತನ್ನದಲ್ಲದ ಬದುಕಿಗಾಗಿ ಹೆಣ್ಣು ಉರಿದು ಬೂದಿಯಾಗುತ್ತಿದ್ದಾಳೆ. ತಂದೆಯ ಮನೆಯಲ್ಲಿ ನಂತರದ ಗಂಡನ ಮನೆಯ ಅವಳ ಅಸ್ಥಿತ್ವಕ್ಕಾಗಿ ತಡಕಾಡುತ್ತಾಳೆ. ಎಲ್ಲವೂ ಪುರುಷ ಪ್ರೇರಿತವಾಗಿ ನಿರ್ದೇಶಿಸಲ್ಪಡುತ್ತದೆ. ಇಲ್ಲಿನ ಹೆಣ್ಣಿನ ಕಷ್ಟಸಹಿಷ್ಣುಗಳು ಲೆಕ್ಕಕ್ಕೆ ಬರುವುದಿಲ್ಲ. ಆದರ್ಶತೆಯ ಪುರುಷ ಇಲ್ಲಿ ಹೆಣ್ಣಿಗೆ ದಾರಿ ಬಿಡುವುದಿಲ್ಲ. ಇಲ್ಲಿ ಬಂಡಾಯದ ಕೂಗು ಇದೆ ಹೊರತು ವಿರೋಧವೆನಿಸುವ ಗುಣಗಳಿಲ್ಲ. ಇಲ್ಲಿನ ಕಾವ್ಯಗಳು(*Feminist Conscience*) ವ್ಯಕ್ತಿತ್ವದ ಪ್ರಜ್ಞೆಯನ್ನು ಮೇಲೆತ್ತಿ ನಿಲ್ಲಿಸಿದೆ.

ಬನಿಯನ್ನಿನೊಳಗೆ ಜಿಡ್ಡು-ಜಿಡ್ಡಾದ ಜನಿವಾರದ ಗಂಟು ಒತ್ತಿದರೂ
ಕ್ರಾಂತಿಯ ಮತಾಡಿ। ಹಾರ ಹಾಕಿಸಿಕೊಂಡ ಜಯವೀರನನ್ನು
ಯಾರೂ ಮೆಚ್ಚಬೇಕು.
ತನ್ನ ಮನೆಯಾಚೆ । ಹೊರಗು ಒಳಗಿನ ದುಡಿತದ ಮಧ್ಯೆ
ಆರು ಮಕ್ಕಳ ತಾಯಿ
ಅವನೇನು ಕೃತಘ್ನನಲ್ಲ। ಸದ್ಯದಲ್ಲೇ ಬಂದೀತು
ಅವಳಿಗರ್ಪಿಸುವ ಕವನ ಸಂಕಲನ[೨]

(ಡಿ. ವಿಜಯಾ-ಪುಟ-೧೦, ೧೯೯೯)

ಆಧುನಿಕತೆಯ ಬದಲಾವಣೆಯಿಂದ ಹೆಣ್ಣು ಹೊರನೋಟಕ್ಕೆ ಸ್ವತಂತ್ರ್ಯಳೆನಿಸಿದರೂ ಕೂಡ ಅವಳು ಆಂತರಿಕವಾಗಿ ಸ್ವತಂತ್ರ್ಯಳಲ್ಲ. ಆಧುನಿಕ ಪ್ರಪಂಚದಲ್ಲಿ ಸ್ತ್ರೀಯ ಶೋಷಣೆಯು ಆಂತರಿಕವಾಗಿ ನಡೆಯುತ್ತದೆ.

ನಿಮ್ಮ ಕಾಮಾಗ್ನಿ ಕುಂಡಕ್ಕೆ । ನಮ್ಮ ಶೀಲವನ್ನು ಬಲಿಕೊಟ್ಟು
ನಿಮ್ಮ ಮನಾಪಮಾನವನ್ನು । ಕಾಪಾಡಲು ನಿಮ್ಮಿಂದಲೇ
ಪತಿವ್ರತೆಯರ ಪಟ್ಟಕ್ಕೇರಿ ಪ್ರಾತಃಕಾಲದ ಸ್ಮರಣೆಯಲಿ
ಇಂದಿಗೂ ಉಳಿದು ನರಳುತ್ತಿರುವವರು ನಾವು
ನಾವು ಪತಿವ್ರತೆಯರಲ್ಲ.[೩]

(ಹೆಚ್.ಎಸ್.ಮುಕ್ತಾಯಕ್ಕಾ-ಪುಟ-೮೦, ೧೯೮೩)

Gender Justice ಪ್ರಶ್ನೆಯನ್ನು ಎತ್ತಿದ್ದಾರೆ. ಸ್ತ್ರೀಯ ಮೂಲಭೂತವಾದ ಅವಶ್ಯಕತೆಗಳನ್ನು ಪಡೆಯುವಲ್ಲಿ ತಿರಸ್ಕೃತಳಾದ ಅವಳಿಗೆ ಲೈಂಗಿಕ ಸ್ವಾತಂತ್ರ್ಯದ ಹಕ್ಕನ್ನ ಕೇಳುವಲ್ಲಿ ಅವಳಲ್ಲಿ ಹಿಂದೆ ಮುಂದೆ ನೋಡುವಂತೆ ಮಾಡಿದೆ. ಶೀಲದ ಪ್ರಶ್ನೆ ಗಂಡಿಗಿಲ್ಲದೆ ಹೆಣ್ಣಿಗೆ ಮಾತ್ರ ಸೀಮಿತಗೊಳಿಸಿರುವುದು ಕವಿಯತ್ರಿಗೆ ವೈಚಿತ್ರ್ಯವನ್ನುಂಟು ಮಾಡಿದೆ.

ಒಳಗೆ ಹೊರಗೆ ನೀರಾಗಿ ಹರಿದು
ನಂಬಿದವರ ದಡ ಸೇರಿಸಿ
ಒಂದು ದಿನ ಸದ್ದಿಲ್ಲದೆ
ನಂದಿ ಹೋಗುವ ನಂದಾದೀಪ
ದುಡಿಯುವ ಮಹಿಳೆ
ದಾರಿ ತೆರೆಯುವ ನಾಳೆ”

(ಸುಕನ್ಯಾ ಮಾರುತಿ, ಪುಟ-೧೦, ೧೯೮೫)

ಆರ್ಥಿಕ ಸ್ವಾತಂತ್ರ್ಯ ಸ್ತ್ರೀಯ ಸ್ಥಾನಮಾನವನ್ನು ಬದಲಾಯಿಸಿದೆ. ಆರ್ಥಿಕ ಭದ್ರತೆ ಅವಳಲ್ಲಿ ಗಂಡಿನ ಅಡಿಯಾಳುಯಾಗುವುದನ್ನು ತಪ್ಪಿಸುತ್ತದೆ ಎನ್ನುವುದು ಆಧುನಿಕ ಜಗತ್ತಿನ ಅಭಿಪ್ರಾಯವಾದರೆ, ನಿಜಸ್ಥಿತಿಯಲ್ಲಿ ದುಡಿಮೆ ಅವಳ ಪರಿಸ್ಥಿತಿಯನ್ನು ಬದಲಾಯಿಸುವುದಕ್ಕಿಂತ ಅವಳಿಗೆ ಬೇರೊಂದು ಜವಾಬ್ದಾರಿಯನ್ನು ಹೊರೆಸಿದಂತಾಗಿದೆ.

ಸಮಾನತೆಯ ಬಗ್ಗೆ
ದಿನವಿಡೀ ಮಾತಾಡಿ
ಭಾಷಣ ಬಿಗಿದು ಸಾಕಾಗಿ
ಮಡದಿ
ಮಲಗಿದ್ದ ಗಂಡನ
ಕಾಲನ್ನು ಒತ್ತತೊಡಗಿದ್ದಳು”

(ಲತಾರಾಜಶೇಖರ್, ಪುಟ-೧೬, ೧೯೮೮)

ಹೊಂದಾಣಿಕೆ(*Adjustment)* ಎಂಬುದು ಸ್ತ್ರೀತನದ ಇನ್ನೊಂದು ಪ್ರಮುಖ ಗುಣವೆಂಬಂತೆ ಪುರಾತನ ಕಾಲದಿಂದಲೂ ಹೆಣ್ಣಿಗೆ ಹೊರಿಸಲಾದ ಸಿದ್ಧಾಂತ, ಆಧುನಿಕತೆಯ ಗಾಳಿ ಬಲವಾಗಿ ಸೋಂಕಿದರೂ ಸ್ತ್ರೀವಾದಗಳೆಲ್ಲವೂ ಆವರಿಸಿದ್ದರೂ ಅವಳೂ ಇನ್ನು ಹಳೆಯ ಕಟ್ಟುಪಾಡುಗಳಿಗೆ ಕಟ್ಟಿಬಿದ್ದಳು. ಸಾಮಾಜವು ತನ್ನ ಕಟ್ಟುಪಾಡುಗಳಲ್ಲಿ ಕೊಂಚ ಸಡಿಲಿಸಿದರೂ ಎಲ್ಲವನ್ನು ಮೀರಲೂ ಅವಳಲ್ಲಿ ಇನ್ನು ಭಯವಿದೆ.

ಹಗಲು ರಾತ್ರಿಯೆನ್ನದೆ
ಅವಳ ಬಾಳ ಸುಖವನೆಲ್ಲ
ಮೊಗ-ಮೊಗೆದು ಕುಡಿದು
ಬರಿದು ಮಾಡಿದ ಅವನೀಗ
ಸತ್ತು ಅವಳ ಬದುಕಿನ

ಬಾಣಲೆಯೊಳಗೆ ನೆಮ್ಮದಿ
ತುಂಬಿಸಿ ಹೋಗಿದ್ದಾನೆ.[೬]

(ಭಾಗ್ಯ, ಪುಟ-೨೬, ೧೯೮೧)

ಮಧ್ಯಪಾನ ಸಮಾಜದ ದುಷ್ಟ ಸಮಸ್ಯೆಯಲ್ಲೊಂದು. ಇದರ ಪರಿಣಾಮಗಳು ಸಂಪೂರ್ಣವಾಗಿ ಪುರುಷನ ಆರೋಗ್ಯ ಮತ್ತು ಮನಸ್ಸಿನ ಮೇಲೆ ಪರಿಣಾಮ ಬೀರಿದರೂ ಕೂಡ ಅದು ಸಂಪೂರ್ಣವಾಗಿ ಪುರುಷನನ್ನು ನಂಬಿಕೊಂಡ ಹೆಣ್ಣಿನ ಜೀವಮಾನವನ್ನು ಬಲಿ ತೆಗೆದುಕೊಳ್ಳುವುದರಲ್ಲಿ ಸತ್ಯವಿದೆ.

ನಿನ್ನ ನಯಗಾರಿಕೆಯ ಎಲ್ಲಾ ಪದರ-ಪದರಗಳ ನರಿತಾಗ
ಸೀತೆ-ಸಾವಿತ್ರಿಯರ ಕೆಡವಿ ಮಂಡೋಧರಿಯಾದೆ
ನಿನ್ನ ಮನದಾಸೆಯ ಮಜಲುಗಳ ಬಣ್ಣ
ಬಯಲಾದಾಗ ಹಿಡಿಂಬೆಯಾಗಲವಶಿಸಿದ ನನ್ನ
ಸಾಮಾಜಿಕ ನ್ಯಾಯದಲ್ಲಿ ಹಿಡಿದಿಟ್ಟೆ
ಪಾವಿತ್ರತೆಯ ಗಿಲೀಟು ಒಡವೆ ತೊಡಿಸಿ
ಬಂಗಾರವೆಂದೆ ಸಿಂಗರವೆಂದೇ[೭]

(ರಮಾಕುಮಾರಿ, ಪುಟ-೭೮ ೨೦೦೩)

ಆಧುನಿಕ ಸ್ತ್ರೀ ಸಮಾಜದ ಬಂಡುಕೋರತನವನ್ನು ಅರ್ಥಮಾಡಿಕೊಂಡು ಬಂಡಾಯದ ಹಾದಿ ತುಳಿದು, ಸಮಾಜದ ಕಟ್ಟುಪಾಡುಗಳನ್ನು ತುಳಿದು ಮುಂದೆ ಬರಬೇಕೆಂದು ಕೊಂಡರೂ, ಸಮಾಜಿಕತೆಯ ಕಟ್ಟುಪಾಡು ಸಂಪ್ರದಾಯಗಳು ಅವಳನ್ನು ಬಲವಾಗಿ ಹಿಡಿದಿಟ್ಟಿದೆ.

ಅವಳನ್ನು ಧರ್ಮ, ಶಾಸ್ತ್ರ, ಕುಟುಂಬ, ಸಂಸಾರದ ಚೌಕಟ್ಟಿನಿಂದ ಅವಳು ಹೊರಗೆ ಬರದಂತೆ ಸಮಾಜವು ಅವಳನ್ನು ಕಟ್ಟಿಹಾಕಿದೆ. ಹೆಣ್ಣು ಆಧುನಿಕಳಾದರೂ ಅವಳ ಹುಟ್ಟು ಬೆಳವಣಿಗೆ ಪರಿಸರಗಳ ಕಟ್ಟುಪಾಡಿನಿಂದ ಅವಳನ್ನು ಬಂಧಿಸುತ್ತದೆ.

ಗೆಳೆಯ
ನಿನ್ನಜ್ಜ ನೆಟ್ಟಾಲಕ್ಕೆ
ನೇಣು ಹಾಕಿಕೊಳ್ಳಬೇಕೋ
ಬೇಡವೋ ಎಂಬಷ್ಟು
ಸ್ವಾತಂತ್ರ್ಯ ನಿನಗಿದೆ
ನಿನ್ನಜ್ಜ ನೆಟ್ಟಾಲಕ್ಕೆ

ನೇಣು ಏರಲೇ ಬೇಕೆಂಬ
ನೀತಿ-ನಿಯಮಗಳ ಕಟ್ಟಿನಲ್ಲಿ
ನನಗೆ ಆಯ್ಕೆ ಸ್ವಾತಂತ್ರ್ಯ
ಇಲ್ಲವಲ್ಲ"

(ಎಂ.ಎಸ್.ವೇದ ಪುಟ-೨೩, ೧೯೮೯)

ಪುರುಷ ಶ್ರೇಷ್ಠತೆ (*Male Dominate*) ಭೂತ ವರ್ತಮಾನ ಭವಿಷ್ಯತ್ತಿನವರೆಗೂ ಸಾರ್ವತ್ರಿಕವಾದ ಬದಲಾಗದ ಧೋರಣೆ. ಲಿಂಗ ಸಮಾನತೆ ಮೇಲ್ನೋಟಕ್ಕೆ ಮಾತ್ರ ಸೀಮಿತವಾಗುತ್ತದೆ. ಸಮಾಜವು ಅಷ್ಟು ಸುಲಭವಾಗಿ ಈ ಪುರುಷ ಪ್ರಧಾನತೆಯನ್ನು ಬಿಟ್ಟು ಬದಲಾಗುವುದಿಲ್ಲ. ಅವಳು ಆಧುನಿಕಳಾದರೂ ಸಮಾಜ ಅಳವನ್ನು ಪುರುಷ ಸಹವರ್ತಿಯಾಗೇ ಗುರುತಿಸುತ್ತದೆ. ಪುರುಷ ಸ್ವಾತಂತ್ರ್ಯ . ಸ್ತ್ರೀಗೆ ಮರೀಚಿಕೆಯಾಗುತ್ತದೆ.

ಗರ್ಭದ ಶಿಶು ಧರೆಗೆ ಬಿಟ್ಟದ್ದರೆ ಕುರ್ರ-ಮರ್ರೋ
ಎಂದಾಗ
ಅಯ್ಯೋ ಹೆಣ್ಣು ಕೂಸು ಎಂಬ ರಾಗದ ಧ್ವನಿ
ಎಲ್ಲರ ಬಾಯಲ್ಲಿ
ಸೊಸೆ ಕೋಪ ತೆಡೆದು ಕಪಿಲೆಯತ್ತ ಕಣ್ಣು
ಹಾಯಿಸಿದಾಗ
ಅದು ಕರುವನ್ನು ವೀಕ್ಷಿಸುತ್ತಿದ್ದ ಮೈದುನನ
ಬಾಯಲ್ಲಿ
ಅಯ್ಯೋ ಗಂಡು ಎಂಬ ಧ್ವನಿ ಹೊರಡುತ್ತದೆ"

(ಎಂ.ಎಸ್.ವೇದ-ಪುಟ-೧೦, ೧೯೮೭)

ಗಂಡು ಸಂತಾನದ ಬಯಕೆ ಸಮಾಜದ ಸಾರ್ವತ್ರಿಕವಾದ ಆಸೆಗಳಲ್ಲಿ ಒಂದು ಇದಕ್ಕೆ ಕಾರಣಗಳು ಸಾಕಷ್ಟಿದ್ದರೂ ಆಧುನಿಕತೆಯ ಸಮಾಜದಲ್ಲಿ ಗಂಡು ಸಂತಾನದ ಬಗ್ಗೆ ಒಲವು ಮೂಡಿಸಿರುವುದೂ ಒಂದು ರೀತಿಯ ದುರಂತವೆನ್ನಬಹುದು. ಗಂಡು ಸಂತಾನದ ಬಯಕೆಯು ಹೆಣ್ಣು ಸಂತಾನದ ನಾಶಕ್ಕೂ ಭ್ರೂಣಹತ್ಯೆಗೂ ಕಾರಣವಾಗುತ್ತದೆ. ಇದರಿಂದ ಸ್ತ್ರೀ-ಪುರುಷರ ಪ್ರಮಾಣದಲ್ಲಿ ಏರುಪೇರುಗಳಾಗಿವೆ. ೧೯೦೧-೯೭.೨, ೧೯೮೧-೯೩.೫ ಗಳಷ್ಟಾಗಿರುವುದನ್ನು ಕಾಣಬಹುದು.

ಮದುವಣಿಗ ಕುಣಿದಿದ್ದ ಹುಲಿರೂಪ ತೊಟ್ಟು
ಹಣೆ ಮೇಲೆ ಬೆಲೆಪಟ್ಟಿ ಬಾಸಿಂಗ ತೊಟ್ಟು
ಬಲಿಪೀಠದಲ್ಲಿ ಹೊಗಳುತ್ತಿದ್ದರು, ಗೆಳತಿ ಕೆಂಗಟ್ಟಿ

ಮೊಗದ ನಗೆ ಹಣವಾಗಿ ಧಗಧಗಿಸುತ್ತಿತ್ತು
ಅಪ್ಪ ಪ್ರೇಮದ ಕರಿಮಣಿ ಬದಲು
ಕಬ್ಬಿಣದ ಉರುಳು ಸುತ್ತ ಬಿಗಿಯುತ್ತಿದ್ದ
ಯಾರೋ ನನ್ನ ಕೈಗಿಟ್ಟರು ಪಾಯಸದ ಬಟ್ಟಲು
ತೇಲುತ್ತರದಲ್ಲಿ ಗೆಳತಿಯ ತಾಯ್ತಂದೆಯರ
ರಕ್ತ ಮಾಂಸದ ಛಿದ್ರ ಚೂರುಗಳು[೧೦]

(ಸುಕನ್ಯಾ ಕಲಶ, ಪುಟ-೯೦, ೧೯೮೮)

ಆಧುನಿಕ ಪ್ರಪಂಚದ ಬಹುದೊಡ್ಡ ಸ್ತ್ರೀ ಸಮಸ್ಯೆಯನಿಸಿರುವ ವರದಕ್ಷಿಣೆ ಸಮಸ್ಯೆಯನ್ನು ಕುರಿತಂತೆ ಚರ್ಚೆಯಿದೆ. ಮದುವಣಿಗ ಕುಣಿದಿದ್ದ ಹುಲಿರೂಪ ತೊಟ್ಟು ಎನ್ನುವಲ್ಲಿ ಸಮಾಜದಲ್ಲಿ ಮದುವೆಯೆಂಬ ಭಾವನಪೂರ್ಣ ಸಂಬಂಧ ಹೇಗೆ ವ್ಯವಹಾರಿಕವಾಗಿದೆ ಎಂದು ತಿಳಿಯಬಹುದು. ಹೆಣ್ಣು ಬ್ರೂಣ ಹತ್ಯೆಗೆ ಪರೋಕ್ಷವಾಗಿ ಕಾರಣವಾಗಿದೆ. ಅತಿಯಾದ ವರೋಪಚಾರಕ್ಕಾಗಿ ವರದಕ್ಷಿಣೆ ಹೆಣ್ಣು ಮಗು ಪಡೆಯುವಲ್ಲಿ ತಂದೆ-ತಾಯಿಗಳು ಹಿಂಜರಿಯುತ್ತಾರೆ.

ದಕ್ಷಿಣ ಆಪ್ರಿಕಾದಲ್ಲಿ
ಒಂದು ಬೇಟೆ ಚಾಕುವಿನ ಬೆಲೆ
೭ ಪೆನ್ನಿಗಳು
ಒಂದು ಹೆಣ್ಣಿನ ಬೆಲೆ
ಕೇವಲ ಮೂರು ಪೆನ್ನಿಗಳು ಇದೊಂದು ದುರಂತ
ಎಂದು ಸಂತಾಪವಿದೆಯಲ್ಲಾ
ನಮ್ಮ ಹೆಣ್ಣು ಮಕ್ಕಳಿಗೆ
ಅದೂ ಇಲ್ಲವಲ್ಲಾ?[೧೧]

(ಬಿ.ಎನ್.ತೇಜಸ್ವಿನಿ-ಪುಟ-೧೦, ೨೦೦೩)

ಲಿಂಗ ಸಮಾನತೆಯ ಬಗ್ಗೆ ಸುದೀರ್ಘವಾದ ಚರ್ಚೆಗಳಾದರೂ, ಜೈವಿಕವಾಗಿ ಹೆಣ್ಣು-ಗಂಡೆಂಬರೆಡೂ ಸಮಾನವಾದ ಜೈವಿಕ ಅಂಶಗಳನ್ನು ಹೊಂದಿದ್ದರೂ ಹೆಣ್ಣನ್ನು ಮೂಲತಃ ಗಂಡಿಗಿಂತ ಕೆಳಮಟ್ಟದಲ್ಲಿರಿಸಿದ್ದಾರೆ. ಇದಕ್ಕೆ ಸಮಾಜಿಕ ಪಾರಂಪರಿಕತೆ, ಧಾರ್ಮಿಕತೆಗಳು ಪರೋಕ್ಷವಾಗಿ ಬೆಂಬಲವಿದೆ. ಪುರುಷ ಪ್ರಭುತ್ವತೆಯು ಆಧುನಿಕ ಜಗತ್ತಿನಲ್ಲಿ ಅಳಿದು ಹೋಗಿದೆ ಹಾಗೆ ಉಳಿದಿದೆ.

ಶತಶತಮಾನಗಳಿಂದ
ನಿನಗೆ ಅವಳು

ಅರ್ಥವಾದೆಷ್ಟು?
ಬರೀ ಇಷ್ಟೆ ಇಷ್ಟು
ಸಾಕಪ್ಪ ಸಾಕು ನಿನ್ನ
ಕಾಗಕ್ಕ-ಗುಬ್ಬಕ್ಕನ ಕತೆ
ಅವಳ ಅಂಗಾಂಗ ವರ್ಣಿಸುತ್ತಾ
ತನ್ನದೇ ಅತೃಪ್ತ ಕಾಮನೆ ತಣಿಸುತ್ತಾ
ಅಡ್ಡಹಾದಿಗದಿವೆ ರಸಿಕತೆ[೧೨]

(ರೂಪಹಾಸನ-ಪುಟ-೭೦, ೧೯೯೮)

ಆನಾದಿಕಾಲದಿಂದಲೂ ಪುರುಷ ಪ್ರಪಂಚ ಸ್ತ್ರೀಯನ್ನು ಧಾರ್ಮಿಕವಾಗಿ ಪಾರಂಪರಿಕತೆ, ಕುಟುಂಬದ ಚೌಕಟ್ಟಿನಲ್ಲಿ ಬಂಧಿಸಿದೆ. ಆದರೆ ಹೆಣ್ಣಿಗಿದು ಬಂಧನದ ಭಾವನೆ ಬರದಂತೆ ಅವಳನ್ನು ಕರುಣಾಮಯಿ, ಕಷ್ಟಸಹಿಷ್ಣು, ತ್ಯಾಗಮಯಿ, ಮಾತೃದೇವತೆ, ಎಂಬ ಹಣೆಪಟ್ಟಿಯನ್ನು ಹಚ್ಚಿ ಅವಳಿಗೆ ಆ ಬಂಧನಗಳಲ್ಲೇ ತನ್ನ ಜೀವನವನ್ನು ಬಂಧನದಲ್ಲಿರಿಸುವಂತೆ ಮಾಡಿದೆ. ಆದರ್ಶನಾರಿ ಹೊರಪ್ರಪಂಚದ ಅರಿವು ಅವಳನ್ನು ಪ್ರಭುದ್ಧವಾಗಿಸಿದೆ. ಸಾಕಪ್ಪ - ಸಾಕು ನಿನ್ನ ಕಾಗಕ್ಕ-ಗೂಬಕ್ಕನ ಕಥೆ ಎನ್ನುವಲ್ಲಿ ತಾನು ನಿನ್ನ ವರ್ಣನೆಗೆ ಹೊಗಳಿಕೆಗೆ ಸಿಕ್ಕುವುದಿಲ್ಲ ಎಂಬ ಭಾವನೆಯಿದೆ.

ಕಸಕ್ಕಿಂತ ಕಡೆಯಾಯ್ತು
ಹೆಣ್ಣು ಜನ್ಮವು ನಿನಗೆ
ಈಬಾರ ಹೊರಸುವುದಕ್ಕೆ
ಲಂಚಕೋರನು ನೀನು
ವಂಚನೆಯು ಮಾಡಿರುವೆ
ಮೃದುತನದ ಸ್ತ್ರೀ ವರ್ಗಕ್ಕೆ
ಗಿಡವೆಂದು ಬಗೆದೆಯಾ
ಹೆಣ್ಣು ಜನ್ಮದ ಒಡಲ
ಫಲಗಳನ್ನು ಸೃಜಿಸುವುದಕ್ಕೆ[೧೩]

(ಬೆಳಗೆರೆ ಜಾನಕಮ್ಮ-ಬದುಕು ಮತ್ತು ಬರಹ ಪುಟ ೨೦, ೧೯೮೮)

ಹೆಣ್ತನದ ದೊಡ್ಡ ಪುಣ್ಯವೆಂಬಂತೆ ಹೆಣ್ಣಿನ ಮೇಲೆ ಹೊರಿಸಲಾದ ತಾಯ್ತನ ಕೆಲವೊಮ್ಮೆ ಅವಳ ತುಳಿತಕ್ಕೆ ಕಾರಣವಾಗುತ್ತದೆ. ಅದಿಲ್ಲದೆ ಹೆಣ್ಣಿನ ಜೀವನ ಬರಡೆಂಬಂತೆ ಚಿತ್ರಿಸಲಾಗುತ್ತದೆ. ಬಂಜೆ ಎಂಬ ಶಬ್ದ ತಾತ್ವಿಕವಾಗಿ ಅವಳಿಗೆ ಅಂಟುತ್ತದೆ. ಉತ್ಪಾದಿಸಲಾಗದ ಹೆಣ್ಣಿಗೆ ಬಂಜೆ ಎಂದು ಕರೆಯುವ ಇದೇ ಪ್ರಪಂಚ ಅದೇ ಗಂಡಿಗೆ ಹೆಸರಿಟ್ಟಿಲ್ಲದೆ ಇರುವುದು

ಪುರುಷ ಪ್ರಪಂಚದ ವಿರೋಧಭಾಸವನ್ನು ನೋಡಬಹುದು. ತಾಯ್ತನವನ್ನು ಸಮರ್ಥಿಸುತ್ತವೆ ಹೊರತು ಹೊರೆಸಿರುವುದನ್ನು ವಿರೋಧಿಸುತ್ತದೆ.

ನಾನೆಡೆಸುವ ಯುದ್ಧದಲ್ಲಿ ಅಸೆಗಳಿದ್ದರೂ
ಅಸ್ತ್ರಗಳಿಲ್ಲ
ತುಕ್ಕು ಹಿಡಿಯಲಾಗದ ಸಾಣೆ ಹಾಕಲಾಗದ
ಮಣ್ಣಿನ ಆಕಾರಗಳೆಷ್ಟೇ
ಅದಕ್ಕೆ ಸೋಲಿನ ಸುತ್ತ ಸುತ್ತುತ್ತಲೇ ಸುತ್ತುತ್ತೇವೆ[೧೪]

(ಭಾಗ್ಯ–ಪುಟ–೧೦, ೧೯೮೦)

ಹಲವಾರು ಶತಮಾನಗಳಿಂದ ಶೋಷಣೆಗೊಳಗಾದ ಸ್ತ್ರೀಗೆ ಹೊಸ ಆಧುನಿಕ ಜಗತ್ತಿನ ಅರಿವಿನಿಂದ ಅವಳು ಹೊಸದೊಂದು ಲೋಕಕ್ಕೆ ಕಾಲಿಟ್ಟಿದ್ದಾಳೆ. ವಿರೋಧಿಸುವ ಗುಣ ಆರಂಭದಲ್ಲಿದ್ದರೂ ತನ್ನ ಮೇಲಾಗುವ ಶೋಷಣೆಯನ್ನು ಗುರುತಿಸಿದ್ದಾಳೆ. ಎಂಬುದು ಸತ್ಯ. ನಾ ನಡೆಸುವ ಯುದ್ದದಲ್ಲಿ ಅಸ್ತ್ರಗಳಿದ್ದರೂ ಅವು ಅಸ್ತ್ರಗಳಲ್ಲ ಎನ್ನುವಲ್ಲಿ ತನಗೆ ಹೊರ ಪ್ರಪಂಚದ ಅರಿವಿದ್ದರೂ ತನ್ನ ವಿರೋಧಿಸಲಾಗದ ಅಸಾಯಕತೆಯನ್ನು ನೋವಿನಿಂದ ಅನುಭವಿಸುತ್ತಾಳೆ.

ಹಿಂದಿನ ಆಚರಣೆ ಸಂಪ್ರದಾಯವನ್ನು ಮೀರುವ ತವಕ(ವಾಸ್ತವಿಕತೆ)

ಈ ಹಂತದಲ್ಲಿ ಸ್ತ್ರೀ ಕೇವಲ ತನ್ನ ಸಮಸ್ಯೆಗಳನ್ನು ಕುರಿತು ಕೊರಗುವುದಿಲ್ಲ. ಅಳುವುದಿಲ್ಲ ತನ್ನ ವಿರೋಧಿಸಲಾಗದ ಹೇಡಿತನಕ್ಕಾಗಿ ಅಳುತ್ತಾ ಕೂರುವುದಿಲ್ಲ. ಅವಳಲ್ಲಿ ಸಮಸ್ಯೆಯ ಆಳದ ಅರಿವಿನ ಜೊತೆಗೆ ಅದನ್ನು ನಿವಾರಿಸಿಕೊಳ್ಳುವ ಹಂತದವರೆಗೂ ಅವಳು ಪ್ರಬುದ್ಧಳಾಗುತ್ತಾಳೆ. ಈ ಹಂತದ ಕಾವ್ಯಗಳಲ್ಲಿ ಬಂಡಾಯ ಎದ್ದು ಕಾಣುತ್ತದೆ.

ನನ್ನ ಒಂದೊಂದು ಹೆಜ್ಜೆ
ನಿನ್ನ ಭದ್ರಬುನಾಧಿ ಬಿರುಕುಗೆರೆ
ನನ್ನ ಅಂತರಂಗದ ವಾಸ್ತವದ ಒಂದೊಂದು ನಿರ್ಧಾರ
ನಿನ್ನ ಬೇದಿಸುವ ಗಾಳಿಗೋಪುರದ ವಜ್ರಾಯುಧ.[೧೫]

(ಮಾಲತಿ ಪಟ್ಟಣ ಶೆಟ್ಟಿ–ಪುಟ ೧೫ ೧೯೮೮)

ಬಂಡಾಯದ ಕೂಗು ಸ್ತ್ರೀಯ ಅಸಾಯಕತೆರು ಕೂಗು. ಇಲ್ಲಿ ಕರುಣೆಯನ್ನು ಬಯಸುವುದಿಲ್ಲ ತನ್ನ ಪ್ರತಿಭಟನೆ ಫಲಪ್ರದವಗುತ್ತದೆಯೇ ಎಂಬ ಅನುಭವವಿಲ್ಲ. ಅವಳು ಸ್ಪಷ್ಟವಾಗಿ ತನ್ನ ಹೆಜ್ಜೆಗಳನ್ನು ಗುರುತಿಸಿಕೊಂಡಿದ್ದಳು. ತನಗೆ ಅನಿಸಿದ್ದನು ಸಾಧಿಸಿಯೇ

ತೀರುತ್ತೇನೆ ಎಂಬ ನಂಬಿಕೆ ಛಲ–ವಿಶ್ವಾಸಗಳು ಅವಳಲ್ಲಿ ಬೇರೂರಿವೆ. ಆಧುನಿಕ ಸ್ತ್ರೀವಾದಿಯೊಬ್ಬಳ ಪಾತ್ರ ಚಿತ್ರಣವಾದಂತಿದೆ.

ಒಮ್ಮೆ ಬೆದರಿಸಿ ಕಣ್ಣು ಬಿಟ್ಟರೆ
ಬಾಲ ಮುದುರಿಸಿ ಕೊಳ್ಳುವ ಹಣಬೇ
ಧನಗೂಳಿಗಳ ಹೆದರಿಕೆ ಇಲ್ಲವಯ್ಯ
ಹೆಣ್ಣ ಬುದ್ಧಿ ಮೊಳಕಾಲ ಕೆಳಗಲ್ಲ ಎನ್ನುವ
ಅಕ್ಕಳಂತೆ ಹಾಕು ಹೆಜ್ಜೆ
ಲಿಂಗಭಕ್ತ ಅಣ್ಣಂದಿರ ಭಯವಯ್ಯ
ಅಯ್ಯೋ ನನಗೊಂದು ಆಸೆ ಹಾಗೆ–ಹೀಗೆ
ಹೆಣ್ಣು ಬುಗುರಿ ಯಾಡಿಸುವ
ಇವುಗಳ ಕುಂಡಿಗೆ ಜಾಡಿಸಿ ಒದೆಯಬೇಕು
ಒಮ್ಮೆಯಾದರು[೧೬]

(ಚಿ.ಸರ್ವಮಂಗಳ–ಪುಟ–೧೮, ೧೯೯೩)

ಒದೆಸಿಕೊಳ್ಳುವ–ಬೈಸಿಕೊಳ್ಳುವ ಪ್ರವೃತ್ತಿಗೆ ಮಾತ್ರ ಸೀಮಿತವಾಗಿದ್ದ ಹೆಣ್ಣಿಗೆ ಹೀಗೆ ಅವಳ ಸರದಿ ಬಂದಂತಿದೆ. ಸ್ತ್ರೀವಾದಿ ಹೆಂಗಸೊಬ್ಬಳು ತನಗೆ ಬೇಕಾದ ಹಕ್ಕುಗಳನ್ನು ಕೇಳುವ ಜೊತೆಗೆ, ತನ್ನನ್ನು ಶತಮಾನಗಳಿಂದ ದಂಡಿಸಿದ ಪುರುಷ ಪ್ರಪಂಚವನ್ನು ತಾನು ದಂಡಿಸುವ ನಿರ್ಧಾರಕ್ಕೆ ಬರುವುದು. ಅವಳಲ್ಲಿನ ರೋಷ ಆಕ್ರೋಶಕ್ಕೆ ಕಾರಣವಾಗಿದೆ.

ಅಂದು ಇತ್ತು। ಹಲವರ ತುತ್ತನ್ನುಂಡು
ತೃಪ್ತಿಗೊಳ್ಳುವ ಮನಸು। ಇಂದು ಬೆಳೆದು
ನನಗೆ ನಾವೇ ನಿರ್ಮಿಸಬೇಕು। ನನ್ನ ಲೋಕದ ಕನಸು[೧೭]

(ಶೈಲಜಾ ಉಡುಚಣ–ಪುಟ–೨೮, ೧೯೯೫)

ವಾಸ್ತವದ ತಿಳಿವಳಿಕೆಯೊಂದಿಗೆ ಮಹಿಳಯರಲ್ಲಿ ಸ್ವಂತಿಕೆಯ ಅರಿವು ಮೊಳೆಯಿತು ಅಸ್ಮಿತೆಯ ಹುಡುಕಾಟ ಸುರುವಾಯಿತು. ಸ್ವಪ್ರಜ್ಞೆ ಹೊಂದಿರುವ ಇವರ ಕವನಗಳಲ್ಲಿ ಸ್ತ್ರೀ ವ್ಯಕ್ತಿತ್ವಕ್ಕೆ ಪ್ರಾಶಸ್ತ್ಯವಿದೆ. ಆಧುನಿಕ ಮಹಿಳಾ ಕಾವ್ಯ ಈ ಎಪ್ಪತ್ತು ವರ್ಷಗಳ ಇತಿಹಾಸದಲ್ಲಿ ಇಂಥಾ ಅನೇಕ ಕವನಗಳಲ್ಲಿ ಬಂದಿವೆ. ಮೊದಲ ಸಂಕಲನವೆಂದು ಭಾವಿಸಬಹುದಾದ 'ಬಂದುಗಳಿಗೆ' ಸಂಕಲನದಿಂದಲೇ ಇಂಥ ಸ್ವಂತಿಕೆಯ ಅನ್ವೇಷಣೆಯನ್ನು ಗುರುತಿಸಬಹುದು.

ಪೂರ್ವಪಶ್ಚಿಮ ದಕ್ಷಿಣ ಉತ್ತರ ತಿರುಗಾಡುವ
ಭೂಮಿ, ಆಕಾಶ, ಚಂದ್ರನವರೆಗೂ ಬರುವ
ಸಮುದ್ರ ಪರ್ಯಟನದಲ್ಲಿ ನಿನ್ನ ಜೊತೆಗಿರುವ
ಇನ್ನೇನು ಬೇಕು ನನ್ನಿಂದ ನಿನಗೆ.[೧೮]

(ಚೆನ್ನಕ್ಕಾ ಪಾವಟೆ–ಪುಟ–೮೦, ೧೯೯೩)

ಆತ್ಮ ವಿಶ್ವಾಸ ಹೆಣ್ಣುಮಕ್ಕಳ ಮನಸ್ಸಿನಲ್ಲಿ ಮೂಡುತ್ತದೆ. ಸಮಾನತೆ ನಮ್ಮ ಜನಾಂಗದ ಬಾವಿ ಬೆಳಕಾಗುತ್ತದೆ. ಮುಂಬರುವ ಹೆಣ್ಣು ಕುಲಕ್ಕೆ ತಾ ಕೀಳಲ್ಲ ಎಂಬ ಭಾವನೆ ಮೊದಲು ಗಟ್ಟಿಗೊಳ್ಳುತ್ತದೆ. ಈ ಪರಂಪರಾಗತ ಕೀಳಿರಿಮೆ ಸರಿಸಿದ್ದಾರೆ.

ನಾನು ಗಂಡನೇ, ದೇವರೆಂದು
ವನವಾಸ ಮಾಡಿ
ಅಗ್ನಿಗೆ ದುಮುಕುವ
ಸೀತೆಯಲ್ಲ
ಗಂಡನ ಪ್ರಾಣಕ್ಕಾಗಿ
ಯಮನ ಹಿಂದೆ
ನಾಯಿಯಂತಲೆದ
ಸಾವಿತ್ರಿಯೂ ಅಲ್ಲ[೧೯]

(ಬಿ.ಪಿ. ಅಶಾಕುಮಾರಿ–ಪುಟ–೮೦, ೨೦೦೩)

ಸ್ತ್ರೀವಾದವು ಮಹಿಳಾ ಸಾಹಿತ್ಯದ ಮೇಲೆ ಅಪಾರವಾದ ಪ್ರಭಾವ ಬೀರಿದೆ. ಅನೇಕ ಚಾರಿತ್ರಿಕ ಸ್ತ್ರೀ ಪಾತ್ರಗಳ ಪುನರ್ ಮೌಲೀಕರಣ ನೆಡೆದಿದೆ. ಕುಂತಿ, ಗಾಂದಾರಿ, ದ್ರೌಪತಿ, ಸೀತೆ, ಅಕ್ಕಮಹಾದೇವಿ, ಆಹಲ್ಯಾ ಮುಂತಾದ ಪಾತ್ರಗಳು ಈ ಹಿಂದೆ ಪತಿವ್ರತಾ ಶಿರೋಮಣಿಗಳೆಂದು ಧಾರ್ಮಿಕ ಪರಿಭಾಷೆರುಲ್ಲಿ ವ್ಯಾಖ್ಯಾನಗೊಳ್ಳುತ್ತಿದ್ದರೆ ಈಗ ಅವು ಶೋಷಣೆಗೊಳಗಾದ ಪಾತ್ರಗಳಾಗಿ ಸಂಕೇತಗಳಾಗಿ ಮೂಡಿಬರುತ್ತದೆ.

ನಮ್ಮ ಸಾಮರ್ಥ್ಯದ ಅರಿವಿಲ್ಲದವರು ನಾವು
ಬಂದಿಲ್ಲವೇಕೆ ಸಬಲತೆ ನಮ್ಮದೆಂಬ ಅರಿವು
ಬಾರದಿರಲಿ ಮೀನನ್ನು ಮೀನು ನುಂಗುವ ಒಲವು.
ನಮ್ಮ ನಮ್ಮಲ್ಲೆ ಬೆಳೆಯಲಿ ಪರಸ್ಪರ ಒಲವು
ತೊಡೆಯುವೆವು ಇಂದಾದರೂ ಅಭಲತೆಯ ಅಜಾರೂಕತೆಯ
ಸಫಲತೆಯ ಕವಚ ತೊಡುವ ಕಾರಣ
ಎಚ್ಚತ್ತೆಬೇಕು ನಮ್ಮ ಸ್ಥಿತಿ ಆಗುವ ಮೊದಲ ಧಾರಣ
ನಮ್ಮ ಹೆಬ್ಬಾಳುಗಳಿಗೆ ಬೀಳಲಿ ಹೊಸ ಅರಿವಿನ ಕಿರಣ.[೨೦]

(ಎಂ.ಎಸ್.ವೇದ– ಪುಟ–೧೦ ೧೯೮೫)

ಹೆಣ್ಣು ತಾನು ಅಬಲೆ ಸ್ವಾತಂತ್ರ್ಯವಾಗಿ ಜೀವನ ನಡೆಸಲು ಸಾದ್ಯವಿಲ್ಲ. ಹೆಣ್ಣಿಗೆ ಗಂಡೆ ದಿಕ್ಕು ಅವನ ನೆರಳಿನಲ್ಲೇ ಬಾಳಬೇಕು. ಕಷ್ಟ ಸುಖಗಳಿಗೆ ಅವನೇ ದೈವ ಎಂಬ ನಂಬಿಕೆ ಸ್ತ್ರೀಯರಲ್ಲಿ ಬೇರೂರಿ ಬೆಳೆದಿದೆ. ಅವಳಲ್ಲಿ ತನ್ನ ಸಾಮರ್ಥ್ಯದ ಬಗ್ಗೆ ಅರಿವು ಇಲ್ಲವೇ ಇಲ್ಲ. ತನ್ನ ಬದುಕಿಗೆ ತಾನೆ ಹೋರಾಡಬೇಕು.

ನನ್ನ ಕನಸುಗಳಲ್ಲಿ ಸಂಪ್ರದಾಯ ಮಲಗಿದೆ
ಎಂದು ಕೊಂಡೆ
ಮುಗೊಳೆಡೆದಾಗ ಅಲ್ಲಿ ಕ್ರಾಂತಿಯ ಬೀಜಗಳಿದ್ದವು
ನೀನಷ್ಟೆ ಅಡ್ಡಗಟ್ಟಿದರೂ ನಾ ಆರಿಯದೆ ಸಾಧ್ಯವಿಲ್ಲ[೨೧]

(ಶೈಲಜಾ ಉಡುಚಣ-ಪುಟ-೨೯, ೧೯೭೯)

ಆಧುನಿಕ ಸ್ತ್ರೀ ಸಂವೇಧನೆ ಕೇವಲ ಸಿದ್ಧಾಂತಗಳ ಮೂಟೆಯಲ್ಲ. ಮಹಿಳೆಯ ಹಕ್ಕೊತ್ತಾಯಗಳನ್ನು ಸಾಮಾಜಿಕವಾಗಿ ಪರಿಶೀಲಿಸಿ ಸ್ತ್ರೀಯರನ್ನು ಸಾಮನ್ಯ ಮನುಷ್ಯಳಂತೆ ಗಂಡಿನ ಮಟ್ಟಕ್ಕೆ ತಂದು ನಿಲ್ಲಿಸುತ್ತದೆ. ಅವಳಲ್ಲಿ ಪ್ರಜ್ಞೆಯ ಜೊತೆಗೆ ಸಮಾಜವನ್ನು ಎದುರಿಸುವ ಮಟ್ಟಕ್ಕೆ ಎದೆಗಾರಿಕೆಯನ್ನು ಬೆಳೆಸುತ್ತದೆ. ಎಂತಹ ಅಡೆತಡೆಗಳಿದ್ದರೂ ಅವಳಿಗೆ ತನ್ನತನದ ಅರಿವಿನಿಂದ ಎಲ್ಲವನ್ನು ಎದುರಿಸುತ್ತಾಳೆ.

ಮಗಳೆ ನೀನು ಬಳಕುವ ಬಳ್ಳಿಯಲ್ಲ
ರಂಬೆ ಊರ್ವಶಿ ಮೇನಕೆಯಲ್ಲ
ಥಳಕು ಬೆಳಕಿನ ಬೊಂಬೆಯಲ್ಲ
ಬೆಡಗಿನ ಬಿನ್ನಾಣಗಿತ್ತಿಯಲ್ಲ
ಅತ್ತಿದ್ದು ಸಾಕು ಉಳಿಸಿಕೋ ನಿನ್ನತನ
ಸೀತೆಯಾದ್ದು ಸಾಕು ನೀನಾಗು ಕಾಳಿ
ಅಷ್ಟಭುಜದಲೆ ನೀನು ಖಡ್ಗದಾರಣಿ ನೀನು
ನಿನ್ನ ಪಟಿರ್ವ ಪೊರೆವ ಗಾಯಿತ್ರಿ ನೀನು
ಯಮನನ್ನ ಗೆದ್ದ ಸಾವಿತ್ರಿ ನೀನು[೨೨]

(ಚಿ.ನಾ. ಮಂಗಳಾ-ಪುಟ-೨೮, ೧೯೯೮)

ಪುರಾಣಗಳ ಮೂಲಕ ಅನಾದಿಕಾಲದಿಂದಲೂ ಹೆಣ್ಣನ್ನು ವೈಭವೀಕರಿಸುತ್ತಲೇ ಅವಳನ್ನು ಉತ್ತುಂಗಕ್ಕೇರಿಸುತ್ತಾಳೆ. ರಂಬೆ, ಊರ್ವಶಿ, ಮೇನಕೆಯಂತೆ, ಥಳುಕು ಬಳುಕಿನ ಗೊಂಬೆಗೆ ಸೀತೆ-ಸಾವಿತ್ರಿ, ಕಾಳಿಯ ಉದಾಹರಣೆ ಕೊಟ್ಟು ಸಾಧ್ವಿ, ಪಾತಿವ್ರತ್ಯೆ, ಕಷ್ಟಸಹಿಷ್ಣು ಎಂಬಂತೆ ಉದಾರಿಸುತ್ತಾರೆ. ಹೋಲಿಕೆಗಳ ಮೂಲಕ ವೈಭವೀಕರಿಸುತ್ತಲೇ ಅವಳನ್ನು ಎತ್ತರಕ್ಕೇರಿಸುವ ಪರಿ ಅವಳನ್ನು ಪುರುಷ ಪ್ರಭುತ್ವಕ್ಕೆ ತಲೆಬಾಗುವಂತೆ ಮಾಡುತ್ತದೆ. ಈ ಕಾರಣಕ್ಕಾಗಿ ಮಹಿಳಾ ಸಂವೇದನೆಯು ಹೆಣ್ಣಿಗೆ ದೈರ್ಯವನ್ನು ಕೊಡುತ್ತದೆ.

ಬೆಂಕಿ ಬಿಸಿಲಿನ ಮೈ ಸುಟ್ಟುಕೊಂಡರೂ
ನಾವು ಬೆಳಕನ್ನು ಬಯಸುತ್ತೇವೆ.[೨೩]

(ಉಜ್ವಲಾ ಪ್ರಣಯಗೌಡ-ನಾವು ಬದುಕು ಬಯಸುತ್ತೇವೆ, ಪುಟ-೧೬, ೨೦೦೧)

ಸ್ತ್ರೀವಾದ, ಸ್ತ್ರೀಸಂವೇದನೆಗಳು ಮಹಿಳಾ ಅಧ್ಯಯನಗಳು ಅಂತಿಮವಾಗಿ ಮಹಿಳೆಯರಲ್ಲಿ ಆತ್ಮ ವಿಶ್ವಾಸವಿಡುತ್ತದೆ. ಜೊತೆಗೆ ಆರಂಭದ ಹೋರಾಟದ ಅಡೆತಡೆಯು ಬಂದರೆ ಅದನ್ನು ಎದುರಿಸುವ ಛಲವನ್ನು ಆಂತರಿಕವಾಗಿ ಬಲಪಡಿಸುತ್ತದೆ.

ಈ ಹಿಂದೆ ಯಾರೋ ಯಾರದೋ ಅನುಕರಣ
ಮಾಡೋದು ನೋಡಿ
ನಂಗು ಹಂಗೇ ಮಾಡ್ಬೇಕಂತ ಮನಸಾಯ್ತು
ಯಾರದು ಮಾಡ್ಲಿ? ನಿರ್ಧರಿಸಿದೆ.
ತೇತ್ರಾಯುಗದ ರಾಮನಂಗೆ... ಬುದ್ದನಂಗೆ
ರಾಮನ ಸತ್ಯಸಂಧತೆ ಬುದ್ದನ ಸರಳತೆ ಎಲ್ಲಾ
ನನ್ನ ವ್ಯಕ್ತಿತ್ವ ನಾನೇ ಆಗ್ಬೇಕು.[೨೪]

(ಜ. ಸರ್ವಮಂಗಳ ಪುಟ-೧೧, ೧೯೮೮)

ಸ್ವಂತಿಕೆ(*Self Defend*) ಸ್ವಾತಂತ್ರ್ಯ, ಅಧುನಿಕ ಸ್ತ್ರೀ ಸಂವೇದನೆಯ ಅರಿವುಳ್ಳ ಸ್ತ್ರೀಯ ಮುಖ್ಯ ಲಕ್ಷಣ ಅನುಕರಣ ಅವಳಿಂದಾಗದು ಅವಳಿಗೆ ಶತಮಾನಗಳ ಹೆಣ್ತನದ ಹಣೆಪಟ್ಟಿಗಳನ್ನು ಹಚ್ಚಿ ಶೋಷಿಸುವುದನ್ನು ವಿರೋಧಿಸುತ್ತಾಳೆ. ಸ್ವಂತಿಕೆಯನ್ನು ಮರೆಯುವುದಿಲ್ಲ ಅವಳ ಅಂತಸತ್ವದ ಧೈರ್ಯಗಾರಿಕೆಯನ್ನು ತೋರುತ್ತಾಳೆ. ಸ್ತ್ರೀ ಸಂವೇದನೇ ಅವಳ ಅರಿವಿನ ಜೊತೆಗೆ ಎದೆಗಾರಿಕೆಯನ್ನು ತುಂಬುತ್ತದೆ. ಸಮಸ್ಯೆಗಳನ್ನು ಗುರುತಿಸುವ ಮತ್ತು ಪರಿಹರಿಸುವ ಮಟ್ಟಕ್ಕೆ ಅಂತರಿಕವಾಗಿ ಸ್ವಲ್ಪ ಪ್ರಬುದ್ಧವಾಗುತ್ತದೆ.

ಆದರ್ಶ ಪುರುಷನ ಅರ್ಥಸ್ಪಷ್ಟತೆಯಲ್ಲಿ(ಹುಡುಕಾಟದಲ್ಲಿ) ಮಹಿಳಾ ಸಿದ್ಧಾಂತಗಳು ವಹಿಸಿದ ಪಾತ್ರ:

ಹೊಸಗನ್ನಡ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟಕ್ಕೆ ಹೊರಟಂತೆಲ್ಲಾ ಹೊಸಗ್ನಡ ಮಹಿಳಾ ಕಾವ್ಯದ ಹಲವು ಮಜಲುಗಳನ್ನು ಕಾಣಸಿಗುತ್ತವೆ. ಕವಿಯತ್ರಿಯ ಆದರ್ಶಪುರುಷನ ಹುಡುಕಾಟ ನಡೆಸುವ ನೆಲೆಯನ್ನು ಗಮನಿಸಿದಾಗ ಈ ಅಂಶ ಕಂಡು ಬರುತ್ತದೆ. ಆದರ್ಶ ಪುರುಷನ ಹುಡುಕಾಟದಲ್ಲಿ ಆದರ್ಶದ ಸ್ವರೂಪ ಸಂಪೂರ್ಣವಾಗಿ ಮಹಿಳಾ ಸಂವೇದನೆ ಮಹಿಳಾ ಅದ್ಯಯನ, ಮಹಿಳಾ ಸ್ತ್ರೀವಾದ, ಸಿದ್ದಾಂತ ಹೇಳಿಕೆಗಳನ್ನು ಅವಲಂಬಿಸಿರುತ್ತದೆ. ಆದರ್ಶದ ಚೌಕಟ್ಟನ್ನು ಈ ವೃತ್ತದಲ್ಲಿ ಹುಡುಕಬೇಕಾಗುತ್ತದೆ. ಈ ಕಾರಣ ದಿಂದ ಆದರ್ಶ ಪುರುಷನ ಹುಡುಕಾಟ ಮಹಿಳಾ ಸಂವೇದನೆಯಲ್ಲಿ ಹುಡುಕಬೇಕಾಗುತ್ತದೆ. ಮಹಿಳಾ ಸಂವೇದನೆಗಳ ಸ್ವರೂಪ ಅವರ ಹಕ್ಕುಗಳನ್ನು ಪರಿಶೀಲಿಸಿದಾಗ ವಿಶಿಷ್ಟತೆಯನ್ನು ಗುರುತಿಸಬಹುದು.

ಮಹಿಳಾ ಅಧ್ಯಯನ ಒಂದು ಅಂತರಾಷ್ಟ್ರೀಯ ವಿಷಯವಾಗಿದೆ. ಅರವತ್ತರ ದಶಕದಲ್ಲಿ ಅಮೇರಿಕಾದಲ್ಲಿ ಬಳಕೆಗೆ ಬಂದಿತು. ಮಹಿಳಾ ಅಧ್ಯಯನ ಹಿಂದಿರುವ ಚಾಲಕಶಕ್ತಿ ಸ್ತ್ರೀವಾದ. ಮಹಿಳೆಯ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಅವರ ಬೇಡಿಕೆ ಆಸಕ್ತಿಗಳನ್ನು ಎತ್ತಿ ಹಿಡಿಯುವ ಮಹಿಳಾಪರ ಹೋರಾಟವೇ ಸ್ತ್ರೀವಾದ. ಮಹಿಳಾ ಪರಾದೀನತೆ ಹಾಗೂ ತುಳಿತಕ್ಕೆ ಸೈದ್ಧಾಂತಿಕ ಹಿನ್ನಲೆಯಲ್ಲಿ ಕಾರಣ ಹುಡುಕುವಲ್ಲಿ ಸ್ತ್ರೀವಾದಿ ಸಿದ್ಧಾಂತ ಹುಟ್ಟಿಕೊಂಡವು. ಸ್ತ್ರೀವಾದಿ ಸಿದ್ಧಾಂತ ಮಹಿಳೆಯರ ಜೀವನವನ್ನು ರೂಪಿಸುವ ನಿರ್ದೇಶಿಸುವ ನಿಬಂಧನೆಗಳನ್ನು ವಿಶ್ಲೇಷಿಸಿ ಮಹಿಳೆಯೆಂದರೇನು? ಎಂಬುದರ ಗ್ರಹಿಕೆಯಿನ್ನು ಪರಿಶೋಧಿಸುತ್ತದೆ. ಇದು ಸ್ತ್ರೀ ಪುರುಷರ ನಡುವಿನ ಅಸಮಾನತೆಯನ್ನು ಸ್ವಾಭಾವಿಕವಾಗಿ ಪ್ರಶ್ನಿಸಬೇಕೆಂದು ಹೇಳುತ್ತದೆ.

ಭಾರತದ ಮಹಿಳಾ ಚಳುವಳಿಯನ್ನು ಐತಿಹಾಸಿಕವಾಗಿ ಅಧ್ಯಯನ ಮಾಡಿದರೆ ಉದಾರವಾದದಿಂದ ಹಿಡಿದು ಆಧುನಿಕೋತ್ತರ ಸ್ತ್ರೀವಾದದವರೆಗೆ ಸಿದ್ಧಾಂತಗಳು ಅದರ ಮೇಲೆ ಪ್ರಭಾವ ಬೀರುವುದನ್ನು ಕಾಣಬಹುದು. ಎಲ್ಲಾ ಸ್ತ್ರೀವಾದ ಅದರ ಘೋಷಣೆ, ಹಕ್ಕೊತ್ತಾಯಗಳನ್ನು ಅವುಗಳನ್ನು ಅನುಸರಿಸುವ ವಿಧಾನ, ಒತ್ತು ಕೊಡುವ ಅಂಶಗಳು ಹಾಗೂ ದೃಷ್ಟಿಕೋನಗಳು ಭಿನ್ನವಾಗಿರುವ ಉದಾರವಾದಿ ಸ್ತ್ರೀವಾದ, ತೀವ್ರಗಾಮಿ, ಮಾರ್ಕ್ಸ್‌ವಾದಿ ಸ್ತ್ರೀವಾದ, ಸಮಾಜವಾದಿ, ಸ್ತ್ರೀವಾದಿಗಳು ಹೀಗೆ ಹಲವು ಭಿನ್ನವಾದ ಸ್ತ್ರೀವಾದಗಳಿದ್ದರೂ ಎಲ್ಲಾ ಸ್ತ್ರೀವಾದಗಳು ಒಟ್ಟಾರೆ ಹಕ್ಕು ಮತ್ತು ಸಿದ್ಧಾಂತಗಳು ಒಂದೇ ಆಗಿರುತ್ತದೆ.

ಮಹಿಳಾ ಆರ್ಥಿಕ ಸಬಲತೆ, ಲೈಂಗಿಕ ಸ್ವಾತಂತ್ರ್ಯ, ಸ್ತ್ರೀ ಶಿಕ್ಷಣ, ಮಹಿಳಾ ಸಂಘಟನೆ ಲಿಂಗಾದಾರಿತ ಶ್ರಮವಿಭಜನೆ, ಮಹಿಳಾ ಸಶಕ್ತಿಕರಣ, ಮಹಿಳಾ ಆಸ್ತಿಯ ಪರಿಕಲ್ಪನೆ ಸ್ತ್ರೀ ಸಂವೇದನೆ ಮುಖ್ಯವಾಗುತ್ತಿವೆ.

ಮಹಿಳಾ ಸ್ವಾತಂತ್ರ್ಯ

ಸ್ವಾತಂತ್ರ್ಯ ಎಂಬುದು ಜಗತ್ತಿನ ಎಲ್ಲಾ ಜೀವಿಗಳು ಬಯಸುವ ಹಕ್ಕಾಗಿದೆ. ಇಂದು ಜಗತ್ತಿನ ತುಂಬಾ ಅರಿವಿನ ಸ್ಫೋಟ ಆಗಿದೆ. ಜಾಗತೀಕರಣದಿಂದ ಎಲ್ಲಾ ದೇಶಗಳ ಸಹಭಾಗಿತ್ವ, ಒಡನಾಟದಿಂದ ನಮ್ಮ ದೇಶದ ಮೂಲಭಾವನೆ, ಪರಿಕಲ್ಪನೆ, ಧ್ಯೇಯ, ಉದ್ದೇಶಗಳು, ಧಾರ್ಮಿಕತೆ ಸಂಪೂರ್ಣ ಬದಲಾವಣೆಯಾಗಿದ್ದರೂ, ಒಂದು ಹಂತದಲ್ಲಿ ರೂಪಾಂತರ ಹೊಂದಿವೆ. ಈ ರೂಪಾಂತರದೊಂದಿಗೆ ಭಾರತೀಯ ಮಹಿಳೆ ಜಾಗತಿಕ ವೇದಿಕೆಯ ಮೇಲೆ ನಿಂತು ಹಲವು ರೂಪಾಂತರದೊಂದಿಗೆ ಜಾಗತಿಕ ವೇದಿಕೆಯ ಮೇಲೆ

ನಿಂತು ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಸಂತೋಷದ ವಿಷಯವೆಂದರೆ ಆಕೆ ಇಂದು ಧೈರ್ಯವಾಗಿ ಈ ಸವಾಲುಗಳೊಂದಿಗೆ ಸ್ಪರ್ಧಿಸುತ್ತಿದ್ದಾಳೆ.

ಗತಕಾಲದ ಬಂಧನಗಳಿಂದ ಬಿಡುಗಡೆಯಾಗಿ, ಸ್ವಾತಂತ್ರ್ಯದ ಅರಿವು ಅದರ ಸ್ವರೂಪ ಅವಳಿಗೆ ಅರಿವಾಗಿದೆ. ಸ್ವಾತಂತ್ರ್ಯ ತನ್ನ ಹಕ್ಕೆಂದು ಭಾವಿಸಿದ್ದಾಳೆ. ಸ್ವಾತಂತ್ರ್ಯವೆಂಬುದು ಶೈಕ್ಷಣಿಕ ರಂಗವಾಗಬಹುದು. ಸಾಮಾಜಿಕ ರಂಗವಾಗಬಹುದು. ಧಾರ್ಮಿಕ, ಸಾಂಸ್ಕೃತಿಕ ರಂಗವಾಗಬಹುದು ಎಲ್ಲಾ ರಂಗದಲ್ಲೂ ಪುರುಷನಷ್ಟೇ ಸಮಾನವಾಗಿ ಸ್ವಾತಂತ್ರ್ಯವನ್ನು ಪಡೆಯಲು ಹಂಬಲಿಸುತ್ತಾಳೆ.

ಸ್ತ್ರೀ ಸ್ವಾತಂತ್ರ್ಯದ ಹಂಬಲ ಇತ್ತೀಚಿನದೇನಲ್ಲ. ಮನುಷ್ಯನ ಆರಂಭಿಕ ನಾಗರಿಕತೆಯ ಸಂದರ್ಭದಲ್ಲಿ ಮಾತೃಪ್ರಧಾನತೆಯೇ ಮೂಲವಾಗಿತ್ತು. ಇಲ್ಲಿ ಪ್ರಧಾನವಾಗಿ ಆಸ್ತಿ, ಅಧಿಕಾರದ ಹಕ್ಕು, ತಾಯಿಯಿಂದ ಮಗಳಿಗೆ ವರ್ಗಾವಣೆಯಾಗುತ್ತಿತ್ತು. ಆದರೆ ಬದಲಾದ ಜೀವನಕ್ರಮ ಪಿತೃಪ್ರಧಾನತೆಯ ಹೆಚ್ಚುಗಾರಿಕೆಯಿಂದ ಮಾತೃ ಪ್ರಧಾನ ಅಳಿಸಿಹೋಗಿತ್ತೆನ್ನಬಹುದು. ನಂತರದಲ್ಲಿ ೧೨ನೇ ಶತಮಾನದ ವಚನ ಚಳುವಳಿ ನಿಜಕ್ಕೂ ಸ್ತ್ರೀ ಸ್ವಾತಂತ್ರ್ಯಕ್ಕೆ ತಳಪಾಯ ಹಾಕಿತೆನ್ನಬಹುದು. ೨೧ನೇ ಶತನಮಾನದಲ್ಲಿ ಇರುವ ನಮಗೆ ಸ್ತ್ರೀ ಸ್ವಾತಂತ್ರ್ಯ, ಮಹಿಳಾ ಮೀಸಲಾತಿಯು ಹಗಲುಗನಸಾಗಿರಬೇಕಾದರೆ ಹನ್ನೆರಡನೇ ಶತಮಾನದಲ್ಲಿ ಶರಣರಷ್ಟೇ ಶರಣೆಗೆ ಉದಾರವಾದ ಸ್ವಾತಂತ್ರ್ಯ ಕೊಟ್ಟಿದ್ದು ಒಂದು ಕ್ರಾಂತಿಯೆನ್ನಬಹುದು.

ಮಹಿಳಾ ಸ್ವಾತಂತ್ರ್ಯ ಅನನ್ಯವಾದುದು. ಮಹಿಳಾವಾದದ ಮೂಲಮಂತ್ರವೇ ಮಹಿಳಾ ಸ್ವಾತಂತ್ರ್ಯ. ಗತಕಾಲದಿಂದ ಹಲವು ಅವಕಾಶಗಳಿಂದ ವಂಚಿತಳಾದ ಸ್ತ್ರೀಗೆ ಸಿಕ್ಕಿದ ಹಲವು ಸ್ವಾತಂತ್ರ್ಯಗಳಲ್ಲಿ ಆತ ವಿದ್ಯಾಭ್ಯಾಸ ಮಾಡಲು ಹೊರಗೆ ಕಳಿಹಿಸಿದ್ದು ದೊಡ್ಡ ವಿಷಯವೇ.

ನಮ್ಮ ಯುವ ಪೀಳಿಗೆಯ ಅನೇಕರಿಗೆ ಸ್ವಾತಂತ್ರ್ಯ ಎಂದರೆ 'ಸ್ವೇಚ್ಛಾಚಾರ'ವೆಂದು ಭ್ರಮಿಸುತ್ತಾರೆ. ಅದು ಅವರು ಅಡ್ಡ ದಾರಿ ಹಿಡಿದು ತೊಳಲಾಡುವಂತೆ ಮಾಡುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ಒಳ್ಳೆ ಕೆಲಸ ಮಾಡುವ ಸ್ವಾತಂತ್ರ್ಯ ಇದ್ದೆ ಇದೆ. ಸ್ವಾತಂತ್ರ್ಯ ಹಕ್ಕನ್ನು ಬಳಸಿಕೊಳ್ಳುವಲ್ಲಿ ಸ್ತ್ರೀ ಬುದ್ದಿವಂತಿಕೆ, ವಿವೇಚನೆ ಇರಬೇಕಾಗಿದೆ.

ಮಹಿಳೆಯರ ದುಡಿಮೆಯ ಹಕ್ಕು

ಮಹಿಳೆಯರ 'ದುಡಿಮೆ'ಯ ಸ್ವರೂಪ ವಿಭಿನ್ನವಾಗಿರುತ್ತದೆ. ಮಹಿಳೆಯ ದುಡಿಮೆಯನ್ನು ಆರ್ಥಿಕ ಅಂಶವಾಗಿ ಗುರುತಿಸಲು ಹಿಂದೇಟು ಹಾಕುತ್ತದೆ. ಗಂಡನಷ್ಟೇ ಸರಿಸಮಾನವಾಗಿ ದುಡಿಯುವ ಮಹಿಳೆಗೆ ಗಂಡನಷ್ಟೇ ಸಮಾನ ಸ್ಥಾನ ದೊರೆಯುವುದಿಲ್ಲ. ಸಮಾಜದ

ದೃಷ್ಟಿಯಲ್ಲಿ ಅವಳ ದುಡಿಮೆ ಕರ್ತವ್ಯದ ಚೌಕಟ್ಟಿನಲ್ಲಿರುತ್ತದೆ. ಹೊರಡಿಸಿರುವ ಅಂಕಿಂಶದ ಪ್ರಕಾರ ನಮ್ಮ ದೇಶದಲ್ಲಿ ಮೂರನೇ ಎರಡರಷ್ಟು ಕೆಲಸವನ್ನು ಮಹಿಳೆಯರು ಮಾಡುತ್ತಾರೆ. ಆದರೆ ನಿಗಧಿತವಾದ ಆರ್ಥಿಕ ಮೌಲ್ಯ ಸಿಗದ ಕಾರಣ ಅವಳ ಶ್ರಮವನ್ನು ದುಡಿಮೆಯನ್ನು ಚೌಕಟ್ಟಿನಲ್ಲಿ ತರಲು ಹಿಂದೇಟು ಹಾಕುತ್ತಾರೆ.

ಮಹಿಳೆಯ ದುಡಿಮೆ ಎರಡು ರೂಪದಲ್ಲಿರುತ್ತದೆ. ಒಂದು ಬೌದ್ಧಿಕವಾಗಿದ್ದರೆ ಎರಡನೆಯದು ಶ್ರಮದಾಯಿಕವಾಗಿರುತ್ತದೆ. ಕೆಲವೊಮ್ಮೆ ಸಮ್ಮಿಶ್ರವಾಗಿರುತ್ತದೆ.[೨೫] ಬೌದ್ಧಿಕವಾದ ದುಡಿಮೆಯಲ್ಲಿ ಮಹಿಳೆ ಅಕ್ಷರಸ್ಥಳಾಗಿ ಆ ಮೂಲಕ ಉದ್ಯೋಗವನ್ನು ಸಂಪಾದಿಸಿರುತ್ತಾಳೆ. ಆರ್ಥಿಕ ವಲಯದಲ್ಲಿ ಈ ದುಡಿಮೆ ಗುರುತಿಸಿಕೊಳ್ಳುತ್ತದೆ. ಅವಳ ದುಡಿಮೆ ಸಂಘಟಿತ ವಲಯದಲ್ಲಿರುವುದರಿಂದ ಅವಳ ದುಡಿಮೆಗೆ ಮೌಲ್ಯವಿರುತ್ತದೆ. ಆದರೆ ಶ್ರಮದಾಯಿಕವಾದ ದುಡಿಮೆಯಲ್ಲಿ ಮಹಿಳೆಯರು ಅನಕ್ಷರಸ್ಥರಾಗಿರುತ್ತಾರೆ. ಈ ಕಾರಣದಿಂದಲೇ ಬಂಡವಾಳಶಾಹಿಗಳಿಂದ ಶೋಷಣೆಗೆ ಒಳಗಾಗುತ್ತಾರೆ. ಇನ್ನೊಂದು ರೀತಿಯ ದುಡಿಮೆಯೆಂದರೆ ಸಮ್ಮಿಶ್ರದುಡಿಮೆ. ಈ ಹಂತದಲ್ಲಿ ಹೆಣ್ಣು ಅಕ್ಷರಸ್ಥಳಾಗಿ ಉದ್ಯೋಗ ಹೊಂದಿದವಳಾಗಿ ನಂತರದಲ್ಲಿ ಮನೆಯಲ್ಲಿ ಕೂಡ ಶ್ರಮದಾಯಕ ಕೆಲಸಗಳನ್ನು ಮಾಡಬೇಕಾಗುತ್ತದೆ.

ಭಾರತೀಯ ಮಹಿಳೆಯು ಪುರುಷರ ಕೆಲಸಕ್ಕಿಂತ ಹೆಚ್ಚು ಸಮಯ ಕೆಲಸ ಮಾಡುತ್ತಾರೆ. ಅವರ ದೈಹಿಕ ಶ್ರಮದ ದುಡಿಮೆ ಆರ್ಥಿಕತೆಯ ಲೆಕ್ಕಾಚಾರಕ್ಕೆ ಸಿಗುವುದಿಲ್ಲ.

ದುಡಿಮೆಯ ಹಂತದಲ್ಲಿ ಸ್ತ್ರೀ ಪುರುಷನಷ್ಟೇ ದೈಹಿಕ ಶ್ರಮವನ್ನು ಖರ್ಚು ಮಾಡಿದರೂ ಅವಳಿಗೆ ಕೊಡುವ ದುಡ್ಡಿನಲ್ಲಿ ವೈರುದ್ಯಗಳಿರುತ್ತವೆ. ಉದಾ : ಗಂಡನಿಗೆ ಗಾರೆ ಕೆಲಸದಲ್ಲಿ ನೂರು ರೂ. ಕೂಲಿ ಆದರೆ ಹೆಂಗಸಿಗೆ ೭೦ ರೂ. ಕೂಲಿ ಕೊಡುತ್ತಾರೆ. ಒಟ್ಟಾರೆ ಗಳಿಸುವ ಸಂಬಳ ದೈಹಿಕ ಅಂಶಗಳ ಮೇಲೆ ನಿರ್ಧರಿತವಾಗುತ್ತದೆ. ಒಂದು ಹಂತದಲ್ಲಿ ಈ ವಿರೋಧಭಾಸ ಬೌದ್ಧಿಕ ದುಡಿಮೆಯಲ್ಲಿ ಕಡಿಮೆ ಎನ್ನಬಹುದು. ಇಲ್ಲಿ ಗಂಡು-ಹೆಣ್ಣು ಎನ್ನುವುದಕ್ಕಿಂತ ಗಳಿಕೆಯ ಪ್ರಮಾಣ ಅವರವರ ಬುದ್ಧಿವಂತಿಕೆಯನ್ನು ಅವಲಂಬಿಸಿರುತ್ತದೆ. ಶ್ರಮದಾಯಿಕ ಕೆಲಸದಲ್ಲಿ ಅಸಂಘಟಿತ ವಲಯಗಳಿರುತ್ತವೆ. ಇಲ್ಲಿನ ಹೆಣ್ಣು ಮಕ್ಕಳು ಅನಕ್ಷರಸ್ಥರಾಗಿರುತ್ತಾರೆ. ಅವರಿಗೆ ಶೋಷಣೆಯ ವಿರುದ್ಧ ಮಾತನಾಡುವ ಸ್ಥೈರ್ಯ ಕಮ್ಮಿ ಇರುತ್ತದೆ. ಬಂಡವಾಳಶಾಹಿಗಳ ಬಿಗಿಹಿಡಿತದಲ್ಲಿ ಸಿಲುಕಿರುತ್ತಾರೆ. ಭಾರತದಲ್ಲಿ ಮಹಿಳೆಯರ ಕೆಲಸದ ಸಮಯವು ಪುರುಷರ ಕೆಲಸದ ಸಮಯಕ್ಕಿಂತ ದೀರ್ಘವಾಗಿರುತ್ತದೆ. ಗೃಹಕೆಲಸ ಮಕ್ಕಳ ಲಾಲನೆ-ಪಾಲನೆ, ಶ್ರಮದಾಯಿಕವಾದರೂ ಅದಕ್ಕೆ ಹಣದ ಮೌಲ್ಯ ಕಟ್ಟುವುದಿಲ್ಲ. ಯಾರೊಬ್ಬ ಗೃಹಿಣಿಗೂ ತನ್ನನ್ನು 'ಗೃಹಿಣಿ' (House wife) ಎಂದು ಗುರುತಿಸಕೊಳ್ಳಲು

ಹಿಂಜರಿಕೆ. ಒಬ್ಬ ಗೃಹಿಣಿ ಮಾಡುವ ಕೆಲಸವನ್ನು ಮನೆ ಕೆಲಸದಾಕೆ ಮಾಡಿದರೆ ಅವಳಿಗೆ ಸಂಬಳ ನೀಡಲಾಗುತ್ತದೆ. ಅದು ಕೆಲಸದವಳ ಆದಾಯವಾಗಿದ್ದರೆ ರಾಷ್ಟ್ರೀಯ ಆದಾಯದಲ್ಲಿ ಸೇರಿಸಲಾಗುತ್ತದೆ.

ಕೆಲವೊಂದು ಸಂದರ್ಭದಲ್ಲಿ ಮನೆಯಲ್ಲಿಯೇ ಮಹಿಳೆಯರು ಉತ್ಪಾದನಾ ಚಟುವಟಿಕೆಯಲ್ಲಿ ತೊಡಗುತ್ತಾರೆ. ಇಲ್ಲಿ ಮಹಿಳೆಯರಿಗೆ ಬಿಡುವಿನ ವೇಳೆಯಲ್ಲಿ ಸಾಕಷ್ಟು ದುಡಿಯುವ ಅವಕಾಶವಿರುತ್ತದೆ. ಆದರೆ ಉತ್ಪಾದಿಸಿದ ವಸ್ತುಗಳ ಮಾರಾಟದ ಕೆಲಸವನ್ನು ಗಂಡಸರೇ ಮಾಡುವುದರಿಂದ ಆದಾಯವು ಅವರ ಕೈಗೆ ಹೋಗಿ ಹೆಂಗಸರಿಗೆ ಇಡೀ ಚಟುವಟಿಕೆಯ ಮೇಲೆ ಯಾವುದೇ ನಿಯಂತ್ರಣವಿರುವುದಿಲ್ಲ.

ಮಹಿಳೆಯರ ದುಡಿಮೆಯ ಸ್ವರೂಪ ಸಾಕಷ್ಟು ಬದಲಾಗಬೇಕಾಗಿದೆ. ಲಿಂಗಾದಾರಿತವಾಗಿ ದುಡಿಮೆಯ ಮೌಲ್ಯ ಏರು-ಪೇರಾಗುವುದನ್ನು ಖಂಡಿಸಬೇಕಾಗಿದೆ. ಹೊರಗಡೆ ಉದ್ಯೋಗಕ್ಕಾಗಿ ಬರುವ ಮಹಿಳೆಗೆ ಭದ್ರತೆಯ ಅವಶ್ಯಕತೆಯಿದೆ. ಮಹಿಳೆಯರಿಗಾಗಿಯೇ ಪ್ರತ್ಯೇಕ ಬಸ್‌ಗಳು, ಉತ್ತಮ ಶೌಚಾಲಯ, ಮಹಿಳಾ ಮೀಸಲಾತಿ ಹೆರಿಗೆ ರಜಾ ಹೆಚ್ಚಳ... ಹೀಗೆ ಹಲವಾರು ರೂಪದಲ್ಲಿ ಅವಳ ದುಡಿಮೆಗೆ ಪ್ರೋತ್ಸಾಹ ಕೊಡಬಕಾಗಿದೆ.

ವ್ಯಕ್ತಿತ್ವದ ಪ್ರಜ್ಞೆ(Feminist concern)

ವ್ಯಕ್ತಿತ್ವ, ತನ್ನತನದ ಅರಿವು ಮಹಿಳಾ ಸಂವೇದನೆಯ ಪ್ರತಿಪಾದಿಸುವ ಮುಖ್ಯ ಹಕ್ಕು. ಶತಮಾನಗಳಿಂದ ಶೋಷಿತ ನೆಲೆಯಲ್ಲೇ ಗುರುತಿಸಿಕೊಂಡ ಮಹಿಳೆಗೆ, ತನ್ನ ಮೇಲಿನ ಶೋಷಣೆಯನ್ನು ತನ್ನ ಜನ್ಮಗಂಟಿ ಬಂದಿದೆಂದು ಭಾವಿಸಿ ಮೂಕಳಂತೆ ಅನುಭವಿಸುವುದನ್ನು ನೋಡಿದರೆ, ಅವಳದೇ ಆದ ವ್ಯಕ್ತಿತ್ವ, ತನ್ನತನವೆಂಬ ಅರಿವು ಇಲ್ಲದಿರುವುದನ್ನು ನೋಡಬಹುದು. ಪಿತೃಪ್ರಧಾನ ಮೌಲ್ಯಗಳಿಗೆ ತನ್ನನ್ನು ತಾನು ಒಗ್ಗಿಸಿಕೊಂಡ ಹೆಣ್ಣಿಗೆ ತನ್ನದೊಂದು ಅಸ್ತಿತ್ವವಿದೆಯೆಂದು ಭಾವಿಸಿರಲಿಲ್ಲ. ಹೆಣ್ಣಾಗಿ ಹುಟ್ಟಿರುವುದು ಲಿಂಗಾಧಾರಿತ ಸ್ತ್ರೀ-ಪುರುಷ ವಿಭಜನೆಯಲ್ಲೇ ಹಕ್ಕು-ಸ್ವಾತಂತ್ರ್ಯಗಳು ಹಂಚಲ್ಪಟ್ಟಿತ್ತಿದ್ದವು.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಕೇಂದ್ರವಾಗಿ ನಿಂತ ಗಂಡು ತನ್ನನ್ನು ಪರಿಪೂರ್ಣ 'ನಾನು' ಎಂದು ನಿರ್ವಚಿಸಿಕೊಂಡು ಹೆಣ್ಣನ್ನು 'ಅನ್ಯವಾಗಿ' ಪರಿಭಾವಿಸಿದೆ. ಹೀಗೆ ಅನ್ಯವಾಗಿ ಅನುಬಂಧವಾಗಿ ಸೇರಲ್ಪಟ್ಟ ಹೆಣ್ಣಿನ ಭಿನ್ನತೆಯನ್ನು ಬೇಧವನ್ನು ಗ್ರಹಿಸಲಾಯಿತು. ಗಂಡು-ಹುಟ್ಟಿನೊಂದಿಗೆ ಅಸ್ತಿತ್ವ ಪಡೆದುಕೊಂಡು ಜೈವಿಕ ಹಾಗೂ ಸಾಮಾಜಿಕ ಸ್ಥಿತ್ಯಂತರಗಳಿಗೆ ಎದುರಾಗುವ ಹೆಣ್ಣಿಗೆ ಅಸ್ಥಿತ್ವದ ಹುಡುಕಾಟವೇ ದೊಡ್ಡ ಹೋರಾಟ.[೨]

ಹೀಗೆ ಅಸ್ತಿತ್ವದ ಹುಡುವಿಕೆಯಲ್ಲಿ ಸಾವಿರಾರು ವರುಷವನ್ನು ಕಳೆದಿರುವ ಮಹಿಳೆಗೆ ಇಂದು ತನ್ನತನ ವ್ಯಕ್ತಿತ್ವದ ರೂಪ ನಿಷ್ಠತೆಯ ಅರಿವು ಬೇಕಾಗುತ್ತದೆ. ಕೇವಲ ನಿರ್ಧಾರ ಕೈಗೊಳ್ಳುವ ಹಕ್ಕನ್ನು ಪಡೆಯುವುದರಲ್ಲೇ ವ್ಯಕ್ತಿತ್ವ ಪಡೆಯುವಲ್ಲೇ ತಮ್ಮನ್ನು ಸಮರ್ಥರೆಂದು ಭಾವಿಸಿಕೊಳ್ಳಬಾರದು. ಮಹಿಳೆಯರು ಈ ಭಾವನೆಯನ್ನು ಬೆಳೆಸಿಕೊಳ್ಳುವುದು, ಸಂಪನ್ಮೂಲದ ಮೇಲೆ ನಿಯಂತ್ರಣ ಹೊಂದುವುದು ಆತ್ಮವಿಶ್ವಾಸದ ಅರಿವು ಆತ್ಮಗೌರವ ಬೆಳೆಸಿಕೊಂಡು ಸ್ವಂತ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಪಡೆಯುವುದೇ ವ್ಯಕ್ತಿತ್ವದ ಪ್ರಜ್ಞೆಯಾಗಿದೆ. ಹೀಗಿರುವ ಅಧಿಕಾರ ಸಂಬಂಧಗಳನ್ನು ಹೋಗಳಾಡಿಸಿ ಅಧಿಕಾರ ಮತ್ತು ಸಂಪನ್ಮೂಲಗಳ ಮೇಲೆ ಹಿಡಿತ ಹೊಂದುವ ಪ್ರಕ್ರಿಯೇ ಸಶಕ್ತೀಕರೂ ಎಂದು ಶೀಲತಾ ಬಾಲ್ಪಿವಾಲಾ ಅಭಿಪ್ರಾಯ ಪಟ್ಟಿದ್ದಾರೆ.[೨]

ಹಿಂದಿನ ಪಿತೃಪ್ರಧಾನ ಮೌಲ್ಯಗಳನ್ನು ನಿರಾಕರಿಸುವಲ್ಲಿ ತನ್ನತನದ ಪ್ರಜ್ಞೆಯನ್ನು ಒತ್ತಿ ಒತ್ತಿ ಹೇಳುವಲ್ಲಿ ಮಹಿಳೆಗೆ ಆಂತರಿಕವಾಗಿ ಅರಿವಿನ ಪ್ರಜ್ಞೆ ಇರಬೇಕಾಗುತ್ತದೆ. ಈ ಪ್ರಜ್ಞೆಯ ಜೊತೆ ತನ್ನ ಸ್ವಾತಂತ್ರ್ಯವನ್ನು ಒತ್ತಿ ಸಮಾಜಕ್ಕೆ ಹೇಳುವಲ್ಲಿ ಅರಿವಿನ ಪ್ರಜ್ಞೆ ಅವಶ್ಯವಿರುತ್ತದೆ. ಇದನ್ನು ಒಬ್ಬ ಅಸಂಘಟಿತವಲಯದಲ್ಲಿ ದುಡಿಯುವ ಅನಕ್ಷರಸ್ಥ ಮಹಿಳೆಗೆ ಈ ನಿಟ್ಟಿನಲ್ಲಿ ಹೇಳುವುದರಲ್ಲಿ ಹಿಂಜರಿಕೆಗಳುಂಟಾದರೆ ಒಬ್ಬ ಮಹಿಳೆ ತನ್ನತನದ ಪ್ರಜ್ಞೆಯನ್ನು ಕಂಡುಕೊಂಡು ಮತ್ತು ಆಪ್ರಜ್ಞೆಯಲ್ಲಿ ತನ್ನ ಜೀವನ ರೂಪಿಸಿಕೊಂಡು ಹೋಗಲು ಹಿಂಜರಿಯುವುದಿಲ್ಲ.

ಸ್ತ್ರೀವಾದಿ ನೆಲೆಯಲ್ಲಿ ಹೇಳಬೇಕೆಂದರೆ ತನ್ನತನದ ಅರಿವು ಪ್ರಜ್ಞೆಯ ಇನ್ನೆಲ್ಲಾ ಮಹಿಳಾ ಸೈದ್ಧಾಂತಿಕ ನೆಲೆಗಳಿಗೆ ಹುಟ್ಟಿಗೆ ಮೂಲ. ಅರಿವಿಲ್ಲದೆ ಯಾವ ಕ್ರಾಂತಿಯೂ ಸಾಧ್ಯವಿಲ್ಲ. ಈ ಅರಿವಿನ ಮೂಲಕ ಸಾಧಿಸಬೇಕಾದ್ದು ಇಷ್ಟೇ. ತನ್ನತನದ ಅರಿವಿನ ಮೂಲಕ ತನ್ನನ್ನು ತಾನು ಪರಿಭಾವಿಸಿಕೊಂಡು ಆತ್ಮವಿಶ್ವಾಸಗಳಿಸುವುದು, ಉತ್ಪಾದಕ ಸಾಮರ್ಥ್ಯ ಬೆಳೆಸಿಕೊಳ್ಳುವುದು. ಅರಿವು ಮೂಡಿಸಿಕೊಳ್ಳುವುದು ಸಮಾಜದಲ್ಲಿ ಈಗಿರುವ ಅಧಿಕಾರ ಸಂಬಂಧಗಳನ್ನು ಪ್ರಶ್ನಿಸುವುದು ಬದಲಾಯಿಸುವುದು.

೪. ಮಹಿಳಾ ಸಂಘಟನೆ

ಆಧುನಿಕ ಮಹಿಳಾ ಚಳುವಳಿ, ಸಂಘಟನೆಗಳು ಮಹಿಳೆಯ ಹಕ್ಕೊತ್ತಾಯಗಳನ್ನು ಧೋರಣೆಗಳನ್ನು ವಾಸ್ತವಿಕವಾಗಿ ಜಾರಿಗೆ ತರುವ ನಿಟ್ಟಿನಲ್ಲಿ ತಮ್ಮದೇ ಆದ ಕಾರ್ಯ ನಿರ್ವಹಿಸುತ್ತದೆ. ಸ್ತ್ರೀವಾದ ಒಂದು ಪ್ರಜ್ಞೆ, ಮಹಿಳಾ ಸಂಘಟನೆ ಒಂದು ರೀತಿಯಲ್ಲಿ ಈ ಪ್ರಜ್ಞೆಯನ್ನು ವಿಸ್ತರಿಸುವ, ಕಾರ್ಯರೂಪಕ್ಕೆ ತರುವಲ್ಲಿ ಸಫಳವಾಗುತ್ತದೆ. ಸ್ತ್ರೀವಾದ ಕೇವಲ ಅರಿವಿನ ಪ್ರಜ್ಞೆಯಲ್ಲಿ ಭಾಷಣ, ಪುಸ್ತಕಗಳ ಮಾದರಿಯಲ್ಲೇ ಉಳಿಯುವುದೇ ನಿರರ್ಥಕ.

ಈ ನಿಟ್ಟಿನಲ್ಲಿ ಯೋಚನೆ ಮಾಡಿದರೆ ಎರಡು ಶತಮಾನದ ವಚನ ಚಳುವಳಿ ಅಂದಿನ ಸ್ತ್ರೀಯ ಒಟ್ಟಾರೆ ಸಾಮಾಜಿಕವಾದ ಪರಿಕಲ್ಪನೆಯನ್ನು ಅಲುಗಾಡಿಸಿತ್ತು. ಅವರ ವಚನಗಳ ಮೂಲಕ ಸ್ತ್ರೀಯ ಬಗ್ಗೆ ಧನಾತ್ಮಕ ವಚನಗಳು ಬಂದವು. ಬಸವಣ್ಣನ ಅನುಭವ ಮಂಟಪದಲ್ಲಿ ಶರಣ ಗಂಡಸು, ಶರಣೆಯಾಗಿ ಹೆಂಗಸು ಗುರುತಿಸಿಕೊಂಡಳು. ಮನೆಯಲ್ಲಿ ವಾತಾವರಣದಲ್ಲಿ ತಲೆತಗ್ಗಿಸಿ ಪುರುಷ ಪ್ರಧಾನತೆಯನ್ನು ಒಗ್ಗಿಸಿಕೊಂಡ ಮೇಲ್ವರ್ಗದ ಸ್ತ್ರೀಯನ್ನು ಎಲ್ಲಾ ಹಂತದಲ್ಲೂ ಕೆಳಹಂತದಲ್ಲಿ ಕಾಣಲ್ಪಡುವ ಕೆಳವರ್ಗದ ಸ್ತ್ರೀಯೂ ಒಟ್ಟಾರೆ ಒಂದೇ ಸೂರಿನಡೀ ಸೇರಿಸಿ ಸರ್ವಸಮಾನವಾದ ಸ್ಥಾನ ನೀಡಿದ್ದು ಬಸವಣ್ಣನ ಹೆಗ್ಗಳಿಕೆ. ಇಲ್ಲಿ ಸ್ತ್ರೀವಾದದ ಅರಿವು ಪ್ರಜ್ಞೆ ಜೊತೆಗೆ ಈ ನಿಟ್ಟಿನಲ್ಲಿ ಕ್ರಿಯೆಯು ಸಂಘಟನೆಯು ಒಟ್ಟಿಗೆ ಮುಂದುವರಿದಿದೆ.

ಪ್ರೀತಿ ಶುಭ ಚಂದ್ರರವರು ಮಹಿಳಾ ಚಳುವಳಿ ಸಂಘಟನೆ ಕುರಿತಂತೆ ಹೀಗೆ ಹೇಳುತ್ತಾರೆ. '೭೦ ದಶಕದಲ್ಲಿ ಪೂರ್ವರ್ಧದ ಒಟ್ಟಾರೆ ಮಹಿಳಾ ಸಂಘಟನೆಯ ಸ್ತ್ರೀವಾದ ವ್ಯಾಪ್ತಿಯಲ್ಲಿ ತನ್ನನ್ನು ಅಷ್ಟಾಗಿ ಗುರುತಿಸಿಕೊಂಡಂತೆ ತೋರುವುದಿಲ್ಲ. ನಿರ್ದಿಷ್ಟ ಗುಂಪುಗಳು ತಮ್ಮ ವೈಚಾರಿಕಾ ನೆಲೆಗಳನ್ನು ಸ್ಪಷ್ಟಪಡಿಸಿಕೊಳ್ಳದ ಪ್ರಯತ್ನವಾಗಿ ಸ್ತ್ರೀವಾದಿ ಗುಂಪುಗಳೆಂದು ತಮ್ಮನ್ನು ಕರೆದುಕೊಂಡವು' ಎಂದಿದ್ದಾರೆ. ಮಹಿಳಾವಾದ ಮತ್ತು ಮಹಿಳಾ ಚಳುವಳಿಯು ಒಂದೇ ಎಂದು ಭಾವಿಸುವುದು ಸರಿಯಲ್ಲ.[೨೮]

ಮಹಿಳಾ ಸಂಘಟನೆ ಒಂದು ಗುಂಪು. ತನ್ನೆಲ್ಲಾ ಶೋಷಣೆ, ನೋವುಗಳನ್ನು ತನ್ನ ಸಂಘಟನೆಯಲ್ಲಿ ಪರಿಹಾರ ತಂದುಕೊಡುತ್ತದೆ. ಆಧುನಿಕ ಸ್ತ್ರೀವಾದ ಸ್ತ್ರೀವಾದವನ್ನು ಒಂದು ಪ್ರಜ್ಞೆ ಎಂದಿದೆ. ಸ್ತ್ರೀವಾದಿ ಗುಂಪಿನ ಮುಖ್ಯ ಚಟುವಟಿಕೆಯನ್ನು ಪ್ರಜ್ಞೆಯನ್ನು ವಿಸ್ತರಿಸುವ ಕೆಲಸ ಮಾಡುತ್ತದೆ. ಇದು ಚಳುವಳಿಯ ಲೋಪವನ್ನು ಪಡೆಯುತ್ತದೆ.

ಸ್ತ್ರೀವಾದಿ ಸಿದ್ಧಾಂತಗಳನ್ನು ಪಾಶ್ಚಿಮಾತ್ಯ ಮತ್ತು ಭಾರತೀಯ ಮಹಿಳಾ ಚಳುವಳಿಯನ್ನು ಐತಿಹಾಸಿಕವಾಗಿ ಅಧ್ಯಯನ ಮಾಡಿದರೆ ಉದಾರವಾದದಿಂದ ಹಿಡಿದು ಆಧುನಿಕೋತ್ತರ ಸ್ತ್ರೀವಾದದವರೆಗಿನ ಸಿದ್ಧಾಂತಗಳು ಅವರ ಮೇಲೆ ಪ್ರಭಾವ ಬೀರಿರುವುದನ್ನು ಕಾಣಬಹುದು. ಎಲ್ಲಾ ಸ್ತ್ರೀವಾದಗಳ ಗುರಿ ಒಂದೇ ಆಗಿದ್ದರೂ ಅವುಗಳು ಅನುಸರಿಸುವ ವಿಧಾನ ಒತ್ತು ಕೊಡುವ ಅಂಶ ಮತ್ತು ದೃಷ್ಟಿ ಕೋನ ಭಿನ್ನವಾಗಿರುತ್ತದೆ. ಮಹಿಳಾ ಸಂಘಟನೆಗಳು ಮೂಲವಾಗಿ

* ಮಹಿಳೆ ಮತ್ತು ಪುರುಷರ ನಡುವೆ ಸಮಾನ ಅವಕಾಶಕ್ಕೆ ಒತ್ತು ನೀಡುತ್ತದೆ. ಮಹಿಳೆಯರ ಸಮಾನ ಹಕ್ಕುಗಳಿಗಾಗಿ ಹೋರಾಡುತ್ತದೆ.

* ಸ್ತ್ರೀ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಸಮಾನ ಅವಕಾಶ ಪಡೆಯುವಂತೆ ಹೇಳುತ್ತದೆ.
* ಸ್ತ್ರೀ ಪುರುಷ ನಡುವಿನ ಲಿಂಗಾಧಾರಿತ ಭಿನ್ನತೆ ಮತ್ತು ಪಿತೃ ಪ್ರಧಾನ ಮೌಲ್ಯಗಳ ನಿರಾಕರಣೆ
* ಲಿಂಗಾಧಾರಿತ ಶ್ರಮವಿಭಜನೆಯ ಮೂಲ ಮತ್ತು ಸಮಾಜದ ವಿವಿಧ ಸಂಸ್ಥೆಗಳಿಂದ ಸ್ತ್ರೀ ನೆಲೆಗೆ ಅನ್ಯಾಯವಾಗುವುದನ್ನು ಖಂಡಿಸುವುದು.

೫. ಲಿಂಗಾಧಾರಿತ ವ್ಯವಸ್ಥೆ

ಜೈವಿಕ ಅಂಶಗಳ ಆಧಾರದ ಮೇಲೆ ಮನುಷ್ಯನನ್ನು ಗಂಡಸು-ಹೆಂಗಸು ಎಂದು ಗುರುತಿಸುವುದು ಲಿಂಗಾಧಾರಿತ ವ್ಯವಸ್ಥೆಯಾಗುತ್ತದೆ.

ಸ್ತ್ರೀಪುರುಷರ ನಡುವಿನ ವ್ಯತ್ಯಾಸ ಅಸಮಾನತೆಗೆ ಸಾಮಾಜಿಕ ವ್ಯವಸ್ಥೆಯೇ ಕಾರಣ ಹೊರತು ಲಿಂಗಾಧಾರಿತ ಕಲ್ಪನೆಯಲ್ಲ. ಹಿಂದೆ ಮಹಿಳೆಯರು ಮಾಡಬಾರದು, ಮಾಡಲಾಗದು ಎಂದು ಹೇಳುತ್ತಿದ್ದ ಕೆಲಸವನ್ನು ಇಂದು ಆಧುನಿಕ ಯುಗದಲ್ಲಿ ಮಹಿಳೆಯರು ಅತ್ಯಂತ ಸಮರ್ಥವಾಗಿ ಮಾಡಿ ತೋರಿಸುತ್ತಿರುವುದೇ ಸಾಕ್ಷಿ.[೨೯]

ಜೈವಿಕವಾಗಿ ಹೆಣ್ಣು-ಗಂಡು ಒಂದೇ ಆದರೂ ಸಮಾಜದ ಪಿತೃ ಮೌಲ್ಯಗಳು ಹೆಣ್ಣನ್ನು ಕೆಳಸ್ಥಾನದಲ್ಲಿರಿಸುವುದು ಒಂದು ರೀತಿಯ ಲಾಭಿಯೇ. ಲಿಂಗಾಧರಿತವಾಗಿ ಸ್ತ್ರೀ ಅಸಬಳು. ಗಂಡ ಸಬಲನೆಂಬ ಕಾರಣ ಕೊಟ್ಟ ಪಿತೃ ಪ್ರಧಾನ ಮೌಲ್ಯವನ್ನು ಬಲವಾಗಿ ಹೇರಿದ್ದಾರೆ. ಅವಳನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ನೈತಿಕವಾಗಿ ಕೆಳಸ್ಥಾನಕ್ಕೆ ಇಳಿಸಿರುವುದು ಈ ಲಿಂಗಾಧಾರಿತ ವ್ಯವಸ್ಥೆಯೇ.

ಸಂಪ್ರದಾಯಗಳು

ನಾವು ಸ್ತ್ರೀಯರು ಶತಮಾನಗಳಿಂದ
ನಿಮ್ಮ ಭೋಗದ ವಸ್ತುಗಳಾಗಿ ಕರಗಿ ಕರಗಿ ಹೋದವರು
ಪತಿಯ ಪಾದ ಪೂಜೆಯಲ್ಲಿ ಆಯುಷ್ಯ ಸವೆಸಿದವರು
ಅತ್ತೆ ಮಾವರಿಗಂಜಿ ಮತ್ತು ಮೈದನಗಂಜಿ
ತೊತ್ತಾಗಿ ಸತ್ತಂತೆ ಬಾಳಿದವರು ಧರ್ಮದ ಹೆಸರಿನಲ್ಲಿ
ನೀತಿಯ ನೆಪದಲ್ಲಿ ನಿಮ್ಮ ಬಲೆಯಲ್ಲಿ ಸಿಕ್ಕು ಬಳಲಿದ ಮೀನು
ನಿಮ್ಮ ಲಕ್ಷ್ಮಣ ರೇಖೆ ದಾಟಿದ ಸೀತೆಯರು ಅಲ್ಲವೆ?
ಹಾಗಂತ ಖುಷಿಪಡಬೇಡಿ ಒಳಗೊಳಗೆ
ಕನಸುಕಂಡು ನಿರಾಶರಾಗಬೇಡಿ ನಾವಿಂದು

ಮನುಷ್ಯರಾಗಿದ್ದೇವೆ.
ಇಂಚು - ಇಂಚಿಗೆ ಕೊಲ್ಲುವ ನಿಮ್ಮ ಧರ್ಮ
ದೇವರುಗಳನ್ನು ಕಿತ್ತೆಸೆದಿದ್ದೇವೆ.
ನಮ್ಮ ಬದುಕನ್ನು ನುಂಗಿದ ನಿಮ್ಮ ನೀತಿಗೆ ಬೆಂಕಿ
ಇಟ್ಟಿದ್ದೇವೆ.
ಪಾದ ತೊಳೆದು ಕುಡಿ ಎನ್ನುವ ತೀರ್ಥವನ್ನು
ನಿಮ್ಮ ಮುಖಕ್ಕೆರಚಿ ಬೆವರು ಸುರಿಸಿ ದುಡಿದು
ಬದುಕುತ್ತೇವೆ.
ನಿಮ್ಮ ಹಳೆಯ ಗತ್ತನ್ನು ಮತ್ತೆ ಮುಂದುವರಿಸಿದರೆ
ನಾವು ಕೊತಕೊತ ಕುದಿಯುವ ಎಣ್ಣೆಯಾಗುತ್ತೇವೆ
ದಿಮಿಗಿಡುವ ಜ್ವಾಲೆಗಳಾಗುತ್ತೇವೆ[೩೦]

(ವಿಜಯಲಕ್ಷ್ಮಿ ಸಬರದ-ಪುಟ-೩೬, ೧೯೯೧)

ಸಂಪ್ರದಾಯಗಳು ಸತ್ಯಕ್ಕೂ ಶತಮಾನಗಳಿಂದಲೂ ಹೆಣ್ಣನ್ನು ಶೋಷಿಸುತ್ತಾ ಬಂದಿದೆ. ಧರ್ಮ, ಪುರಾಣಗಳಿಗಿಂತ ಕೆಲವೊಮ್ಮೆ ಸಂಪ್ರದಾಯಗಳೇ ಹೆಚ್ಚೆನಿಸುತ್ತವೆ. ಸಂಪ್ರದಾಯಗಳು ಮುಕ್ಕಾಲುಪಾಲು ಪುರುಷನ ನಿಲುವಿಗೆ ಹೆಚ್ಚು ಒತ್ತು ಕೊಡುತ್ತವೆ.

ಕಾಣಲಿಲ್ಲ ನಿಮಗೆ ಮೊಲೆತೊಡೆಗಳ
ಹೊರತಾಗಿ ಇಲ್ಲೊಂದು
ನಸುಗೆಂಪು ಆಸೆಗಳ ಹೊತ್ತ ಹೃದಯ
ಉಂಟೆಂದು[೩೧]

(ಡಿ.ಸರ್ವಮಂಗಳ-ಪುಟ ೧೯೯೩)

ಲೈಂಗಿಕ ನ್ಯಾಯ ಎಂಬುದು ಆಧುನಿಕ ಸ್ತ್ರೀ ಸಂವೇದನೆಯ ಮುಖ್ಯ ಹಕ್ಕೊತ್ತಾಯ ಹಿಂದಿನಿಂದಲೂ ಹೆಣ್ಣನ್ನು ಭೋಗದ ವಸ್ತುವಾಗೇ ನೋಡಿ ಅಭ್ಯಾಸವಿರುವ ಗಂಡಿಗೆ ಸ್ತ್ರೀ ಭಾವನೆಯನ್ನು ಅರ್ಥೈಸಿಕೊಳ್ಳಲು ಸಾದ್ಯವಿಲ್ಲ. ಆಕೆಯನ್ನು ಕೇವಲ ದೇಹದ ರೀತಿಯಲ್ಲಿ ಪರಿಭಾವಿಸಿದ ಅವನಿಗೆ ಲೈಂಗಿಕ ಭಾವನೆಗಳು ಪುರುಷನಿಗೆ ಮಾತ್ರ ಸೀಮಿತ. ಭೋಗದ ಕಲ್ಪನೆ ಮತ್ತು ಅನುಭವ ಅವನಿಗಾಗಿ ಸೀಮಿತ ಎಂಬ ಮಟ್ಟಕ್ಕೆ ನಿಲ್ಲುತ್ತಾನೆ.

ಕಾಮನೆಗಳು ಭಾವನೆಗಳಿಗೆ ಪುರುಷನಷ್ಟೆ ಸ್ತ್ರೀ ಹಕ್ಕುದಾರಳು. ಮೂಲ ಅವಶ್ಯಕತೆಯನ್ನು ಹಕ್ಕುಗಳನ್ನು ಪಡೆಯಲು ಹಿಂದುಳಿದ ಹೆಣ್ಣಿಗೆ ಲೈಂಗಿಕನ್ಯಾಯ ಕೇಳುವ ಮಟ್ಟಿಗೆ ಮತ್ತು ಪಡೆಯುವ ಮಟ್ಟಿಗೆ ಹೋಗುವುದು ಸ್ತ್ರೀ ಸಂವೇದನೆಯ ಆಧುನಿಕ ಪ್ರಪಂಚದ ಬದಲಾದ ಧೋರಣೆಯಲ್ಲಿ ಗಮನಿಸಬಹುದು.

ನಾನವನ ಅರ್ಧಾಂಗಿ
ಅವನ ಯಾವ ಅಂಗದ ಮೇಲೆ ಅಧಿಕಾರವಿದೆ ಹೇಳು
ನನ್ನ ನಗು ಅಳುವಿನ
ಮೇಲೆ ಅವನದೇ ಅಧಿಕಾರ ಅಷ್ಟೆಯೇಕೆ ಅವನ ಒಪ್ಪಿಗೆ ಪಡೆದು ನಾನು
ಫಲ ಧರಿಸಬೇಕು.
ಭೂಮಿ ಹಣ್ಣಾಗಿದ್ದರೆ ಹೃದಯ ಕಲ್ಲಾಗಿಸಿ
ಚಿಗುರುಗಳ ಹೊಸ ಕುಡಿಗೆ ಕತ್ತರಿ ಪ್ರಯೋಗ
ನನ್ನ ಹೆಡೆದಮ್ಮನ ಕಿವಿಗೆ ಕೇಳಿಸುವುದೇನಾ
ವರ್ಷದ ೩೬೪ ದಿನಗಳು ಗಂಡಸರದೇ
ಆದರೂ ನಮಗಾಗಿ ಒಂದು ದಿನ ಆಚರಣೆ ಸಾಕಲ್ಲವೇ
ಮಹಿಳಾ ದಿನಾಚರಣೆ!!

(ಶೆರೀಪಾ–ಪುಟ–೭೦, ೧೯೯೭)

ಸ್ತ್ರೀ ಸ್ವಾತಂತ್ರ್ಯ ಮತ್ತು ಸ್ತ್ರೀಸ್ವಾವಲಂಬನೆ ಅರ್ಥ ಕೇವಲ ನಿರ್ಧಾರ ಕೈಗೊಳ್ಳುವ ಹಕ್ಕನ್ನು ಪಡೆಯುವುದೇ ಸಶಕ್ತೀಕರಣವಲ್ಲ. ಮಹಿಳೆಯರು ತಮ್ಮನ್ನು ತಾವು ಸಮರ್ಥರು, ನಿರ್ಧಾರ ಕೈಗೊಳ್ಳುವ ಶಕ್ತಿ ಇರುವವರು ಎಂದು ಭಾವಿಸಿಕೊಳ್ಳಬೇಕು. ಮಹಿಳೆಯರು ಭಾವನೆಯನ್ನು ಬೆಳೆಸಿಕೊಳ್ಳುವುದು, ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವುದು. ಆತ್ಮವಿಶ್ವಾಸ ಅರಿವು, ಆತ್ಮವಿಶ್ವಾಸ ಆತ್ಮಗೌರವ ಬೆಳೆಸಿಕೊಂಡು ಸ್ವಂತ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯವನ್ನು ಪಡೆಯುವುದೇ ಮಹಿಳಾ ಸಶಕ್ತೀಕರಣ.

ಸ್ತ್ರೀಸ್ವಾತಂತ್ರ್ಯ ಮತ್ತು ಸ್ತ್ರೀಸ್ವಾವಲಂಬನೆಯ ಅರ್ಥ ಕೇವಲ ನಿರ್ಧಾರ ಕೈಗೊಳ್ಳುವ ಹಕ್ಕನ್ನು ಪಡೆಯುವುದೇ ಸ್ತ್ರೀ ಸ್ವಾತಂತ್ರ್ಯವಲ್ಲ. ಮಹಿಳೆಯರು ತಮ್ಮನ್ನು ತಾವು ಸಮರ್ಥರು. ನಿರ್ಧಾರ ಕೈಗೊಳ್ಳುವ ಶಕ್ತಿ ಇರುವವರು ಎಂದು ಭಾವಿಸಿಕೊಳ್ಳಬೇಕು. ಮಹಿಳೆಯರು ಭಾವನೆಯನ್ನು ಬೆಳೆಸಿಕೊಳ್ಳುವುದು ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವುದು. ಆತ್ಮವಿಶ್ವಾಸ ಅರಿವು, ಆತ್ಮಗೌರವ ಬೆಳೆಸಿಕೊಂಡು ಸ್ವಂತ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯವನ್ನು ಪಡೆಯುವುದೇ ಮಹಿಳಾ ಸ್ವಾವಲಂಬನೆ.

ಸ್ತ್ರೀ ಸ್ವಾತಂತ್ರ್ಯ ಸಶಕ್ತಿಕರಣಗಳು ಈ ಸಾಮಾಜಿಕ ಪ್ರಪಂಚದಲ್ಲಿ ಸಂಪಾದಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಸಂಪ್ರದಾಯ ಕಟ್ಟಲೆಗಳು, ಪುರಾಣಿಕವಾಗಿ ಸ್ವಭಾವವನ್ನು ಕಟ್ಟಿ ಹಾಕುತ್ತವೆ. ಅವಳು ಎತ್ತಿರುವ ಪ್ರಶ್ನೆಯೇ ಇದಾಗಿದೆ. ಯಾವುದರ ಮೇಲೆ ತನಗೆ ಸ್ವಾತಂತ್ರ್ಯವಿದೆ ಹೇಳು ಎನ್ನುವಲ್ಲಿ ಲಿಂಗ ಸಮಾನತೆಯ ಪ್ರಶ್ನೆ ಏಳುತ್ತದೆ.

ನೆರೆಮನೆಯ ರಂಗುರಂಗಿನ ಕಿಟಕಿ ಕದ ಸಂಧಿಯಿಂದ
ಬೇಡವೆಂದರೂ ತೂರಿ ಬಂದ ತಿವಿದಸ್ವರ
ಸ್ವಾತಂತ್ರ್ಯೋತ್ಸವಕ್ಕೆ ಕಟ್ಟಿ ತಳಿರ ತಟ್ಟಿ ಉಬ್ಬಿಸಿತ್ತು
ಬೇಕಾದ್ದು ಮಾಡುವ ಸ್ವಾತಂತ್ರ್ಯ ನನಗಿದೆ ನೀ ಯಾರು
ಕೇಳುವವಳು ನನ್ನ? ಎಂದು ನೆರೆಮನೆಯ ಗಂಡ
ಸಿಡಿದು ನಡೆದಿದ್ದ ಕೆಂಪು ಕೆಂಡ
ಸಿಟ್ಟಾಗದಿರಿ ತಾಳಿ ಇದೋ ಕೇಳಿ ಎಂದವಳ ಧ್ವನಿ ಪ್ರತಿಧ್ವನಿ
ಮತ್ತೆ ಇಂದಿನ
ಬೆಳಕ ಮರ್ಮಕ್ಕೆ
ಚುಚ್ಚುತ್ತದೆ[೩೩]

(ಮಾಲತಿ ಪಟ್ಟಣಶೆಟ್ಟಿ–ಪುಟ–೮೦, ೧೯೮೩)

ಸ್ವಾತಂತ್ರ್ಯದ ಅರ್ಥಪೂರ್ಣತೆಯನ್ನು ಗಂಡು–ಹೆಣ್ಣಿನ ಜೀವನದ ಹಿನ್ನಲೆಯಲ್ಲಿ ವ್ಯಾಖ್ಯಾನಿಸುವ ರೀತಿ, ಜೊತೆಗೆ ಶಬ್ದ ಬಳಕೆಯಲ್ಲಿನ ವಿಚಾರ ಮೆಚ್ಚತಕ್ಕದ್ದಾಗಿದೆ. ಲಿಂಗ ಅಸಮಾನತೆ ಎಂಬುದು ಜೈವಿಕತೆಗೆ ಸಂಬಂಧಿಸಿದಂತೆ ಅದನ್ನು ಮೂಲವಾಗಿ ಗ್ರಹಿಸಿ ಹೆಣ್ಣಿನ ಅಷ್ಟು ಸ್ವಾತಂತ್ರ್ಯವನ್ನು ಕಸಿಯುವಲ್ಲಿ ಪುರುಷ ಹೊರಟಿದಂತಿದೆ.

ಆಯ್ಯೋ ನಿಮ್ಮಕಣ್ಣು ಬೊಂಬೆಗಳ ತುಂಬಿ ಪ್ರತಿ
ಬಿಂಬಿಸುವ ಹೊಕ್ಕಳ
ಬಳ್ಳಿಯನ್ನು ಬಗೆದು ಎದೆ ಗಿಳಿದು ಮತ್ತಾಗಿ ಮಾಡುವ
ಸರದಿಗೆ ಕಾದಿಲ್ಲ ನನ್ನ ಸುತ್ತಲ ಗೋಡೆ ಕರಗಿ
ಮಿಗಿಲಾಗುವ ಅವಕಾಶಕ್ಕೆ ಕಾಯುತ್ತಿದ್ದೇನೆ.[೩೪]

(ಪ್ರೇಮ ತಾಶೀಲ್ದಾರ–ಪುಟ–೪೦, ೧೯೯೪)

ಪರಾಧೀನತೆ ಸಹಜ ಎನ್ನುವ ದೃಷ್ಟಿ ಒಂದು ಕಡೆಗಾದರೆ ಅದರಿಂದ ಪಾಲಾಗುವ ಅವಶ್ಯಕ್ಕಾಗಿ ಕಾಯುವ ಮನೋಭಾವ ಕವಿಯತ್ರಿಯದು.

ನನಗಿಲ್ಲಿ ಇರಲಿಲ್ಲ
ಈ ನೆಲದ ಯೋನಿಯ ಸೀಳಿ
ಬೇರಳಿಸುವ ತಾಕಿತ್ತು
ಯಾವುದಾದರೊಂದು
ಮರದೆದೆಯ ಮೇಲಿಳಿದು
ಹಸಿರಾಗಬೇಕಾದ ಈ ನಾನು
ಬದೆನಿಕೆಯ ಬೀಜ
ಗಾಳಿ ಜೊತೆ ತೇಲುವುದನೆಗೆ ಸಹಜ[೩೫]

(ಸ.ಉಷಾ, ಪುಟ–೬೩, ೧೯೮೮)

ಅಸ್ತಿತ್ವದ ಪ್ರಶ್ನೆ ಇಲ್ಲಿ ಹೆಣ್ಣಿಗೆ ಕಾಡಿರುವುದು ಸಹಜ. ಅಸ್ತಿತ್ವಕ್ಕಾಗಿ ಹೋರಾಡುವ ಅವಳಿಗೆ ತನ್ನ ಸ್ವಾತಂತ್ರ್ಯ ಸಶಕ್ತೀಕರಣದ ಅರಿವಿದ್ದರೂ ಅದನ್ನು ಸಾಧಿಸುವಲ್ಲಿ ಅಸಫಲಗಳಾಗಿದ್ದಾಳೆ. ನನಗಿಲ್ಲ ಈ ನೆಲದ ಯೋನಿಯಲ್ಲಿ ಬೇರಳಿಸುವ ತಾಕತ್ತು ಎನ್ನುವಲ್ಲಿ ತಾನು ಸ್ವಾತಂತ್ರ್ಯವನ್ನು ಕಂಡುಕೊಳ್ಳುವಲ್ಲಿ ತಾನು ಸೋತಿರುವಲ್ಲಿ ಹಾಗೂ ಶತಮಾನಗಳಿಂದ ತನ್ನ ಸ್ವಾತಂತ್ರ್ಯ ಹರಣ ಆದ ಬಗ್ಗೆ ಇಷ್ಟು ಶತಮಾನ ಕಳೆದರೂ ಕಳೆದು ಹೋದ ತನ್ನತನ, ಸ್ವಂತ ಅಸ್ತಿತ್ವ ದಕ್ಕದೇ ಇರುವ ಬಗ್ಗೆ ವಿಷಾಧವಿದೆ.

ಸಾಮಾಜಿಕ ಅಧಿಕಾರಶಕ್ತಿ

ಮಹಿಳಾ ಜೀವನ ಮತ್ತು ಸ್ಥಾನಗಳ ಮೇಲೆ ಪ್ರಭಾವ ಬೀರುವ ಮತ್ತೊಂದು ಪ್ರಶ್ನೆಯೆಂದರೆ ಅದು ಸಾಮಾಜಿಕ ಅಧಿಕಾರಶಕ್ತಿ. ಸಾಮಾಜಿಕ ಪ್ರತಿಕ್ರಿಯೆಯೆಂದರೆ ಸಾಮಾಜೀಕರಣ ಅಂದರೆ ಸಮಾಜವು ತಮ್ಮ ಸದಸ್ಯರನ್ನು ಪರಿಪೂರ್ಣ ಸಾಮಾಜಿಕ ಜೀವಿಯನ್ನಾಗಿಸಲು ರೂಪಿಸಿರುವಂತ ನೀತಿನಿಯಮಗಳ ಕಂತೆ. ಇದು ತಂದೆ-ತಾಯಿ ಶಿಕ್ಷಕರು, ಸಮಾಜದ ಸುತ್ತಲಿನ ಸಂಬಂಧವನ್ನು ಕಲ್ಪಿಸಿದರು. ಇದಕ್ಕೆ ನಿದರ್ಶನವಾಗಿ ಧಾರ್ಮಿಕ, ಸಾಂಸ್ಕೃತಿಕ ಆಚರಣೆ ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳು ಇರುತ್ತವೆ.

ಮೊದಲಿನಿಂದಲೂ ಸಮಾಜವು ಹೆಣ್ಣನ್ನು ಅಸಬಳು ಸಾದು ಸ್ವಭಾವದ, ಲಕ್ಷ್ಮಣ ರೇಖೆಯನ್ನು ದಾಟದ, ಗಂಡಿನ ಹಂಗಿನಲ್ಲಿ ಬದುಕುವ ಚಿತ್ರಣದಲ್ಲಿ ಅವಳನ್ನು ರೂಪಿಸಿದೆ ಹೀಗೆ ಸಮಾಜ ನಿರೀಕ್ಷಿಸುವ ಪಾತ್ರ ಮತ್ತು ನಡುವಳಿಕೆಯನ್ನು ರೂಢಿಸಿಕೊಂಡಿರುವ ಮಹಿಳೆಯನ್ನು 'ಆದರ್ಶ ಮಹಿಳೆ' ಎಂದು ಚಿತ್ರಿಸಲಾಗುತ್ತಿದೆ. ಈ ಗುಣಗಳಿಂದ ಸಮಾಜ ನಿರೀಕ್ಷೆ ಮೀರಿ ನಡೆಯುವ ಮಹಿಳೆಯು ಮಾಟಗಾತಿ, ಶೀಲಗೆಟ್ಟವಳೆಂದು ಪಟ್ಟಕಟ್ಟುತ್ತದೆ.

ಸ್ತ್ರೀ ವಿರೋಧಿಯಾದ ಮಹಿಳೆಯರ ಅಭಿವ್ಯಕ್ತಿಗೆ ಮಾರಕವಾದಂಥ ಪಾತ್ರ ನಿರೀಕ್ಷೆಗಳನ್ನು ತೊಡೆದು ಹಾಕಲು ಲಿಂಗ ಸೂಕ್ಷ್ಮತೆಯಿಂದ ಕೂಡಿದ ಸಾಮಾಜಿಕತೆ ಅವಳಡಿಸಿಕೊಳ್ಳಬೇಕು.

ನಾನು ಕುರಿಮರಿಯಲ್ಲ ನರಿಯು ಅಲ್ಲ
ಹೆದರಿಸಿದರೆ ಬೆದರಿಸಿದರೆ ನಿನ್ನ ಬೇಟೆಯಲ್ಲಿ
ಪಾಲು ಪಡೆದು ಪಾಲುಕೊಟ್ಟು
ಎದೆಗೆ ಜೋಡಿ ಪಾರಿವಾಳದ ಕಾದಿತ್ತು ಗುಹೆಯೊಳಗೆ
ಹಚ್ಚಿಟ್ಟ ದೀಪ
ಕಾಡುತ್ತಲೆ ಸೀಳಿ ಚಳಿಗೆ ಬೆಂಕಿಯಾಗಿ ಬೆಂಕಿಗೆ ಗಾಳಿ
ಹಾಕುವ ಬೀಸಣಿಕೆಯಾಗಿ

ಬೀಸಣಿಗೆ ಹಿಡಿದ ಕೈಯಾಗಿ ಹಾಗೆ ಲಾಲಿ ಹಾಡುವ
ತುಟಿಯಲ್ಲಿ
ತುಟಿ ತುಂಬಿದ ಮುತ್ತಾಗಿ ಇನ್ನು ಏನೆಲ್ಲಾ ಆಗಬಲ್ಲೆ...
ಬೇಡವೆಂದೂ ಮುಖ ತಿರುಗಿಸಿದರೆ ಝೂಡಿಸಿ
ಹೋಗಬಲ್ಲ ಸಿಂಹಿಣಿ ನಾನು[೩೬]

(ಭಾಗ್ಯಲಕ್ಷ್ಮಿ–ಪುಟ–೬೩, ೧೯೮೭)

ಎಲ್ಲಾ ತ್ಯಾಗಕ್ಕೂ ಕಷ್ಟಕ್ಕೂ ಬಗ್ಗಿಕೊಳ್ಳುತ್ತಾ ಸ್ತ್ರೀ ಸ್ವಾಭಿಮಾನದ ವಿಷಯದಲ್ಲಿ ಸೆಟೆದು ನಿಲ್ಲುತ್ತಾಳೆ. ಈ ಕವನದಲ್ಲಿ ತಾನು ತಗ್ಗಿ–ಬಗ್ಗಿ ನಡೆಯುವುದರ ವಿಶ್ಲೇಷಣೆಗೆ ಕೊಡುತ್ತಾ ತನ್ನತನ ಪ್ರಶ್ನೆ ಬಂದಾಗ ತಾನು ಬೆನ್ನು ತಿರುಗಿಸಿ ಹೋಗಬಲ್ಲೆ. ಸಿಂಹಿಣಿ ಆಗಬಲ್ಲೆ ಎನ್ನುವಲ್ಲಿ ತನ್ನ ಗಟ್ಟಿ ನಿರ್ಧಾರ ತಿಳಿಸಿದ್ದಾಳೆ.

ಸಮಸ್ಯೆಗಳು

ಆದರ್ಶ ಪುರುಷನ ಹುಡುಕಾಟಕ್ಕೆ ತೊಡಗಿದಾಗ ಆದರ್ಶದ ಅರ್ಥವಂತಿಕೆ ಸ್ವರೂಪದ ಮಾದರಿ ಏನು ಎಂಬ ಪ್ರಶ್ನೆಗೆ ಮಹಿಳಾ ಸಂವೇದನೆಯಡೆಗೆ ನೋಡಬೇಕಾಗುತ್ತದೆ. ಆದರಲ್ಲಿಯ ಸಮಸ್ಯೆ ಮತ್ತು ಹಕ್ಕೊತ್ತಾಯಗಳ ಪರಿಶೀಲನೆಗೆ ತೊಡಗಿದಾಗ ಕವಿಯತ್ರಿಯ (ಸ್ತ್ರೀಯ) ಆದರ್ಶದ ಹಂಬಲದ ಚೌಕಟ್ಟು ಸಿಕ್ಕಿದಂತಾಗುತ್ತಿದೆ.

ಮಹಿಳಾ ಸಂವೇದನೆಯಲ್ಲಿ ಸಾಮಾಜದ ಹಲವು ಸ್ತ್ರೀಯಡೆಗಿರುವ ದುಷ್ಟ ಸಮಸ್ಯೆಗಳು ಗುರುತಿಸಿಕೊಳ್ಳುತ್ತವೆ. ಮೂಲತಃ ಈ ಸಮಸ್ಯೆಗಳ ಆದರ್ಶದ ಪಟ್ಟಿಯ ಹೊರತಾದ ನಕಾರಾತ್ಮಕ ವಿಷಯಗಳಾಗುತ್ತದೆ. ಈ ಸಮಸ್ಯೆಗಳನ್ನು ಗುರುತಿಸಿದಂತೆಲ್ಲಾ ಆದರ್ಶದ ಸ್ಪಷ್ಟ ರೂಪ ಸಿಗುತ್ತದೆ.

ಸಮಾಜದ ಸಮಸ್ಯೆ ಮತ್ತು ಮಹಿಳಾ ಸಂವೇದನೆ ಸಮಸ್ಯೆ

ಸ್ತ್ರೀಯ ಮೇಲಿನ ಶೋಷಣೆ ಸಮಸ್ಯೆಗಳ ವಿಷಯ ಇಂದಿನದಲ್ಲ. ಶತಮಾನಗಳಷ್ಟು ಹಳೆಯದು. ಗಂಡು ಮತ್ತು ಹೆಣ್ಣಿನ ಸೃಷ್ಟಿಗಳು ಜಗತ್ತಿನಲ್ಲಿ ಒಂದೇ ರೀತಿಯ ಜೈವಿಕತೆಯಾಗಿ ಕಂಡುಬಂದರೂ ಹೆಣ್ಣು ಪುರುಷನಿಗಿಂತ ಕೆಳಮಟ್ಟಕ್ಕೆ ಬಂದಿದ್ದೇಕೆ? ಪುರುಷನ ಶೋಷಣೆಗೆ ಒಳಗಾಗಿದ್ದೇಕೆ? ಎಂಬ ಪ್ರಶ್ನೆ ಕಾಡುತ್ತದೆ. ಹೆಣ್ಣಿನ ಸಮಸ್ಯೆ ಅವಳ ಮೇಲಾಗುವ ಶೋಷಣೆಗಳ ಬಗ್ಗೆ ಚರ್ಚೆ ಬಂದಾಗ ಕಂಡು ಬರುವ ಸಮಸ್ಯೆ ಒಂದೇ ಸ್ತ್ರೀ ಪುರುಷನಿಂದ ದೈಹಿಕವಾಗಿ ಕೊಂಚ ಅಸಮರ್ಥಳು ಎಂದು ಕೊಂಚ ಮಟ್ಟಿಗೆ ಸತ್ಯವೆನಿಸಿದರೂ ಸಂಪೂರ್ಣ ವಾಗಿ ಇದೇ ಕಾರಣವೆಂದು ನಂಬುವಂತಿಲ್ಲ. ಸ್ತ್ರೀ ಗಂಡಸಿನಷ್ಟೆ ದೇಹದಾರ್ಢ್ಯತೆ ಪಡೆದಿದ್ದರೂ

ಸಹ ಅವಳ ಮುಟ್ಟು ಬಸಿರು ಹೆರಿಗೆ ಇವುಗಳೆಲ್ಲಾ ಅವಳನ್ನು ಕೊಂಚ ಮಟ್ಟಿಗೆ ಶಕ್ತಿ ಹೀನಳಾಗಿ ಮಾಡುವುದು.

ಅವಳ ದೈಹಿಕ ಸಾಮರ್ಥ್ಯ ಬದಲಾವಣೆಗೊಂಡ ಸ್ಥಿತಿ-ಗತಿಗಳು ಅವಳ ಕೀಳರಿಮೆ ಮನೋಭಾವಗಳು ಶತಮಾನಗಳಿಂದ ಅವಳನ್ನು ಶೋಷಣೆಗಳಿಗೆ ಮತ್ತು ಸಮಸ್ಯೆಗಳಿಗೆ ಈಡುಮಾಡಿತು.

ಮಗುನಿದ್ದು ಮಗಳ ಮನೆಯಲ್ಲಿ ಬದುಕುತ್ತಿದ್ದ ಅಜ್ಜ
ಅಜ್ಜಿಯರು
ಹರುಷದಿಂದ ಹರಿಸಿದರು ಮೊಮ್ಮಗಳಿಗೆ
ಗಂಡು ಕೂಸಿನ ತಾಯಿಗೆಯಾಗೆಂದು[೩೭]

(ಕಮಲಾಮೂರ್ತಿ, ಪುಟ-೯೦, ೧೯೮೬)

ಗಂಡು ಮಗು ತನ್ನ ತಂದೆ ಮನೆಯಲ್ಲಿ ಬೆಳೆದು ತನ್ನ ಅಸ್ಥಿತ್ವವನ್ನು ಮುಂದು ವರಿಸುವುದರಿಂದ ಗಂಡು ಸಂತಾನ ಸಮಾಜದಲ್ಲಿ ಶ್ರೇಷ್ಠತೆ ಪಡೆಯುತ್ತದೆ, ವಂಶೋದ್ಧಾರಕ, ತಂದೆ ತಾಯಿ ಪಾಲಕ ಇವನಾದ್ದರಿಂದ ಪುರುಷ ಸ್ತ್ರೀಗಿಂತ ಹೆಚ್ಚಿನವನಾಗುತ್ತಾನೆ. ಪುರುಷ ಅಸ್ಥಿತ್ವ ಸಮಾಜದಲ್ಲಿ ಹೆಚ್ಚು ಪ್ರತಿಬಿಂಬಿಕವಾದ್ದು ಹೆಚ್ಚು ಬೇಡಿಕೆಯಲ್ಲಿರುವುದು.

ಗಂಡು ಸಂತಾನದ ಬಯಕೆ

ವರದಕ್ಷಿಣೆ ಪಿಡುಗು, ಹೊರಜಗತ್ತಿನಲ್ಲಿ ಗಂಡಿನ ಆರಾಮದಾಯಕವಾದ ವ್ಯಕ್ತಿತ್ವ ತಿರುಗಾಟ, ಪಿತೃಪ್ರದಾನ ಮೌಲ್ಯದ ಕುಟುಂಬ ಇವುಗಳಲ್ಲರ ಫಲವಾಗಿ ಗಂಡು ಸಂತಾನದ ಬಗ್ಗೆ ಅತೀವ ಆಸಕ್ತಿ ಕೆರಳಿಸುತ್ತದೆ. ಬ್ರೂಣಹತ್ಯೆ ಈ ಕಾರಣದಿಂದ ಹೆಚ್ಚು ಪ್ರಚಲಿತವಾಗಿದೆ.

ನಾವು ಗಂಡಸರಲ್ಲ
ಎಲ್ಲಿ ಹೋದರು ಹುಡುಗಿಯರನ್ನು ಕಂಡಾಗ
ಕಣ್ಣು ಮಿಟುಕಿಸಿ ವಕ್ರನಿಗೆ ಬೀರುವರೆಲ್ಲಾ
ಮಿತಿಮೀರಿದ ಮರ್ಯಾದೆ ತೋರಿದರೂ
ಮನಸ್ಸಿನಲ್ಲಿ ಅವರನ್ನು ಬೆತ್ತಲಾಗಿಸುವವರು
ಆದರೂ ನಮ್ಮಲ್ಲಿ ಇವರಿಗಿರುವ ಬೆಲೆಯನ್ನು ಕಂಡು
ಅಯ್ಯೋ ನಾನು ಗಂಡಾಗಲಿಲ್ಲಾ
ಎಂದು ಮಿಟುಕುವ ನಾವು
ಹೆಂಗಸರು[೩೮]

(ಪ್ರತಿಭಾನಂದಕುಮಾರ್-ಪುಟ-೧೬, ೧೯೮೩)

'ನಾವು ಗಂಡಸರಲ್ಲ' ಎನ್ನುವಲ್ಲಿ ಗಂಡಿನ ಸ್ವಾತಂತ್ರ್ಯ ಅವಕಾಶಗಳು ಗಂಡಿನ ಸ್ವಾತಂತ್ರ್ಯ ಅವಕಾಶಗಳೆಡೆಗೆ ಸ್ತ್ರೀಯ ದೃಷ್ಟಿ ಇದೆ ತನಗೆ ದಕ್ಕದ ಸ್ವಾತಂತ್ರ್ಯ ಪರಿಕಲ್ಪನೆಗೆ ವಿಷಾದವಿದೆ ಆತನ ವಕ್ರ ನಡೆನುಡಿಗಳು ವಿಚಿತ್ರವಾಗಿದೆ ಸಮಾಜವು ಆತನಿಗೆ ಶ್ರೇಷ್ಠತೆ ಕೊಟ್ಟಿರುವ ಬಗ್ಗೆ ತನ್ನ ಮೇಲಿನ ಶೋಷಣೆ ಬಗ್ಗೆ ಚಿಂತಿಸುತ್ತಾಳೆ. ಪುರುಷನಿಗಿರುವ ಪ್ರಧಾನ ಅನುಕೂಲಗಳ ಬಯಕೆಯಿಂದ ಹೆಚ್ಚು ಪ್ರಚಲಿತವಾಗುತ್ತಾ ಹೋಗುತ್ತದೆ.

ಧರ್ಮದ ಸೆರೆಯಲ್ಲಿ
ಸಿಲುಕಿಸಿ
ಸವಿಯಾದ ನುಡಿಮುತ್ತುಗಳಿಂದ
ರಸವತ್ತಾದ ಹೆಣ್ಣಾಗಿಸಿ
ತಮಗೆ ಬೇಕಾದಾಗ ಬೆಳೆಸಿ
ಒಳ್ಳೆ ಗಿರಾಕಿ ಬಂದಾಗ
ಮಾರುವ
ಪೌರುಷ ಷಂಡರು.[೩೯]

(ವಿಜಯಶ್ರೀ ಸಬರದ ಪುಟ-೨೪, ೧೯೯೧)

ಧರ್ಮವನ್ನು ಭಾರತೀಯ ದೃಷ್ಟಿಯಲ್ಲಿ ಕೇವಲ ಮಾನಸಿಕ ದೃಷ್ಟಿಕೋನದಿಂದ ಅಳೆಯಲಾಗುವುದಿಲ್ಲ. ಅದು ಸಂಪೂರ್ಣ ಸಾಮಾಜಿಕ ಜೀವನದ ಮೇಲೆ ಪ್ರಭಾವ ಬೀರುತ್ತದೆ. ಸ್ತ್ರೀಯ ಮೇಲಿನ ಶೋಷಣೆ ಅನ್ಯಾಯಗಳೆಲ್ಲಾ ಧಾರ್ಮಿಕ ಚೌಕಟ್ಟಿನಲ್ಲಿರಿಸಿದಾಗ ಅದನ್ನು ಪ್ರಶ್ನಿಸುವ ಮೀರುವ ಪ್ರಶ್ನೆಯೇ ಇಲ್ಲ. ಗಂಡ-ಹೆಂಡತಿ ಯಜಮಾನ ಹೆಣ್ಣುಮಕ್ಕಳು. ಅಣ್ಣ-ತಂಗಿ ಹೀಗೆ ಬಾಂಧವ್ಯ ಮಧುರವಾಗಿ ಕಂಡರೂ ಶೋಷಣೆ ಹಂತದಲ್ಲಿ ಗಂಡು ಮೇಲಸ್ಥರದಲ್ಲಿದ್ದರೆ ಹೆಣ್ಣು ಕೆಳಸ್ಥರಕ್ಕೆ ತಳ್ಳಲ್ಪಡುತ್ತಾಳೆ. ಧರ್ಮವು ಸಂಪ್ರದಾಯಗಳಿಗೆ ಪುಷ್ಟಿ ನೀಡುತ್ತದೆ. ಸಂಪ್ರದಾಯಗಳಿಗೆ ಧರ್ಮದ ಅಂಧಕನಾದ ಪುರುಷನಿಗೆ ಸ್ತ್ರೀ ಶೇಷನಾಗಲು ಅನುವು ಮಾಡುತ್ತದೆ.

ನನ್ನ ಬದುಕಿನ ಸುತ್ತ
ಅವ್ವ ಅವ್ವನ ದೇವರ ದಿಂಡರ
ನೆರಹೊರೆಯ ಅಸ್ಥಿತ್ವದ ಬಿಳಲು ಬೇಲಿಕಟ್ಟಿದೆ
ಕಿತ್ತೆಸೆಲಾಗದೆ ಶತಮಾನದಿ ಬೆಳದ
ಬೇಲಿಯೊಳಗೆ ಹಗಲಿರುಳ
ಎಣಿಸುತ್ತಲೇ ಮುಪ್ಪು ಕಾಣುವ
ನನ್ನಂಥ ಸಾವಿರ ಕನ್ಯೆಯರ ಸ್ವಾತಂತ್ರ
ಕುಡಿದು ಬದುಕಿರುವ ಬಿಳಲು
ಕಿತ್ತು ಹೊರಬರುವವರ‍್ಯಾರು

ಒಪ್ಪಿದ ಬದುಕು ಅವ್ವ ಕುರುಡು ಕತ್ತಲೆಯಲ್ಲಿ
ಕನವರಿಕೆಯಾಗಿ ಸ್ವಾತಂತ್ರ್ಯದ ಉಸಿರು ಕ್ಷೀಣಿಸುವಾಗ[೪೦]

(ಸರಸ್ವತಿಗೌಡ, ಪುಟ-೯೯, ೧೯೮೦)

ಪರಾವಲಾಂಬಿ ಬದುಕು ಸ್ತ್ರೀಗೆ ಅನಿರೀಕ್ಷಿತವಾದುದಲ್ಲ, ಅದು ಸಂಪೂರ್ಣವಾಗಿ ಪುರುಷ ಪ್ರಪಂಚದಿಂದ ರೂಪಿಸಲ್ಪಟ್ಟಿದ್ದು. ಅನುಕೂಲಕರ ದೃಷ್ಟಿಯಿಂದ ನಿರ್ದೇಶಿತವಾಗಿದ್ದು ಅವಳ ಹುಟ್ಟು ಬೆಳವಣಿಗೆಗಳು ಕ್ರಮೇಣ ಒಂದೇ ಪ್ರಕಾರವಾಗಿ ಗಂಡಿನ ಆಸರೆ ಬಯಸು ವಂತೆ ಮಾಡುತ್ತದೆ.

ಭಂಡ ಗಂಡನಿಗೆ ಬೇಸರಿಸದೆ
ನೀನೊಮ್ಮೆ ಉಟ್ಟು ಎಸೆದ ಸೀರೆಯನ್ನು
ಎಷ್ಟೊಂದು ಸಡಗರದಿಂದ ಸುತ್ತಿಕೊಂಡಿದ್ದೇನೆ
ಬಲ್ಲೆಯಾ?
ನೀನೊಲ್ಲದ ಗಂಡರನೆ ನೆಚ್ಚಿಕೊಂಡಿದ್ದೇನೆ.[೪೧]

(ಪ್ರೇಮ ತಾಶೀಲ್ದಾರ-ಪುಟ-೯೦, ೧೯೯೪)

ಹೊಂದಾಣಿಕೆ ಎನ್ನುವುದು ಸಾಮಾನ್ಯವಾಗಿ ಇಂದಿನ ಸ್ತ್ರೀ ಶೋಷಣೆಗೆ ಮೂಲ ಕುಮ್ಮಕ್ಕು ನೀಡಿರಬೇಕು. ಶೋಷಣೆಯ ವಿರುದ್ಧವಾಗಿ ಪ್ರತಿಯೊಂದು ಜೀವಿಯು ವಿರೋಧಿಸಿದಾಗ ಶೋಷಣೆಯ ಪೋಷಕನಾದವನಿಗೆ ಬಿಸಿ ಮುಟ್ಟುತ್ತದೆ. ಆದರೆ ಶೋಷಣೆಯನ್ನು ಅನುಭವಿಸುವ ಸ್ತ್ರೀ ವರ್ಗ ಈ ಶೋಷಣೆಯ ತನಗಂಟಿದ ಶಾಪ ಎಂದೆಣಿಸಿ ಕಣ್ಮುಚ್ಚಿ ಸ್ವೀಕರಿಸುವುದು. ಒಂದು ರೀತಿಯಲ್ಲಿ ಹೊಂದಾಣಿಕೆಯಾಗಿದೆ. ಈ ಹೊಂದಾಣಿಕೆಯೇ ಪುರುಷ ಪ್ರಪಂಚದ ಅಷ್ಟು ಕೃತ್ಯಗಳಿಗೆ ಕುಮ್ಮಕ್ಕು ನೀಡುತ್ತದೆ.

ಈ ಮೇಲಿನ ಕವನ ಅಕ್ಕಮಹಾದೇವಿಯು ಪುರುಷ ನಿರಾಕರಣೆಯನ್ನು ಎತ್ತಿ ಹಿಡಿದ ಸ್ಥೈರ್ಯ ತೋರಿಸಿದರೆ, ಇಂದು ಇವಳು ನಿರಾಕರಿಸಿದ ಮಟ್ಟವನ್ನು ತಾನು ಸ್ವೀಕರಿಸಿ ನಡೆಯುತ್ತಿರುವ ಬಗ್ಗೆ ತನ್ನ ಹೊಂದಾಣಿಕೆ ಬಗ್ಗೆ ಕವಯತ್ರಿಗೆ ಅರಿವಿದೆ ಮತ್ತು ವಿಷಾಧವಿದೆ.

ತಮ್ಮಿ ಸ್ಮಾರಕ
ಪ್ರೇಮದ ಪ್ರತೀಕ
ತ್ಯಾಗದ ದ್ಯೋತಕ
ಎಂದು ಬೀಗವುದು
ಗೋಲು ಗುಮ್ಮಟ
ಗೋರಿಯಾಗುವುದು
ಹೆಣ್ಣು ಬಾಳ
ಭ್ರಮೆಯ ಬಲು

ದೊಡ್ಡ ದುರಂತ
ಮಹಲಿನ ಪ್ರತಿ
ಅಮೃತ ಶಿಲೆಯಲ್ಲೂ
ಅಮರ ರಾಗಗಳಿಯುವ
ಅವಳ ಮನದ ಮೂಲಕ
ಪ್ರತಿಬಿಂಬಿಸುವುದು
ಈ ಶಹಜಾನನಂಥಾ
ಗಂಡಸರ ಬದುಕಿನ
ಎನ್ನೆಲ್ಲಾ ತಂತ್ರ[೪೨]

(ಶ್ರೀಮತಿ ಪದ್ಮಾ ಬಸವರಾಜು–ಪುಟ–೮೦, ೧೯೮೯)

'ಹೆಣ್ಣು ಸ್ವಭಾವತಃ ರೂಪಿಸಲ್ಪಟ್ಟವಳು' ಎಂಬ ವರ್ಜಿನಿಯಾಳ ಎಲ್ಲಾ ಮಾತುಗಳು ಅಕ್ಷರಸಹಃ ಸತ್ಯವಾದುದು. ಸಂಪ್ರದಾಯ ಮತ್ತು ಧರ್ಮಗಳು ಅವಳನ್ನು ನಿಯಂತ್ರಿಸಿದರೂ ಮೇಲ್ನೋಟಕ್ಕೆ ಅವು ಶೋಷಣೆಯ ಮಟ್ಟಕ್ಕೆ ನಿಲ್ಲಿಸುವುದಿಲ್ಲ. ಬದಲಾಗಿ ಕರ್ತವ್ಯ ಪ್ರಜ್ಞೆ, ಪತಿಭಕ್ತಿ ಮಾತೃಸ್ಥಾನ, ಹೀಗೆ ಹಲವು ರೀತಿಯಿಂದ ಅವಳನ್ನು ಕೆಳಮಟ್ಟಿಗೆ ಶೋಷಿಸುತ್ತದೆ.

ಮಹಿಳೆಯರೆ ಮತ್ತೆ ಮತ್ತೆ ಸ್ವಾತಂತ್ರ್ಯದ ಕೂಗನ್ನೇಕೆ ಹಾಕುವಿರಿ
ನಿಮಗೂ ಹೊರಗೂ ದುಡಿಯಲು ಬಿಟ್ಟಿಲ್ಲವೆ
ಅಂದೊಮ್ಮೆ ಅಗ್ನಿಪರೀಕ್ಷೆ ತುತ್ತಾಗಿದ್ದಳೊಬ್ಬ ಸೀತೆ
ಇಂದು ಹೆಜ್ಜೆ–ಹೆಜ್ಜೆಗೂ ಅಗ್ನಿಯಲ್ಲಿ ನೊಂದು–ಬೆಂದು
ಹೊರಬರುವ ಸೀತೆಗೆ ಲೆಕ್ಕವಿಲ್ಲ.[೪೩]

(ಲೀಲಾಕುಲಕೋಟಿ–ಪುಟ–೯೦, ೧೯೮೬)

ಆರ್ಥಿಕ ಸ್ವಾತಂತ್ರ್ಯ ಸ್ತ್ರೀಗೆ ದೊರೆತರೆ ಅವಳ ಮುಕ್ಕಾಲುಪಾಲು ಸಮಸ್ಯೆಗಳಿಗೆಲ್ಲಾ ಪರಿಹಾರವೆಂಬ ಭಾವನೆ ಇದ್ದರೂ ಇದಕ್ಕೆ ಮೂಲವಾದ ಸಮಸ್ಯೆಗಳು ಬೆನ್ನತ್ತಿವೆ. ಮನೆಯಿಂದ ಹೊರಗಡೆ ಹೋದ ಸ್ತ್ರೀಗೆ ಸ್ವಾತಂತ್ರ್ಯ ಮೇಲ್ನೋಟಕ್ಕಾದರೂ ಅದು ಹಲವು ರೀತಿಯಿಂದ ತೊಂದರೆಗೀಡು ಮಾಡುತ್ತದೆ. ದುಡಿದುದ್ದೇನು ತನ್ನದೆಂಬ ಭಾವನೆ ಇರುವುದಿಲ್ಲ. ದುಡಿದಿದ್ದನ್ನೆಲ್ಲಾ ತಂದು ಗಂಡಿನೆಡೆಗೆ ಸುರಿಯಬೇಕು. ಮನೆ ಒಳಗೆ–ಹೊರಗೆ ಕೆಲಸಕ್ಕೆ ದುಡಿಯಲು ಹೋದಾಗ ಹಲವು ಸಂಶಯಕ್ಕೆ ಈಡು ಮಾಡುತ್ತದೆ. ಅವಳು ಹೊರಗಡೆ ಪ್ರಪಂಚದಲ್ಲಿ ದುಡಿಯಲೇಬೇಕೆಂಬ ಅನಿವಾರ್ಯ ದೈಹಿಕವಾಗಿ ಶೋಷಣೆಯಾದರೆ ಸಹಿಸಿಕೊಳ್ಳಬೇಕಾಗುತ್ತದೆ.

ನಾನೊಬ್ಬನ ಪತ್ನಿ ಮೂರು ಮಕ್ಕಳ ತಾಯಿ
ಇದು ನನ್ನ ಕುಪ್ಪಸ ಬಟ್ಟೆ ಬೈತಲೆ ಎಲ್ಲಾ ನನ್ನ

ಅತ್ತೆಮಾವಂದಿರ ಮರ್ಜಿ
ತವರು ಮನೆಯಲ್ಲಿ ಕೊಟ್ಟ ಹೆಣ್ಣು ಕುಲಕ್ಕೆ ಹೊರಗು
ಧೋರಣೆ
ನನಗೊಂದು ಮನೆಯೇ ಇಲ್ಲ
ನಾನು ಇದನ್ನು ಬಿಟ್ಟು ಹೋದರು
ಮನೆಯ ಮಾನ ಕಳೆಯುವ ಹೆದರಿಕೆ[೪೪]

(ಪ್ರತಿಭಾ ನಂದಕುಮಾರ್–ಪುಟ–೨೩, ೧೯೮೩)

ಅವಲಂಬನೆ ಹೆಣ್ಣಿನ ಜಯಮಾನಕ್ಕೆ ಅಂಟಿದ್ದರೂ ಸ್ವಾವಲಂಬನೆಯ ಬದುಕು ಅವಳನ್ನು ಸದಾ ಕಾಡುತ್ತದೆ. ತಂದೆ–ಗಂಡ ಮಗನ ಚೌಕಟ್ಟಿನಲ್ಲಿ ತಾನು ಸ್ವಾತಂತ್ರ್ಯ ಕಳೆದುಕೊಂಡು ತಾನು ಸ್ವತಂತ್ರರಾಗುವ ಪರಿಯನ್ನು ಹೇಳುತ್ತದೆ. ಅಸ್ತಿತ್ವದ ಪ್ರಶ್ನೆ ತನ್ನ ಅವಲಂಬನೆಯಲ್ಲಿ ಸಂಪ್ರದಾಯದಲ್ಲಿ ಧರ್ಮದ ಜಾಡಿನಲ್ಲಿ ಕಳೆದು ಹೋಗುತ್ತದೆ.

ಅವ ಬಿತ್ತಿದ್ದನ್ನು ಬೆಳೆಯುತ್ತಾ ಕಾಲಕಳೆಯುತ್ತಿದ್ದೇನೆ.
ನನ್ನೊಳಗೆ ಎಲ್ಲೋ ಕಳೆದಿರುವ ನನ್ನ
ಹುಡುಕುತ್ತಿದ್ದೇನೆ.
ನಿನ್ನ ಕಣ್ಣಿಂದಲೇ ನನ್ನನ್ನು ಹರಿದು ತಿಂದರೆ
ನಾನು ಕಳೆದುಕೊಳ್ಳುವುದು ಮಾನವಲ್ಲ ಅಭಿಮಾನ
ಅದನ್ನು ಬಿಟ್ಟು ನಿನ್ನ ಹುರಿದು ಮುಕ್ಕುತ್ತೇನೆ ಕ್ಷಮಿಸು
ನಾ ಭಾರತೀಯ ನಾರಿ ಅನಿಸಿದ್ದನೆಲ್ಲಾ ಹತ್ತಿಕ್ಕುತ್ತೇನೆ.[೪೫]

(ಸುಕನ್ಯಾಮಾರುತಿ, ಪುಟ–೪೦, ೧೯೮೩)

ಅವ ಬಿತ್ತಿದ್ದನ್ನು ಬೆಳೆಯುತ್ತೇನೆ ಎನ್ನುವಲ್ಲಿ ಸ್ವಂತಿಕೆಯ ಪ್ರಶ್ನೆ ಕಾಡುತ್ತದೆ. ತಾನು ಯಾವುದನ್ನು ಮಾಡಲು ಸ್ವತಂತ್ರಳಲ್ಲ ಎಂಬುದು ಇದರ ದ್ವಂದ್ವಾತ್ಮಕ ಹೇಳಿಕೆಯಾಗಿದೆ.

ಏಮಳ್ಳ ಮೀಸಿ ಜಿರಳೆಗೂ ಐತಿ ಗಡ್ಡ ಹೋತಕ್ಕೂ ಐತಿ
ಇಷ್ಟಕ್ಕೂ ನೀನು ಒಬ್ಬ ಗಂಡಸು ಅನುಕೋಬ್ಯಾಡ[೪೬]

(ಶಶಿಕಲಾ ವೀರಯ್ಯಸ್ವಾಮಿ, ಪುಟ–೬೧, ೧೯೭೯)

ಲಿಂಗ ಅಸಮಾನತೆ ಜಗತ್ತಿನಾದ್ಯಂತ ಕಾಣಬಹುದಾದ ಸಾಮಾನ್ಯವೆನಿಸುವ ಮಟ್ಟಿಗೆ ಜಾರಿಯಲ್ಲಿದೆ. ಭಾರತವಲ್ಲದೆ ಎಲ್ಲಾ ದೇಶದಲ್ಲಿ ಲಿಂಗ ಅಸಮಾನತೆ ಕಾಣಬಹುದು. ದೈಹಿಕ ಕಾರಣವೇ ಗಂಡು–ಹೆಣ್ಣಿನ ಅಸಮಾನತೆಗೆ ಅಂತರ ಹೆಚ್ಚಿಸುತ್ತದೆ. ಎಂದು ಸಾರುತ್ತದೆ. ಆದರೆ ಮೂಲಭೂತವಾಗಿ ಇದೊಂದೇ ಕಾರಣವೆಂದು ಹೇಳಲಾಗುವುದಿಲ್ಲ. ಗಂಡು, ಸಂತಾನಕ್ಕೆ ಕಾರಣನಾದರೆ ಹೆಣ್ಣು ಉತ್ಪಾದಕಳು. ಇಲ್ಲಿ ಉತ್ಪಾದಕಗಳಿಗಿಂತ ಕಾರಣನಾದವ ಮುಖ್ಯವಾಗುತ್ತಾನೆ.

ಅವಳ ಸಂತಾನೋತ್ಪತ್ತಿ ಪಾಲನೆ, ಪೋಷಣೆ, ಅಡುಗೆ ಮಾಡುವವಳು, ಹೆಣ್ಣು ಗಂಡಿನ ಉತ್ಪಾದನೆಯಲ್ಲಿ ಪಾಲುದಾರಳಾದಾಗ, ಅವನ ದೃಷ್ಟಿಯಲ್ಲಿ ಸ್ವಾಭಾವತಃ ಅನುಬೋಗಿ, ಬೆಳೆ ಬೆಳೆಯುವ ಉತ್ಪಾದಕ ಹೀಗೆ ಅವಳು ವಿಂಗಡನೆಯಾಗುತ್ತಾ ಹೋಗುತ್ತಾಳೆ. ಹೀಗೆ ಲಿಂಗ ಅಸಮಾನತೆ ಹೆಣ್ಣನ್ನು ಕುಬ್ಜಳಾಗಿ ಪರಾವಲಿಂಬಿಯಾಗಿ ರೂಢಿಸುತ್ತದೆ.

ಹಗಲು ರಾತ್ರಿ
ಅವಳ ಬಾಳ ಸುಖವನ್ನು
ಮೊಗೆ-ಮೊಗೆದು ಕುಡಿದು
ಬರಿದು ಮಾಡಿದ ಅವನೀಗ
ಸತ್ತು ಅವಳು ಬದುಕಿನ
ಬಾಟಲೆಯೊಳಗೆ ನೆಮ್ಮದಿ
ತುಂಬಿಸಿ ಹೋಗಿದ್ದಾನೆ.[೪೭]

(ಭಾಗ್ಯ, ಪುಟ-೬೦, ೧೯೮೧)

ಮದ್ಯಪಾನದ ಸಮಸ್ಯೆ ಪುರುಷನಿಗೆ ಸಂಬಂಧಿಸಿದರೂ ಪರೋಕ್ಷವಾಗಿ ಕಾಡುತ್ತಿರುವುದು ಹೆಣ್ಣಿಗೆ. ಅವಳು ಪುರುಷನಿಗೆ ಅವಲಂಬಿಂತವಾಗಿರುವುದರಿಂದ ಅವಳು ಈ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶದ ಹುಡುಕಾಟಕ್ಕೆ ಹೊರಟಾಗ ಆದರ್ಶದ ಚೌಕಟ್ಟು ಎಲ್ಲಿ ಎಂಬ ಪ್ರಶ್ನೆ ಮೂಡುತ್ತದೆ.

ಅದಕ್ಕೊಂದು ಚೌಕಟ್ಟು ಹುಡುಕಲು ಹೊರಟಾಗ ಮಹಿಳಾ ಸಂವೇಧನೆಯಡಿಯಲ್ಲಿ ಹುಡುಕಬೇಕಾಗುತ್ತದೆ. ಮಹಿಳಾ ಸಂವೇದನೆಯಲ್ಲಿ ಅಭ್ಯಾಸ ನಡೆಯುತ್ತಾ ಹೋದಂತೆಲ್ಲಾ ಆದರ ಸಮಸ್ಯೆಗಳ ಪರಿಶೀಲನೆ ಮಾಡಿದೆಂತಲ್ಲಾ ಆದರ್ಶದ ಚೌಕಟ್ಟು ದೊರೆಯುತ್ತಾ ಹೋಗುತ್ತದೆ.

ಮಹಿಳಾ ಸಂವೇದನೆಯಲ್ಲಿ ಒಡಮೂಡಿದ ಹಕ್ಕುತ್ತಾಯಗಳನ್ನು ಒಂದು ರೀತಿಯಲ್ಲಿ ಸ್ತ್ರೀಗೆ ಬೇಕಾದ ಹಕ್ಕುಗಳನ್ನು ಒತ್ತಿ ಹೇಳುವುದರ ಜೊತೆಗೆ ಪುರುಷ ಸ್ತ್ರೀ ಬಿಟ್ಟುಕೊಡಬೇಕಾದ ಹಕ್ಕುಗಳನ್ನು ಒತ್ತಾಯಿಸುತ್ತದೆ. ಈ ಬಿಟ್ಟುಕೊಡಬೇಕಾಗಿರುವ ಭಾವದಲ್ಲಿ ಸ್ತ್ರೀಗೆ ಪುರುಷ ಆದರ್ಶ ಪುರುಷನಾಗುತ್ತಾನೆ.

ಅನಾದಿಕಾಲದಿಂದಲೂ ಸ್ತ್ರೀಯ ಮೇಲೆ ಶೋಷಣೆ, ಅವಳ ಮೇಲೆ ಹೇರಿದ ನಿರ್ಬಂಧಗಳು ಸ್ವಾತಂತ್ರ್ಯದ ಮಿತಿಗಳು ನಿರಂತರವಾಗಿ ಇವುಗಳ ಮುಂದುವರಿಕೆಗೆ ಒಂದು ರೀತಿಯಲ್ಲಿ ಸ್ತ್ರೀ ನಿರ್ಲಿಪ್ತವಾಗಿ ಅನುಭವಿಸಿದ್ದೆ ಕಾರಣ ಎನ್ನಬಹುದು

ಬದಲಾದ ಜಾಗತಿಕ ಜಗತ್ತು ಹೊರದೇಶದ ಸ್ತ್ರೀವಾದ ವಿದ್ಯಾವಂತ ಸ್ತ್ರೀಯನ್ನು ಎಚ್ಚರಗೊಳಿಸಿತು ಅವಳು ಬಂಡಾಯದ ಕೂಗು ಮತ್ತು ಹಕ್ಕುಗಳನ್ನು ಕೊಡಬೇಕಾಗಿ ಮಾಡಿದ ಒತ್ತಡ ಪುರುಷನನ್ನು ಕೊಂಚ ಬದಲಾಯಿಸಿದೆ ಸ್ತ್ರೀ ತನ್ನಷ್ಟೆ ಸಬಲಳೆಂಬ ನಿರ್ಧಾರಕ್ಕೆ ಇಂದಿನ ಜಗತ್ತು ಸರಿ ಎಂದಿದೆ. ಅದಕ್ಕೆ ತಕ್ಕಂತ ಶಿಕ್ಷಣ, ಉದ್ಯೋಗ, ಸ್ತ್ರೀ ಸ್ವಾತಂತ್ರ್ಯ ಕೊಡುವಲ್ಲಿ ಬೆಳೆದು ಬಂದಿದೆ. ಒಂದು ರೀತಿಯಲ್ಲಿ ಪುರುಷ ದಬ್ಬಾಳಿಕೆಯು ಕರಗುತ್ತಿದೆ ಎಂದು ಭಾಸವಾಗುತ್ತದೆ. ಅರ್ಥವಿಲ್ಲದ ಕಟ್ಟುಸಿಟ್ಟಿನಲ್ಲಿ ಸ್ತ್ರೀಯನ್ನು ಕಟ್ಟಿಹಾಕಿದ ಪುರುಷ ಇಲ್ಲಿ ಉದಾರಿ ವ್ಯಕ್ತಿಯಾದಷ್ಟು ಆದರ್ಶ ಪುರುಷನಾಗುತ್ತಾನೆ.

ಪುರುಷ ವಿರೋಧಿ ಮಹಿಳಾ ಕಾವ್ಯದಲ್ಲಿ 'ಆದರ್ಶ ಪುರುಷ'ನ ನೆಲೆ ಹುಡುಕುವಿಕೆ

ಆದರ್ಶ ಪರಿಭಾಷೆಯ ವಿರುದ್ಧದ ಪಾತ್ರವೆಂದರೆ ಆದರ್ಶವಲ್ಲದ ಪಾತ್ರ, ಸಕಾರಾತ್ಮಕತೆ ಪಾತ್ರ ಚಿತ್ರಣವಾಗಿದೆ. ಒಳ್ಳೆಯದರ ಹುಡುಕುವಿಕೆಯನ್ನು, ಕೆಟ್ಟದನ್ನು ಪರಿಭಾವಿಸಿಸುವ ಮೂಲಕ ಕಂಡುಹಿಡಿಯಬಹುದು.

ಹೊಸಗನ್ನಡ ಮಹಿಳಾ ಕಾವ್ಯದಲ್ಲಿ ಅದರ್ಶವನ್ನು ಹುಡುಕುತ್ತಾ ಹೊರಟಾಗ ಆದರ್ಶದ ಅರ್ಥ, ವ್ಯಾಪ್ತಿ, ವಿಶಾಲ ವಿಸ್ತಾರವಾಗಿ ಕಾಣುತ್ತದೆ. ವಿಭಿನ್ನತೆಯ ಅಭಿಪ್ರಾಯಗಳು ದೊರೆಯುತ್ತದೆ. ಒಟ್ಟಾರೆ ಅಭಿಪ್ರಾಯ ಮತ್ತೊಬ್ಬರ ಅಭಿಪ್ರಾಯಕ್ಕಿಂತ ಭಿನ್ನವಾಗುತ್ತಾ ಹೋಗುತ್ತದೆ. ಆದರ್ಶ ಪುರುಷನೆಂದರೆ ಯಾರು ಎಂಬ ಪ್ರಶ್ನೆ ಬಂದಾಗ ಅದನ್ನು ಮಹಿಳಾ ಸಂವೇದನೆಯಲ್ಲಿ ಹುಡುಕಬೇಕಾಗುತ್ತದೆ. ಏಕೆಂದರೆ ಆಧುನಿಕ ಮಹಿಳಾ ಕಾವ್ಯ ಸ್ತ್ರೀವಾದಿ ನೆಲೆಯಲ್ಲಿ ಹೆಚ್ಚು ಪ್ರಚಲಿತವಾಗುತ್ತದೆ. ಅದರ ಎಲ್ಲಾ ಗುಣಗಳನ್ನು ಸಿದ್ದಾಂತಗಳನ್ನು ರೂಢಿಸಿಕೊಂಡಿದೆ.

ಸ್ತ್ರೀವಾದ ಹಿನ್ನಲೆಯಲ್ಲಿ ರಚಿತವಾದ ಕಾವ್ಯಗಳು ಪುರುಷನ ವಿಷಯದಲ್ಲಿ ಹೆಚ್ಚು ನಕರಾತ್ಮಕ ಅಂಶಗಳನ್ನು ಗುರುತಿಸಿದೆ. ಹೆಚ್ಚು ಕಡಿಮೆ ಪುರುಷನನ್ನು ಬಲವಾಗಿ ವಿರೋಧಿಸುವುದೇ ಸ್ತ್ರೀವಾದಿ ಕಾವ್ಯದ ಲಕ್ಷಣವೆಂದೇ ಗುರುತಿಸಿದೆ. ಆರಂಭದ ಕವಿಯತ್ರಿಯರ ಪುರುಷನ ಅವಗುಣಗಳನ್ನು ವಿರೋಧಿಸಿತ್ತು. ಆಧುನಿಕ ಮಹಿಳಾ ಕಾವ್ಯ ಅದನ್ನು ವಿರೋಧಿಸುವುದರ ಜೊತೆಗೆ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ಮಟ್ಟಕ್ಕೆ ಬರುತ್ತವೆ. ಇವಳ ದಿಟ್ಟತನ ಮತ್ತು ಬದಲಾದ ಪರಿಸ್ಥಿತಿ ಅವಕಾಶಗಳು ಅವಳು ಬದಲಾಯಿಸಿದ್ದನ್ನು ಕಾಣಬಹುದು.

ಶತಮಾನಗಳಿಂದಲೂ ಶೋಷಣೆಗೊಳಗಾದ ಸ್ತ್ರೀಯ ಶಿಕ್ಷಣವೆಂಬುದು ಮೂಗನಿಗೆ ಬಾಯಿ ಬಂದಾಯಿತು. ಅಲ್ಲಿಯವರೆಗೆ ಹಿಡಿದಿಟ್ಟ ಭಾವನೆ ಅಭಿಪ್ರಾಯಗಳು ಹೊರಬಿದ್ದವು.

ಈ ಕಾರಣದಿಂದ ಪುರುಷನ ವಿರೋಧಿ ಲಕ್ಷಣಗಳನ್ನು ಹಿಡಿಯುವಂತಿದ್ದವು ಇದು ಮುಂದುವರಿದಂತೆಲ್ಲಾ ಮುಂದಿನ ಪೀಳಿಗೆಯ ಕವಿಯತ್ರಿಯರು ಇದನ್ನು ಮುಂದುವರಿಸಿದರು. ಈ ಕಾರಣದಿಂದ ಹೊಸಗನ್ನಡ ಮಹಿಳಾ ಕಾವ್ಯದಲ್ಲಿ ನಕರಾತ್ಮಕವಾದ ಗುಣಗಳಿಂದ ಪುರುಷನನ್ನು ವಿಮರ್ಶಿಸುವ ರೀತಿ ಆರಂಭವಾಯಿತು. ಪ್ರಸ್ತುತ ಪ್ರಬಂಧದಲ್ಲಿ ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟವನ್ನು ಹುಡುಕುತ್ತಾ ಹೊರಟಾಗೆಲ್ಲಾ ಆದರ್ಶವಲ್ಲದ ಪುರುಷ ಚಿತ್ರಣ ಹೆಚ್ಚಾಗಿರುವಾಗ ಆದರ್ಶ ಪಾತ್ರವನ್ನು ಹುಡುಕಿ ತೆಗೆಯುವುದೇ ಕಷ್ಟವಾಗುತ್ತದೆ. ಈ ಕಾರಣದಿಂದ ಆದರ್ಶ ಪುರುಷನ ಆದರ್ಶವಲ್ಲದ ಪಾತ್ರ ಚಿತ್ರಣದಿಂದ ಆತನ ಆದರ್ಶವನ್ನು ಬೊಟ್ಟು ಮಾಡಿ ತೋರಿಸುವುದಾಗಿದೆ.

ಈ ರೀತಿಯ ಒಂದು ಕಾವ್ಯಗಳು ಆಧುನಿಕ ಮಹಿಳಾ ಕಾವ್ಯದಲ್ಲಿ ಕಾಣಬಹುದು. ಈ ಮಾದರಿ ಕಾವ್ಯಗಳನ್ನು ಅವಲೋಕಿಸೋಣ.

ಮನೆಯ ಹೆಂಡತಿಯನ್ನು ಬಲವಾಗಿ ಮುಚ್ಚಿಟ್ಟು
ಬರುವ ಗಂಡ ಹೊರಗೆ ತನ್ನ ಕೋಟನ್ನು ಹಾಯಾಗಿ
ಬಿಚ್ಚುತ್ತಾನೆ.[೪೮]

(ಶೈಲಜಾ ಉಡುಚಣ, ಪುಟ-೬೦, ೧೯೮೧)

ಪುರುಷನಿಗಿಲ್ಲದ ಶೀಲದ ಪ್ರಶ್ನೆ ಸ್ತ್ರೀಗೆ ಮಾತ್ರ ಸೀಮಿತವಾಗಿರುವುದರ ಬಗ್ಗೆ ಧಿಕ್ಕಾರವಿದೆ. ಹೆಂಡತಿ ಎಂದರೆ ಸಾಮಾಜಿಕ ಚೌಕಟ್ಟಿನಲ್ಲಿ ನೈತಿಕತೆವುಳ್ಳವಳು, ಕ್ಷಮಯಾಧರಿತ್ರಿಯಾಗಿ ಗಂಡನನ್ನು ಸಲಹುವವಳು, ಮಕ್ಕಳ ಪಾಲನೆ ಪೋಷಣೆಯಲ್ಲಿ ತೊಡಗುವಳು ಎಂಬುದಾಗಿ ಚಿತ್ರಿಸುವ ಸಾಮಾಜವು ಪುರುಷನಿಗೆ ಯಾವುದೇ ಬಲವಾದ ಜವಬ್ದಾರಿಗಳನ್ನು ಹೊರಿಸುವುದಿಲ್ಲ, ಹೊರಿಸಿದರೂ ಅದನ್ನು ಮೀರಿದವರು ಸಾವರಿಸಿಕೊಳ್ಳುತ್ತದೆ. ಈ ಮೇಲಿನ ಕವನದಲ್ಲಿ ಹೆಂಡತಿಯನ್ನು ನಿಯಂತ್ರಣ ಮಾಡುವ ಗಂಡನಾಗಿ ಕಂಡುಬಂದರೆ ನಂತರದಲ್ಲಿ ತನ್ನ ಶೀಲದ ವಿಷಯದಲ್ಲಿ ಸಡಿಲವಾಗಿ ಮೈಮರೆಸುವುದನ್ನು ನೋಡುತ್ತೇವೆ. ಆತನ ಅವತಾರವಾದನ್ನು ನೋಡಬಹುದು. ಹಾಗಾದರೆ ಇಲ್ಲಿ ಆದರ್ಶಪುರುಷನ ವ್ಯಕ್ತಿತ್ವ ಯಾವುದು ಎಂದರೆ, ಸ್ತ್ರೀ ಬಯಸುವ ಈ ರೀತಿಯ ವ್ಯಕ್ತಿತ್ವದ ವಿರುದ್ಧದ ವ್ಯಕ್ತಿ ಆದರ್ಶನಾಗುತ್ತಾನೆ. ಹೆಣ್ಣಿನಲ್ಲಿ ಶೀಲವಿರಬೇಕೆಂದು ಬಯಸಿದರೆ ಗಂಡು ಸ್ವತಃ ಶೀಲವಂತನಾಗಿರಬೇಕೆಂಬ ಆಶಯ

ನಿನ್ನ ತುಟಿ ಅಂಚುಗಳಿಗೆ ಹೂ ಅರಳಿಸುವ ದೈರ್ಯವಿಲ್ಲ
ನಿನ್ನ ಕಣ್ಣಂಚಿಗೆ ಕ್ಷಮೆಯ ಎದುರಿಸುವ
ಸೌಜನ್ಯವಿಲ್ಲ ನಿನಾದೆಯ ವಿಲಾಪಗಳಿಗೆ

ತಾನಗಳನ್ನು ಹುಟ್ಟಿ ಸಾಲ ಉಕ್ಕುವ ದ್ರವವನ್ನೆಲ್ಲಾ
ನೇಹವೆಂಬುದು ಹೇಗ ನಕ್ಕಿತು ನಿನಗೆ.[೪೯]

(ವಿಜಯಶ್ರೀ ಸಬರದ, ಪುಟ-೪೯, ೧೯೯೧)

ಸ್ವಾತಂತ್ರ್ಯವಾಗಿ ಭಾವನೆಗಳನ್ನು ವ್ಯಕ್ತಪಡಿಸುವ ಕವಿಯತ್ರಿ, ಇಲ್ಲಿ ಒಬ್ಬ ಆದರ್ಶ ಪುರುಷನಿಂದ ಬಯಸುವುದಾದರೂ ಏನನ್ನು? ಎಂಬುದು ತಿಳಿಸುತ್ತದೆ. ಇಲ್ಲಿನ ಪುರುಷನ ನಕಾರಾತ್ಮಕ ಗುಣಗಳ ವಿರುದ್ಧದ ಸಕಾರಾತ್ಮಕ ಗುಣಗಳು ಆದರ್ಶ ಪುರುಷನ ಗುಣಗಳಾಗಿರುತ್ತದೆ.

ನಾಸತ್ತ ಮೇಲೆ ಜನ ಮೆಚ್ಚಿಕೊಳ್ಳುವ ತಾಜಮಹಲು ಗೋಳಗುಮ್ಮಟಗಳು
ನನಗೆ ಬೇಡ ಹುಜೂರು
ನಾನಿರುವಾಗಲೇ ರೊಟ್ಟಿ ಬಟ್ಟೆ ತಲೆಯ
ಮೇಲೊಂದು ಸೂರು ಕಟ್ಟು ನೋಡಿ
ಈ ಆಸೆಗಳೇ ಈಡೇರುವಾಗ
ಇನ್ನೆಲ್ಲಿ ಪ್ರೇಮಿಸಲಿ ಬಾದಷಹರೆ[೫೦]

(ಸುಕನ್ಯಾ ಮಾರುತಿ ಪುಟ-೨೮, ೧೯೮೫)

ಐತಿಹಾಸಿಕವಾಗಿ ಪ್ರಸಿದ್ದನಾದ ಶಹಜಾನ್‌ನ ತಾಜಮಹಲ್ ಕಟ್ಟಿಸಿದ್ದು ಪ್ರೇಮದ ದ್ಯೋತಕವಾದರೂ ಅದು ಶಹಜಾನನ ಪ್ರತಿಷ್ಠೆಯ ಸಂಕೇತವೆಂದು ಕವಿಯತ್ರಿ ಭಾರಿಸುತ್ತಾಳೆ. ಬದುಕಿದ್ದಾಗ ಪ್ರೇಮಿಸಲು ಶಹಜಾನ್‌ನ ತಾಜಮಹಲ್ ಕೇವಲ ಪ್ರತಿಷ್ಠೆಯ ಸಂಕೇತವೆಂದೇ ಬಯಸುತ್ತಾಳೆ. ತಾಜಮಹಲ್ ಮೂಲಕ ತನ್ನ ಪ್ರೀತಿಯನ್ನು ಹೇಳಿದ ಶಹಜಾನದು ಸ್ವಾರ್ಥ. ಕವಿಯತ್ರಿಗೆ ಪ್ರೀತಿಯನ್ನೇ ಪ್ರಶ್ನೆಯಾಗಿಸಿದ ಶಹಜಾನನೇ ಆದರ್ಶಪುರುಷನೆಂದು ಒಪ್ಪುವುದಿಲ್ಲ.

ತಳೆದ ಭಾವನೆಗಳಿಗೆ ಸಂಯಮದ ಬಂಡೆಏಳೆದು
ಮರುಭೂಮಿಯ ಹೂವಾದ ಅಹಲ್ಯೆ
ಅದೇ ಗಂಡಸಿನ ಸ್ವಾರ್ಥ ಕೆಲಸಕ್ಕೆ ಕಲ್ಲೂ
ಆನಂತ ಕಾಲದ ತಪಗೈದ ನಿನಗೆ ಮತ್ತೇಕೆ
ತಳಮುಟ್ಟಿದ ಮನ ರಾಮನ
ಪಾದದರ್ಶನವೇಕೋ ಬೇಕಾಯಿತು ಅರಿವಾಗುತ್ತಿಲ್ಲ.[೫೧]

(ಪ್ರೇಮ ಸಿರಸಿ, ಪುಟ-೪೯, ೧೯೮೧)

ಹೊಸಗನ್ನಡ ಮಹಿಳಾ ಕಾವ್ಯದಲ್ಲಿ ಕವಿಯತ್ರಿಯ ಇನ್ನೊಂದು ಸಾಧನೆಯಂದರೆ, ಪುರಾಣದ ಪಾತಿವ್ರತ್ಯದ ಮಾದರಿ ಗಳಿಸಿದ ಪಾತ್ರಗಳೆನ್ನೆಲ್ಲಾ ಕಾವ್ಯದ ವಸ್ತುವಾಗಿದ್ದಾರೆ. ಆಹಲ್ಯೆಯ ಬದುಕು ಮತ್ತು ಜೀವನವನ್ನು ಪುರಾಣಗಳು ಗೌತಮನ ಉದಾತ್ತತೆ ಎಂಬಂತೆ ಆಹಲ್ಲೆಯ ತಪ್ಪೆಂಬಂತೇ, ಚಿತ್ರಿಸಿದರೆ ಆಧುನಿಕ ಮಹಿಳಾ ಕಾವ್ಯ ಕವಿಯತ್ರಿಯರು ಆಹಲ್ಯೆ

ಯಲ್ಲಿ ಸಮಾಜದ ಹೆಣ್ಣಿನ ಭಾವನೆಯನ್ನು ಗುರುತಿಸಿದರು. ಗೌತಮನ ನಡುವಳಿಕೆಯಲ್ಲಿ ಪ್ರಭುತ್ವವನ್ನು ಗುರುತಿಸಿದ್ದಾರೆ. ಶತಮಾನಗಳಿಂದ ಮೇಲೇಸಿದರ ಆದರ್ಶ ಪಾತ್ರಗಳು ಹೊಸಗನ್ನಡ ಮಹಿಳಾ ಕಾವ್ಯ ಕವಿಯ ಕಾವ್ಯದಲ್ಲಿ ವಿರಚನೆಗೊಂಡು ಹೊಸದೆಂಬ ನಕಾರಾತ್ಮಕ ಪಾತ್ರಗಳಾದವು ಮಹಿಳಾ ಸಂವೇಧನೆಯಡಿಯಲ್ಲಿ ಆ ಪಾತ್ರಗಳನ್ನು ಪ್ರಶ್ನಿಸಿದವು.

ಇನ್ನೆಲ್ಲಿಯ ನಗು ಗೆಳೆಯ?
ನಾನು ನಕ್ಕಾಗ ನನ್ನ ಮುಂಗೈ ತುಂಬಾ ಕೊಳ್ಳ ಹೊಡೆದು
ಸಮಾಜ ವಿಧಿ ನಿಯಮ ನಿಷೇದಗಳಡಿಯಲ್ಲಿ
ನಾನೆ ಮನವ ಹೊತುಬಿಟ್ಟೆ[೫೨]

(ಪದ್ಮಾಶೇಖರ–ಪುಟ–೨೮, ೧೯೮೯)

ಈ ಕಾವ್ಯದಲ್ಲಿ ಸಮಾಜದ ನೀತಿ ನಿಯಮ ಕಟ್ಟುಪಾಡಿನಲ್ಲಿ ಕವಿಯತ್ರಿಯನ್ನು ಕಟ್ಟಿ ಹಾಕಿದ್ದನ್ನು ಕಾಣಬಹುದು. ಆದರ್ಶ ಸ್ತ್ರೀಯನ್ನು ಸೃಷ್ಟಿಸಿದ ಸಮಾಜ ಅದನ್ನು ಮೀರುವ ಪ್ರಜ್ಞಾವಂತೆ ಮಹಿಳೆ. ಪುರುಷನೆಡೆಗೆ ಇರುವ ಈ ನಾಜೂಕಿನ ಶ್ರೇಷ್ಠತೆಯನ್ನು ಇಂದು ನಾಜೂಕಿನ ಪುರುಷನನ್ನು ವಿರೋಧಿಸುತ್ತಾಳೆ.

ಇರಲಾರೆ ನಾನಿನ್ನು ನಿನ್ನ ಪಂಜರದೊಳಗೆ ಚಿನ್ನದ್ದು
ಅಲ್ಲವೆಂದವರಾರು?
ಮುತ್ತು ಹವಳಗಳ ಪೋಣಿಸಿದರೇನು?
ಬಿಟ್ಟು ಬಿಡು ನನ್ನದಾರಿ ದಾರಿ ಹೋಗದ ಬಾನ ಕಡೆಗೆ[೫೩]

(ಸುನಿತಾ ಹಲವಾಯಿ, ಪುಟ–೧೦, ೧೯೮೯)

ವ್ಯಕ್ತಿ ಸ್ವಾತಂತ್ರ್ಯ ಪುರುಷನಿಗೆ ಮಾತ್ರ ಸೀಮಿತವಾದುದಲ್ಲ. ಅದು ಸ್ತ್ರೀಗೂ ಸಂಬಂಧಿತವಾದುದು. ಚಿನ್ನದ ಪಂಜರ ಮುತ್ತು ಹವಳಗಳ ಸ್ವರೂಪದ ಪಂಜರವಾದರು, ಸ್ವಾತಂತ್ರ್ಯವಿಲ್ಲದ ಆಕೆಯ ವ್ಯಕ್ತಿತ್ವ ಅದೋಗತಿಯ ಸ್ವರೂಪದಲ್ಲಿರುತ್ತದೆ. ಚಿನ್ನದ ಪಂಜರ ದೃಷ್ಟಿಯಲ್ಲಿನ ಸಮಾಜ, ಪರಂಪರೆ, ಸಂಪ್ರದಾಯಗಳು, ಚಿನ್ನದ ಮಾದರಿಯಲ್ಲಿದ್ದರೂ ಅವು ಅವಳಿಗೆ ಪಂಜರವಾಗುತ್ತದೆ. ಬಿಟ್ಟುಬಿಡು ನನ್ನ ದಾರಿ ಹೋಗದ ಬಾನಕಡೆಗೆ ಎನ್ನುವಲ್ಲಿ ತಾನು ಹೋಗಬೇಕಾದ ಸ್ವತಂತ್ರ ದಾರಿ ಅವಳಿಗೆ ಅರಿವಿದೆ.

ಅಳುತ್ತಾ ಮರಳಿದೆ ಗಂಡನೆಂಬ ತೆಗೆಣಿ ಮನೆಗೆ
ಬರಿಗೈ ತಂದ್ದಿದ್ದ ನನ್ನ ನೋಡಿ ಪರಮೇಶ್ವರನ ಮೂರನೇ
ಕಣ್ಣು ಬಿಟ್ಟಾರು[೫೪]

(ಶಾಂತ ಕೆ., ಬಸವರಾಜು ಪುಟ–೧೦, ೧೯೯೬)

ವರದಕ್ಷಿಣೆ ಪಿಡುಗು ಇಡೀ ಸಮಾಜವನ್ನು ತಲ್ಲಣಿಸಿದೆ. ಗಂಡನ ಮೇಲಸ್ತರ ಉದಾತ್ತತೆಯನ್ನು ಹಣದ ರೂಪದಲ್ಲಿ ವರದಕ್ಷಿಣೆಯೆಂಬ ಹೆಸರಲ್ಲಿ ಗುರುತಿಸಲಾಗುತ್ತದೆ. ವರದಕ್ಷಿಣೆ ಪದ್ಧತಿ ಅನುಮಾನೀಯ ವರ್ತನೆ ಎಂಬುದು ನಿಜವಾದರೂ. ಅದನ್ನು ವಿರೋಧಿಸುವ ಘಟ್ಟಕ್ಕೆ ಸಮಾಜವು ಇನ್ನು ಸ್ಥಿರವಾಗಿಲ್ಲ. ಮೇಲಿನ ಕವನ ಬರಿಗೈ ತಂದ ನನ್ನ ನೋಡಿ ಪತಿದೇವರನು ಮೂರನೇ ಕಣ್ಣು ಬಿಟ್ಟಾರು ಎಂಬಲ್ಲಿ ಆದರ್ಶವಲ್ಲದ, ಪೀಡಿಸುವ, ಅರ್ಥಿಕವಾಗಿ ಅವಳ ಮೇಲೆ ಅವಲಂಬಿತವಾಗಿರುವ ಪಾತ್ರವನ್ನು ಹೇಳುವ ಮೂಲಕ ಆತನ ಆದರ್ಶವನ್ನು ಸಕಾರಾತ್ಮಕ ಪಾತ್ರದಲ್ಲಿ ಗುರುತಿಸಿ ಹೇಳುತ್ತದೆ.

> ಸೀತೆಗೆ ಅಗ್ನಿ ಪರೀಕ್ಷೆ ಮಾಡಿದರೆನಂತೆ?
> ಶ್ರೀರಾಮನಲ್ಲಿದ್ದ ಪಿಶಾಚಿ ಅಗ್ನಿ ಪ್ರವೇಶ ಮಾಡಲೇ ಇಲ್ಲ
> ಮತ್ತೆ ಅದು ತನ್ನ ಅಟ್ಟಹಾಸ ಮರೆದು ಕೊನೆಗೂ
> ಅಸಂಬದ್ಧ ನೆಪಗಳ ಹುಡುಕಿ ಕಾಡಿಗಟ್ಟಿತು.
> ತಪ್ಪು ಯಾರದೋ ಶಿಕ್ಷೆ ಮಾತ್ರ ಸೀತೆಗೆ
> ಅ ವನವಾಸ ಮಾತ್ರ ತಪ್ಪಲಿಲ್ಲ.[೫೫]

(ಕಾಂತದತ್ತಾತ್ರೇಯ-ಪುಟ-೨೬, ೧೯೮೩)

ಸೀತೆಯ ಅಗ್ನಿಪರೀಕ್ಷೆ ಅವಳ ಪಾತಿವ್ರತ್ಯದ ಪ್ರಶ್ನೆಯಾಗಿ ಸಾಮಾನ್ಯವೆನಿಸಿದರೂ ಅದು ಅವಳ ಮೇಲಿನ ಅನುಮಾನದ ಪ್ರಶ್ನೆಯಾಗಿದೆ. ಪುರಾಣದಿಂದ ಶತಮಾನದಿಂದ ಆದರ್ಶ ಪಾತ್ರವೆನಿಸಿದ ಪಾತ್ರ ಇಲ್ಲಿ ಆದರ್ಶವಲ್ಲದ ಧರ್ಮದ ಅಂಧಕನಾದ ಶ್ರೀರಾಮನನ್ನು ನೆನೆಸುತ್ತದೆ. ಅದರ್ಶ ಪಾತ್ರಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತವೆ ಎಂಬುದು ನಿಜವಾಗುತ್ತದೆ. ಬದಲಾದ ಸ್ತ್ರೀ ದೋರಣೆಗಳು, ಬದಲಾದ ಸಮಾಜ ಕಟ್ಟುಪಾಡುಗಳು ಪುರುಷನ ಆದರ್ಶವನ್ನು ಪ್ರಶ್ನಿಸಲಾರಂಭಿಸುತ್ತದೆ. ಬದಲಾಯಿಸುತ್ತದೆ ಎಂಬುದು ಸತ್ಯವಾಗುತ್ತದೆ.

> ಚಿಕ್ಕಂದಿನಿಂದಲೂ ಓಲೆ ಮುಂದೆ ಅಜ್ಜ ಅಮ್ಮ
> ಬೈಯುತ್ತಾ ಕುದಿಯುತ್ತಾ ಜೀವಂತಿಕೆಯ ಹಿಂಡಿ
> ಹಿಪ್ಪೆ ಮಾಡಿ
> ನೀರೆರೆದು ಬೆಳಸಿದ ಕೋಮಲ ಕನಸುಗಳು
> ತರಕಾರಿಯಂತೆ
> ಕಚಕಚನೆ ಕಡಿದು ಬದುಕು ಇಡಿಯಾಗಿ ಅರೆರೆದು
> ಸವೆದು
> ಬಡಿಸಲು ಸಜ್ಜಾಗುವ ಅದೇ ದಿನಚರಿಯು
> ಕಂಡು ಹೇಳಿದ.
> ಏನಿದೆಯಮ್ಮ ಅಡುಗೆ ಮನೆಯಾಚೆ
> ಮಗಳೇ ಅಲ್ಲಿ ಗಂಡಸರಿದ್ದಾರೆ.

ಅವರ ಅಣತಿಯಂತೆ ಅವರಿಗಾಗಿಯೇ ನಾವಿದ್ದೇವೆ
ಶಾಪಕೊಟ್ಟು ಕಲ್ಲು ಮಾಡಿದ ಕಲ್ಲು ಹೃದೆಯದ
ಮಹಾಪುರುಷರು
ಸಂಶಯದ ಬೆಂಕಿಯಲ್ಲಿ ಸುಟ್ಟ ಪಾತಿವ್ರತ್ಯ
ಆಳದ ಪುರುಷೋತ್ತಮರು
ಎಚ್ಚರ ತಿಳಿಯದೆ ಎಂದಾದರೂ ದಾಟಿ
ಬಿಟ್ಟಿಯಾ ಹುಶಾರು[೫೬]

(ಗೀತಾ ವಸಂತ–ಪುಟ–೨೮, ೧೯೯೧)

ಪಿತೃಪ್ರದಾನ ಕುಟುಂಬದ ಒಟ್ಟಾರೆ ಚಿತ್ರಣವನ್ನು ಎಳೆಎಳೆಯಾಗಿ ಬಿಡಿಸಿದಂತಿದೆ. ಪಿತೃ ಪ್ರದಾನ ಕುಟುಂಬದ ಪುರುಷ ಯಜಮಾನಿಕೆಯಿಂದ ಸ್ತ್ರೀಗೆ ತನ್ನತನದ ಪ್ರಶ್ನೆ ಎತ್ತುವಾಗೆಲ್ಲಾ ಭಾವುಕನಾಗಿ ಸಂಸಾರಕ್ಕೆ ಅಂಟಿಸುತ್ತಾನೆ. ಈ ಕಾವ್ಯ ಹೆಚ್ಚು ವಿರೋಧಾಬ್ಯಾಸದ ನಕರಾತ್ಮಕತೆಯನ್ನು ಗುರುತಿಸಿದ್ದಾಳೆ. ಅವಳ ಆದರ್ಶ ಪುರುಷನ ಕನಸು ಕಂಡ ಕವಿಯತ್ರಿಗೆ ಸಮಾಜದ ಪ್ರಭುತ್ವವಾದಿ ಪುರುಷನ ಈ ರೀತಿಯ ನಡುವಳಿಕೆಗಳು ಅವಳನ್ನು ಕಂಗಾಲಾಗಿಸಿರುವುದು ನಿಜವೇ.

ಆದರ್ಶ ಪುರುಷನ ಕನಸು ಕವಿಯತ್ರಿಯ ದೃಷ್ಟಿಯಲ್ಲಿ ತನಗೆ ಸಂಬಂಧಿಸಿದ್ದಂತೆ ಆದರ್ಶ ಸಮಾಜದ ಕನಸು ಹೌದು. ಪಿತೃಪ್ರದಾನ ಸಮಾಜದ ಈ ದೇಶದಲ್ಲಿ ಆತನ ನಡುವಳಿಕೆ ದಬ್ಬಾಳಿಕೆಗಳು ಸಮಾಜದಲ್ಲಿ ಅನೈತಿಕತೆ ಸೃಷ್ಟಿಸುವುದು ಸಹಜವೇ. ಅಧಿಕಾರಿಶಾಹಿಯೊಬ್ಬ ದುರಾಗ್ರಹಿ, ದುರಾಡಳಿತ ಮಾಡುವವನಾಗಿದ್ದರೆ ಆತನ ರಾಜ್ಯವು ಹೇಗೆ ಹದಗೆಡುವುದೋ ಆತನ ಪ್ರಜೆಗಳು ಹಿಂಸೆಗೀಡು ಮಾಡುವರೊ ಅದೇ ರೀತಿ ಪಿತೃಪ್ರಧಾನದಲ್ಲಿ ಪುರುಷನಾದವನು ಆದರ್ಶವಾಗಿಲ್ಲದ್ದರೆ ಅದು ಸ್ತ್ರೀ ಪ್ರಪಂಚಕ್ಕೆ ಮಾಡುವ ಅನ್ಯಾಯಕ್ಕಿಂತ ಹೆಚ್ಚಾಗಿ ಅದು ಇಡೀ ಸಮಾಜದ ಅನಾರೋಗ್ಯಕ್ಕೆ ಕಾರಣವಾಗುವುದು ಖಚಿತವೇ.

ಆದರ್ಶವೆಂಬುದು ಮಾನವೀಯತೆ, ಪ್ರೀತಿ ನೈತಿಕತೆ, ಸಂಯಮ ಹೃದಯ ವೈಶಾಲ್ಯಗಳ ಮೊತ್ತ ಆಧುನಿಕ ಮಹಿಳಾ ಕಾವ್ಯದಲ್ಲಿ ಮಹಿಳಾ ಕವಿಯತ್ರಿ ಹುಡುಕ ಹೊರಟಿರುವುದು ಇದನ್ನೆ. ನಕರಾತ್ಮಕ ಗುಣಗಳನ್ನು ಗುರುತಿಸಿ ಅವುಗಳ ಮೂಲಕ ತಾನು ಬಯಸಿದ ಆದರ್ಶ ಪುರುಷನಲ್ಲಿ ಇರಬೇಕಾದ ಸಕರಾತ್ಮಕ ಗುಣಗಳನ್ನು ಹೇಳುತ್ತಾ ಆದರ್ಶ ಪುರುಷನನ್ನು ಹುಡುಕುತ್ತಾರೆ.

ಟಿಪ್ಪಣಿಗಳು

೧. ಶಶಿಕಲಾ ವಸ್ತ್ರದ, ಗುಬ್ಬಿಮನಿ ನೆಲೆಮನೆ ಪ್ರಕಾಶನ ಮೈಸೂರು ೧೯೯೭

೨. ಡಿ. ವಿಜಯ, ಪ್ರಗತಿ ವಿದ್ಯಾನಂದ ಪ್ರಕಾಶನ ಮೈಸೂರು ೧೯೯೯.

೩. ಹೆಚ್.ಎಸ್. ಮುಕ್ತಾಯಕ್ಕಾ-ನಾವು ಪತಿವ್ರತೆಯರಲ್ಲ ಪ್ರಶಾಂತ ಪ್ರಕಾಶನ ರಾಯಚೂರು, ೧೯೮೩.

೪. ಸುಕನ್ಯಾ ಮಾರುತಿ, ತಾಜ ಮಹಲಿನ ಹಾಡು ಸಂಗ್ರಾಮ ಪ್ರಕಾಶನ ೧೯೮೩.

೫. ಲತಾಶೇಖರ್-ವಿಪರ್ಯಾಸ ಐಶು ಪ್ರಿಯಾಂಕ ಪ್ರಕಾಶನ, ೧೯೯೮.

೬. ಭಾಗ್ಯ, ಸುಳ್ಳಿನಾಚೆಯ ಸತ್ಯ ನೆಲೆಮನೆ ಪ್ರಕಾಶನ ಮೈಸೂರು ೧೯೮೧

೭. ರಮಾಕುಮಾರಿ-ಅಂತರಂಗದ ಹಾಡು ಅಭಿವ್ಯಕ್ತ ಪ್ರಕಾಶನ ೨೦೦೩

೮. ಎಂ.ಎಸ್.ವೇದ ಬಿಳಲುಗಳು ದೇವಿ ಪ್ರಕಾಶನ ಮೈಸೂರು ೧೯೮೯.

೯. ಎಂ.ಎಸ್. ವೇದ ಪರಸ್ಪರ ದೇವಿ ಪ್ರಕಾಶನ ಮೈಸೂರು ೧೯೮೯.

೧೦. ಸುಕನ್ಯಾ ಕಲಶ, ಗತದೊಂದಿಗೆ ಸ್ವಗತ, ಅಕ್ಷರ ಪ್ರಕಾಶನ ಸಾಗರ ೧೯೮೮.

೧೧. ಬಿ.ಎನ್. ತೇಜಸ್ವಿನಿ, ದೈವಿ ತೇಜಸ್ವಿನಿ ಪ್ರಕಾಶನ ೨೦೦೩.

೧೨. ರೂಪಾಹಾಸನ, ಒಂದಿಷ್ಟು ಹಸಿಮಣ್ಣು ನೆಲೆಮನೆ ಪ್ರಕಾಶನ ೧೯೯೮.

೧೩. ಬೆಳೆಗೆರೆ ಜಾನಕಮ್ಮ-ಚಂಡಶಾಸನ(ನೇಮಿಚಂದ್ರ(ಸಂ) ಬೆಳೆಗೆರೆ ಜಾನಕಮ್ಮ-ಬದುಕು ಬರಹ ಕರ್ನಾಟಕ ಲೇಖಕಿಯರ ಸಂಘ ಬೆಂಗಳೂರು

೧೪. ಭಾಗ್ಯ ಸುಳ್ಳಿನಾಚೆಯ ಸತ್ಯ, ನೆಲೆಮನೆ ಪ್ರಕಾಶನ ಮೈಸುರು ೧೯೮

೧೫. ಮಾಲತಿಶೆಟ್ಟಿ, ಅಕ್ಕಕೇಳವ್ವ ಕೃತಿ ಪ್ರಕಾಶನ ಧಾರವಾಡ ೧೯೮೮

೧೬. ಚ. ಸರ್ವಮಂಗಳ, ಭಂಡರು, ರುಜುವಾತು ಪ್ರಕಾಶನ ಮೈಸೂರು ೧೯೮೮.

೧೭. ಶೈಲಜಾ ಉಡುಚಣಾ, ಚುಟುಕು ನನ್ನಂತವರು ಮಹಿಳಾ ಸಾಹಿತ್ಯದ ಹುಬ್ಬಳ್ಳಿ ೧೯೯೫.

೧೮. ಚೆನ್ನಕ್ಕ ಪಾವಟೆ, ಎಲಿಗಾರ, ಸಾಹಿತ್ಯ ಚೈತ್ರ ಪ್ರಕಾಶನ ಚನ್ನಗಂಗಾ ಪ್ರಕಾಶನ, ೧೯೯೩.

೧೯. ಬಿ.ಪಿ. ಅಶಾಕುಮಾರಿ, ಮಹಿಳಾ ಸಾಹಿತ್ಯ ಆರ್ಯಾಂಬಿ ಪಟ್ಟಾಬಿ ಸಂಹವನ ಪ್ರಕಾಶನ, ೨೦೦೩

೨೦. ಎಂ.ಎಸ್. ವೇಧ, ಕಾವ್ಯಕೂಸು ದೇವಿ ಪ್ರಕಾಶನ ಮೈಸೂರು ೧೯೮೫.

೨೧. ಶೈಲಜಾ ಉಡುಚಣ, 'ಕಾದುನೋಡು' ಮಹಿಳಾ ಸಾಹಿತ್ಯಕ ಹುಬ್ಬಳ್ಳಿ ೧೯೯೫.

೨೨. ಚಿ.ನಾ.ಮಂಗಳಾ, ಕನ್ನಡ ಕವನಗಳು ಚೈತ್ರ ಪ್ರಕಾಶನ ೧೯೯೮.

೨೩. ಉಜ್ವಾಲಾ ಪ್ರಾಣಜಾಗೌಡ, ನಾವು ಬದುಕ ಬಯಸುತ್ತೇವೆ ಚಿಮ್ಮಯಿ ಪ್ರಕಾಶನ ೨೦೦೧.

೨೪. ಚ. ಸರ್ವಮಂಗಳ ಭಂಡಾಯ (ಅಮ್ಮನಗುಡ್ಡ) ನೆಲೆಮನೆ ಪ್ರಕಾಶನ, ೧೯೯೧

೨೫. ಕಮಲಾಹಂಪನ, ಬೊಗಸೆ, ಸಿ.ವಿ.ಜಿ ಪಬ್ಲಿಕೇಷನ್, ಬೆಂಗಳೂರು, ೨೦೦೩

೨೬. ಗಾಯಿತ್ರಿನಾವಡ, ಕರಾವಳಿ ಜನಪದ ಸಾಮಾಜಿಕ ಸ್ತ್ರೀ ನೆಲೆಗಳು, ಸಿರಿಪ್ರಕಾಶನ, ಬೆಂಗಳೂರು, ೨೦೦೧

೨೭. Srilata Baltliwala : Empowerment of women in South Asia, 1993
೨೮. ಪ್ರೀತಿ ಶುಭಚಂದ್ರ, ಮಹಿಳಾ ಅಧ್ಯಯನದ ತಾತ್ವಿಕ ನೆಲೆ ಮತ್ತು ಮಹಿಳಾ ಚಳುವಳಿ, ಕ.ವಿ.ವಿ.ಹಂಪಿ, ೨೦೦೦
೨೯. ಹೇಮಲತಾ ಹೆಚ್.ಎಂ., ಮಹಿಳಾವಾದ ಹುಟ್ಟು ಬೆಳವಣಿಗೆ ಪರಿಕಲ್ಪನೆ ಸಿದ್ಧಾಂತಗಳು, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಕೃಷ್ಣಮೂರ್ತಿ ಪುರಂ, ೧೯೯೯
೩೦. ವಿಜಯಶ್ರೀ ಸಬರದ ಲಕ್ಷ್ಮಣರೇಖೆ ದಾಟಿದವರು ಪಲ್ಲವಿ ಪ್ರಕಾಶನ ಬೀದರ ೧೯೯೧.
೩೧. ಡಿ. ಮಂಗಳಾ, ಪ್ರಿಯದರ್ಶಿನಿ ಸಾಮಾಜಿಕ ಮಹಿಳಾ ಸಾಹಿತ್ಯ, ಸಂವಹನ ಪ್ರಕಾಶನ ಮೈಸೂರು, ೧೯೯೩
೩೨. ಶರೀಫಾ, ನೂರನೇಳಾ ಅಂತರಂಗ ಸಮತಾ ಆಧ್ಯಯನ ಕೇಂದ್ರ ಮೈಸೂರು, ೧೯೯೭
೩೩. ಮಾಲತಿ ಪಟ್ಟಣಶೆಟ್ಟಿ, ಗರಿಗೆದರಿ, ಕೃತಿ ಪ್ರಕಾಶನ, ಧಾರವಾಡ ೧೯೮೩.
೩೪. ಪ್ರೇಮ ತಾಶೀಲ್ದಾರ ಅವಕಾಶ, ನೆಲೆಮನೆ ಪ್ರಕಾಶನ, ಬೆಂಗಳೂರು, ೧೯೯೯
೩೫. ಸ.ಉಷಾ, ತೊಗಲುಗೊಂಬೆ ಆತ್ಮಕತೆ, ಪುಸ್ತಕ ಚಿಲುಮೆ ಪ್ರಕಾಶನ, ಮೈಸೂರು ೧೯೮೧.
೩೬. ಭಾಗ್ಯಲಕ್ಷ್ಮಿ ಸುಮಬಂದನ ಶ್ರೀ ಬತ್ತರೇಶ ಪ್ರಕಾಶನ ಕಲುಬುರ್ಗಿ ೧೯೮೨.
೩೭. ಕಮಲಮೂರ್ತಿ, ತುಂಬೇ ಹೂವು ಚಿನ್ಮಯಿ ಪ್ರಕಾಶನ, ೧೯೮೬
೩೮. ಪ್ರತಿಭಾನಂದಕುಮಾರ್ ನಾವು ಹುಡುಗಿಯರೇ ಹೀಗೆ. ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೮೩.
೩೯. ವಿಜಯಶ್ರಿ ಸಬರದ, ಲಕ್ಷ್ಮಣರೇಖೆ ದಾಟಿದರು, ಪಲ್ಲವಿ ಪ್ರಕಾಶನ, ಬೀದರ ೧೯೯೧.
೪೦. ಸರಸ್ವತಿಗೌಡ, ಸ್ವಾತಂತ್ರ್ಯದ ಕನವರಿಕೆ, ಬಯಲುಸೀಮೆ ಸೀಮೆ ಪ್ರಕಾಶನ, ಚನ್ನಪಟ್ಟಣ ೧೯೮೦.
೪೧. ಪ್ರೇಮತಾಶಿಲ್ದಾರ, ನಾನು ಅಕ್ಕಕೇಳವ್ವ ನೆಲೆಮನೆ ಪ್ರಕಾಶನ, ಬೆಂಗಳೂರು, ೧೯೯೯.
೪೨. ಶ್ರೀಮತಿ ಪದ್ಮಾಬಸವರಾಜು ಒಮ್ಮತ ಸಮ್ಮತ ಅನನ್ಯ ಪ್ರಕಾಶನ, ಧಾರವಾಡ ೧೯೮೯.
೪೩. ಲೀಲಾ ಕುಲಕೋಟಿ ನೆನಪಿನಾಳದ ದೋಣಿ ದೇವಿಪ್ರಕಾಶನ ಮೈಸೂರು ೧೯೮೬.
೪೪. ಪ್ರತಿಭಾನಂದ ಕುಮಾರ್, ಹುಡುಗಿಯರೇ ಹೀಗೆ ಕನ್ನಡ ಸಂಘ ಕ್ರೈಸ್ಟ ಕಾಲೇಜು, ಬೆಂಗಳೂರು-೧೯೮೩.
೪೫. ಸುಕನ್ಯಾ ಮಾರುತಿ, ಪಂಚಾಗ್ನಿ ಮದ್ಯೆ ಗುಬ್ಬಿಮನಿ, ಸಂಗ್ರಾಮ ಪ್ರಕಾಶನ ದಾರವಾಡ ೧೯೮೩.
೪೬. ಶಶಿಕಲಾ ವೀರಯ್ಯ ಸ್ವಾಮಿ, ಗುಬ್ಬಿಮನಿ ನೆಲೆಮನೆ ಪ್ರಕಾಶನ, ಮೈಸೂರು ೧೯೭೯.
೪೭. ಭಾಗ್ಯ ಸುಳ್ಳಿನಾಚೆಯ ಸತ್ಯ, ಬಳುವಳಿ, ನೆಲಮನೆ ಪ್ರಕಾಶನ, ೧೯೮೧
೪೮. ಶೈಲಜಾ ಉಡುಚಣ ಸ್ವಗತ, ಚಂದ್ರನಾಥ ಪ್ರಕಾಶನ. ಧಾರವಾಡ ೧೯೮೧.
೪೯. ವಿಜಯಶ್ರೀ ಸಬರದ, ಜ್ವಲಂತ ಪಲ್ಲವಿ ಪ್ರಕಾರದ ಬೀದರ ೧೯೯೧
೫೦. ಸುಕನ್ಯಾ ಮಾರುತಿ, ಪಂಚಾಗ್ನಿ ಮದ್ಯೆ, ಸಂಗ್ರಾಮ ಪ್ರಕಾಶನ, ಧಾರವಾಡ ೧೯೮೫.
೫೧. ಪ್ರೇಮ ಸಿರಿಸಿ. ಆಹಲ್ಯಾ ವಿಲಾಸ, ಅಭಿರುಚಿ ಪ್ರಕಾಶನ ಬೆಂಗಳೂರು ೨೦೦೩.

೫೨. ಪದ್ಮಶೇಖರ, ಹಕ್ಕಿಯ ಹರೆಯ, ಪಲ್ಲವಿ ಪ್ರಕಾಶನ ಮಂಡ್ಯ ೧೯೮೯.

೫೩. ಸುನಿತಾ ಹಳವಾಯಿ ಕಳೆದು ಹೋದ ಪದ್ಯಗಳು ಸಂಗ್ರಾಮ ಪ್ರಕಶನ ಧಾರವಾಡ ೧೯೮೯.

೫೪. ಶಾಂತ ಕೆ. ಬಸವರಾಜು ಭಾವದೆಸಳು ಪ್ರಕಾಶನ ಮೈಸೂರು ೧೯೯೬.

೫೫. ಕಾಂತ ದತ್ತಾತ್ರೇಯ, ಸೀತೆಯ ಕೊರಗು, ಭಾವ ಕೃತಿ ಪ್ರಕಾಶನ, ಧಾರವಾಡ ೧೯೮೩.

೫೬. ಗೀತಾ ವಸಂತ, ಹೊಸ್ತಿಲಾಚೆಯ ಹೊಸಹೆಜ್ಜೆ ಸಾಹಿತ್ಯ ಆಕಾಡಮಿ ಪ್ರಕಾಶನ ಬೆಂಗಳೂರು ೧೯೯೧.

ಅಧ್ಯಾಯ ೫

ಸಂಬಂಧ ವಾಚಕಗಳ ಮೂಲಕ ‘ಆದರ್ಶ ಪುರುಷನ’ ಹುಡುಕಾಟ

೫

ಸಂಬಂಧ ವಾಚಕಗಳ ಮೂಲಕ 'ಆದರ್ಶ ಪುರುಷನ' ಹುಡುಕಾಟ

ಮಹಿಳೆಯ ಜೀವಮಾನವಿಡಿ ತಂದೆ, ಗಂಡ, ಪ್ರೇಮಿ, ಹೀಗೆ ಹಲವು ಹಂತದಲ್ಲಿ ಅವಳ ಜೀವನವನ್ನು ಪುರುಷನ ಪಾತ್ರವು ನಿರಂತರ ನಿಯಂತ್ರಿಸುತ್ತಲೇ ಸಾಗುತ್ತದೆ. ಇಲ್ಲಿ ಆಧುನಿಕ ಮಹಿಳಾ ಕವಿಯತ್ರಿಯು ತನ್ನ ಕವನಗಳ ಮೂಲಕ ಆದರ್ಶ ಪುರುಷನನ್ನ ಹುಡುಕುತ್ತಾ ಹೊರಡುತ್ತಾಳೆ. ಈ ಎಲ್ಲಾ ಸಂಬಂಧಗಳು ಜೀವನ ಪೂರ್ತಿ ಪ್ರಭಾವಿಸುತ್ತಿರುತ್ತವೆ. ಈ ಎಲ್ಲಾ ಸಂಬಂಧಗಳನ್ನು ಬಿಟ್ಟು ಸ್ವತಂತ್ರ ಜೀವನ ನೆಡೆಸಲು ಅವಳಿಂದ ಸಾಧ್ಯವಾಗದು. ತಂದೆ ಜನ್ಮಪೋಷಕನಾದರೆ, ಹದಿಹರೆಯದರಲ್ಲಿ ಪ್ರೇಮಿ, ಗಂಡ ಅವಳ ಕನಸಿನ ಮನುಷ್ಯನಾದರೆ, ವಯಸ್ಸಾದಂತೆ ಮಗ ಅವಳ ಪೋಷಕನಾಗುತ್ತಾನೆ.

ಮಹಿಳಾ ಕಾವ್ಯದಲ್ಲಿ ಗಂಡನ ಪರಿಕಲ್ಪನೆಯಲ್ಲಿ 'ಪುರುಷ'

ಕಂಡಗ ಒಡವೆಯಿದ್ದು
ಹಿಂಡು ಬಳಗ ಇದ್ರೂ
ನನ್ನ ಗಂಡ ಇಂದ್ದಂಗೆ ಅತದ

ಎಂಬ ಜಾನಪದ ಗಾದೆಯಲ್ಲಿ ಪುರುಷ ಪ್ರಪಂಚಕ್ಕೆ ಹೆಣ್ಣು ಸಂಕುಲ ಎಷ್ಟರ ಮಟ್ಟಿಗೆ ಗೌರವ ಕೊಟ್ಟಿದೆ ಎಂಬುದನ್ನು ನೋಡಬಹುದು. ತನ್ನನ್ನು ತೃಣವೆಂದು ಬಗೆದು 'ಗಂಡ' ನೆನ್ನುವನನ್ನು ಅತ್ಯಂತ ಎತ್ತರಕ್ಕೇರಿಸಿ ನೋಡುವ ದೃಷ್ಟಿಕೋನವಾಗಿದೆ.

ಗಂಡು-ಹೆಣ್ಣು ಪ್ರಾಚೀನ ಮಾನವ ಯುಗದಲ್ಲಿ ಸಣ್ಣದಾಗಿ ವ್ಯವಸಾಯ ಆರಂಭಿಸಿ, ಒಂದು ಮನೆ, ಗಂಡ-ಹೆಂಡತಿ ಇರಲು ಆರಂಭಿಸಿದಾಗ, ಗಂಡು-ಹೆಣ್ಣು ವಿಷಯದಲ್ಲಿ ಸರ್ವ ಸಮಾನತೆ ಉಂಟಾಯಿತು. ಹೆಣ್ಣು ದೈಹಿಕವಾಗಿ ಸ್ವಲ್ಪಮಟ್ಟಿಗೆ ಪುರುಷನಿಗೆ ಹೋಲಿಸಿದರೆ ಬಲಹೀನವಾದ್ದರಿಂದ ಮನೆಯ ಒಳಗೂ, ಹೊರಗಿನ ಮಳೆ-ಬಿರುಗಾಳಿ ಪ್ರಕೃತಿಯ ಭೀಕರತೆಗೆ ಎದುರಿಸುವ ಎದೆಗಾರಿಕೆ ಮತ್ತು ಭಯಂಕರ ವನ್ಯಜೀವಿಗಳ ಬೇಟೆ ಪುರುಷನಿಗೆ ಮೀಸಲಾಯಿತು. ಈ ಹಂತದಲ್ಲಿ ಜೈವಿಕ ಕಾರಣಕ್ಕೆ ಹೆಣ್ಣನ್ನು ಈ ಚಟುವಟಿಕೆಯಿಂದ ದೂರವಿರಿಸಲಾಯಿತು. ಜೀವ ಕೊಡುವ ಹೆಣ್ಣಿಗಿಂತ ತನ್ನ ಜೀವವನ್ನು ಅಪಾಯಕ್ಕೆ ಸಿಲುಕಿಸಿ ಹೋರಾಡುವ ಗಂಡನಿಗೆ ಮಾನ್ಯತೆ ಹೆಚ್ಚಾಯಿತು.

'ಗಂಡ' ಎನ್ನುವ ಪರಿಕಲ್ಪನೆಯಲ್ಲಿ ಎರಡು ವಿಭಾಗ ಮಾಡಬಹುದು.

೧. ದೈವಿ ಭಾವನೆಯಲ್ಲಿ ಗಂಡ

೨. ಶೋಷಕನಾಗಿ ಗಂಡ

೧. ದೈವಿ ಭಾವನೆಯಲ್ಲಿ ಗಂಡ

ವಿವಾಹವೆಂಬ ವ್ಯವಸ್ಥೆಯಿಂದ ಗಂಡು-ಹೆಣ್ಣನ್ನು ಒಂದುಗೂಡಿಸುವ ಅದರ ಮೂಲಕ ಲೈಂಗಿಕ ಜೀವನವನ್ನು ನಡೆಸುವ, ಮಕ್ಕಳನ್ನು ಪಡೆಯುವ ಮುಕ್ತ ಅವಕಾಶವು ದೊರಕಿತು. ಇದು ಒಂದು ಅತ್ಯುತ್ತಮವಾದ ಆರೋಗ್ಯಕರ ಸಾಮಾಜಿಕ ಜೀವನವನ್ನು ನಡೆಸಲು, ಅತ್ಯುತ್ತಮ ಕುಟುಂಬದ ಪರಿಕಲ್ಪನೆಗೆ ಕಾರಣವಾಯಿತು.

ದೈವೀಭಾವನೆಯಲ್ಲಿ 'ಗಂಡ' ನೆನ್ನುವ ಪರಿಕಲ್ಪನೆ ಭಾವನಾತ್ಮಕವಾಗಿ ಒಡಮೂಡಿದ್ದು, ಹಿಂದಿನಿಂದಲೂ ಭಾವನಾತ್ಮಕವಾದ ರೀತಿಯಲ್ಲಿ ಯೋಚಿಸುತ್ತಿರುವ ಹೆಣ್ಣಿನ ಅಂತರಾಳದ ಭಾವನೆ ತನ್ನೀ ಭಾವನೆಗಳನ್ನು, ಪ್ರಕೃತಿಯೊಳಗೆ ನಡೆಯುವ ಸಮಸ್ತ ಸುಂದರ ವ್ಯಾಪಾರವು, ತನ್ನ ಗಂಡನ ತಾಕತ್ತಿಗೆ ಸಮವೆಂದು ಹೇಳುತ್ತಾಳೆ.

ಕವಿಯತ್ರಿಯೊಬ್ಬರು ಪ್ರಕೃತಿಯಲ್ಲಿ ತನ್ನ ಗಂಡನನ್ನು ಕಂಡರೆ ನಂತರದಲ್ಲಿ 'ಪ್ರೀತಿಯ' ಸಾಂಕೇತಿಕವಾದ ಶ್ರೀಕೃಷ್ಣನನ್ನು ನೆನಸುತ್ತಾರೆ.

ಹದಿನಾರು ಸಾವಿರ ಸತಿಯರ ಕೃಷ್ಣ
ಪಂಚಪಾಂಡವರ ಪತ್ನಿ ಕೃಷ್ಣ
ಒಬ್ಬರಲ್ಲಿ ಆತ್ಮ ಒಂದಡೆ ನೇಹ
ವಿಚಾರದ ಹೊಂದಿಕೆ ಇಲ್ಲಿ ವಿಚಿತ್ರ
ಆನಂದ ಇಲ್ಲಿ[೧]

(ಶೈಲಜಾ ಉಡುಚಣ, ಪುಟ.೧೬, ೧೯೮೧)

ಹೊಂದಾಣಿಕೆ ಪ್ರೀತಿ ಕಷ್ಟದಲ್ಲಿ ಆಗುವ ಪ್ರಿಯ ಸ್ನೇಹಿತ, ನೋವಿನಲ್ಲಿ ಕೈ ಹಿಡಿಯುವ ಆಪ್ತಮಿತ್ರ ಇವು ಪ್ರತಿಯೊಂದು ಹೆಣ್ಣು ಇಷ್ಟಪಡುವ 'ಗಂಡನ' ಕಲ್ಪನೆ.

ನನ್ನ ಹಾಗೆ ನಿಷ್ಠ ಸರಳ
ನೆರಳಿನಂತೆ ನಡೆದ
ಇಷ್ಟಮಿತ್ರ
ಎಂಥ ಕಷ್ಟದಲ್ಲಿಯೂ
ಯಾರು ಕೈಬಿಟ್ಟರು
ಇನ್ಯಾರು ಕೈ ಕೊಟ್ಟರು

ಬೆಂಬಿಡದೆ ನನ್ನ ಹದ್ದಿನಲ್ಲೆ
ಹುಂಬನಂತೆ ತುತ್ತುವ ಕಾಯ
ವಾಚ ಮನಸಾ ಕೈ ಹಿಡಿದ
ಸಾಚಾ ಗಂಡ
ಈ ಅನನ್ಯ
ಪುರುಷನನ್ನು ಮನಸಾ
ಒಪ್ಪಿಕೊಂಡಿದ್ದಾನೆ
ಈಗ ತೆಪ್ಪಗಿದ್ದೇನೆ[೨]

(ಮಾಲತಿ ಪಟ್ಟಣಶೆಟ್ಟಿ, ಪುಟ-೨೬, ೧೯೭೬)

ಸಾಚಾಗಂಡನ ಕವಿಯತ್ರಿಯ ಕಲ್ಪನೆ ಎಲ್ಲ ಮದ್ಯಮ-ಮೇಲ್ವರ್ಗ ಹೆಣ್ಣು ಸಂಕುಲದ ಸಾಮಾನ್ಯ ಆಶಯವಾಗಿದೆ. ಹೆಣ್ಣಿಗೆ ಪ್ರೀತಿಯೇ ನಿರಂತರವಾಗಿ ಕಾಡುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಗಂಡಿಗೆ ಪ್ರೀತಿಯ ಹಸಿವೆಯೆಂದರೆ ಎಂಬುದೇ ಗೊತ್ತಾಗುತ್ತಿಲ್ಲ ಗೊತ್ತಾದ ಕ್ಷಣದಲ್ಲಿ ಅತ ಸ್ತ್ರೀವಾದಿಯಾಗುತ್ತಾನೆ.

ಏಕಾಂತ ಸಮಯದಲ್ಲಿ
ಮೋಹದಪ್ಪುಗೆಯಲ್ಲಿ
ಮೈಮರೆತು ನಿನ್ನೊಡನೆ
ಇರುವ ಉರುಸುವ ಕ್ಷಣವ
ಸ್ಥಿರವಾಗಿ ಅಲ್ಲಿಯೇ ನಿಲ್ಲಿಸುವ ಬಯಕೆ[೩]

(ಭಾಗ್ಯ ಪುಟ-೬೦, ೧೯೮೧)

ಪ್ರತಿಯೊಂದು ಗಂಡನಲ್ಲಿ ಹೆಣ್ಣು ಬಯಸುವುದು ಪ್ರೀತಿಯನ್ನು. ಅವನ ಪ್ರೀತಿ ತುಂಬಿದ ನೋಟ, ಪ್ರೀತಿ, ಏಕಾಂತತೆ ಇವು ಆದರ್ಶ ಪುರುಷನ ಕಲ್ಪನೆಯನ್ನು ಬೊಟ್ಟು ಮಾಡಿ ತೋರಿಸುತ್ತವೆ.

ನನ್ನಿಂದ ಪ್ರೀತಿಯನ್ನು ನೀನು ದೂರವಿದ್ದಾಗೆಲ್ಲಾ.................
ನಿನ್ನ ಬಗೆಗೊಂದೇ ಸೆಳೆತ ಉಕ್ಕಿ ಎಳೆಯುವುದು
ನಿನ್ನ ಮುದ್ದು ಮುಖವನ್ನೊಮ್ಮೆ ಕಂಡರೆ ಸಾಕು
ಓಡೋಡಿ ಬಂದ ನಿನ್ನ ಎದೆಯಲ್ಲಿ ಮುಖವಿಟ್ಟು
ಹೃದಯದಾಳದಲ್ಲೆಲ್ಲಾ ಹರಿದು ಹೋಗುವವರೆಗೂ
ಅತ್ತು ಬಿಡಬೇಕೆನಿಸುವುದು.
ನನ್ನ ಕಣ್ಣೀರೊರಸಿ ತಲೆನೋವರಿಸಿ ನೀನು
ಇದೇನಿದು ನನ್ನ ಚಿನ್ನ ಸಮಾಧಾನ ಹೊಂದಿ
ಏನು ಇಲ್ಲಿ ನಡೆಯಿರಿ ಎಂದೆಂದು

ಜೊತೆಯಲ್ಲಿ ಹೋಗಿ ಪೇಟೆಯಲ್ಲಿ
ಒಂದಿಷ್ಟು ಮಲ್ಲಿಗೆ ಹೂ ತೆಗಿಸಿಕೊಂಡು
ನಿನ್ನ ಕೈಯಲ್ಲಿ ನನ್ನ ಜಡೆಗೆ ಮುಡಿಸಿಕೊಂಡು
ಜುಯ್ಯೆಂದು ಸ್ಕೂಟರಿನಲ್ಲಿ ಪಿಕ್ಚರೊಂದಕೆ ನುಗ್ಗಿ
ಮರುಳುವಾಗೆಲ್ಲ ಹೋಟಲೊಂದಕ್ಕೆ ಹೋಗಿ
ಮಸಾಲೆದೋಸೆ ತಿಂದು ಬಾದಾಮಿ ಹಾಲು ಕುಡಿದು
ನೀ ಬಿಲ್ಲು ಕೊಡುವಾಗ ನಮ್ಮನ್ನು ಬಿಟ್ಟಿ
ರಿನ್ನಿಲ್ಲವೆಂಬಂತೆ ಬಿಗಿ ನಡೆದು ಬರಬೇಕೆನಿಸುವುದು[೪]

(ಅರ್. ಶಾಂತಕುಮಾರಿ, ಪುಟ-೬೧, ೧೯೯೧)

ಒಬ್ಬ ಮಧ್ಯಮ ವರ್ಗಸ್ತ್ರೀ ಸಹಜವಾದ ಆಸೆಯಾಗಿದೆ. ಸಣ್ಣ-ಪುಟ್ಟ ಆಸೆಯೆಂದು ತೋರಿದರೂ ಪ್ರೀತಿಯ ಅಗಾಧತೆ ನೋವು ನಲಿವುಗಳ ಹಂಚಿಕೆ ಕಾಣಬಹುದು. ಸ್ತ್ರೀವಾದದ ಹಿನ್ನೆಲೆಯಲ್ಲಿ ಆದರ್ಶಪುರುಷನನ್ನು ವಿಶ್ಲೇಷಿಸಿದಾಗ, ಅವಳ ಹಕ್ಕು ಸ್ವಾತಂತ್ರ್ಯದ ಪರಧಿಯಲ್ಲಿ ಧಾರಾಳವಾಗಿ ಅಲ್ಲಿ ಆ ಪುರುಷ ಆದರ್ಶ ಪುರುಷನಾಗುತ್ತಾನೆ ಆದರೆ ಒಬ್ಬ ಮಧ್ಯಮ ವರ್ಗದ ಸ್ತ್ರೀಯ ದೃಷ್ಟಿಯಲ್ಲಿ ಆದರ್ಶದ ಪುರುಷನ ಹುಡುಕಾಟ ತುಂಬಾ ಸರಳವಾಗುತ್ತದೆ.

ಮನೆಯ ಮುಂದಿನಂಗಳದಿ
ಪಾರಿಜಾತದ ಹೂವಿನ ರಂಗೋಲಿ
ಒಳಗಿನ ಮಂದಿರದಿ ನಂದಾದೀಪ
ಈ ಕರ್ಪೂರದಾರಲೆ ಹೊನಲಲಿ
ಕುಂಕುಮ ತೋರಣ
ಬಾಳಬಾನನ್ನು ಬೆಳಗುವ ಹೊನ್ನಕಿರಣ
ಚೆಲುವೇ ಚೆಂಗುಲಾಬಿ
ನಿಲವೇ ಕಾಮನಬಿಲ್ಲು
ಒಲವೇ ದೇವಗಂಗೆ
ಮಿಂದ ನಾವಿಬ್ಬರೂ
ಜೀವನ ಪಥದಲ್ಲಿ ಬೆಸಸಿದ್ದರು[೫]

(ಶಾಂತಜಗದೀಶ ಪುಟ-೬೦ ೧೯೯೧)

ಒಂದು ಸುಖ ಸಂಸಾರದ, ಸಂಪೂರ್ಣ ಸುಖಿಜೀವನ ನಡೆಸುತ್ತಿರುವ ಒಂದು ಕುಟುಂಬದ ಅದ್ಭುತ ಚಿತ್ರಣವನ್ನು ಈ ಕವಿತೆ ಹೊಂದಿದೆ.

ಹೆಂಡತಿಗೆ ಗಂಡ ಗಂಡನಿಗೆ ಹೆಂಡತಿಗೆ
ಬೇಕೆ ಬೇಕೆ ಬಾಳಗುಡಿಗೆ ಆಸರೆ
ಬಾಳು ತಪ್ಪಿದರೆ ಚಕ್ರ ಉರುಳಿದ ಚಕ್ಕಡಿ

ಬಾಳು ಜೋಪಾನವಾಗಿ ಇರಬೇಕು
ಈ ಸಂಸಾರದ ನಾಜೂಕು ಈ ಬೇಗುದಿಯ ಬೇಕು ದೈವವಾಗಿ[೬]

(ಶಾಂತಜಗದೀಶ, ಪುಟ-೬೦, ೧೯೯೧)

ಪಿತೃಪ್ರಧಾನ ಸಂಸಾರದಲ್ಲಿ ಕಾಣುವ ಸಂಪ್ರದಾಯ ಟಿಪಿಕಲ್ ಭಾರತೀಯ ಸಂಸಾರದಲ್ಲಿ ನೋಡಬಹುದಾದ ಮಾದರಿಯಾಗಿ ಕಾವ್ಯ ಬಂದಿದೆ.

ಎರಡನೆ ಭಾಗವಾಗಿ 'ಗಂಡ' ನ ಪರಿಕಲ್ಪನೆಯಲ್ಲಿ ಶೋಷಕನಾಗಿ ಅವನು ಹೆಂಡತಿಯ ಮೇಲೆ ನಡೆಸುವ ದಬ್ಬಾಳಿಕೆಯ ಸ್ವರೂಪವನ್ನು ಗುರುತಿಸುವುದಾಗಿದೆ. ಪಿತೃಪ್ರಧಾನ ಸಂಸ್ಥೆಯಲ್ಲಿ ಹೆಣ್ಣಿಗೆ ಸಂಪೂರ್ಣವಾದ ಆಸರೆ ದೊರಕುವುದಿಲ್ಲ. ಸಹನೆ, ತಾಳ್ಮೆ, ಹೊಂದಾಣಿಕೆಗೆ ಹೆಣ್ಣಿಗೆ ಮಾತ್ರ ಮೀಸಲಿಟ್ಟು ಉಳಿದೆಲ್ಲವನ್ನು ರೋಷ, ದಬ್ಬಾಳಿಕೆ, ಅನ್ಯಸಂಬಂಧಗಳು ಎಲ್ಲವೂ ಗಂಡಿಗೆ ಮೀಸಲಾಗುತ್ತದೆ. ಸಂಸಾರದ ಪರಿಧಿಗೆ ಸಿಕ್ಕ ಭಾರತೀಯ ಮಹಿಳೆ ಒಮ್ಮೆ ಅಲ್ಲಿ ಸಿಲುಕಿದರೆ ಸಾಕು. ಅಷ್ಟು ಸಲೀಸಾಗಿ ಹೊರಬರಲು ಸಾಧ್ಯವಿಲ್ಲ. ನಮ್ಮ ಕವಿಯತ್ರಿಯರು ಅದನ್ನೆಲ್ಲಾ ತಮ್ಮ ಕಾವ್ಯದಲ್ಲಿ ಒಡಮೂಡಿಸಿ ತಮ್ಮ ಗಂಡನ ದಬ್ಬಾಳಿಕೆ ಅಸಹನೆಯನ್ನು ಮುಗ್ಧವಾಗಿ ಚಿತ್ರಿಸಿದ್ದಾರೆ.

ಅಂದು ಕೈಹಿಡಿದದಿನ ಹರುಷದಲಿ ಒಲಿದ ಮನ
ಇಂದು ದೂರವಾಗಿದೆ ಏಕೋ ಜೀವನ ತಲ್ಲಣ
ತೋಳಬಿಗಿತವೂ ಸಡಲಿ ತುಟಿಯ ಸವಿಬಾಡಿ
ಜಾರಿ ಹೋಯಿತು ಕಾಲ ಮತ್ತೆ ಬರವಂತಾಕ್ಷಣ[೭]

(ಶಾಂತ ಜಗದೀಶ ಪುಟ-೪೫ ೧೯೯೧)

ನಿರೀಕ್ಷೆಯಲ್ಲಿ ಮನೆಯವರ ದಾರಿ ನೋಡುವುದರ ಸುತ್ತ ಬೆಳೆದ ಇವೆಲ್ಲವುಗಳನ್ನು ಸುಂದರವಾಗಿ ದಾಂಪತ್ಯ ಜೀವನ ಹೊಂದಿದ್ದು ಕ್ರಮೇಣ ಆ ದಾಂಪತ್ಯದಲ್ಲಿ ಬಿರುಕುಗಳು ಎದ್ದಾಗ ಗಂಡನ ಬಗ್ಗೆ ಹೆಂಡತಿಗೆ ಅಸಹನೆ ಮೂಡುತ್ತಿದೆ.

ನನ್ನ ನಿನ್ನ ಸಂಬಂಧವು
ಜನ್ಮ ಜನ್ಮಾಂತರದಿದ್ದರಬೇಕು
ಅದಕ್ಕೆಂದೇ ನೀನಿಂದಿಗೂ ಈ ಜನ್ಮಕ್ಕೂ
ನನಗಂಟಿಕೊಂಡ ಬರುತಿದ್ದಿ
ನನ್ನ ಹೀಗೆ ಕಾಡಲಿಕ್ಕೂ ಹತ್ತಿದ್ದಿ[೮]

(ಶೈಲಜಾ ಉಡುಚಣ ಪುಟ-೧೭, ೧೯೭೮)

ಶೋಷಕ ಗಂಡನಿಂದ ತೊಂದರೆಗೊಳಗಾದ ಹೆಂಡತಿಗೆ ಬದುಕು ಅಸಹನೀಯವಾಗುತ್ತದೆ. ಆದರೂ ಆ ಸಂಬಂಧದಿಂದ ಹೊರಬರಲು ಸಾಧ್ಯವಾಗುತ್ತಿಲ್ಲ. ರೋಷ ಉಕ್ಕಿ ಈ ಮಾತನ್ನು ಹೇಳುತ್ತಾಳೆ. ತನಗಂಟಿದ ಕರ್ತವ್ಯಗಳು ಪಿತೃಪ್ರಧಾನ ಮೌಲ್ಯಗಳು ಅವಳನ್ನು ಬಿಗಿದಿಟ್ಟಿವೆ.

ಪ್ರಿಯಾ
ನಿನ್ನೆದೆಯಲ್ಲಿ ಮುಖವಿಟ್ಟು
ನಿನ್ನಾಧರಿಸಿ ನಿಂತಾಗೆಲ್ಲ
ನಾನೆಂಬುವಳಿದ್ದೇನೆಂಬುದೇ
ಮರೆತು ಹೋಗುತ್ತದೆ ನನಗೆ
ನನ್ನ ತಲೆ ನೇವರಿಸುತ್ತ
ನೀ ನುಡಿವ ನಲು ಮಾತುಗಳು
ನನಗೆ ಹಿಡಿಸುತ್ತಿರುವರೆಗೂ
ಬೇರೇನೂ ಬೇಡವೆನ್ನಿಸುತ್ತಿರುತ್ತದೆ.
ಆದರೆ ಭಿನ್ನಾಭಿಪ್ರಾಯದ ಒಂದಳೆ
ಇಣುಕಿದರೂ ಸಾಕು
ನೆತ್ತಿಯಿಂದ ಉಂಗುಷ್ಠವರೆಗೂ
ನರನರದಲ್ಲೂ ನನ್ನತನವೆಂಬುದು
ಛಟ್ಟನೆಂದು ನಿಲ್ಲುತ್ತದೆ
ನನ್ನ ವ್ಯಕ್ತಿತ್ವ ತನ್ನಷ್ಟಕ್ಕೆ ತಾನೆ ಅಸ್ತಿತ್ವಕ್ಕೆ ಬರುತ್ತದೆ[೯]

(ಮಾಲತಿ ಪಟ್ಟಣಶೆಟ್ಟಿ, ಪುಟ-೧೨೬, ೧೯೮೩)

ಪ್ರೀತಿ ಅಗಾಧತೆಯನ್ನು ಹೊಂದಿದ್ದರೂ ಶೋಷಣೆಯನ್ನು ಅವಳು ಯಾವತ್ತು ಸಹಿಸುವುದಿಲ್ಲ. 'ನನ್ನತನ' ಅಥವಾ ತನ್ನತನವೆಂಬುದು ಹೆಣ್ಣಿನ ಅಂತರಾಳದಲ್ಲಿ ತನ್ನ ಛಾಪು ಮೂಡಿಸಿರುತ್ತದೆ. ಹೊಂದಾಣಿಕೆ ಎಂಬಲ್ಲಿ ತನ್ನ ತನವನ್ನು ಸೇರಿಸಿದ್ದಾಳೆ.

ಹಗಲು ರಾತ್ರಿಯೆನ್ನದೆ
ಅವಳ ಬಾಳ ಸುಖವನ್ನೆಲ್ಲ
ಮೊಗೆ ಮೊಗೆದು ಕುಡಿದು
ಬರಿದು ಮಾಡಿದ ಅವನೀಗ
ಸತ್ತು ಅವಳ ಬದುಕಿನ
ಬಾಟಲಿಯೊಳಗೆ ನೆಮ್ಮದಿ
ತುಂಬಿಸಿ ಹೋಗಿದ್ದಾನೆ.[೧೦]

(ಡಾ. ಮಲ್ಲಿಕಾಘಂಟೆ ಪುಟ-೧೬, ೨೦೦೧)

ಕುಡುಕನಾದ ಗಂಡನ ಚಿತ್ರಣ ಇಲ್ಲಿ ಒಡಮೂಡಿದೆ. ಬದುಕಿದ್ದಾಗಲೂ ಅವನಿಂದ ಹೆಂಡತಿಗಾದ ನೋವು ನಿರಂತರವಾಗಿರುತ್ತದೆ. ಅವನು ಸತ್ತಾಗ ಜೀವನದಲ್ಲಿ ಶಾಂತಿ ಸಿಗಬಹುದೆಂಬ ಆಸೆಯನ್ನು ಕವಿಯತ್ರಿ ತುಂಬಿದ್ದಾಳೆ. ಬೆಳೆಗೆರೆ ಜಾನಕಮ್ಮನಂಥ ಸಂಪ್ರದಾಯ ಬದ್ಧ ಮಹಿಳೆಯೂ 'ಗಂಡನ' ಬಗ್ಗೆ ಅಸಹನೆಯನ್ನು ಬಿಂಬಿಸಿ ಬರೆದಿದ್ದಾಳೆ.

ಗಂಡನೆಂದರೆ ಪ್ರಾಣ ಗಂಡ-ಹೆಣ್ಣಿನೀ ಗಂಡನ ಕೊಡಿಕೊಂಡ್ಲೆ
ನೋಡು ಮಂಡೂಕ ಸರ್ಪದ ನೆಳಲಿಗೆ ಹೋದಂತೆ
ಬಂಡೀಗೆ ಬಸವನು ಶಿರಬಾಗಿಕೊಂಡಂತೆ[೧೧]

(ಡಾ.ಮಲ್ಲಿಕಾಘಂಟೆ ಪುಟ-೬೦, ೨೦೦೧)

ಸ್ತ್ರೀ ಪುರುಷರ ದಾಂಪತ್ಯ ಜೀವನದ ಆಕರ್ಷಣೆಯು ದಾಂಪತ್ಯ ಜೀವನ ಮುಂದು ವರೆದಿರಿಲು ಕಾರಣ. 'ಮೌನಗಳು' ಎಂಬ ಕವಿತೆಯಲ್ಲಿ ಶೋಭನ ಪ್ರಸ್ಥದ ರಾತ್ರಿ ಕಹಿ ಅನುಭವವನ್ನು ಪಡೆದ ಓರ್ವ ಮಹಿಳೆಯ ಚಿತ್ರಣವಿದೆ.

ಉಡಿತುಂಬಿದ ಕನಸುಗಳೆಲ್ಲ
ಹರಡಿ ಹಾರಾಡುತ್ತಿರುವಾಗ
ಚುಂಬನವೆಲ್ಲ ಚುಚ್ಚುಮದ್ದು
ಹರಿದಸೆರಗಲ್ಲಿ ತಣ್ಣನೆಯ
ಗಾಳಿ ನುಗ್ಗಿ ಮೈಯೆಲ್ಲ ನಡುಕ
ನಡು ನಿಂತ ಮೇಲೆ
ಮೈ ಮುದುರಲಾರದೆ
ಬಯಕೆ ಸತ್ತ ಭಾವನೆಗಳು
ಮುಟ್ಟಲಾರದೆ ಮೌನ[೧೨]

(ಆರ್.ಶಾಂತಕುಮಾರಿ, ಪುಟ-೬೦, ೧೯೮೬)

'ಗಂಡ' ಹೆಂಡತಿಯ ಬಾಳಸಂಗಾತಿ, ಕಷ್ಟ-ಸುಖವ ಹಂಚಿಕೊಳ್ಳುವ ಸಮ ಪಾಲುದಾರ. ಆದರೆ ಕೆಲವೊಮ್ಮೆ ತಾನು ಕಂಡ ಗಂಡನ ಕನಸು ಹುಸಿಯಾದಂತೆ ಅವಳಲ್ಲಿ ಅಸಹನೆ ಮೂಡುತ್ತದೆ.

ಇವ ಈ ಖೋಡಿ
ಸತ್ತಾಗ ನಾನು ಅತ್ತಿರಲಿಲ್ಲ
ಕರುಬಿದ್ದೆ ನನ್ನ ಸುತ್ತ
ಅಸ್ತವ್ಯಸ್ಥ ಚೆಲ್ಲಿಕೊಂಡಿದ್ದ ಬದುಕಿಗೆ
ಇವರ ಹೆಣ 'ಮಮ್ಮಿ' ಇಡಲೇ
ಎಂದೆನಿಸುಕೊಳ್ಳುತ್ತ
ಮಣ್ಣುಗಳಾಗಿಗೆ ತೂರಿ
ಮುಚ್ಚಿದ್ದೇನೊಡಲ ಗೊಬ್ಬರಕೆ
ಎನ್ನುವಲ್ಲಿ ಸತ್ತ ಗಂಡನಲ್ಲೂ ದ್ವೇಷ ತಳೆಯುತ್ತಾಳೆ.[೧೩]

(ಸಿ.ದೇವಮ್ಮ, ಪುಟ-೩೬ ೧೯೯೧)

ಈ ಸಾಲುಗಳಲ್ಲಿ ಹೆಣ್ಣಿನ ದಿಟ್ಟತನ ವ್ಯಕ್ತವಾಗಿದೆ. ಮಹಿಳೆ ತನ್ನ ಚಿಂತನ ಕ್ರಮದಿಂದ ಪರಂಪರೆ ಮತ್ತು ಬದುಕಿನ ಕಗ್ಗಂಟನ್ನು ಬಿಡಿಸಬೇಕಾಗಿದೆ. ಪಿತೃಪ್ರಧಾನ ವ್ಯವಸ್ಥೆಯೊಂದನ್ನು ಟೀಕಿಸುವುದರಿಂದ ಮಹಿಳೆ ತನ್ನತನವನ್ನು ಕಂಡುಕೊಳ್ಳಲು ಸಾಧ್ಯವಿಲ್ಲ. ಹೀಗೆ 'ಗಂಡ' ಪರಿಕಲ್ಪನೆಯಲ್ಲಿ ಪುರುಷ ಮಹಿಳಾ ಕಾವ್ಯದಲ್ಲಿ ಎರಡು ರೀತಿಯಲ್ಲಿ ಚಿತ್ರಿತವಾಗಿದೆ.

ತಂದೆಯಾಗಿ 'ಪುರುಷ'

ಮಹಿಳಾ ಕಾವ್ಯದಲ್ಲಿ 'ತಂದೆ' ಯಾಗಿ ಪುರುಷ ಚಿತ್ರಿತಗೊಂಡಿದ್ದು ಅಲ್ಪವೇ. ತಂದೆಯ ಪರಿಕಲ್ಪನೆ ಮಹಿಳಾ ಕಾವ್ಯದಲ್ಲಿ ಕಾಣಿಸಿಕೊಂಡಿದ್ದು ಪ್ರೀತಿಯ ವ್ಯಕ್ತಿಯಾಗಿ ಜವಾಬ್ದಾರಿಯುಳ್ಳ ವ್ಯಕ್ತಿಯಾಗಿ, ಪುರುಷ ಪ್ರಧಾನ ಸಂಸ್ಕೃತಿಯ ಎಲ್ಲಾ ಹೊರೆಯನ್ನು ಹೊರಿಸುವ ವ್ಯಕ್ತಿಯಾಗಿ, ಶೋಷಕನಾಗಿ. ಹೀಗೆ ಮಹಿಳಾ ಕಾವ್ಯದಲ್ಲಿ ತಂದೆ ಪರಿಕಲ್ಪನೆ ಚಿತ್ರಿತವಾಗಿದ್ದು ಹಲವು ರೀತಿಯಲ್ಲಿ ಭಾರತದ ಕುಟುಂಬ ರೂಪಿತಗೊಂಡಿದ್ದು, ಪಿತೃಪ್ರಧಾನತೆಯಿಂದ, ಪಿತೃಪ್ರಧಾನತೆ ತಂದೆಯ ಅಥವಾ ಪ್ರಜಾಪ್ರಭುತ್ವದ ಯಜಮಾನಿಕೆ ಎಂಬರ್ಥವನ್ನು ಕೊಡುತ್ತದೆ.

ತನ್ನ ಜೀವನದ ಪೂರ್ತಿ ಹಲವು ಹಂತದಲ್ಲಿ 'ಪುರುಷ' ನೆರಳಲ್ಲೆ ಬೆಳೆವ ಸ್ತ್ರೀ ಮನು ಎಂಬ ಪ್ರಾಚೀನ ಧರ್ಮಶಾಸ್ತ್ರಜ್ಞ ಹೇಳುವಂತೆ, ಬಾಲ್ಯದಲ್ಲೆ ತಂದೆಯ ಆಶ್ರಯ, ಯೌವ್ವನದಲ್ಲಿ ಪತಿ, ಮುಪ್ಪಿನಲ್ಲಿ ಮಗನ ಆಶ್ರಯದಲ್ಲಿ ಬದುಕಬೇಕಾಗುತ್ತದೆ. ಅಂದರೆ ಜೀವನ ವೆಲ್ಲ ತನ್ನ ಸ್ವಂತಿಕೆಯ ಹೊರತಾದ ಪುರುಷನ ಆಶ್ರಯದ ಅಗತ್ಯದಲ್ಲೆ ಬದುಕಬೇಕಾಗುತ್ತದೆ. ಜೀವನದ ಮೊದಲ ಹಂತದ ಪೋಷಕ, ರಕ್ಷಕ, ಅಪ್ಪನಾಗಿರುತ್ತಾನೆ. ಆಶ್ರಯ, ಪೋಷಕನ ಕರ್ತವ್ಯ ನಿರ್ವಹಿಸುವ ತಂದೆ(ಪುರುಷ) ಸಾಮಾನ್ಯವಾಗಿ ಪಿತೃಪ್ರಧಾನ ಸಂಸ್ಕೃತಿಯ ಯಜಮಾನಿಕೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾನೆ. ಸ್ತ್ರೀ ಜೀವನದ ಮೊದಲ ಹಂತದ ನಿಯಂತ್ರಕನಾಗುತ್ತಾನೆ. ಹೆರುವ ಹೆಣ್ಣಿನ ತಾಯ್ತನದಷ್ಟೆ ಸರಳವಾಗಿ ತಂದೆತನ ಸಾಬೀತಾಗದ ಕಾರಣ, ಹೆಣ್ಣಿನ ಶೀಲ ಪಾತಿವ್ರತ್ಯಕ್ಕೆ ಒತ್ತು ಕೊಟ್ಟು ಗೃಹಬಂಧನದಲ್ಲಿಟ್ಟು ತನ್ನ ವಂಶ ಮುಂದುವರೆಯುವ ಖಾತ್ರಿಗೆ ಗಂಡು ಹೆಣ್ಣಿನ ಮೇಲೆ ಹೇರಿದ ಆದರ್ಶಗಳು ಪ್ರಧಾನ ಸಂಸ್ಕೃತಿಯ ಬೆನ್ನೆಲುಬಾದುದು ಪತ್ನಿಯ ಮೇಲಿದ್ದ ಈ ಹಿಡಿತವೇ ಮಗಳ ವಿಷಯದಲ್ಲಿ ಮುಂದುವರೆಯುತ್ತದೆ.

ಇದು
ತಂದೆಯ ಹದ್ದು
ಬಸ್ತಲ್ಲೆ, ಸೆರಗ ಹೊದ್ದು
ಬೆಳೆದ ಜೀವ[೧೪]

(ಮಲ್ಲಿಕಾಘಂಟಿ, ಪುಟ-೧೬ ೨೦೦೮)

ಎನ್ನುವಲ್ಲಿ ಪಿತೃಪ್ರಧಾನ ವ್ಯವಸ್ಥೆಯುಳ್ಳ ಕುಟುಂಬದ ಸಂಪೂರ್ಣ ಚಿತ್ರಣ ಮುಂದೆ ಬರುತ್ತದೆ. ರಕ್ಷಕ, ಪೋಷಕನ ಹೆಸರಲ್ಲಿ ಅವಳನ್ನು ಬಂಧಿಸಿಡುವ ಟಿಪಿಕಲ್ ಸಂಪ್ರದಾಯದ ಅಪ್ಪನ ವಿವರಣೆ ಇದೆ. ಸೆರಗ ಹೊದ್ದ ಜೀವ ಎನ್ನುವಲ್ಲಿ ಒಳಗೆ ತಲೆತಗ್ಗಿಸಿ ನೆಲ ನೋಡುತ್ತಾ ಸಮಾಜದ ಹಲವು ಅವಕಾಶಗಳಿಂದ, ಸ್ವಾತಂತ್ರ್ಯದಿಂದ ವಿಮುಕ್ತಳಾದ ದುರ್ಬಲ ಪರಿಸ್ಥಿತಿಯನ್ನು ಕಾಣಬಹುದು.

ಅಪ್ಪ ಕುಡಿದು ಬಂದು
ಹೊಡೆದರೂ ತುಟಿಕಚ್ಚಿ
ಅಳು ನುಂಗಿ ನಗು ಮುಖ
ಮಾಡೊ ನಿನ್ನ ಮೋಡಿ
ಯಾರಿಗೆ ಬಂದೀತು ಹೇಳು?[೧೫]

(ಶಶಿಕಲಾ ವಸ್ತ್ರದ ಪುಟ-೧೬ ೧೯೯೮)

ಪುರುಷನ ಹಲವು ಖಯಾಲಿಗಳಲ್ಲಿ ಒಂದಾದ ಕುಡಿತದ ಬಗ್ಗೆ ಹೆಣ್ಣಿಗೆ ಅಸಮಾಧಾನ ಇದ್ದೇ ಇದೆ. ಅವಳ ನೋವು, ನಿರಾಸೆ, ಅವಮಾನಗಳನ್ನು ಸಾಹಿತ್ಯದ ಪ್ರಕಾರಗಳಾದ ಕಾದಂಬರಿ, ಕಾವ್ಯಗಳಲ್ಲಿ ಹೊರಗೆಡಹಿದ್ದಾರೆ. ಮೂರ್ಥಾ ಟೆಕ್ಕನನ್ ಫಿನ್‌ಲ್ಯಾಂಡಿನವಳು ಸ್ವೀಡಿಸ್ ಮಾತೃಭಾಷೆಯುಳ್ಳವಳು ಅವಳ ಪುಸ್ತಕ ಶತಮಾನದ ಪ್ರೇಮಕತೆ *(Love story of the century)* ಕಾದಂಬರಿಯಲ್ಲಿ ಕುಡುಕ ಗಂಡನ ಜೊತೆ ಏಗುವ ಹೆಂಡತಿಯಾಗಿ ಜೊತೆಗೆ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಳ್ಳಲು ಒದ್ದಾಡುವ ಹೆಂಗಸಾಗಿ ಅವಳ ಹೋರಾಟ ಅದರಲ್ಲಿ ಪರಿಣಾಮಕಾರಿಯಾಗಿ ಬಂದಿದೆ. ಈ ಕಾವ್ಯದಲ್ಲಿ ಮಗಳು ತಾಯಿಯ ಅಸಬಲತೆಗೆ ಮರುಗಿದ್ದಾಳೆ. ಶಶಿಕಲಾ ಅವರ ಈ ಕವಿತೆಯಲ್ಲಿ ಅಪ್ಪನ ಕ್ರೌರ್ಯದ ಗ್ರಹಿಕೆಯಿದು.

ಇದೊಂದು ಕವನ ಸಿಲ್ವಿಯೂ ಪ್ಲಾತ್ ಅವರ *Daddy* ಕವಿತೆಯ ನೆನಪು ತಂದುಕೊಡುವ ಈ ರಚನೆ ಮಹಿಳಾ ಕಾವ್ಯದ ಸಂದರ್ಭದಲ್ಲಿ ಅಪರೂಪದ್ದಾಗಿದೆ.

ಅಪ್ಪನೆನ್ನಲೆ ಇವರ
ಮೈಯ ತೀಟೆಗೆ ಹುಟ್ಟಿಕೊಂಡ ಪ್ರಾರಬ್ಧಕ್ಕೆ?
ಎಂಬತ್ತರ ಮುಪ್ಪಿನಲ್ಲೂ ಈ ಮಗಳ
ಕಣ್ಣಿನಾಳದ ಭಾವನೆಗೆ ಮಿಡಿದಿಲ್ಲ[೧೬]

(ಸರ್ವಮಂಗಳ ಪುಟ-೪೮ ೧೯೮೮)

ಇಂಥ ಸಾಲುಗಳು ತಂದೆಯ ಪ್ರೀತಿಯಿಂದ ಮಗಳ ಅಳಲನ್ನು ಮನೋವೇದಕವಾಗಿ ಚಿತ್ರಿಸುತ್ತವೆ. ಪುರುಷ ತಂದೆಯೂ ಪರಿಕಲ್ಪನೆಯಾಗಿ ಬರೀ ಶೋಷಕನಾಗಿಯೇ ಮಹಿಳಾ

ಕಾವ್ಯದಲ್ಲಿ ಚಿತ್ರಿತವಾಗಿಲ್ಲ. ಅತನಲ್ಲೂ ಹೃದಯವಿದೆ. ತನ್ನ ಸೃಷ್ಟಿಯೆಂದು ಬಗೆದ ಮಕ್ಕಳಲ್ಲಿ ತಾನು ಸಾಧಿಸ ಹೊರಟ ಕನಸನ್ನು ತನ್ನ ಮಕ್ಕಳಲ್ಲಿ ಸಾಧಿಸ ಹೊರಟುತ್ತಿವೆ. ಇಂತಹ ಸಹೃದಯ ಅವ್ವನ ಚಿತ್ರಣವನ್ನು ಕೊಡಲು ಹೊರಟಿದ್ದು ಸರಸ್ವತಿ ಗೌಡ 'ಅಪ್ಪನ ಆಲ' ಕವನದಲ್ಲಿ

ನಾನು ಅಪ್ಪಿರುವೆ ಆಲದ ಬಿಳಲು
ಭದ್ರವಾಗಿ ಬೇರೂರು ನನ್ನನ್ನು ಕಚ್ಚಿಕೊಂಡೆ ಇದೆ
ತಲೆಮಾರಿಂದ ಬೆಳೆದು ಬೇರು ಬಿಟ್ಟಿರುವ
ಪರಂಪರೆ ಬೆರಳು ನನ್ನ ಮೈ ತುಂಬಿವೆ
ಅಲ್ಲಿಂದ ಬಿಡಿಸಿಕೊಳ್ಳಲಾಗದೆ ಅಲ್ಲೆ ತಳವೂರಿರುವೆ[೭]

(ಸರಸ್ವತಿಗೌಡ ಪುಟ-೬೦ ೧೯೮೦)

ಎನ್ನುವಲ್ಲಿ ಅಪ್ಪ ಇಲ್ಲಿ ರಕ್ಷಕ ಮತ್ತು ಪೋಷಕನಾದ್ದರಿಂದ ಸಹಜವಾಗಿ ಪಿತೃಪ್ರಧಾನ ಮೌಲ್ಯದ ಟಿಪಿಕಲ್ ವ್ಯಕ್ತಿಯಾಗಿ ರೂಪುಗೊಳ್ಳುತ್ತಾನೆ. ಆಲದ ಮರದ ಬಿಳಲು ನೆಲದೊಳಗೆ ಬೇರುಬಿಟ್ಟು ಅದೇ ಒಂದು ಮರವಾದಂತೆ ಸಂಪ್ರದಾಯ, ಪರಂಪರೆ ರೂಢಿಗತವಾಗಿ ಬಂದ ಆಚರಣೆಗಳು ಬೆಳೆಯುತ್ತಾ ಅಂಟಿಕೊಂಡು ಬಿಡಿಸಿಕೊಳ್ಳಲಾರದ ಮಟ್ಟಕ್ಕೆ ಬೆಳೆದು ಸಹಜವೆಂಬಂತೆ ಅದೇ ಒಪ್ಪಿಕೊಳ್ಳುವ ಅಸಹಾಯಕ ಪರಿಸ್ಥಿತಿಯನ್ನು ಇಲ್ಲಿ ಒಡಮೂಡಿದೆ.

ಎದೆಕದವ ತೆರೆದು ಮನವ ಕಿಟಕಿಯ ಬಿಡಿಸಿ
ಕಾದುಕುಳಿತಲನು ಅಂಬೆಗಾಲಿಟ್ಟು ಬರುವ ಸೂರ್ಯ
ಹೊಳೆವ ಬಣ್ಣದ ಗುಬ್ಬಚ್ಚಿಯ ಬಾಯಿಯಲ್ಲಿಯ ಹಸಿರುಗರಿಕೆಯಾಗಿ
ಹಕ್ಕಿ ಕಾಯಲು ಹೋದ ಹತ್ತರ ಎಳೆಯ ಮಗ
ಹೊತ್ತು ತರುವ ಬಣ್ಣ-ಬಣ್ಣದ ಕನಸುಗಳು ಹೊರೆ ಇಳಿಸಲೆಂದು[೮]

(ಪ್ರತಿಭಾ ನಂದಕುಮಾರ್, ಪುಟ-೨೮ ೧೯೮೮)

ಇಲ್ಲಿ, ಅಪ್ಪ ತಾನೊಬ್ಬ ಕಾದು ಕುಳಿತಿದ್ದು, ಹತ್ತರ ಎಳೆಯ ಮಗ ಹೊತ್ತು ತೆರುವ ಬಣ್ಣ ಬಣ್ಣದ ಕನಸುಗಳ ಹೊರೆ ಇಳಿಸಲೆಂದು ಎನ್ನುವಾಗ ಅಪ್ಪನೆನ್ನುವನು ಮಕ್ಕಳ ಪಾಲಿಗೆ ಎಲ್ಲವೂ ಆಗಿರಬೇಕೆಂಬುದರ ಆಳ ಅಳತೆ ಇದೆ. ತಾನು ಸಾಧಿಸಹೊರಟ್ಟಿದ್ದು ಸಾಧಿಸಲಾಗದ್ದನ್ನು ತನ್ನ ಮಕ್ಕಳು ಆ ಗುರಿ ತಲುಪಿದಾಗ ಆಗುವ ಖುಷಿ ಯಾವ ತಂದೆಗೆ ತಾನೇ ಬೇಡ. ಸೃಜನಶೀಲತೆಯ ಈ ಅಪ್ಪ ಕೆಲವೊಮ್ಮೆ ಕವಿಯತ್ರಿಗೆ ಶೋಷಕನಾಗಿ ಕಾಣುತ್ತಾನೆ. ಅದನ್ನ ತನ್ನ 'ಚೂರು-ಚೂರು' ಕವನದಲ್ಲಿ ಹೇಳಿದ್ದಾರೆ.

ಕಸಾಯಿ ಖಾನೆಯಲ್ಲಿರುವ ಆಕಳಂಥ ಅವ್ವ ಹಾಡುತ್ತಿರುವ
ಲಾಲಿಯಲ್ಲಿ ಚಟಕ್ಕಾಗಿ ಮಕ್ಕಳ ಹುಟ್ಟಿಸುವ ತಂದೆಗೆ ದಂಡಿಸುವ ಹಕ್ಕು

ನೀಡಿದವರ ಎದೆಗೆ ಜಾಡಿಸಿ ಒದ್ದು ಮಕ್ಕಳ ಬೆಳೆಸುವ ಮುದ್ದಾಡುವ
ಜವಾಬ್ದಾರಿಯ ಅರ್ಥ ಹೇಳವ್ವಾ ಎಂದು[೧೯]

(ಮಲ್ಲಿಕಾಘಂಟಿ, ಪುಟ-೧೬ ೨೦೦೧)

ಮಕ್ಕಳ ವಿಷಯದಲ್ಲಿ ಉದಾರಿಯಾಗಿ, ಪೋಷಕನಾಗಿ, ಪ್ರೀತಿಸುವ ತಂದೆಯಾಗಿದ್ದವ ಅಮ್ಮನ ವಿಷಯದಲ್ಲಿ ಅಥವಾ ಹೆಂಡತಿಯಾದವರ ವಿಷಯದಲ್ಲಿ ಬದಲಾದ ನಿಲುವಿಗಾಗಿ ಕವಿಯತ್ರಿಯಲ್ಲಿ ಸೋಜಿಗವಿದೆ. ಹೀಗೆ 'ಮಹಿಳಾ ಕಾವ್ಯದಲ್ಲಿ ಪುರುಷ' ಪರಿಕಲ್ಪನೆ ಬಗೆ ಬಗೆಯಾಗಿ ರಕ್ಷಕ, ಪೀಡಕ, ಟಿಪಿಕಲ್ ಸಂಪ್ರದಾಯ ಹೇರುವ ಅಪ್ಪನಾಗಿ, ಕನಸುಗಳೆಡೆಗೆ ಕರೆದೊಯ್ಯುವ ಅಪ್ಪನಾಗಿ, ಹೀಗೆ ಕಾವ್ಯದಲ್ಲಿ ತಂದೆಯಾಗಿ ಪುರುಷನನ್ನು ಚಿತ್ರಿತವಾಗಿದ್ದು ಹಲವು ರೀತಿಯಾಗಿ.

ಮಗ ಅಥವಾ ತರುಣನ ಪರಿಕಲ್ಪನೆಯಲ್ಲಿ ಆದರ್ಶ 'ಪುರುಷ'

ಮಹಿಳಾ ಕಾವ್ಯದಲ್ಲಿ 'ಪುರುಷನ' ಪರಿಕಲ್ಪನೆಯನ್ನು ಪರಾಮರ್ಶಿಸಿದಾಗ ಮಗ ಮತ್ತು ತರುಣನ ಪರಿಕಲ್ಪನೆ ಭಿನ್ನವಾದದ್ದು. ಮಗ ಸ್ತ್ರೀ ಜೀವನದಲ್ಲಿ ಒಂದು ಹಂತದಲ್ಲಿ ಗಂಡ ವಹಿಸಿಕೊಂಡ 'ಪೋಷಕ' ಪಾತ್ರವನ್ನು ವಹಿಸುತ್ತಾನೆ. ಮನುಶಾಸ್ತ್ರದಲ್ಲಿ ಹೇಳಿರುವಂತೆ ಕೌಮಾರ್ಯದಲ್ಲಿ ತಂದೆ ಯೌವ್ವನದಲ್ಲಿ ಪತಿ ಮುಪ್ಪಿನಲ್ಲಿ ಮಗನ ಆಶ್ರಯದಲ್ಲಿರಬೇಕು ಎಂದಿದ್ದಾನೆ. ಮಗ ಪಿತೃಪ್ರಧಾನ ಸಮಾಜದ ಮುಂದುವರೆದ ಪುರುಷ ಪ್ರಪಂಚ. 'ಮಗ' ಸ್ತ್ರೀ ಜೀವನದಲ್ಲಿ ಬಾಂಧವ್ಯದ ಕರುಳ ಬಳ್ಳಿ ಈ ವಿಭಾಗದಲ್ಲಿ ಮಗ ಮತ್ತು ತರುಣ ಪರಿಕಲ್ಪನೆಯನ್ನು ಒಟ್ಟಿಗೆ ಪರಾಮರ್ಶಿಸಿದ ಕಾರಣವೆಂದರೆ ಮಗ ಮತ್ತು ತರುಣನ ಪರಿಕಲ್ಪನೆ ವಯಸ್ಸಿನ ಕಾರಣದಿಂದ ಒಂದೇ ಪರಿಕಲ್ಪನೆಗೆ ಒಳಗಾಗುತ್ತಾರೆ ಮಗ ಮತ್ತು ತರುಣನನ್ನು ಕಾಣುವ ಮಹಿಳಾ ಕವಿಯತ್ರಿಯ ಕವನಗಳು ಹೆಚ್ಚು ಕಮ್ಮಿ ಒಂದೇ ಆಗಿರುತ್ತವೆ. ಮೊದಲು 'ಮಗ' ಮಹಿಳಾ ಕಾವ್ಯದಲ್ಲಿ ಒಡಮೂಡಿದ್ದ ಬಗೆಯನ್ನು ಗಮನಿಸಿದಾಗ;

ಅದೋ ಉದಿಸಿ ಬಂಧನವ
ಸುಂದರನೀಲ ಸುಕುಮಾರ
ಆ ಪುಟ್ಟ ಕೈಗಳೆನ್ನ ಕೊರಳಿನ ಹಾರ
ವಾಗಿಸುತ ಕರೆದಿದ್ದ ಅಮ್ಮ ಬಾರ
ಎತ್ತಿದೆನು ಅಪ್ಪಿದೆನ
ಮುತ್ತಿಟ್ಟು ಹಾಡಿದನು.[೨೦]

(ಸಹನ, ಪುಟ-೧೦, ೧೯೯೩)

ತಾಯ್ತನ ಸ್ತ್ರೀಯೊಬ್ಬಳ ಮಹತ್ವಾಕಾಂಕ್ಷೆ ಕನಸು, ಅವಳಿಗೆ ಜೀವನ ಸಾರ್ಥಕವೆನಿಸುವುದು. ಆ ಮಗುವಿನ ಆಗಮನದಿಂದ

ಮಗು ಅವಳ ತಾಯ್ತನದ ಕನಸು.
ಒಡಲ ಕಡಲಲ್ಲಿ
ಮರಿ ಮೀನಾಗಿ ನೀನು ಈಜುವಾಗ
ಕಚಗುಳಿಯಾಗಿ ಪುಳಕವಾಗಿ ಮೈಯೆಲ್ಲಾ ಜೂಂ
ಮಂಥನದ ನಂತರ ಬಂದ ಬೆಣ್ಣೆ ಮುದ್ದೆಯಂತೆ
ಜಾರಿ ಬಟ್ಟಲಲ್ಲಿ ಕಂಗೊಳಿಸುವೆ ನೀನು[೨೧]

(ಪ್ರತಿಭಾನಂದಕುಮಾರ್, ಪುಟ-೨೦ ೧೯೮೮)

ಸತ್ವಕಳಿದ ಮಜ್ಜಿಗೆಯಂತೆ ನೀರಾಗುತ್ತೇನೆ, ನಾನು ತಾಯ್ತನ ಪಡೆಯುವಾಗ ಮಗ ಜನಿಸುವಾಗ ನೋವು ಅಪಾರ. ಆದರೂ ಮಗನ ಆಗಮನದಿಂದ ಅವಳ ನೋವು ಮಾಯವಾಗುತ್ತದೆ.

ಮಗನೇ ನೀನು ಹೊಟ್ಟೆಯಲ್ಲಿ
ಚಲಿಸುವಾಗ ಈಜಾಡುವ ಮೀನು
ನಮ್ಮೂರ ಕೆಟ್ಟ ಬಿಸಿಲಿನಲ್ಲಿ
ಅರಳಿದ ಸುಕೇಶದ ಹೂ[೨೨]

(ಹೆಚ್.ಎಸ್.ಮುಕ್ತಾಯಕ್ಕ, ಪುಟ-೪೦, ೧೯೯೪)

ಮಗ ಅವಳಿಗೆ ದುಃಖದಲ್ಲಿ ಸುಖವನ್ನು ಬಿಸಿಲಿನಲ್ಲಿ ಸುಕೇಶದ ಹೂ ಅರಳಿ ನಿಂತ ಹಾಗೆ ಮಗುವಿನ ಅಗಮನವಾಗುತ್ತದೆ.

ಬಾಲ್ಯದ ಮುಗ್ಧತೆ ಕಣ್ಣೆಯಲಿ
ದೀನತೆ ಅಬಲತೆ ಕಂಗಳಲಿ
ಏಕೋ ಬಂದೆಯೋ ಎನ್ನಲು ಸುಮ್ಮನೆ ಎನ್ನುವಾಗ
ಅಪ್ಪನ ಪ್ರೀತಿ? ಎಂದಾಗ
ದುರದುರನೆ ನೋಡಿ ಸೆಟವ ತೋರಿ
ಆ ಜಾಗವನ್ನು ಖಾಲಿ ಮಾಡುವನು.[೨೩]

(ಅರೆಕಲ್ಲು ಸಿ. ದೇವಮ್ಮ, ಪುಟ-೮೦, ೧೯೯೦)

'ಮಗ' ಅವಳ ಅಂತಃಸತ್ವ, 'ಅಮ್ಮ' ಮಗನ ಪ್ರೀತಿಗೆ ತೂಕ ತಂದಷ್ಟು ಅಪ್ಪನಿಂದ ಕೊಡಲು ಸಾಧ್ಯವಾಗಿಲ್ಲ. ತರುಣನ ಪರಿಕಲ್ಪನೆಯನ್ನು ಗಮನಿಸಿದಾಗ ಹೊಸದಾಗಿ ಕೌಮರ್ಯಕ್ಕೆ ಕಾಲಿಟ್ಟಾಗ ಅವನಲ್ಲಿ ಆದ ಬದಲಾವಣೆ ಪ್ರಪಂಚಕ್ಕೆ ಅವನು ತೋರ್ಪಡಿಸಿಕೊಳ್ಳುವ ರೀತಿ ಎಲ್ಲವೂ ವಿಭಿನ್ನ. ಪ್ರೇಮಿ, ಶೋಷಕ, ದುಂದುವೆಚ್ಚದವ-ಕುಡುಕ, ತರುಣ ಹೀಗೆ ಆ ವಯಸ್ಸಿನಲ್ಲಿ ಅವನ ಅವತಾರಗಳು ಹಲವು. ಪ್ರೇಮಿಯಾಗಿ ತರುಣನನ್ನು ಹಿಂದೆಯೇ

ಚರ್ಚಿಸಿದ್ದೇವೆ. ಆಧುನಿಕ ತರುಣ ಜನಾಂಗವನ್ನು ಬಹುವಾಗಿ ಕಾಡಿಸುತ್ತಿರುವ ಕುಡಿತ, ಮಾದಕ ವಸ್ತು ಇಸ್ಪೀಟ್‌ಗಳು ತರುಣರನ್ನು ದಾಳಿ ಮಾಡಿರುತ್ತವೆ

ನಶೆಯೋ ನಾಶವೋ
ಸಲ್ಲದ ಮಜಕ್ಕೆ ಹುಚ್ಚರಾಗಿ
ಹಣದೋಚುವ ಖದೀಮರ ಪಾಲಿಗೆ
ಬಕರಾಗಳಾದವರು
ಅಮ್ಮ ಅಪ್ಪಂದಿರ, ಅಕ್ಕ ತಂಗಿಯರ
ಕಾಸು ಒಡವೆ ವಸ್ತ್ರಕಡೆಗೆ ಓದುವ
ಹೆರಾಯಿನ್, ಸ್ಮಾರ್ ಬ್ರೌನ್‌ಶುಗರ್
ದಳ್ಳಾಳಿಗಳ ಹುಡುಕಾಟ ಇಲ್ಲವೆ
ಪ್ರೇತ ಕಳೆ ಹೊತ್ತು
ಅಸಹ್ಯ ಹುಟ್ಟಿಸುವ
ಪಡೆದ ಪೀಡೆಗಳು
ಪ್ರಜ್ಞೆಯ ದೀವಟಿಗೆ
ಹಚ್ಚ ಬೇಕಾದವರು
ಅವಿವೇಕದ ಕಿಡಿಯಿಂದ
ಕೊಳ್ಳಿಯನ್ನು ಉರಿಸುತ್ತಿದ್ದಾರೆ.[೨೪]

(ಶಾಂತ ಜಗದೀಶ, ಪುಟ–೬೦, ೨೦೦೩)

ಎನ್ನುವ ಶಾಂತ ಜಗದೀಶರ ಈ ಕವನ ಯುವ ಜನಾಂಗದ ಒಟ್ಟಾರೆ ಬದುಕಿಗೆ ಕನ್ನಡಿ ಹಿಡಿದಿರುವಂತಿದೆ. ಯುವ ಜನಾಂಗದ ದುಶ್ಚಟಗಳಾದ ಡ್ರಗ್ಸ್, ಕುಡಿತಗಳು ಯುವಕರನ್ನು ಹಾಳುಮಾಡಿವೆ. ಮಗ ದಾರಿ ತಪ್ಪಿರುವುದನ್ನು ನೋಡಿಯೂ ಸರಿಪಡಿಸಲು ಸಾಧ್ಯವಾಗದಕ್ಕೆ ತಾಯಿ ಮರುಗಿದ್ದಾಳೆ.

ಮೀಸೆ ಬಂದವ ಗಂಡು
ಏನೆಲ್ಲಾ ದಕ್ಕಿಸಿ, ನಕ್ಕಿದ್ದೆ ಬಂತು
ಹೆಣ್ಣಿನ ಕಣ್ಣೀರ ಕಥೆಗಳನ್ನು
ಮಹಾಕಾವ್ಯಗಳೆಮ್ಮವರಿಗೆ
ನಿರ್ಮಾಣಿ ಸೀತೆ, ದ್ರೌಪತಿ
ಹರಿಸಿದ ಕಣ್ಣೀರ ಕೋಡಿಗೆ
ಗಂಡನದೆ ಇಂದಿಗೂ ಬಂಜೆ ನೆಲೆ[೨೫]

(ಸರೋಜಿನಿ, ಪುಟ–೮೦ ೧೯೯೯)

ಎಂದು ಕವಿಯತ್ರಿ ಹೇಳುವಾಗ ಹೆಣ್ಣಿನ ಮನದಾಳದ ನೋವು ಒಂಟಿತನ ಅಸಹನೆಯನ್ನು ಕೆಡವಿದ್ದಾರೆ. ಪಿತೃಪ್ರಧಾನ ಸಮಾಜದಲ್ಲಿ ಗಂಡು-ಹೆಣ್ಣಿನ ಬಗ್ಗೆ ಇರುವ ಪಕ್ಷಪಾತದ ನಿಲುವು ಸಮಾಜ ತನ್ನ ಸ್ವಾರ್ಥಕ್ಕಾಗಿ ಹೆಣ್ಣನ್ನು ಬಳಸಿಕೊಂಡ ರೀತಿಯನ್ನು ವಿವರಿಸಿದ್ದಾರೆ. ಆದಿಕಾಲದ ಸೀತೆ ಸಾವಿತ್ರಿಯರು ದಬ್ಬಾಳಿಕೆಯಿಂದ ಹೊರಬಂದಿಲ್ಲ ಎಂದಿದ್ದಾರೆ.

ಮೀಸೆ ಮೂಡಿದವನಿಗೆ ದೇಸ ಕಾಣದು ಮಗನೆ ಎಂದಜ್ಜಿ ಹೇಳಿದಳು.
ಥತ್ ಇದು ಹಳೆಯ ಮಾತು, ಸತ್ತ ಗಾದೆ
ಕೊಳೆತು ನಾರುತಿದೆ ಇಂದು
ಬೆಲ್-ಬಾಟ್ಟು ಏರಿಸಿ-ಕಿಸಿದ ಪ್ಯಾಂಟಿನ
ಬಾಟ ಬೆಲ್ಲಗಳ ನೆಲವ ಮಸೆಯುತ್ತ ಹೊರಟಾಗ
ಸಿಗರೇಟು ಬಾಯ ಹೊಗೆಯುಂಗುರುಗಳು
ಗೋಗೋ ಗ್ಯಾಸುಗಳ ಮುಂದೆ
ಹುಚ್ಚು ಆಸೆಗಳು ಹೃದಯ ಕೆಣಕುತ್ತ
ಸೀಥ್ರೂ ಹುಡುಗಿ ಎದೆಯೊಳಗೆ ತಕಥೈ ಕುಣಿಯುತ್ತಿರುವಾಗ
ಕಾಣಬೇಕಿತ್ತು ದೇಶ-ಗೀಸ ಹಸಿ-ಬಿಸಿ ಹೇಸಿ ಮೋಸ.[೨]

(ಆರ್. ಶಾಂತಕುಮಾರಿ, ಎರಡು ಸೆಲೆ, ಪುಟ-೨೦, ೨೦೦೦)

ಆಧುನಿಕ ತರುಣನ ಒಟ್ಟಾರೆ ಸಾಮಾಜಿಕ ಜೀವನವನ್ನು ಹೇಳುತ್ತದೆ, ಬದಲಾದ ಸಮಾಜವನ್ನು ಪ್ರತಿನಿಧಿಸುತ್ತಾನೆ. ಆಧುನಿಕತೆ ಮನುಷ್ಯನ ದೇಸಿತನವನ್ನು ಹಾಳುಮಾಡಿದೆ ಎನ್ನಬಹುದಾದರು ಕಾಲಕ್ಕೆ ತಕ್ಕಂತೆ ಇಲ್ಲಿ ಎಲ್ಲವೂ ಸಾಧ್ಯ ಆದರೂ ಮನದ ಮೂಲೆಯಲ್ಲಿ ತಾಯಿ ಕಳವಳಗೊಳ್ಳುತ್ತಾಳೆ. ಈ ಬದಲಾವಣೆ ಮುಂದೆ ಅಧೋಗತಿಗೆ ಎಳೆಯಬಹುದು ಎಂದು.

ಹೊಟ್ಟೆ ಹಸಿದಾಗ ಮಾತ್ರ
ಕೊಡಬೇಕು ಊಟ
ಬಯಕೆ ಇದ್ದಾಗ ಮಾತ್ರ
ಬೇಕಲ್ಲ ನೋಟ
ಅಪ್ಪಕೊಡುವುದು ಹೆಚ್ಚಾದಾಗ
ಬಾಟಲಿ ಎತ್ತುವುದನ್ನು
ಕಲಿಯುತ್ತಾನೆ ಮಗ
ಪಾಕೀಟು ತುಂಬಿಸಿ ಬಿಟ್ಟರೆ
ಮುಗಿಯಿತು ಕೆಲಸ
ಎಂದುಕೊಂಡರೆ

ಒಡನೆ ತೆಗೆದುಕೊಳ್ಳುವುದು
ಆಹ್ವಾನ ತೊಂದರೆ[೨೨]

(ಪ್ರೇಮತಾಶೀಲ್ದಾರ– ಪುಟ–೪೦, ೧೯೯೯)

ಅಯೋಗ್ಯ ತರುಣ ಬೆಳೆಯುವಲ್ಲಿ ಮಾಡುವಲ್ಲಿ, ತಂದೆತಾಯಿಗಳ ಮಧ್ಯಸ್ಥಿತಿಕೆಯು ಇರುತ್ತದೆ. ಅತಿಯಾದ ಮುದ್ದು ಮಾಡುವುದು ಬುದ್ಧಿ ಬೆಳೆಯದ ವಯಸ್ಸಿನಲ್ಲಿ ಅಗಾಧವಾಗಿ ಸಿಗುವ ಹಣ ತರುಣನನ್ನು ಅಡ್ಡದಾರಿಗೆಳೆಯುತ್ತದೆ.

ಮಗನೇ ಬದುಕು ಸಂಜೆಯಾಡು ಯುವ
ಮುನ್ನ, ನನ್ನ ತಲೆನೆರೆತ ಅನುಭವದ
ಮುರುಕು, ಕನ್ನಡಕದೊಳಗಿನ ಪಾಠ ನಿನಗೆ
ಬತ್ತಲು ಬಯಲು ದಾರಿಯಲ್ಲಿ
ನಿಗಿ–ನಿಗಿ ಉರಿಯುವ ಬಿಸಿಲಲ್ಲಿ
ಕಳೆದ ಭಾಗ ಹರುಕು
ಛತ್ರಿ ಕೊಟ್ಟಷ್ಟೆ ನೆರಳು[೨೮]

(ಪ್ರೇಮ ತಾಶೀಲ್ದಾರ–ಪುಟ–೪೦ ೧೯೯೯)

ಮಗನಿಂದ ಆಶ್ರಯ ಬಯಸುವ ತಾಯಿ ಸಂಪೂರ್ಣವಾಗಿ ಭರವಸೆಯನ್ನು ಮಗನಿಂದ ಪಡೆಯಲಾರಳು 'ಹರಕು ಛತ್ರಿ ಕೊಟ್ಟಷ್ಟೆ ನೆರಳು' ಎನ್ನುವಲ್ಲಿ ಮಗನ ಪ್ರೀತಿ ಆಶ್ರಯ ದಕ್ಕಿದಷ್ಟೆ ಸಾಕೆನ್ನುವ ಮನೋಭಾವ.

ಮಕ್ಕಳು ದೊಡ್ಡವರಾದಂತೆಲ್ಲ
ತಂದೆ–ತಾಯಿಗಳಿಗೂ
ವಯ್ಯಸ್ಸಾಗುತ್ತದೆ ನಿಜ
ಯೌವ್ವನದ ಹುಡುಗರ
ಹೃದಯಗಳೆಲ್ಲ ಅರಳುತ್ತದೆ
ಹೂ ಬಯಕೆ
ತಂದೆ–ತಾಯಿಯರ
ಕಣ್ಣಲ್ಲಿ ಹೊಳೆಯುತ್ತಿವೆ
ಹೊಸ ಚಿಗುರ ಆಸೆಗಳು[೨೯]

(ಹೆಚ್.ಎಸ್. ಮುಕ್ತಾಯಕ್ಕ– –ಪುಟ೨೬ ೧೯೯೬)

ಎನ್ನುವಲ್ಲಿ ತಂದೆ–ತಾಯಿ ಮತ್ತು ಮಗನ ಮನೋಭಾವಗಳು ಬೆಳೆಯುತ್ತಾ ವಿಭಿನ್ನವಾಗುತ್ತವೆ. *Generation Gap* ಜನಾಂಗೀಯ ಅಂತರ ಅರಂಭವಾದಂತೆಲ್ಲ ತರುಣ ಮತ್ತು ತಂದೆ ತಾಯಿಯ ಮನೋಭಾವ, ಯೋಚನಾ ಲಹರಿ ಭಾವನೆಗಳು, ಬದಲಾಗುತ್ತವೆ. ಬದಲಾದ

ಪರಿಸ್ಥಿತಿಯನ್ನು ತಂದೆ ತಾಯಿಯಾಗಲಿ ತರುಣನಾಗಲಿ ಅರ್ಥಮಾಡಿಕೊಳ್ಳುವುದಿಲ್ಲ. ಹೀಗೆ ಮಗ ಮತ್ತು ತರುಣ ಪರಿಕಲ್ಪನೆ ಅನನ್ಯ.

ಪ್ರೇಮಿಯ ಪರಿಕಲ್ಪನೆಯಲ್ಲಿ ಆದರ್ಶ 'ಪುರುಷ'

ಪ್ರೀತಿ ಎಂಬುದು ಬಹುದೊಡ್ಡ ಮಾತು. ಅದು ಸ್ವರೂಪ ಲಕ್ಷಣಗಳಿಗೆ ಪ್ರೀತಿ ಸಿಕ್ಕಿರುವುದು ಸಾಧ್ಯವಿಲ್ಲ. ಗಂಡು–ಹೆಣ್ಣು ಮನುಷ್ಯ ಸಂಬಂಧಗಳಿಗೆ ಪ್ರೀತಿ ಎಂಬುದು ಒಂದು ಅನಿವಾರ್ಯ ತಳಪಾಯವಾಗಿದ್ದರೂ ಮಾನವ ವಿಕಾಸದ ಮಾರ್ಗದಲ್ಲಿ ಅದ ಪಾತ್ರ, ಗಾತ್ರ ಬಹು ಮಹತ್ವದ್ದು. ಸ್ತ್ರೀ ಕವಿಯತ್ರಿ ಪುರುಷನಲ್ಲಿ ತನ್ನ ಪ್ರೇಮಿ(ಪುರುಷ)ಯನ್ನು ಕಾವ್ಯದಲ್ಲಿ ಒಡಮೂಡಿಸಿದ್ದಳೆಂಬುದು ಒಂದು ಚಿಂತನೆಯನ್ನು ಅರ್ಥೈಸುವುದು ಸ್ವಾರಸ್ಯ ಸಿಕ್ಕಿತು.

ಕವಿಯತ್ರಿಯು ಪ್ರೇಮಿಯಾಗಿ ತನ್ನನ್ನು ಗುರುತಿಸಿಕೊಂಡಿರುವುದು ಪುರುಷ ಕವಿಗಿಂತ ಮುಕ್ತವಾಗೇನು ಇಲ್ಲ. ಅವಿತಿಟ್ಟ ಕನಸು, ಹೆಚ್ಚುಗಾರಿಕೆ, ಪ್ರೀತಿಯ ತೀವ್ರತೆ, ಪ್ರೀತಿಯ ಬಹಿರಂಗ ಎಲ್ಲದರಲ್ಲೂ ತಕ್ಕ ಮಟ್ಟಿಗಿನ ತನ್ನ ಪರಿಧಿಯನ್ನು ದಾಟಲು ಹೆಣಗಾಡಿದ್ದಾಳೆ. ಹೇಳಬೇಕಾದ್ದನ್ನು ತಿಣುಕಿ ಹೇಳಿದರೂ ಅವಳ ಕಾವ್ಯಗಳು ಪುರುಷನ ಕಾವ್ಯಕ್ಕಿಂತ ಹೆಚ್ಚು ಮನಮುಟ್ಟುವಂತದ್ದು, ಮನಮೆಚ್ಚುವಂತದ್ದು ಆಗಿರುತ್ತವೆ. ಅವರು ಬರೆದ ಕವಿತೆಯೊಳಗೆ ಹುಡುಕಿದಷ್ಟು ಹೊಸ–ಹೊಸ ಅಂತರ್ಗತವಾದ ಹೊಸ ಅಮೂರ್ತವಾದ ಭಾವಗಳು ಸಿಗುತ್ತವೆ. ಕವಿಯೊಬ್ಬನ ಭಾವನೆಗಳು ನೇರ–ನೇರ, ಹೆಚ್ಚು ಸ್ಪಷ್ಟ ಹೆಚ್ಚು ನಿಖರತೆ. ಕವಿಯತ್ರಿಯೊಬ್ಬಳು ಅದನ್ನೆ ವಿಧವಿಧವಾಗಿ ಹೇಳಿದ್ದರು ಅದರ ಪರಿಧಿಯೊಳಗೆ ನುಸುಳಿರುತ್ತದೆ. ಪ್ರತಿಭಾ ನಂದಕುಮಾರ್ ನಾವು ಹುಡುಗಿಯರೇ ಹೀಗೆ ಕವನದಲ್ಲಿ ಹೀಗೆ ಹೇಳುತ್ತಾರೆ.

> ಹೌದು ಕಣೆ ಉಷಾ
> ನಾವು ಹುಡುಗಿಯರೇ ಹೀಗೆ...
> ಏನೇನೊ ವಟಗುಟ್ಟಿದರೂ
> ಹೇಳಬೇಕಾದ್ದನ್ನು ಹೇಳದೆ
> ಏನೇನೆಲ್ಲಾ ಅನುಭವಿಸಿ ಸಾಯುತ್ತೇವೆ.
> ಜುಮ್ಮೆನ್ನಿಸುವ ಆಲೋಚನೆಗಳನ್ನೆಲ್ಲಾ
> ಹಾಗೆ ಡಬ್ಬಿಯೊಳಗೆ ಹಿಟ್ಟು ಒತ್ತಿದಂತೆ
> ಒತ್ತಿ ಒತ್ತಿ ಗಟ್ಟಿ ಮಾಡುತ್ತೇವೆ.[೩೦]

(ಪ್ರತಿಭಾ ನಂದಕುಮಾರ್, ಪುಟ–೨೦, ೧೯೮೩)

ಅಮೂರ್ತವಾಗಿ ತನ್ನಲ್ಲೆ ಉಳಿದ ಭಾವನೆಗಳನ್ನು, ಮುಕ್ತವಾಗಿ ಹೇಳಲು ಹೊರಟಿದ್ದು, ಕಥೆ–ಕಾದಂಬರಿ ಮಾಧ್ಯಮಕ್ಕಿಂತ ಕಾವ್ಯದ್ದೆ ಹೆಚ್ಚುಪಾಲು. ಕವಿಯತ್ರಿಯ ಪ್ರೇಮ ಕವಿತೆಗಳಲ್ಲಿ 'ಪ್ರೇಮ'ವು ನಿವೇದನೆಗೊಂಡಿದ್ದು, ಹಲವು ಬಗೆ 'ಪ್ರೇಮದ ಚುಂಬನಶಕ್ತಿಗೆ ಒಳಗಾದ

ಪ್ರಪಂಚ ಜೀವನವಿಲ್ಲ.' ಪ್ರೀತಿ ಪ್ರೇಮದ ಸ್ಪರ್ಷವಿಲ್ಲದವನು ಕತ್ತಲೆಯಲ್ಲಿ ನಡೆಯುತ್ತಾನೆ ಎಂಬ ಪ್ಲೇಟೋನ ಹೇಳಿಕೆಯ ಯಥಾರ್ಥತೆಗೆ ಈ ಪ್ರೇಮಕವನಗಳು ಪ್ರಬಲ ಸಾಕ್ಷಿಯೆನಿಸುತ್ತವೆ.

ಜಾಗತಿಕ ಇತಿಹಾಸ ಕ್ರಮದಲ್ಲೂ ಕೂಡ ಪ್ರೀತಿ-ಪ್ರಣಯಕ್ಕಾಗಿಯೇ ದುರ್ಘಟನೆಗಳು ಸಂಭವಿಸಿವೆ. ಪಟ್ಟಣಗಳು ಉರಿದಿವೆ. ದೇಶಕೋಶ ಹಾಳಾಗಿವೆ. ಪ್ರೇಮಪ್ರೀತಿಯ ಶಕ್ತಿ ಪಂಜರದಲ್ಲಿ ಮಾನವ ಸೆರೆಯಾಳಾಗಿದ್ದಾನೆ.

ಮಹಿಳಾ ಕಾವ್ಯದಲ್ಲಿ ಪುರುಷ ಪ್ರೀತಿಯ ವ್ಯಕ್ತಿಯಾಗಿ ನಿವೇದನೆಗೊಂಡಿದ್ದು, ಹಲವು ರೀತಿಯಾಗಿ, ಮಹಿಳಾ ಕಾವ್ಯದಲ್ಲಿ ನಿರ್ದಿಷ್ಟವಾಗಿ ಪುರುಷನನ್ನು ಪ್ರೇಮಿಯಾಗಿ ನೋಡತೊಡಗಿದ ಸಂದರ್ಭದಲ್ಲಿ ರಚಿತವಾದ ಅವಳ ಕವನವನ್ನು ಪರಾಮರ್ಶಿಸಿದಾಗ; ಅವುಗಳಲ್ಲಿ ಒಂದೊಂದಾಗಿ ಹಲವು ವಿಭಾಗಗಳನ್ನು ಮಾಡಬಹುದು.

೧. ಪ್ರೇಮ ನಿವೇದನೆಯಲ್ಲಿ ಪುರುಷ

೨. ನಿರೀಕ್ಷೆಯಲ್ಲಿ ಪುರುಷ

೩. ನಲ್ಲನಿಂದ ವಿರಹಿಯಾದವಳು

೪. ವಂಚಕನಾಗಿ ಪ್ರೇಮಿ

೫. ನಲ್ಲನಲ್ಲಿ ಪ್ರಕೃತಿಯ ಗುಣಾವಶೇಷದ ಹುಡುಕುವಿಕೆ

೧. ಪ್ರೇಮ ನಿವೇದನೆಯಲ್ಲಿ ಪುರುಷ

ಪ್ರೇಮವೊಂದೇ ಸತ್ಯವಾಗಿ ಪ್ರಿಯ-ಪ್ರೇಯಸಿಯರ ಮಧ್ಯೆ ಎರಡಿಲ್ಲದ ಮುಕ್ತನಿಧಿ ಹೆದ್ದಾರಿಯಲ್ಲಿ ಪ್ರವಹಿಸುತ್ತದೆ. ಇಂಥ ಧ್ಯೇಯಕ್ಕೆ ಅಣಿಯಾಗಬಯಸುವ ಯಾವ ಪ್ರಣಯಿಗಳೂ ಹಿಂಜರಿದು ನಾಚಬೇಕಿಲ್ಲ. ಅದರೆ ನಿವೇದನೆಯಲ್ಲಿ ಸಂಪೂರ್ಣವಾದ ತನ್ಮಯತೆ, ಉನ್ಮಾದಗಳೆರಡನ್ನು ಕಾಣಬಹುದು.

ಬೇಡಲಿಲ್ಲ ಗೆಳೆಯಾ
ನೀಲ ನಭದಲ್ಲಿ
ಸಾಗಿ ಹೋಗುವ
ಬೆಳ್ಳಿ ಬೆಳ್ಮುಗಿಲ
ಗೆಳೆಯ
ಕರಮುಗಿದು ಬೇಡುವೆ
ಬಾಯಾರಿದೆನ್ನದೆಗೆ
ನೀಡಲಾರೆಯಾ

ನಿನ್ನದೆಂತು ಹೊಂಗನಸಿನ
ಮಧುರ ಪ್ರೇಮ ರಸವ?[೩೧]

(ಮಲ್ಲಿಕಾಘಂಟಿ, ಪುಟ-೨೩, ೨೦೦೧)

ಎನ್ನುವಲ್ಲಿ, ಪ್ರೇಮ ನಿವೇದನೆ ಸಂಪೂರ್ಣ ಶರಣಾಗತಿ ಹೊಂದಿದೆ. ಪ್ರಣಯ ದಯಾ ಭಿಕ್ಷೆ ಕೇಳುವಲ್ಲಿ ಪ್ರೇಮವಾಹಿನಿ ಬಹಿರಂಗವನ್ನು ಪ್ರವೇಶಿಸಿದೆ. ಕೈಮುಗಿದು ಬೇಡುವೆ ಎನ್ನುವಲ್ಲಿ ಪ್ರೇಮದ ಉತ್ಕಟತೆ ತುಂಬಿ ನಾನೆಂಬ ಅಹಂಕಾರ ಅಳಿಸಿ ಹೋಗುತ್ತದೆ. ಪ್ರೇಮವೇ ಅತ್ಯುನ್ನತ ಎನ್ನುವುದು ಸ್ಥಾಯಿಯಾಗಿ ನಿಲ್ಲುತ್ತದೆ.

ಅಂತರಾಳದಲ್ಲೊಂದು
ಬೋರ್ಗರೆವ ಕಡಲಿದ್ದು
ಗೆಳೆಯ ಇದೇನಿದು
ನನ್ನ ನಿನ್ನ ನಡುವೆ
ಗುವ್ವೆನ್ನುವ ಮೌನ[೩೨]

(ಶೈಲಜಾ ಉಡುಚಣ, ಪುಟ-೪೦ ೧೯೮೧)

ಪ್ರೇಮದ ಉತ್ಕಟತೆಯಲ್ಲಿ ಪ್ರಿಯ-ಪ್ರೇಯಸಿಯರ ಮಧ್ಯೆ ನಾಚಿಕೆಯ ಸೋಂಕಿರುವುದಿಲ್ಲ. ಅದರ ಅಗತ್ಯವು ಇಲ್ಲ. ಇಲ್ಲಿ ಕವಿಯತ್ರಿ ಅದನ್ನು ಪರಾಮರ್ಶಿಸುತ್ತಾ ಉತ್ಕಟ ಪ್ರೀತಿ ಬೋರ್ಗರೆವ ಕಡಲಿಗೆ ಹೋಲಿಸಿದ್ದಾಳೆ.ಕಡಲು ತನ್ನ ಪ್ರತಿಮೆಯು ಕವಿತೆಗಳಲ್ಲಿ ಗಮನಿಸಿದಾಗ ಅದು ಕೆಲವೊಮ್ಮೆ ಪ್ರಶಾಂತ ಸ್ವಚ್ಛದಂತೆ ಸಂಕೇತ, ಕೆಲವೊಮ್ಮೆ ಅದರ ಪ್ರತಿಮೆಯು ಭೀಕರತೆ, ಉನ್ಮಾದಗಳ ಸಮ್ಮಿಲನವಾಗುತ್ತದೆ. ಇಲ್ಲಿ ಬೋರ್ಗರೆವ ಕಡಲು ಪ್ರೇಮದ ಉತ್ಕಟತೆಗೆ ಸಾಕ್ಷಿಯಾಗಿರುತ್ತದೆ. ಕವಿಯತ್ರಿ ಪ್ರಕಾರ 'ಗುವ್ವೆನ್ನುವ ಮೌನ' ಬೋರ್ಗರೆವ ಕಡಲಿನ ಪ್ರೀತಿಯ ಮುಂದೆ ಅನಗತ್ಯ.

ಮಾತನಾಡಲಿಲ್ಲ ನಾವು
ಎಂದೂ
ಹತ್ತಿರ ಕೂತು ಹೊತ್ತು ಕಳೆದಿಲ್ಲ
ಆದರೂ ಕೇಳುತ್ತದೆ ಎದೆಬಡಿತ
ಮಳೆಗೆ ಮುಂಚೆ ಸಿಡಿಲು ಹೊಡೆದಂತೆ
ಮಾತನಾಡುವುದೇ ಬೇಡ
ಸುಮ್ಮನೆ ಕರಗಿ ಬಿಡಬೇಕು.[೩೩]

(ಪ್ರೇಮ ತಾಶೀಲ್ದಾರ ಪುಟ-೩೬, ೧೯೯೯)

ಇಲ್ಲಿ 'ಮೌನ' ಕೇವಲ ನಾಚಿಕೆಯಲ್ಲ ಇಲ್ಲಿ ಅಮೂರ್ತವಾದ ಬೇರೇನೋ ಹೇಳುತ್ತದೆ. ಮಾತು ಇಲ್ಲಿ ಅನಗತ್ಯ. ಸುಮ್ಮನೆ ಸುಮ್ಮನೆ ಕರಗಿಬಿಡಬೇಕು ಎನ್ನುವಲ್ಲಿ ಪ್ರೇಮಬ

ಉತ್ಕಟತೆಯನ್ನು ಕಾಣಬಹುದು. ಆದರ್ಶ ಪುರುಷ ಇಲ್ಲಿ ಪ್ರೇಮಿಯಾಗಿ ಗೆಲ್ಲುವ ಬಗೆಯನ್ನು ವಿವರಿಸಿದ್ದಾರೆ ಅವನ ಉತ್ಕಾಟ ಪ್ರೇಮ ಬರಸಿಡಿಲಿನಂತಾದರೂ ಕರಗುವ ಖುಷಿಯಲ್ಲಿ ಅವನ ಉತ್ಕಟ ಪ್ರೇಮಕ್ಕೆ ಹೆಣ್ಣು ಹಾತೊರೆಯುತ್ತಾಳೆ

ಅವನು ಹುಚ್ಚ ಅವಳು ಹುಚ್ಚಿ
ಒಲವ ಹೇಳರು ಮನಸು ಬಿಚ್ಚಿ
ಹುಚ್ಚಿ ಅಂದಳು ಮುಖವ ಮುಚ್ಚು
ನಾನು... ನಿಮ್ಮನು... ನಾನು... ನಿಮ್ಮನು
ನಾಚಿ ನಕ್ಕಳು ತುಟಿಯ ಕಚ್ಚಿ[೩೪]

(ಲಕ್ಷ್ಮೀದೇವಿ, ಪುಟ–೪೦, ೧೯೯೮)

ಮಾತು–ಮೌನ, ನಿವೇದನೆಯಲ್ಲಿ ಯಾವುದು ಸರಿ ಎಂಬ ನಿರ್ಧಾರದ ವೇಳೆಗೆ ನಾಚಿಕೆ ಮಾತು–ಮೌನದ ಮಧ್ಯೆ ನುಸುಳಿತ್ತದೆಂಬುದನ್ನ ಹೇಳುತ್ತದೆ.

ಆಕಾಶದ ಮಳೆ
ಅಕಸ್ಮಾತ್ ಬಂತು ಬಾಗಿಲಿಗೆ
ಹಳ್ಳವಾಗಿ ಹರಿದು ನಿಂತು
ದೀನವಾಗಿ ಕೈಯಾಡಿತು ಇಳೆಗೆ
ಒಳಗೆ ಬರಲೇ?[೩೫]

(ಕವಿತ ಭಗಲಿ, ಪುಟ–೨೩, ೨೦೦೦)

ನಿವೇದನೆ ಇಲ್ಲಿ ಸಂಕೋಚವನ್ನು ತಾಳದೆ ಆಕಾಶದ ಮಳೆ ಪ್ರೇಮಿಯಾದರೆ ಧರೆ ನಲ್ಲನಾಗುತ್ತದೆ. ಆದರ್ಶ ಪುರುಷನ ಉತ್ಕಟ ಪ್ರೇಮ ಕೊಂಚ ಸಂಕೋಚ ತಾಳದೇ ನೇರವಾಗಿ ತನ್ನ ಪ್ರೇಮವನ್ನು ಹೇಳದಂತಿದೆ.

ಗೆಳತಿ
ನಿನ್ನಂತೆಯೇ ನಾನು ಖಾಲಿ
ಯಾಗುತ್ತಿದ್ದೇನೆಂಬ ಅನಿಸಿಕೆ
ನನ್ನ ಹಾಡುಗಳು ಗುಡಿ
ಸಿಲಿನ ಕದ ತಟ್ಟಲಿಲ್ಲ,
ಎದೆ ಸೇರಲಿಲ್ಲ
ಯಾರ ನವಿರುಗನಿಸಿಗೂ
ಕಚಗುಳಿಯಿಡಲಿಲ್ಲ[೩೬]

(ಸರೋಜಿನಿ, ಪುಟ–೩೬, ೧೯೯೯)

ತಾನಿಡುವ ನಿವೇದನೆ ವಿಫಲವಾದಾಗ ಅವಳಲ್ಲಿ ನಿರಾಸೆ ಮೂಡಿ ತನ್ನ ಜೀವನ ವ್ಯರ್ಥ ಎಂದಿದ್ದಾಳೆ.

ನೀ ಕಾಣದಂತೆ
ನಾ ನೋಡುವುದು
ನೀ ಮುನಿದರೂ
ನಾ ಮುಚ್ಚುವುದು
ದೂಡಿದರು
ನಾ ಬಾಡದಿರುವುದು
ನಾ ಹಳಿದರೂ
ನಾ ಆರಾಧಿಸುತ್ತಿರುವುದು
ಈ ವರ್ತನೆ ವಿಚಿತ್ರವಾದರೂ
ನನಗೆ ಸಚಿತ್ರ[೩೭]

(ಲೀಲಾಕುಲಕೋಟಿ, ಪುಟ-೨೦, ೧೯೯೨)

ಎನ್ನುವಲ್ಲಿ ಭಗ್ನಗೊಂಡ ನಿವೇದನೆಯಿದ್ದರು ಪ್ರೀತಿಯ ದಕ್ಕುತ್ತದೆಂದು ಆಶಾವಾದ ಇರಿಸುವುದು ಕಂಡುಬರುತ್ತದೆ. ಆದರ್ಶ ಪ್ರೀತಿಯ ಹಂಬಲ ಸತ್ಯವಾಗಿದ್ದರೆ ಪ್ರೀತಿ ದಕ್ಕದಿದ್ದರೂ ತಾನು ಪ್ರೀತಿಸುವುದಲ್ಲಿ ಗೌರವ ಇಟ್ಟುಕೊಳ್ಳುವುದು ದೊಡ್ಡತನ ಈ ದೊಡ್ಡತನ

ಹೇಳು ಗೆಳೆಯ
ನಿನಗನ್ನಿಸುವುದಿಲ್ಲವೇ
ನಿನ್ನ ಕನಸಿಗೆ ನಾನೂ
ಬಣ್ಣ ತರಬಹುದೆಂದು
ನನ್ನ ಕನಸಿನ ಹಾಡು
ಕೇಳಿ
ನೀ ಹಗುರಾಗಬಹುದೆಂದು[೩೮]

(ಶಶಿಕಲಾವಸ್ತ್ರದ, ಪುಟ-೭೬ ೧೯೯೯)

ನಲ್ಲನ ಆಕಾಂಕ್ಷೆಗೆ ತಾನು ತಕ್ಕವಳೆಂದು ಸಮರ್ಥಳೆಂಬುದನ್ನೂ ಹೇಳಿಕೊಂಡಿದ್ದಾಳೆ.

೨. ನಿರೀಕ್ಷೆಯಲ್ಲಿ ಪುರುಷ

ಪ್ರೇಮ ಕಾವ್ಯದಲ್ಲಿ 'ನಿರೀಕ್ಷೆ' ಯಂತಹ ಕವನಗಳಲ್ಲಿ ನಿವೇದನೆಯಷ್ಟೆ ಕಾವ್ಯಗಳು ತೂಕವುಳ್ಳದ್ದು ಬಂದಿವೆ. ನಿರೀಕ್ಷೆ-ಅಪೇಕ್ಷೆ ಪಡುವುದು, ಕನಸು ಕಾಣುವುದು, ತಾನು ಅಂತರಾಳದಲ್ಲಿ ಸೃಷ್ಟಿಸಿಕೊಂಡ ಯಶಸ್ವಿ ಪುರುಷನ ಸಾಕ್ಷಾತ್ಕಾರ ಪ್ರತ್ಯಕ್ಷಕ್ಕಾಗಿ ಕಾತರಿಸುವುದು ನಿರೀಕ್ಷೆ ಆಗಿದೆ.

ಕೆಲವೊಮ್ಮೆ 'ನಿರೀಕ್ಷೆ' ಕಾಯುವುದೆಂಬ ಅರ್ಥವು ಬರುತ್ತದೆ.

ದೈವವಾಗಿ
ನನ್ನ ಬಾಳ ಗಗನದಲ್ಲಿ
ಚಂದಿರ ನಿನ್ನ ನಿರೀಕ್ಷಿಸಿದೆ
ದೇವ
ನನ್ನ ಮನದ ದೇಗುಲದಲ್ಲಿ
ನಿನ್ನ ಕಾಯ್ದು
ನೀನು ಚಂದಿರ
ನಾನೇ ತಾರೆ – ಗಗನ
ನಮ್ಮ ಧಾರೆ
ಆದರೆ
ಪೌರ್ಣಿಮೆ ಮಾತ್ರ
ಎಂದಿಗೂ ಬರಲಿಲ್ಲ
ನಾನು ತಾರೆಯಾಗಿ
ಮಿನುಗಲಿಲ್ಲ
ನಿರೀಕ್ಷೆಯಲ್ಲೆ
ಬಾಳು ಕಳೆದು
ಬರೀ ಬರಡಾಯಿತು.[೩೯]

(ಮಾಲತಿಪಟ್ಟಣ ಶೆಟ್ಟಿ, ಪುಟ–೨೦, ೧೯೮೩)

ಪ್ರೇಮಿಯು ಪ್ರಿಯಸಖನಾಗಿ, ಮನುಷ್ಯನಾಗಿ ಇಲ್ಲಿ ಕಾಣುವುದೇ ಇಲ್ಲ. ಅವಳ ಪ್ರಕಾರ ಅವನು ಇಷ್ಟದೈವ. ಪ್ರೇಮದಲ್ಲೂ ದೈವತ್ವದ ಮಟ್ಟಕ್ಕೆ ಏರಿಸುವುದು ಕಂಡುಬರುತ್ತದೆ. ಅಂತ್ಯದಲ್ಲಿ ನಿರೀಕ್ಷೆ ಅಂತಿಮದಲ್ಲಿ ನಿರಾಸೆಮಟ್ಟ ತಲುಪುತ್ತದೆ.

ಬಿಸಿಲಿನ ತಾಪಕ್ಕೆ ಬಾಯ್ಬಿಡುವ ಮಳೆ
ಹೊಸ ಜವ್ವನದ ಹೊಸ್ತಿಲ ಹೊಂಗನಸ
ಹಸುಳೆ ಕಾಯ್ದಿಹಳು ತುದಿ ಬೆರಳಲಿ
ಕಾವೇರಿ ತನುಮನವ
ಹಾಸಿ
ಪ್ರೀತಿಸೂಸುವ ಇನಿಯನ ಭರದಪ್ಪುಗೆ
ಬಯಸಿ ಆಲಿಂಗನ
ಹಸಿ ನೆನಪಿನ ಬಿಸಿಯುಸುರಿಗೆ
ಬಾಯ್ತೆರೆದು[೪೦]

(ಮಲ್ಲಿಕಾಘಂಟಿ, ಪುಟ–೨೩, ೨೦೦೧)

ನಿರೀಕ್ಷೆ ಇಲ್ಲಿ 'ಅವನ' ಬರುವಿಕೆಗಾಗಿ ಕಾದು ನಿಂತಿದೆ. ಇಲ್ಲಿ ನಲ್ಲನ ಬರುವಿಗೆ ಬಿಸಿಲಿನ ತಾಪಕ್ಕೆ ಹಾತೊರೆಯುವ ಇಳೆಯಷ್ಟೆ ಇಲ್ಲಿ ಗಂಭೀರವಾದ್ದು ನಲ್ಲನ ಬರ್ರುವಿಕೆ ಅವಳಲ್ಲಿ ಕಾತರ ಮುಡಿಸಿದೆ ನಲ್ಲ ಇಲ್ಲಿ ಒಬ್ಬ ಆದರ್ಶಪುರುಷನಾದ್ದರಿಂದಲೇ ಅವಳು ಎಂತಹ ಉತ್ಕಟವಾದ ವಿರಹವನ್ನಾದರು ಸಹಿಸುತ್ತಾಳೆ.

ನಾಳೆ ಬರ್ತಿನಂತ ಹೋದಾವ
ಬರಲಿಲ್ಲ್ಯಾಕ ಇನ್ನೂ?
ಕಾದಿಟ್ಟ ಹಾಗಲಕಾಯಿ
ಮಾಡಿಟ್ಟ ರೊಟ್ಟಿ ಚಟ್ನಿ
ಮಾರೀ ಉಬ್ಬಿಸಿ ಮಳೆ, ಮಳೆ
ನಾ
ಎನ್ನುವಾಗಲಿ
ಇಂದು ನಾಳೆ ಬರ್ತಾನಂತ[೪೧]

(ಭಾರತಿ ಪಾಟೀಲ, ಪುಟ–೪೩ ೧೯೯೪)

ನಿರೀಕ್ಷೆ ಇಲ್ಲಿ ಅಸಹನೆ ಮೂಡಿಸಿದೆ. ತನ್ನ ಪ್ರೀತಿಯ ಪುರುಷ ಬಾರದೆ ಇದ್ದದ್ದು ಅವಳಲ್ಲಿ ಆತಂಕ ಮೂಡಿಸಿದೆ. ನಿರೀಕ್ಷೆ ಹುಸಿಯಾಯಿತೇನೋ ಎಂಬ ಅನುಮಾನ ಬರುತ್ತದೆ

ಕಾದೆ ಕಾದೇನಿ ದಾರಿ
ಯಾವ ಹೆಣ್ಣಿನ ರೂಪಾ
ಮೆಚ್ಚಿ ಮರೆತೆ ಬಿಟ್ಟೆನಾ[೪೨]

(ಶಶಿಕಲಾ ವಸ್ತ್ರದ, ಪುಟ–೨೦, ೧೯೯೯)

ಎನ್ನುವಲ್ಲಿ 'ನಲ' ಇಲ್ಲಿ ಅವಳಿಗೆ ದಕ್ಕಿದ್ದಾನೆ. ಆದರೆ ಅವಳಿಂದ ದೂರ ಉಳಿದು ಅವಳಲ್ಲಿ ನಿರೀಕ್ಷೆಯ ಅಮಲನ್ನು ಹೆಚ್ಚಿಸಿದ್ದಾನೆ. ವಿಷಯದಲ್ಲಿ ಅನುಮಾನಗಳು ಎದ್ದಿದ್ದೆ ಈ ಅನುಮಾನ ಹುಸಿಎನಿಸಿದ್ದರೂ ಅವಳ ಉತ್ಕಟ ಪ್ರೇಮ ನಾನಾ ರೀತಿಯಲ್ಲಿ ಯೋಚಿಸುವಂತೆ ಮಾಡಿದೆ.

ಅಂತೂ ಬಂದಾನು ಕೊನೆಗೊಮ್ಮೆ ಬಂದಾನೆಂದು ನೀಲಿ
ಸೆರಗಿನ ಕೆನ್ನೆ ಕಾದಿದ್ದಾಳೆ, ಉಡಿಯಲ್ಲಿ
ಮುತ್ತು, ಪಚ್ಚೆ ಹವಳದ, ಕುಡಿಗಳು ಹಾದಿ ನೋಡುತ್ತಿವೆ
ಮನದಲ್ಲೋ
ನೂರು ಮುದ್ದಾನೆಗಳ ತಾಕಲಾಟದ ಮೊರೆತ[೪೩]

(ಪ್ರತಿಭಾ ನಂದಕುಮಾರ, ಪುಟ–೭೦ ೧೯೮೩)

ನೂರು ಮದ್ದಾನೆಗಳ ತಾಕಲಾಟದ ಸದ್ದಿನಷ್ಟೆ ಅವಳ ನಿರೀಕ್ಷೆ ಸಫಲವಾಗಿ ಅವನು ಮರಳಿ ಬಂದಾಗ. ಉತ್ಕಟ ಪ್ರೇಮಿಯಾಗಿ ಹೆಣ್ಣು ತನ್ನ ಆದರ್ಶ ಪುರುಷನ್ನು

ಹಂಬಲಿಸುತ್ತಾಳೆ ನಿರೀಕ್ಷೆ ಸಫಲವಾದಾಗ ಕಾಯ್ದ ಪ್ರತಿಫಲಕ್ಕೆ ಅವಳ ಜೀವನ ಸಾರ್ಥಕವೆನಿಸುತ್ತದೆ.

ನೀ ಬಂದೆಬರುತಲಿರುವೆ
ಎಂದು ಕೈ ಸುಖಿಸುವೆಯಾದರೂ
ಒಡೆಯ ದುಗುಡ ಕಳೆಯಲಿಲ್ಲ?
ಏಕೋ ಅರಿಯಲಿಲ್ಲ[೮೪]

(ಡಾ. ಮಲ್ಲಿಕಾಘಂಟಿ, ಪುಟ–೧೦ ೨೦೦೧)

ಬಂದೆಬರುವ ಖಚಿತತೆ ಇದ್ದರೂ ಕೂಡ ಕಾಯ್ದ ನೋವ್ನ ಅವಳಲ್ಲಿ ತಲ್ಲಣವನ್ನು ಮೂಡಿಸಿದೆ ದುಗುಡತೆ ಅವಳನ್ನು ಆವರಿಸಿದೆ. ಈ ದುಗುಡವೇ ಮುಂದೆ....

ನಾರೀ ನಿನ್ನ ಮಾರೀ ಮ್ಯಾಲ
ಕಣ್ಣೀರಿನ ಗೆರೀ ಯಾಕ?
ವಾರಿಗಿನ ರಾಯ ನಿನ್ನ
ಊರಿಂದ ಬಂದಿಲ್ಲಾಕ?
ದಾರಿ ಮ್ಯಾಲೇ ಕಣ್ಣಿಟ್ಟ
ಹೊಸ್ತಿಲಿನ ಕಾಲಿಟ್ಟ
ಉದ್ದಾನುದ್ಧ ದಾರಿ ನೋಡಿ
ಉಸುರ ಹಾಕ ತಾಳ ಬಸುರಿ
ದೂರದೂರಿನ ಇನಿಯನನ್ನು ಬರುವನೆಂಬ ನಿರೀಕ್ಷೆ[೮೫]

(ಪ್ರಮೀಳ, ಪುಟ–೧೯, ೧೯೯೮)

ತನಿಯನ ನಿರೀಕ್ಷೆ ಇಲ್ಲಿ ಸಂಕಟಕರವಾಗಿದೆ. ಬಸುರಿಯಾದ ಹೆಣ್ಣಿನ ಮನಸುಗಳು ಸುಕೋಮಲವಾದವು. ಅವಳಿಗೆ ಈ ಸಮಯದಲ್ಲಿ ತನ್ನ ಇನಿಯನ ಸನಿಹ ಅತ್ಯಮೂಲ್ಲವೆನಿಸಿದೆ. ತನ್ನ ಆದರ್ಶ ಪತಿಯ ಬರುವಿಕೆ ಎಲ್ಲದಕ್ಕಿಂತ ಮುಖ್ಯವಾದುದೆನಿಸಿದೆ.

ಎತ್ತಂದಲೋ ಬರೆವ
ಧ್ವನಿಯ
ನಾ... ಅಲಿಸಿನಿಂತ
ಪ್ರಿಯಕರನ ಧನಿಯುದಿಸಿ
ಕ್ಷಣದಲ್ಲೇ ಅರಿತೆ
ಧನಿಯೊಡೆಯ ನಲ್ಲೆಂದು
ಹಿಂದಿರುಗಿ ನೋಡಲು
ಅಯ್ಯೋ!
ನಾ ಕಂಡುದೇನು?

ಪ್ರೇತ ಛಾಯೆಯು
ನನ್ನ ಸನಿಹ ಸುರಿಯುತಿರಲು
ಭಯಕೆ ತೆರೆ..ದಾ...ಬಾಯಿ
ಹಾ! ಎಂಥು ಚೀರಲು
ಕನಸ ತಿಳಿದೆದ್ದ
ನಾ ನಡುಗುತಿದ್ದೆ.[೬೬]

(ಮುಕ್ತಾಯಕ್ಕ ಎಚ್.ಎಚ್., ಪುಟ-೧೦ ೧೯೯೨)

ಇಲ್ಲಿ ನಿರೀಕ್ಷೆ ಅಂತಿಮದಲ್ಲಿ ಭ್ರಮೆಯ ಮಟ್ಟ ತಲುಪುತ್ತದೆ. ಅವಳಿಗೆ ಸದಾ 'ಪ್ರಿಯ'ನ ಮೇಲೆ ಗಮನವಿದ್ದರಿಂದ ಸುತ್ತಲಿನ ಚೇತನವೆಲ್ಲ ಅವನ ಅಸ್ಥಿತ್ವವನ್ನು ಹೇಳುತ್ತದೆ. ಕಾಯುವುದಷ್ಟೆ ನಿರೀಕ್ಷೆಯ ವ್ಯಾಪ್ತಿಗೆ ಸಿಲುಕುವುದಿಲ್ಲ. ಅವಳು ತನ್ನ ಮುಂಬರುವ ಪ್ರೇಮಿಯ (ಪುರುಷನ) ಬಗ್ಗೆ ತಾನು ಕಂಡುಕೊಂಡಿರುವ ಆಶಾಚಿತ್ರಣವನ್ನು ಮತ್ತು ದೊರಕಿದ ಮೇಲೆ ಅವನ ಬಗ್ಗೆ ನಿರೀಕ್ಷಿಸಿದ ಸದಾಭಿಪ್ರಾಯವು ಲೆಕ್ಕಕ್ಕೆ ಬರುತ್ತದೆ.

ಬೆಳೆದಿರುವ ಬಿದಿರುಮಳೆ
ಕತ್ತಿ ನೀನದರ ಕೊಳೆ
ಬಣ್ಣಬಣ್ಣದ ಕೊಳಲು
ನಾನಗಬೇಕು
ಕೊರಳು ಕೊರಳಿಗೆ ಜೀವ
ನೀ ತುಂಬಬೇಕು[೬೭]

(ಡಾ. ಮಲ್ಲಿಕಾಘಂಟಿ, ಪುಟ-೧೦, ೨೦೦೧)

ಎನ್ನುವಲ್ಲಿ ತನ್ನ ಭವಿಷ್ಯದ ನಲ್ಲನ ಭವಿಷ್ಯದ ಗುಣಾವಳಿಗಳ ಬಗ್ಗೆ ಅವಳು ಕನಸು ಕಾಣುತ್ತಾಳೆ. ಆದರ್ಶ ಪುರುಷನ ಬಗ್ಗೆ ಕನಸನ್ನು ಹೆಣ್ಣೊಬ್ಬಳು ಕಾಣುವಂತಿದೆ. ಆದರ್ಶದ ಹುಡುಕಾಟದ ಜೊತೆಗೆ ಆದರ್ಶದ ರೂಪುರೇಷೆಯನ್ನು ಹೇಳುತ್ತಾಳೆ. ಕೊಳಲ ನಿರ್ಮಾಣ ಎಂತ್ತು ಅದರ ನುಡಿಸುವಿಕೆ ಇಲ್ಲಿ ಹೆಣ್ಣೊಬ್ಬಳು ತನ್ನ ಅಗತ್ಯದ ನಿರ್ಮಾಣ ಮತ್ತು ಮುದುವರಿಕೆಗೆ ತನ್ನ ಆದರ್ಶ ಪುರುಷನಿಗೆ ಆಹ್ವಾನ ಕೊಟ್ಟಿದ್ದಾಳೆ.

ಓ ಗೆಳೆಯ
ನನ್ನಿಂದ ನೀನು ನಿನ್ನಿಂದ ನಾನು
ಬಯಸುವುದಾದರೂ ಏನನ್ನು
ಸುಂದರವಾದ ಬದುಕನ್ನು
ಅಸಹನೀಯ ಯಾತನೆಗಳನ್ನಂತೂ
ಅಲ್ಲ! ಅಲ್ಲವೆ?[೬೮]

(ಭಾರತಿಪಾಟೀಲ ಪುಟ-೪೩, ೧೯೯೪)

ಇಲ್ಲಿ ಭವಿಷ್ಯದ ಕನಸಿನ ಹುಡುಗ ಸಿಕ್ಕಿದ ಮೇಲೆ ಅವನಲ್ಲಿ ತನ್ನ ನಿಲುವನ್ನು ತುಂಬಲು ಪ್ರಯತ್ನ ಪಡುತ್ತಾಳೆ. ಹೀಗೆ ನಿರೀಕ್ಷೆ ಮಹಿಳಾ ಕಾವ್ಯದಲ್ಲಿ 'ಪುರುಷನ' ವಿವಿಧ ರೀತಿಯಲ್ಲಿ ಆಧರಿಸುವುದೇ ಆಗಿದೆ. ಅವನಲ್ಲಿ ದೈವತ್ವ ಕಾಣುತ್ತಾಳೆ. ಬರುತ್ತಾನೆಂದು ಕಾಯುತ್ತಾಳೆ. ಬಂದ ಮೇಲೆ ತಾನಿಟ್ಟಿರುವ ನಿರೀಕ್ಷೆಯನ್ನು ಬಯಲು ಮಾಡುತ್ತಾಳೆ.

೩. ನಲ್ಲನಿಂದ ವಿರಹಿಯಾದವಳು

ನಿರೀಕ್ಷೆಯ ಹೊತ್ತ ಹುಡುಗಿಗೆ ಎಲ್ಲವೂ ದಕ್ಕುವುದು ಸಾಧ್ಯವೇ ಇಲ್ಲ. ಸಿಗದಿದ್ದಾಗ ಅವಳಲ್ಲಿ ನಿರಾಸೆಯ ಮಡು ಒಡೆಯುತ್ತದೆ.

ಹೃದಯಪೀಠದ ತುಂಬ
ಹೊಂಗನಸ ಹೂ ತುಂಬಿ
ಎರೆದು
ಎರೆಯಬಲ್ಲವನ್ನೆಲ್ಲಾ ನೇವೇದ್ಯ
ಮಾಡಿ
ನನ್ನದೆಲ್ಲವನ್ನು ಇನ್ನಿಲ್ಲದಂತೆ
ನೀಡಿ ನನ್ನಡಿಗೆ
ಧನ್ಯಳಾಗುವ ಬಯಕೆ
ಬಾನೆತ್ತರದಿಂದ ಪ್ರಿಯಾ
ಆದರೆ... ನೀನು
ಯಾಕಿಂಥ ಕಲ್ಲು
ದೇವರಾದೆ ಹೇಳು[೪೯]

(ಮಲ್ಲಿಕಾಘಂಟಿ, ಪುಟ-೧೬ ೨೦೦೧)

ಅವಳಲ್ಲಿ ಅವನನ್ನು ದೈವತ್ವಕೆ ಏರಿಸಿದ್ದಾಳೆ. ಕೊನೆಯಲ್ಲಿ ಪ್ರಶ್ನೆ ಮಾತ್ರ ಉಳಿಯುತ್ತದೆ. ಉತ್ಕಟ ಪ್ರೇಮಿಯಾದ ಹೆಣ್ಣು ತನ್ನೆಲ್ಲಾ ಬದಕನ್ನು ಪುರುಷನಿಗೆ ಸಮರ್ಪಿಸಿದ್ದಾಳೆ. ಆತನೇ ದೈವವೆನ್ನುತ್ತಾಳೆ. ಆದರೆ ಆತನ ನಿರಾಸಕ್ತಿ ಅವಳಿಗೆ ಬೇಸರ ತರಿಸಿದೆ. ತಾನು ಕಂಡ ಆದರ್ಶದ ಕನಸು ನುಚ್ಚು ನೂರಾಗುತ್ತದೆ. ತಾನು ಕೊಟ್ಟ ಪ್ರೀತಿ ತನಗೆ ಮತ್ತೆ ಮರಳಿ ಬರಬೇಕೆಂಬುದು ಅವಳ ಹೆಬ್ಬೆಯಕೆ.

ಬರಿದು ಹೋಗುವ
ಹೃದಯದಲ್ಲಿ ಅವನಿಟ್ಟು ಹೋಗಿದ್ದಾನೆ
ನೆನಪಿನ ಪಿಂಡದ
ಎಲ್ಲಿ ಹುಗಿದು ಹೋಗಲಿ ಅದನು[೫೦]

(ಉಮ್ಮತ್ತೂರು ರಾಜಮ್ಮ, ಪುಟ-೩೩, ೧೯೭೨)

ಇಲ್ಲಿ ತನ್ನ ವ್ಯಕ್ತಿತ್ವವನ್ನು ಛಿದ್ರಗೊಳಿಸಿದ ಘಟನೆಗಳನ್ನು ಹೆಣ್ಣು ಒಂದು ಉದ್ದೇಶಕ್ಕಾಗಿ ಮರೆಯಬೇಕೆನ್ನುತ್ತಾಳೆ. ಹೊಸತನದ ದಾರಿ ತುಳಿಯುವ ಮರೆಯುವ ಶಕ್ತಿಯನ್ನು ಪಡೆಯಬೇಕೆನ್ನುತ್ತಾಳೆ. ನೆನಪಿನ ಹುದಲಲ್ಲೆ ಸಿಕ್ಕಿ ಬಿದ್ದು ಕೊಳೆತು ಹೋಗಬಾರದೆಂಬ ಎಚ್ಚರವುಳ್ಳವರಿಗೆ ಹೀಗೆ ಮುನ್ನುಗ್ಗುವುದು ಅನಿವಾರ್ಯವಾಗಿದೆ.

ಬರಲೇ ಬೇಕೊಂದು ದಿನ
ಬಂದೆ ಬರತಾನವನು
ನೆಲೆ ಬರಡು ಫಲವಲ್ಲ
ಮರುಮಟೆಹೋಗಿರಲು
ಕಾಯ್ದು ಹೆಂಚಿನ ಮೇಲೆ
ಬೋರಾಡಲು[೫೧]

(ಲಕ್ಷ್ಮಿದೇವಿಶಾಸ್ತ್ರೀ, ಪುಟ–೬೩ ೧೯೯೬)

ಅವಳ ವಿರಹಿಭಾವ ಉನ್ನತಕ್ಕೇರಿದೆ ಬರಬಹುದೆಂಬ ನಿರೀಕ್ಷೆ ಅವಳಿಂದ ಸಂಪೂರ್ಣ ದೂರವಾಗಿದೆ. ಬಂದರೂ ತನ್ನ ಅಸ್ತಿತ್ವ ಕಳೆದುಹೋದ ಮೇಲೆ ಎಂಬ ನಂಬಿಕೆ ಆರಂಭವಾಗುತ್ತದೆ. ಆಸೆ, ಆಕಾಂಕ್ಷೆವುಳ್ಳ ಫಲವತ್ತಾದ ಭೂಮಿಯಂತಿರುವ ಮನಸ್ಸಿರುವಾಗ ಬಾರದೆ ಎಂದೋ ಬಂದಾಗ ಅವನ ಮೇಲಿನ ಪ್ರೀತಿ ಮಾಸಿರುತ್ತದೆ. ಮುರುಟಿಹೋದ ಮನಸ್ಸಿನ ಮೇಲೆ ಬಂದರೇನು ಬಿಟ್ಟರೇನು ಎಂಬ ಭಾವನೆ ಅವಳದು

ಪ್ರಿಯಾ
ಹೇಗೆ ಸೇರಲಿ ನಿನ್ನ?
ನಮ್ಮ ಮಿಲನದ ಹಾದಿಗುಂಟ
ನೆತ್ತರದ ಹೆಜ್ಜೆಗಳು
ಸಾಲು ಸಾಲಾಗಿ ಮೂಡಿರಲು
ಹೇಗೆ ಸೇರಲಿ ನಿನ್ನ
ಅದನ್ನು ತುಳಿದು?[೫೨]

(ಶಶಿಕಲಾ ವಸ್ತ್ರದ, ಪುಟ–೩೬, ೧೯೯೯)

ಇತಿಹಾಸದಲ್ಲಿ, ಪುರಾಣದಲ್ಲಿ ಪ್ರೇಮವು ಅಮರ ಪ್ರೇಮವಾಗಲು ತೆಗೆದುಕೊಂಡ ಸಮಯ, ಸಂದರ್ಭ ಹೂವಿನ ಹಾಸಿಗೆಯಲ್ಲಿ ಯುದ್ಧ, ಕೊಲೆ, ದೊಡ್ಡವರ ತಾಕಲಾಟ... ಹೀಗೆ ಪರಿಣಾಮಗಳ ತೊಂದರೆಗಳ ಮಹಾಪೂರ. ಗಂಡು ಹೆಣ್ಣಿನ ಮನಸ್ಸು ಮಿಲನವಾದರೂ ಅವರಿಬ್ಬರ ಬಾಂಧವ್ಯ ಒಂದಾಗಲು ಸಮಾಜ ಬಾಂಧವ್ಯ ಅಡ್ಡಬರುತ್ತದೆ. ಮೀರಿದರೆ ನೆತ್ತರದ ಹೆಜ್ಜೆಗಳು ಮೂಡುತ್ತವೆ. ನೆತ್ತರು ಹರಿಯುವುದನ್ನು ತಪ್ಪಿಸಲು ಹೊರಟರೆ ಅವಳ ಪಾಲಿಗೆ ವಿರಹದ ಪಾಲು ದಕ್ಕುತ್ತದೆ.

ನಿಮ್ಮ ಕನಸನು ಬಿಟ್ಟು
ಆಚೆಬಾರವು ನಾವು
ಹೀಗೆ ತಡೆದರೆ ನೀವು ತಬ್ಬಿ ಹಿಡಿದು
ನಮ್ಮ ಪ್ರೀತಿಯ ನಮಗೆ
ಒಂದಂಗುಲದ ಜಾಗ
ಕನಸಿನಂತೆ ಮರದ ತೋಟದೊಳಗೆ[೫೩]

(ಡಾ. ಮಲ್ಲಿಕಾಘಂಟಿ, ಪುಟ-೨೦, ೨೦೦೧)

ಪ್ರೇಮಿ ಎನಿಸಿಕೊಳ್ಳಲು ಯಾರ ಅಪ್ಪಣೆಯು ಬೇಕಿಲ್ಲವೆಂಬುದು ಅವಳ ಅಭಿಪ್ರಾಯ ಪ್ರೀತಿಯ ಅತ್ಯುನ್ನತ ಅಂತದಲ್ಲಿ ಹೆಣ್ಣು ತನ್ನತನದ ಅರಿವನ್ನು ತ್ಯಜಿಸುತ್ತಾಳೆ ಭಾವನಾತ್ಮಕವಾಗಿ ಎಲ್ಲವೂ ಆದ ಪುರುಷ ಅಂತಿಮ ಜಗತ್ತಾಗುತ್ತಾನೆ

ಹೇಗಿದ್ದೀಯೊ? ಎಂದವನಿಗೆ
ಎಲ್ಲರಂತೆ ಒಮ್ಮೆ ಸಾಯದೆ
ನಿನಗಾಗಿ ಹಂಬಲಿಸಿ
ಕ್ಷಣ ಕ್ಷಣಕ್ಕೂ ಸತ್ತು
ಹೊಸ ಇತಿಹಾಸ ಸ್ಥಾಪಿಸಿ
ನಿನ್ನ ಹೆಸರುಳಿಸಲು
ಹೆಣಗುತಿರುವೆ ಎಂದು[೫೪]

(ಲಕ್ಷ್ಮೀದೇವಿಶಾಸ್ತ್ರೀ, ಪುಟ-೬೦, ೧೯೯೬)

ವಿರಹಿಭಾವ ಅವಳಿಗೆ ಶಾಪದಂತೆ ಅಂಟಿಕೊಂಡಿರುತ್ತದೆ. ಆದರೆ ಅವಳು ದಿಟ್ಟ ವಿರಹವನ್ನು ಜೀವನದ ಅಂಗವಾಗಿ ತೆಗೆದುಕೊಳ್ಳುತ್ತಾಳೆ. ನಾನು ನೆನಪಲ್ಲೆ ನೆಲೆಹಿಡಿದಿಲ್ಲ ಎಂಬುದನ್ನು ಹೇಳಿದರೂ ನಲ್ಲನ ನೆನಪಲ್ಲಿ ಕ್ಷಣ ಕ್ಷಣಕ್ಕೂ ಸತ್ತೆ, ಎಂಬುದನ್ನು ಮಾತ್ರ ಅವಳಿಂದ ಮುಚ್ಚಿಡಲು ಸಾಧ್ಯವಿಲ್ಲ.

ಹೌದು ಕಣೆ ಉಷಾ ನಾವು
ಹುಡುಗಿಯರೆ ಹೀಗೆ
ಆದರೆ, ಮೇಲೆ ನಗು ನಗುತ್ತಾ ಅವನ
ಹೆಂಡತಿ ಮಕ್ಕಳ ಯೋಗಕ್ಷೇಮ ವಿಚಾರಿಸುತ್ತೇವೆ
ಯಾಕೆಂದರೆ ಅವಳದೂ ಅದೇ ಕಥೆಯಲ್ಲವೇ?
ನಾವು ಹುಡುಗಿಯರೇ ಹೀಗೆ....[೫೫]

(ಪ್ರತಿಭಾ ನಂದಕುಮಾರ್, ಪುಟ-೧೦, ೧೯೮೮)

ಪ್ರತಿಭಾ ಅವರು ಹೆಣ್ಣಿನ ಅಂತರಂಗದ ಭಾವನೆಗಳಿಗೆ ಸ್ಪಂದಿಸಿದ್ದಾರೆ. ದೂರವಾಗ ಮಾಜಿ ಪ್ರೇಮಿಯ ಬೇಟಿ ಅವಳಲ್ಲಿ ಪುಳಕಕ್ಕಿಂತ ಹೊಂದಾಣಿಕೆಯ ಭಾವ ಕಾಡುತ್ತದೆ. ನಗುನಗುತ್ತಾ ಅವನ ಹೆಂಡತಿ–ಮಕ್ಕಳ ಬಗ್ಗೆ ವಿಚಾರಿಸುವಾಗ ಮನದ ಮೂಲೆಯಲ್ಲಿ ತನಗಾದ ಅನುಭವ ಆ ಹುಡುಗಿಗು ಆಗಿರುತ್ತದೆ ಎಂಬ ಭಾವ ಕಾಡುತ್ತದೆ.

ಹೇಗೆ ಹೇಳಲಿ ಗೆಳತಿ ಅತಿಶಯೋಕ್ತಿಯ ಮಾತೆನ್ನದಿರು
ಸ್ವರ್ಗಿಯ ಕ್ಷಣಗಳು
ಅವನೊಂದಗಿರುವ ಬದುಕಿನ
ಈ ಕ್ಷಣಗಳು[೫೭]

(ಶಶಿಕಲಾ ವಸ್ತ್ರದ ಪುಟ–೫೩, ೧೯೯೯)

ವಿರಹಿಯಾದ ಹೆಣ್ಣಿಗೆ ತನ್ನ ವಿರಹದ ಬೇಗುದಿ ಸಾಮಾನ್ಯದ್ದಲ್ಲ. ಅದು ಒಬ್ಬ ಆದರ್ಶಪುರುಷನೆಡೆಗೆ ಇರುವ ಆದರ್ಶದ ಹಂಬಲ. ಬರಿ ಪುರುಷನೆನ್ನುವ ಕಾಮನೆಗಷ್ಟೆ ಅವನೆಡೆಯೇ ಹಂಬಲವಿರುವುದಿಲ್ಲ ಅವನೊಂದಿಗಿರುವ ಆದರ್ಶ ಅವಳನ್ನು ಅವನೆಡೆಗೆ ಹಂಬಲಿಸುವಂತೆ ಮಾಡುತ್ತದೆ.

ಅಪ್ಪುಗೆಯ ತೋಳು ಸಡಿಲಾಗಿ
ಅಗಲಿಕೆಯ ಕ್ಷಣ ಬಿಳಿ ಸಾರಿದಂತೆ
ಕಣ್ಣಾಗುವವು ತುಂಬಿದ ಕೊಳ
ಕಣ್ಣಂಚಿನಲ್ಲಿ ತೇಲುವವು ಕೋಮಲ ಕನಸು[೫೮]

(ಭಾಗ್ಯ ಪುಟ–೧೩, ೧೯೮೧)

ಎಂಬಲ್ಲಿ ಹೆಣ್ಣಿನಲ್ಲಿಯ ಸುಪ್ತಕಾಮನೆಗಳನ್ನು ಚುಟುಕು ಕವಿತೆಗಳ ಮೂಲಕ ಗಂಭೀರವಾಗಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ಮನಸ್ಸಲ್ಲಿ ಅರಳುವ ಭಾವನೆಗಳು, ಆ ಭಾವನೆಗಳಿಗೆ ನೆಲೆ ಸಿಕ್ಕಾಗ ಆಗುವ ಅನುಭವ, ಆನಂತರ ಪಡೆದ ಅನುಭವವನ್ನು ಮೆಲುಕು ಹಾಕುವುದು ಕವನದಲ್ಲಿ ಮೂಡಿದೆ.

ಪ್ರಕೃತಿಯಲ್ಲಿ ಪ್ರೇಮ ಪುರುಷನ ಕಲ್ಪನೆ

ಮಹಿಳಾ ಕಾವ್ಯದಲ್ಲಿ ಪ್ರೇಮದ ವ್ಯಕ್ತಿಯಾಗಿ ಪುರುಷ ರೂಪಗೊಂಡಿರುವುದು ಹಲವು ಬಗೆಯಲ್ಲಿ, ಪ್ರಕೃತಿಯಲ್ಲೆ ಸ್ತ್ರೀ ಪುರುಷನ ಕಲ್ಪನೆಯಾಗಿಸಿಕೊಂಡು ಕವನ ರಚನೆ ಮಾಡುವುದು ಹೊಸದೇನಲ್ಲ. ಭೂಮಿ, ಆಕಾಶ, ನದಿ, ಸಿಡಿಲು, ಹೊಲ, ಗದ್ದೆ, ಹೂವು ಪಕ್ಷಿ, ಬೆಳಕು, ಕತ್ತಲೆ, ಬೆಳದಿಂಗಳು, ಋತುಮಾನ ಹೀಗೆ ಪ್ರಕೃತಿಯ ಸಮಸ್ತ ವ್ಯಾಪಾರಗಳು ಪ್ರೇಮದ

ಸಂಕೇತವಾಗುತ್ತವೆ. ಭೂಮಿ ನಲ್ಲೆಯ ಸಂಕೇತವಾದರೆ ಆಕಾಶ ನಲ್ಲನ ಸಂಕೇತ ಬಿರುಮಳೆಯ ರೂಪದಲ್ಲಿ ಆಕಾಶ ಭೂಮಿ ಸೇರುತ್ತದೆ. ಅರ್ಥಾತ್ ನಲ್ಲಿನ ಬಳಿ ನಲ್ಲೆಯ ಸವಾರಿ ಸಾಗುತ್ತದೆ. ಹೂವು ಹೆಣ್ಣಾದರೆ, ದುಂಬಿ ಪುರುಷನಾಗುತ್ತಾನೆ. ಬೆಳದಿಂಗಳು ಪ್ರೇಮದ ಸುಸಮಯವಾದರೆ, ಬಿರುಬಿಸಿಲು ಅವರ ವಿರಹ ಕಾಲವಾಗುತ್ತದೆ. ಹೀಗೆ ಒಂದೊಂದಕ್ಕೂ ಒಂದೊಂದು ಪ್ರಕೃತಿಯೇ ಪ್ರತಿಮೆಯಾಗಿರುತ್ತದೆ. ನವೋದಯದ ಮುಖ್ಯ ಲಕ್ಷಣವಾಗಿ ಪ್ರಕೃತಿ ಆರಾಧನೆಯೇ ಆಗಿತ್ತು. ಕುವೆಂಪು ಮುಂತಾದವರು ಪ್ರಕೃತಿಯ ಸವಿಯನ್ನು ಈ ಹಂತದಲ್ಲಿ ಉಣಬಡಿಸಿದರು. ನಂತರ ಮಹಿಳೆಯು

ಸುಡುವ ಸೂರ್ಯನಿಗೆ
ಕಂಬಳಿ ಮುಸುಕು ಹಾಕಿ
ಚುಕ್ಕಿ ಚಿತ್ತಾರಗಳಲ್ಲಿ ಬಿಟ್ಟಲಲ್ಲಿ ಬಿಳಿದಿಟ್ಟು
ಕಾಮನಬಿಲ್ಲು ಕುಟ್ಟಿ ಪುಡಿ ಮಾಡಿ
ಮನದಂಗಳದಲ್ಲಿ ರಂಗೋಲಿ ಬರೆದು
ಕಾಯುತ್ತಿರುವಳಲ್ಲಾ ನನ್ನೊಳಗಿನ ಶಬರಿ[೫೮]

(ಭಾಗ್ಯಲಕ್ಷ್ಮಿ ಪುಟ-೮೬, ೧೯೭೬)

ನಿಗಿ-ನಿಗಿ ಸೂರ್ಯನಿಗೆ ಕಂಬಳಿ ಹೊದಿಸಿ ಚುಕ್ಕಿಗಳಿಂದ, ಚುಕ್ಕಿ ಇಟ್ಟು, ಕಾಮನಬಿಲ್ಲು ಕುಟ್ಟಿ ಪುಡಿ ಮಾಡಿ, ಮನದಂಗಳದಲ್ಲಿ ರಂಗೋಲಿ ಇಡುತ್ತಾ ತನ್ನ ಪ್ರೇಮಿಯ ಬರುವಿಕೆಗಾಗಿ ಕಾಯುವುದು ಅತ್ಯದ್ಭುತವಾದ ಕಲ್ಪನೆ. ಅಸಾಧ್ಯವಾದದ್ದು, ವಾಸ್ತವಿಕತೆಗೆ ದೂರವಾದದ್ದು ಎಂಬ ನಿರ್ಧಾರ ಸಾಹಿತ್ಯದಲ್ಲಿ ತಾಳಲು ಸಾಧ್ಯವಿಲ್ಲ. ಇಲ್ಲಿ ಎಲ್ಲವೂ ಸಾಧ್ಯ. ಸೃಷ್ಠಿಯ ಸಮಸ್ತ ವ್ಯಾಪಾರವು ಕವಿಯು ಹೇಳುವಂತೆ ಪ್ರೇಮಗಳಿಗಾಗಿಯೇ ನಡೆಯುವಂತದ್ದು.

ಭೂರಮೆಯ ಮಂಚದಲ್ಲಿ
ತುಂಬಿರುವ ಮುಕ್ತ ತೆನೆ
ನಾನಾಗಿ ತೊನೆ ತೊನೆದು
ತೂಗಾಡಬೇಕು
ಹಾಲ್ಗಳ ಸವಿಸವಿದು
ನೀ ಹಾಡಬೇಕು[೫೯]

(ಚಿ.ನಾ. ಮಂಗಳಾ ಕನ್ನಡ ಕವನಗಳು ಪುಟ-೨೬ ೧೯೮೮)

ಇಲ್ಲಿ ತನ್ನ-ತಾನು ಸಮರ್ಪಿಸುವ ಸಮರ್ಪಣಾ ಭಾವವಿದೆ. ಮುತ್ತಿನ ತೆನೆಯು ತಾನೆಂದು ತನ್ನ ಹಾಲುಳ್ಳ ತೆನೆಯ ನೀ ಸವಿದು ಹಾಡಬೇಕು ಎನ್ನುವಲ್ಲಿ ತಾನು ತೆನೆಯಾದರೆ ಪ್ರೇಮಿಯು ಮನುಷ್ಯ ರೂಪದಲ್ಲಿ ಅವಳ ಕಲ್ಪನೆ ಇರುವುದಿಲ್ಲ. ಅವನು ಹಾಡುವ ಪಕ್ಷಿಯಂತೆ ಕಲ್ಪನೆ ಮಾಡಿಕೊಳ್ಳುತ್ತಾಳೆ.

ನೀ ಒಲಿದಾಗ
ಗುಲಾಬಿ ಹೂವಂತೆ
ಕಂಡ ಈ ಜಗತ್ತು
ನೀ ಮುನಿದಾಗ
ಮುಳ್ಳು ಮಾಯವಾಗಿ
ಪರಿಣಮಿಸಿತ್ತು[೬೦]

(ರಶ್ಮಿ ಟಿ.ಎಸ್., ಪುಟ-೩೦, ೧೯೯೬)

ಗುಲಾಬಿ ಹೂ ಇಲ್ಲಿ ಪ್ರೇಮದ ಸಂಕೇತ. ಕೆಂಪು ಪಕಳೆಗಳಷ್ಟೆ ಸಮೃದ್ಧ, ಕಣ್ಣಿಗಿಂಪು ಅಲ್ಲದೆ ಇದು ಒಂದು ಕಾಲದ ಸಂಕೇತ ಪ್ರೇಮಿಯ ಬಳಿ ಇರುವಾಗ ಅದು ಗುಲಾಬಿ ಹೂವಿನಂತೆ ಕಣ್ಣಿಗಿಂಪು ಮುನಿದಾಗ ಕೈಹಿಡಿದ ಗುಲಾಬಿ ಅದು ಮುಳ್ಳಂತೆ ಪರಿಣಮಿಸಿದ್ದೂ ಅದು ಬದಲಾದ ಕಾಲದ ಪರಿಣಾಮವಾಗಿದೆ. ಒಲಿದ ಪುರುಷ ಗುಲಾಬಿ, ಒಲ್ಲೆಂದ ಪುರುಷ ಮುಳ್ಳಾಗಿ ಏಕಕಾಲಕ್ಕೆ ಎರಡು ಬಗೆಯಾಗಿ ಗೋಚರಿಸುತ್ತಾನೆ.

ರಾತ್ರಿ ಮಲ್ಲಿಗೆ ಹೂವ
ಕೆಂಪು ಸುರಿಸಿದ ಮಳೆಯ
ಹುಣ್ಣಿಮೆಯ ಹೊನ್ನೆ ನೆನಪು
ನೀವು ಜೊತೆಗಿದ್ದರೆ[೬೧]

(ಮಾಲತಿ ಪಟ್ಟಣಶೆಟ್ಟಿ ಪುಟ-೭೮, ೧೯೯೯)

ಇಲ್ಲೂ ಕೂಡ ಹುಣ್ಣಿಮೆ ಮಲ್ಲಿಗೆ ಹೂವು ಸಮೃದ್ಧ ಪ್ರೀತಿಯ ಸಂಕೇತ. ಅವು ಜೊತೆಗಿದ್ದರೆಷ್ಟು ಸಂಭ್ರಮವೋ, ಪ್ರೇಮಿಯ ಇರುವಿಕೆಯು ಅಷ್ಟೆ ಮುಖ್ಯವಾಗುತ್ತದೆ. ರಾತ್ರಿ ಮಲ್ಲಿಗೆ ಹೂವಿನ ಕಂಪು, ಸುರಿವ ಮಳೆ, ಹುಣ್ಣಿಮೆಯ ಪ್ರಶಾಂತ ಎಲ್ಲವೂ ಆತ್ಮಕ್ಕೆ ಸಂತೋಷವುಕ್ಕುವಂತೆ ಮಾಡುವುದೇ ಆಗಿದೆ.

ತುಂಬುರಟ್ಟೆಯ ಹುಡುಗಿ
....
ಏರಿ ಮೇಲೆ ನಿಂತ
ಮನಸೊಳಗಿನ ಹುಡುಗನ
ನೆರಳ ಎಲೆಗಳನ್ನು
ಬೊಗಸೆಯಲ್ಲಿ ತುಂಬಿ
ಮುಖಕೆ ಹೆನಿಸಿಕೊಳ್ಳುತ್ತಾಳೆ[೬೨]

(ಮಲ್ಲಿಕಾಘಂಟೆ ಪುಟ-೨೦, ೨೦೦೧)

ಎನ್ನುವಲ್ಲಿ ಮುಖಕ್ಕೆ ತಾಗಿಸಿದ ನೆಚ್ಚಗಿನ ತಂಪಾದ ನೀರಿನಂತೆ ನಲ್ಲನ ನೆನಪುಗಳಿಗೆ ಉಪಮೆಯಾಗುತ್ತಿದೆ. ಹೀಗೆ ಪ್ರಕೃತಿಯಲ್ಲಿ ಪ್ರೇಮ ಪುರುಷನ ಕಲ್ಪನೆಯ ಅಮೋಘವಾದದ್ದು. ಯಾವ ವಸ್ತುವಿನ ಬಗ್ಗೆ ಅತೀಯಾದ ನಿರೀಕ್ಷೆ, ಪ್ರೀತಿ ಉತ್ಕಟತೆಗಳಿರುವವೂ ಅಂತಹ ಕಡೆ ಭಾವಗಳ ಉತ್ಕಟತೆ ಅನಿವಾರ್ಯ ಆದರ್ಶ ಪುರುಷನ ಹಂಬಲ ಎಲ್ಲಿದೆ ಹೆಣ್ಣಿಗೆ ಉತ್ಕಟತೆ ಹೊಂದಿರುವುದಾಗಿದೆ ಈ ಕಾರಣದಿಂದಲೇ ಅವಳು ಭಾವುಕಳಾಗಿ ಎಲ್ಲಾ ಸುಂದರವಾದ ಅದ್ಭುತವಾದ ವಸ್ತುಗಳಲ್ಲಿ ಆತನನ್ನು ಕಾಣುತ್ತಾಳೆ.

ನಕಾರಾತ್ಮಕ ದೃಷ್ಟಿಯಲ್ಲಿ ಆದರ್ಶ 'ಪುರುಷ'

ಮಹಿಳಾ ಅಧ್ಯಯನ, ಮಹಿಳಾ ಹೋರಾಟಗಾರ್ತಿ *Feminist* ಎನ್ನುವ ಪದಗಳಿಗೆಲ್ಲಾ ಇಂದಿನ ಪಿತೃ ಪ್ರಧಾನತೆಯಲ್ಲಿ ನಂಬಿಕೆಯಿಟ್ಟವರು ಡಾಂಭಿಕತೆಯ ಬುದ್ಧಿವಂತರು ಇದನ್ನೆಲ್ಲಾ ಗಂಡಸು ಪ್ರಪಂಚವನ್ನು ದೂಷಿಸುವವರು, ಪುರುಷ ಸಮಾಜದಲ್ಲಿ ತಪ್ಪು ಹುಡುಕುವವರು ಎನ್ನುವ ಹಣೆಪಟ್ಟಿ ಹಚ್ಚಿದ್ದಾರೆ. ಮಹಿಳಾ ಅಧ್ಯಯನ ಒಂದು ಹೊಸ ಬಗೆಯ ಅಧ್ಯಯನವೆಂಬ ದೃಷ್ಟಿಯಿಂದಾಗಲಿ, ಫೆಮಿನಿಸ್ಟ್ ಬರಹಗಾರ್ತಿಯರೆಂದರೆ ಪುರುಷ ದ್ವೇಷಿಗಳೆಂಬ ನಿರ್ಧಾರಕ್ಕೆ ಬರುವ ಅಗತ್ಯವಿಲ್ಲ. ಶತ್ರುವಿನ ಪರಿಕಲ್ಪನೆಯಾಗಿ ಪುರುಷನನ್ನು ಪರಿಗ್ರಹಿಸಿದಾಗ ಪಿತೃಪ್ರಧಾನ ಸಂಸ್ಕೃತಿಯ ಗೋಮುಖ ವ್ಯಾಘ್ರದ ಒಂದು ಮುಖ ತಿಳಿಯಬಹುದಷ್ಟೆ ಶತಮಾನಗಳಿಂದ ಸ್ತ್ರೀ ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಹಿಂದುಳಿದಿದ್ದು ಸತಿಪದ್ಧತಿ, ವರದಕ್ಷಿಣೆ, ಭ್ರೂಣ ಹತ್ಯೆಗೆ ಒಳಗಾಗಿದ್ದು ನೋಡಿದಾಗ ಪುರುಷ ಸಮಾಜ ನಡೆಸಿಕೊಂಡು ಬಂದ ದಾರಿ ನಮಗೆ ಸ್ಪಷ್ಟವಾಗುತ್ತದೆ.

ಪುರುಷ ನೀತಿ-ನಿಯಮ ಸಮಾಜದ ಕಟ್ಟಲೆ, ಕಾನೂನಿನ ರಚನೆಕಾರ ಭಾಗ್ಯಸ್ಥ. ಈ ನಿಟ್ಟಿನಲ್ಲಿ ಎಲ್ಲ ನಿಯಮ, ಅನುಕೂಲವನ್ನು ತನ್ನೆಡೆಗೆ ಎಳೆದುಕೊಂಡ ಎಂಬುದನ್ನು ನಂಬಬಹುದಷ್ಟೆ.

ನಮ್ಮ ಪ್ರಾಚೀನ ಜೀವನ ಸಿದ್ಧಾಂತಗಳೆಲ್ಲವೂ ಬಹುಮಟ್ಟಿಗೆ ಸ್ತ್ರೀ ವಿರೋಧಿ ಸಿದ್ಧಾಂತಗಳೇ ಆಗಿವೆ. ಶೋಷಣೆ ಇದ್ದಕ್ಕಿದ್ದಂತೆ ಹುಟ್ಟುವುದಿಲ್ಲ. ದುರ್ಬಲತೆ ಇದ್ದಲ್ಲಿ ಸಬಲತೆ ಮೆರೆಯುತ್ತದೆ. ಆದರೆ ದೈಹಿಕವಾಗಿ ಮಹಿಳೆ ಗಂಡಿಗಿಂತ ಅಸಬಲಳು ಎನ್ನುವ ಒಂದು ಕಾರಣಕ್ಕೆ ಅವಳನ್ನು ಸಾರ್ವಜನಿಕವಾಗಿ ಹಾಗೂ ಎಲ್ಲಾ ದೃಷ್ಟಿಯಿಂದ ಕೆಳಕ್ಕೆ ತಳ್ಳುತ್ತಾ ಬಂದಿದ್ದಾನೆ. ಮಹಿಳೆಯ ಚರಿತ್ರೆಯ ಹೆಜ್ಜೆ ಗುರುತನ್ನು ಏಂಜೆಲ್ಸ್ ಈ ದೃಷ್ಟಿಯಿಂದಲೇ ಕಲ್ಪಿಸುತ್ತಾನೆ. ಅವನ ಕೃತಿಯಲ್ಲಿ *'The origin of family private property and the*

state' ಕೃತಿಯಲ್ಲಿ ಹೇಳಿರುವಂತೆ ಪ್ರಾಚೀನ ಹಂತದಲ್ಲಿ ಮಾನವ ಜನಾಂಗ ಕುಟುಂಬದ ಚೌಕಟ್ಟಿಗೆ ಒಳಪಟ್ಟು ವ್ಯವಸಾಯ ಆರಂಭಿಸಿದಾಗ ಹೆಣ್ಣಿಗೆ-ಗಂಡಿಗೆ ಸಮಾನವಾದ ಹಕ್ಕುಗಳಿದ್ದವು. ಆದರೆ ಕಾಲ ಬದಲಾದಂತೆ ಕ್ರಮೇಣವಾಗಿ ನಾಗರೀಕತೆ ಸಂಸ್ಕೃತಿಗಳು ವಿಕಾಸಗೊಳ್ಳುತ್ತಾ ನಡೆದಂತೆ ಸಾಧನೆ ಸಲಕರಣೆಗಳು ಹೆಚ್ಚು-ಹೆಚ್ಚಾಗಿ ಒದಗುತ್ತಾ ಹೋದಂತೆ ಹೆಚ್ಚಿನ ಉತ್ಪಾದನಾ ಚಟುವಟಿಕೆಗಳು ಗಂಡಸಿನ ಹತೋಟಿಗೆ ಬರತೊಡಗಿದವು. ಆ ಮೂಲಕ ಆರ್ಥಿಕ ಹತೋಟಿಯೂ ಅವನಿಗೆ ಸಾಧ್ಯವಾಯಿತು. ಹೀಗೆ ಕೃಷಿ ಸಾಮರ್ಥ್ಯದ ವಿಸ್ತರಣೆ, ಭೂಮಿಯನ್ನು ಖಾಸಗಿಯಾಗಿಸುವ ಪ್ರಕ್ರಿಯೆ ಸಹಜವಾಗಿ ಯಜಮಾನಿಕೆ ಮತ್ತು ಗುಲಾಮಗಿರಿಯ ಹುಟ್ಟಿಗೂ ಕಾರಣವಾಯಿತು. ಶ್ರಮ ವಿಭಜನೆಯ ಪ್ರಾಥಮಿಕ ಹಂತದಲ್ಲಿ ಮನೆಯ ಹೊರಗಿನ ಸಾಮ್ರಾಜ್ಯದ ದೊರೆ ಪುರುಷನೇ ಆಗಿದ್ದರೂ, ಮನೆಯ ಒಳಗಿನ ಸಾಮ್ರಾಜ್ಯಕ್ಕೆ ಹೆಂಗಸು ಅಷ್ಟೆ ಅಧಿಕಾರಯುತ ಸ್ಥಾನ ಹೊಂದಿದ್ದರೂ ಆಸ್ತಿ, ಮನ, ಮಾಲೀಕತ್ವದ ಸ್ಥಾಪನೆಯೊಂದಿಗೆ ಪುರುಷನ ಅಧಿಕಾರ ವ್ಯಾಪ್ತಿಗೆ ಒಳಗಾದವು. ಮಹಿಳೆ ಗೃಹಕೃತ್ಯದ ಬಲೆಗೆ ಸಮಗುಲಾಮಳಾಗಿ ಬಿಟ್ಟಳು. ಅವಳ ಗೃಹಕೃತ್ಯಗಳಿಗೀಗ ಉತ್ಪಾದಕ ಮೌಲ್ಯ ಉಳಿಯದೆ ಅನುತ್ಪಾದಕ ಎನಿಸಿ ಮೌಲ್ಯರಹಿತವಾಯಿತು. ಸಹಜವಾಗಿಯೇ ಆಸ್ತಿಯ ಒಡೆತನ ಪುರುಷನ ಪಾಲಾಯಿತು. ಗಂಡಸು ಸ್ವಚ್ಛಂದ ಲೈಂಗಿಕತೆಯಲ್ಲಿ ತೊಡಗಿದ ಈ ರೀತಿಯಾಗಿ ಹಂತ-ಹಂತವಾಗಿ ಕೆಳಸ್ಥಾನಕ್ಕೆ ಹೋಗತೊಡಗಿದಳು.

ಸ್ವಾತಂತ್ರ್ಯ ನಂತರದ ಮಹಿಳೆಯರಾದ ನಂಜನಗೂಡು ತಿರುಮಲಾಂಬ (೧೯೭೧) ಬೆಳಗೆರೆ ಜಾನಕಮ್ಮ (೧೯೪೮) ಮುಂತಾದ ಆರಂಭದ ಕವಿಯತ್ರಿಯರು, ಕಾವ್ಯವನ್ನು ರಚಿಸಿ, ಪತಿಯೇ ಪರಮೇಶ್ವರ ಎಂಬ ಭಾರತೀಯ ನಾರಿಯರು ನಂಬಿದ ನಂಬಿಸಿರುವ ಮೌಲ್ಯದ ಜೊಳ್ಳುತನವನ್ನು ಹೊರಹಾಕಿದ್ದಾರೆ.

> ಗಂಡನೆಂದರೆ ಪ್ರಾಣ ಗಂಡ-ಹೆಣ್ಣೆ ನೀ ಗಂಡ ಕೂಡಿಕೊಂಡ್ಲ
> ನೋಡು ಮಂಡೂಕ ಸರ್ಪದ ನೆಳಲಿಗೆ ಹೋದಂತೆ
> ಬಂಡೀಗೆ ಬಸವನು ಶಿರಬಾಗಿಕೊಂಡಂತೆ
> ಅಧಿಕಾರಿ ನಿನಗವನೊಬ್ಬ ನಿರುತ ದುಡಿದರೆ ಆಶುನದ ಹಬ್ಬ
> ತಪ್ಪ ಬೇನೆ ಬೇಸರವಾಗಿ ಉಶ್ಯನ್ನಲಬ್ಬಬ್ಬ
> ಏನಾಯ್ತು ಗಂಟಿಕ್ಕುವ ಉಬ್ಬು
> ಯುಕ್ತಿಯಲ್ಲಿ ಬಾಳು ನೀನು ಸರ್ವಶಕ್ತನು ಪುರುಷನು
> ತಪ್ಪಿದೆಯೆಂದರೆ ಕತ್ತನೆ ಮುರಿವುದು
> ಶಿಕ್ಷ ರಕ್ಷಕ ನಿನ್ನ ದೈವವನಾಥನು[೬]

(ಬೆಳಗೆರೆ ಜಾನಕಮ್ಮ, ಪುಟ-೨೮, ೧೯೪೮)

ನವೋದಯದ ಆದಿಯಲ್ಲಿ ಸ್ತ್ರೀ ಶೋಷಣೆಯ ರೀತಿಗೂ, ನಂತರ ಕಾಲಘಟ್ಟದಿಂದ ಬದಲಾದ ಶೋಷಣೆಯ ರೀತಿಯಿಂದ ಮುಂದೆ ಬರುವ ಪ್ರಗತಿಶೀಲ ಬಂಡಾಯ ಕವಿಯತ್ರಿಯರು ಎತ್ತಿದ ಮಹಿಳಾ ಸಮಸ್ಯೆಗಳು ಭಿನ್ನವಾದವು. ಆಧುನಿಕ ಪಿಡುಗು ಎನಿಸಿದ ವರದಕ್ಷಿಣೆ ಸಮಸ್ಯೆ, ವೇಶ್ಯಾ ಸಮಸ್ಯೆ, ಲೈಂಗಿಕ ಸಮಸ್ಯೆ ಮುಂತಾದ ಕಡೆ ವಿಶೇಷ ಗಮನ ಕೊಡಲರಂಭಿಸಿದರು. ನವೋದಯದ ಕಾಲದಲ್ಲಿ ಪುರುಷನ ಬಗ್ಗೆ ಇದ್ದ '*Male Daminate'* ಪುರುಷ ಪರಮಾಧಿಕಾರದ ಬಗ್ಗೆ ಹೊಸ ಸಮಾಜದ ಮಹಿಳೆಯರು ಪ್ರಶ್ನಿಸಿದರು. ಪುರಾಣದ ಸತಿ-ಸಾವಿತ್ರಿಯಂತವರು ದ್ರೌಪದಿ, ಅಹಲ್ಯ ಊರ್ಮಿಳಾರ ಸೀತೆಯಂತವರು ಕಾವ್ಯದಲ್ಲಿ ಮಾತನಾಡಿದರು.

ಯತ್ರನಾರ್ಯಸ್ತು ಪೂಜ್ಯಂತೆ
ರಮತೇ ದೇವತಾ
ಆಹಾ! ಯಾಮೂರ್ತಾದಾಗ
ಹೇಳಿದ್ದು ಮಾವಾ
ಮುತ್ತಿನಂಥ ಮಾತು
ನಿನ್ನೀ ಪುಣ್ಯಭೂಮೀ
ಪುರಾಣೀಗ ಹ್ಯಾಂಗ್ಯೆತಿ
ಕೇಳಿಯೇನು[೪೪]

(ಶಶಿಕಲಾ ವಸ್ತ್ರದ ಪುಟ-೨೬, ೨೦೦೧)

ಶಶಿಕಲಾ ವಸ್ತ್ರದ ಕಾವ್ಯ 'ಮನುವಿಗೆ' ಸವಾಲೆಸೆಯುವಂತಿದೆ. ಶೋಷಕನಾಗಿ ಪುರುಷನನ್ನು ಹಲವು ರೀತಿಯಲ್ಲಿ ಚಿತ್ರಿಸ ಹೊರಟಿದ್ದಾಳೆ. ಹರೆಯದಲ್ಲಿ ಅವಳು ಪ್ರೇಮಿಯಿಂದ ಶೋಷಿತವಾಗಿದ್ದು, ಮದುವೆ ನಂತರದಲ್ಲಿ ಗಂಡನಿಂದ ನಂತರದಲ್ಲಿ ಸಮಾಜದ ಕಟ್ಟಳೆಯಿಂದ ಹೀಗೆ ಅವಳದು ಸದರಿ ಹೋರಾಟದ ಬದುಕು. ಪ್ರೇಮ ಹೆಸರಿದ್ದಾಗ ಹೇಗೆ ಹೇಳಲಿ ಗೆಳತಿ... ಸ್ವರ್ಗೀಯ ಕ್ಷಣಗಳು ಅವನೊಂದಿಗಿರುವ ಬದುಕಿನಕ್ಷಣಗಳು ಎನ್ನುವಾಗಿನ ಪ್ರೀತಿ ಕೆಲವೊಮ್ಮೆ ಅರ್ಥವಿಲ್ಲದಂತಾಗುತ್ತದೆ.

ಪ್ರೀತಿಯಂತೆ ಪ್ರೀತಿ
ಅರ್ಥವಿಲ್ಲದ ಪ್ರೀತಿ
ಕಾಲದ ಪರಿಜ್ಞಾನವಿಲ್ಲ
ವಯಸ್ಸಿನ ಅರಿವಿಲ್ಲ
ಸ್ವೇಚ್ಛಾರದ ಪರಮಾವಧಿ
ಜೇನುತುಂಬಿದ ಮಾತಿಲ್ಲ
ಮೈನವಿರೇಳಿಸುವ ಸ್ಪರ್ಶವಿಲ್ಲ

ಗೋಮುಖ ವ್ಯಾಘ್ರನಂತೆ
ಬೇಟೆಗಾಗಿ ಹೊಂಚು ಹಾಕುವ
ಬೇಟೆ ನಾಯಿಯಂತೆ
ತೀಟೆ ತೀರಿಸಿಕೊಳ್ಳುವ ತನಕ
ಬಗ್ಗಿಸಿಕೊಳ್ಳುವ ಚತುರತೆ
ಮತ್ತೆ ಅದೇ ಬುದ್ಧಿ
ನಾಯಿ ಬಾಲ ಡೊಂಕು
ತಿದ್ದಲಾಗದು ನಿನ್ನ
ಕಗ್ಗಟ್ಟ ಕಾಯಿ ಹೆಣ್ಣು
ಮಾಡಲು ಒತ್ತಾಯ
ಗುರಿಯಿಲ್ಲ ಸಾಧನೆಯಿಲ್ಲ
ಒಂದೊಂದು ಚಿಂತೆ.[೬೫]

(ಜಿ. ರತ್ನಕಾಳೇಗೌಡ, ಪುಟ ೧೬, ೨೦೦೬)

'ಅರ್ಥವಿಲ್ಲದ ಪ್ರೀತಿ' ಅವಳಿಗೆ ಅರಿವಾಗುವುದು ಅದರಲ್ಲಿ ಡೊಂಕು ಗುರುತಿಸಿಕೊಂಡಾಗಲೇ ಪ್ರೀತಿಯೊಳಗಿನ 'ಕಾಮ' ಅವಳಿಗೆ ಕಿರಿ-ಕಿರಿಯನ್ನುಂಟು ಮಾಡಿದೆ. ದಾಂಪತ್ಯ ಹೆಣ್ಣು-ಗಂಡನ್ನು ಒಟ್ಟುಗೂಡಿಸಿ ಬೆಳೆಸುವಂತ ಒಂದು ಸುಂದರ ಚೌಕಟ್ಟಿನ ವ್ಯವಸ್ಥೆ, ಲೈಂಗಿಕತೆಗೆ ಅನುಮತಿ ವೀದಿ ಆ ಮೂಲಕ ಮಕ್ಕಳನ್ನು ಪಡೆದು ಸಂತಾನಾಭಿವೃದ್ಧಿಗೆ ಅನುಕೂಲ ಮಾಡಿಟ್ಟುಕೊಳ್ಳುವ ಸಮಾಜದ ಒಂದು ಸುಂದರ ಚೌಕಟ್ಟು ದಾಂಪತ್ಯ. ಪುರುಷ-ಸ್ತ್ರೀ ಪರಸ್ಪರ ಇಬ್ಬರಿಗೂ ಸಮಾನ ಪ್ರೀತಿ ಹಕ್ಕುಗಳಿರುತ್ತವೆ. ಆದರೆ ಪುರುಷ ಪರಮಾಧಿಕಾರ ಲೈಂಗಿಕ ಕಿರುಕುಳ, ಪಿತೃಪ್ರಧಾನ ಹಕ್ಕುಗಳ ಒತ್ತಾಯದ ಏರಿಕೆ, ಗಂಡನ ಸ್ವೇಚ್ಛಾಚಾರ, ಕುಡುಕತನ ಪಟ್ಟಿ ಬೆಳೆದಂತೆಲ್ಲಾ ದಾಂಪತ್ಯ ಅವಳ ಪಾಲಿಗೆ ಅಸಹನೀಯವಾಗುತ್ತದೆ.

ಉಡಿತುಂಬಿದ ಕನಸುಗಳೆಲ್ಲ
ಹರಡಿ ಹಾರಾಡುತ್ತಿರುವಾಗ
ಚುಂಬನವೆಲ್ಲ ಚುಚ್ಚುಮದ್ದು
ಹರಿವ ಸೆರಗಳಲ್ಲಿ ತಣ್ಣನೆಯ
ಗಾಳಿ ನುಗ್ಗಿ ಮೈಯೆಲ್ಲ ನಡುಕ
ನಿಂತ ಮೇಲೆ
ಮೈ ಮುದುರಲಾರದೆ
ಬಯಕೆ ಸತ್ತ ಭಾವನೆಗಳು
ಮುಟ್ಟಲಾರದ ಮೌನಗಳು[೬೬]

(ಪ್ರತಿಭಾ ನಂದಕುಮಾರ್ ಪುಟ-೧೦, ೧೯೮೮)

ಸ್ತ್ರೀ ಪುರುಷರ ಆಕರ್ಷಣೆಯ ದಾಂಪತ್ಯ ಜೀವನದ ಸ್ಮರಣೀಯ ಅನುಭವಗಳ ನಿರೂಪಣೆ ಮುಂದುವರೆದಿದೆ. 'ಮೌನಗಳು' ಎಂಬ ಪ್ರತಿಭಾ ನಂದಕುಮಾರ್ ಕವಿತೆಯಲ್ಲಿ 'ಶೋಭನ' ಪ್ರಸ್ಥದ ರಾತ್ರಿ ಕಹಿ ಅನುಭವವನ್ನು ಪಡೆದ ಓರ್ವ ಮಹಿಳೆಯ ಚಿತ್ರಣವಿದೆ. ಮದುವೆಗೆ ಸಿದ್ಧಳಾದ ಹೆಣ್ಣಿಗೆ ಕಾಡುವ ವರದಕ್ಷಿಣೆ ಭೂತ ದೊಡ್ಡದು.

ಅಂದು ಹೆಣ್ಣು ಕೊಡಿ ಎನ್ನುವವರು
ತಾವೆ ಹಣತೆತ್ತು
ಹೆಣ್ಣು ತಂದು ಮನೆ ತುಂಬಿಸಿಕೊಂಡ
ಮನೆಯ ಮನೆತನದ
ಹಣತೆ ಹಚ್ಚಿಕೊಳ್ಳುತ್ತಿದ್ದರು
ಇಂದು
ನಮ್ಮ ಮನೆಯ ಹೆಣ್ಣು ತಂದುಕೊಳ್ಳಿ
ಎಂದು ನಾವೇ ಗೋಗರೆದು
ಕೇಳಿದಷ್ಟು ಹಣ ಕೊಟ್ಟು
ಹೆಣ್ಣನ್ನು ಕಳಿಸಿಕೊಟ್ಟರೆ
ಮನೆಯೊಳಗೆ ಸುಟ್ಟು ಹೆಣವಾಗಿಸುತ್ತಾರೆ
ಹಣಕ್ಕಾಗಿ ಹಣತೆಯನ್ನು ಬೇಯಿಸುತ್ತಿತ್ತು.
ಮನ-ಮನೆತನ-ಮಾನ ಎಲ್ಲಕ್ಕೂ
ಎಳ್ಳು-ನೀರು ಬಿಟ್ಟಿದ್ದಾರೆ.[೬]

(ಕವಿತಬಗಲಿ-ಪುಟ-೬೨, ೧೯೯೮)

ವರದಕ್ಷಿಣೆ ಸಮಸ್ಯೆ ಇತ್ತೀಚಿನ ಘೋರತೆಯಲ್ಲೊಂದು. ಹಿಂದಿನ ಕಾಲದಲ್ಲಿ ಹೆಣ್ಣಿಗೆ ಗೌರವತೆರ ಕೊಟ್ಟು ಮದುವೆಯಾಗಬೇಕೆಂದಿತ್ತು. ಇದರ ಬಗ್ಗೆ ಚಾಣುಕ್ಯನ ನೀತಿಶಾಸ್ತ್ರ, ಬೌದ್ಧಗ್ರಂಥದಲ್ಲಿ ಈ ಬಗ್ಗೆ ಹೇಳಿಕೆಯಿದೆ. ಆದರೆ ಬದಲಾದ ಅಂದರೆ ತೀರಾ ಇತ್ತೀಚಿನ ೭೦ ರ ದಶಕದಲ್ಲಿ *White Colour Job* ಸರ್ಕಾರಿ ಉದ್ಯೋಗದ ಆಕರ್ಷಣೆ ಹೆಚ್ಚಾದಂತೆ ಕನ್ಯಾಪಿತೃಗಳಿಗೆ ವರದಕ್ಷಿಣೆ ಹೆಚ್ಚಾಯಿತು. ವರದಕ್ಷಿಣೆ ಪದ್ಧತಿ ಬಂದಂತೆಲ್ಲಾ ಅವಳ ಓದಿಗೆ ಹಣ ಖರ್ಚು ಮಾಡುವ ಅಗತ್ಯತೆಯ ಬಗ್ಗೆ ಪ್ರಶ್ನೆ ಎದ್ದಿತು. ಹೆಣ್ಣು ಹಡೆದಾಗ ಖರ್ಚಿನ ಬಾಬ್ತು ಎಂಬಂತೆ ಚಿಂತಿಸಿದರು. ಮದುವೆ ಸುಂದರವಾದ ಭಾವನಾತ್ಮಕ ಸಂಬಂಧವಾದರೂ ಅದು ಕೂಡ ವ್ಯಾಪಾರದ ವಹಿವಾಟಂತೆ ಮಾರ್ಪಟ್ಟಿತು.

ಆಗೆಲ್ಲಾ ಮುಗ್ಧ ಜೀವಿಯಾಗಿದ್ದವನು
ಹಗಲಿರುಳು ಹುಡುಕುತಿದ್ದ
ನಕ್ಷತ್ರ ಕಣ್ಣವಳನ್ನು
ಮಲ್ಲಿಗೆಯ ನಗೆಯವಳನ್ನು

ಈಗೆಲ್ಲಾ ಬುದ್ಧಿಜೀವಿಯಾದ ಮೇಲೆ
ಅವನು ಆಗ ಈಗ
ಹುಡುಕುತ್ತಿದ್ದಾನೆ ಕೇವಲ
ಜೀವನದಲ್ಲಿ ತನ್ನಷ್ಟೆ ಭದ್ರವಾಗಿ
ತಳವೂರಿದವಳನ್ನು[೧೮]

(ವಿಜಯಾದಬ್ಬೆ–ಪುಟ–೧೮ ೧೯೯೬)

ಎನ್ನುವಲ್ಲಿ, ಮದುವೆ ವ್ಯವಹಾರವಾಗುತ್ತಿರುವ ಬಗ್ಗೆ ಸೂಚನೆಯಿದೆ. 'ಭಾವಪೂರ್ಣತೆ' ದಾಂಪತ್ಯದ ಸೂಚನೆಯಿದೆ. ಆದರೆ ಮಹಿಳೆಯು ವಾಸ್ತವದ ಅನುಭವ ಬೇರೆಯೇ ಆಗಿದೆ. ವೈವಾಹಿಕ ಸಂಬಂಧಗಳ ವಿಷಮತೆ, ವೈಫಲ್ಯಗಳು ಅವಳನ್ನು ಕಾಡುತ್ತಲೆ ಬಂದಿವೆ. ಶಶಿಕಲಾ ವೀರಯ್ಯಸ್ವಾಮಿಯವರ 'ಸತಿ' ಎಂಬ ಕವಿತೆ ಈ ದಾರುಣ ಸತ್ಯದ ನೇರ ಅಭಿವ್ಯಕ್ತಿಯಾಗಿದೆ.

ನನ್ನ–ನಿನ್ನಗಳ ನಡುವೆ ತೋಡಿದ ಈ
ಗೋರಿಯಲ್ಲಿ ಸಮಾಧಿಯಾಗುತ್ತಿದ್ದೇನೆ
ನಿನ್ನುದಾಸೀನದ ತೀವ್ರ ವಿಷಾಧಗಳ
ಕೆಂಡದುಂಡೆಗಳು ಇಡಿಯಾಗಿ ಸುಡುಸುಡುವ
ಈ ನಿರ್ಭಾವ ಪ್ರೇಮ ಚಿತೆಯಲ್ಲಿ
ನಾ ನಿನ್ನ ಸತಿ, ನೀ ಬದುಕಿದಾಗಲೆ
ನಿನ್ನೆದುರಿಗೇ, ಹೇಗೆ, ಸತಿ ಹೋಗುತ್ತಿದ್ದೇನೆ.[೧೯]

(ಶಶಿಕಲಾ ವೀರಯ್ಯ ಸ್ವಾಮಿ, ಪುಟ–೨೬, ೧೯೯೩)

ಸ್ವಾತಂತ್ರ್ಯಾ ನಂತರದ ಮಹಿಳಾ ಕಾವ್ಯದಲ್ಲಿ ಶೋಷಣೆಯ ಹಂತದಲ್ಲಿ ಪುರುಷನನ್ನು ಗುರ್ತಿಸುವಾಗ ಕವಿಯತ್ರಿಯರು ಪುರಾಣದ ಸ್ತ್ರೀಯರನ್ನು ಉದಾರಿಸಿದ್ದಾರೆ. ಸ್ತ್ರೀತ್ವದ ಅನುಭವ–ಸಂದಿಗ್ಧಗಳ ಶೋಧದಲ್ಲಿ ಕವಿಯತ್ರಿಯರು ಹಲವಾರು ಪೌರಾಣಿಕ ಪ್ರತಿಮೆಗಳನ್ನು ಒಳಹೊಕ್ಕು ನೋಡಿದ್ದಾರೆ. ಇವೆಲ್ಲವುಗಳನ್ನು ಇಲ್ಲಿ ಹೆಸರಿಸುವ ಅಗತ್ಯವಿಲ್ಲವಾದರೂ ಸೀತೆ, ದ್ರೌಪದಿ, ಅಹಲ್ಯೆ, ಅಂಬೆ, ಮಹಾಶ್ವೇತೆಯಂತ ಪ್ರಮುಖ ಪ್ರತೀಕಗಳನ್ನು ಗಮನಿಸಲೇ ಬೇಕಗುತ್ತದೆ. ಸೀತೆಯ ದುಃಖ ಸಹನೆಗಳ ಬಗ್ಗೆ ಗೌರವವಿಟ್ಟುಕೊಂಡರೂ ಅವಳನ್ನು ಕವಿಯತ್ರಿಯವರು ಅಪಾಯದ ಸಂಕೇತವನ್ನಾಗಿಯೇ ಕಂಡಿದ್ದಾರೆ. ಇದಕ್ಕೆ ವಿಜಯಾದಬ್ಬೆಯವರ 'ಪರಂಪರೆ' ಒಂದು ಒಳ್ಳೆಯ ಉದಾಹರಣೆ

ಬಾಯ್ತೆರೆದ ಭೂಮಿಯೊಳಕ್ಕೆ
ಎಲ್ಲ ಸೀತೆಯರ ಹಾಗೆ
ಸರಿಯಬಾರದು.[೨೦]

(ಸುಕನ್ಯಾ ಮಾರುತಿ ಪುಟ–೨೦, ೧೯೮೫)

ಎನ್ನುವಲ್ಲಿ, ರಾಮನ ಹಳಹಳಿಕೆ ಇದೆ. ಸೀತೆ ದ್ರೌಪದಿಯರಿಗಿಂತ ಹೆಚ್ಚು ಸಂಕೀರ್ಣವಾದ ಪ್ರತೀಕ

ಅಹಲ್ಯೆ
ರಾಮಸ್ಪರ್ಶಕ್ಕೆ
ಶಿಲೆ. ಸ್ಫೋಟವಾಗಿದೆ ಅಷ್ಟೆ
ಹೆಣ್ಣಾಗಲಿಲ್ಲ.[೭೧]

(ಶಶಿಕಲಾವಸ್ತ್ರದ, ಪುಟ-೨೬, ೧೯೯೮)

ಭೀಷ್ಮನ ಪ್ರೇಮದಿಂದ ವಂಚಿತಳಾದ, ಆಕ್ರಮಣಕ್ಕೆ ಬಲಿಯಾದ ಅಂಬೆಯಬಗ್ಗೆ ಕವಿಯತ್ರಿ ಸಹಜವಾಗಿ ಅನುಕಂಪ ತೋರಿಸಿದ್ದಾಳೆ (ಭೀಷ್ಮನಿಗೊಂದು ಪತ್ರ) ಎಂಬ ಕವಿತೆಯಲ್ಲಿ ಶಶಿಕಲಾ ವೀರಯ್ಯಸ್ವಾಮಿಯವರು ಅಂಬೆಯ ಕಳೆದುಕೊಳ್ಳುವಿಕೆಯನ್ನು ಗುರುತಿಸುತ್ತ, ಅದನ್ನು ಹೆಣ್ಣಿನ ಸಹಜವಾದ ಬಯಕೆಯಾದ ತಾಯ್ತನ ಎಂದು ಸೂಚಿಸುತ್ತಾರೆ.

ನನ್ನ ತಾಯ್ತನ ತುಳಿದೆಯೆಲ್ಲ
ಈ ಒಡಲಕಿಚ್ಚು
ನಿನ್ನ ಸುಡದೇ
ಬಿಡದು ನೋಡುತ್ತಿರು[೭೨]

(ಎಂ.ಜಿ. ರತ್ನ ಕಾಳೇಗೌಡ ಪುಟ-೨೬, ೨೦೦೬)

ದ್ರೌಪದಿ ಮತ್ತು ಸೀತೆ ಮಹಿಳಾ ಕಾವ್ಯದಲ್ಲಿ ಪುರುಷನಿಂದ ಶೋಷಣೆಗೆ ಒಳಗಾದ ಆಧ್ಯ ಸ್ತ್ರೀಯರು. ಕವಿಯತ್ರಿಯರ ಕಾವ್ಯದಲ್ಲಿ ದ್ರೌಪದಿ ಮತ್ತು ಸೀತೆ ಚರ್ಚಿತವಾದಷ್ಟು ಬೇರಾವ ಸ್ತ್ರೀಯೂ ಕಂಡುಬಂದಿಲ್ಲ. ಮೊದಲಿಗೆ ಸೀತೆಯನ್ನು ತೆಗೆದುಕೊಂಡರೆ, ಸೀತೆ ಗಂಡನ ಮಾತಿನ ಆಜ್ಞಾನುಧಾರಳಾಗಿ ಪುರಾಣದಲ್ಲಿ ಚಿತ್ರಿಸಿದರೆ ನಮ್ಮ ಸ್ವತಂತ್ರೋತ್ತರ ಕವಿಯತ್ರಿಯರ ಕಾಲದಲ್ಲಿ ಸೀತೆ ಗಂಡನಿಂದ ನಲುಗಿದವಳು, ನೋವ ನುಂಗಿದಳು ಅಂತ್ಯದಲ್ಲೂ ಸುಖಾಂತ್ಯ ಕಾಣದ ದೌರ್ಭಾಗ್ಯಳು ಎಂಬಂತೆಯೇ ಚಿತ್ರಿಸಿದ್ದಾರೆ.

ಅಗಳು ಅಗಳು ಹಿಚುಕಿ
ಅನ್ನ ಅಗಿದೆಯೇ ಎನ್ನುವ ಬುದ್ಧಿ
ಸೀತೆಯಂತೆ ಅಗ್ನಿ ಪರೀಕ್ಷೆಗೆ ಒಪ್ಪಿ
ಹೆಣ್ಣು ಹೃದಯದ ರಾಮನ ಮನ
ಕರಗಿಸಿ ಒಪ್ಪನಾದ ಹೆಣ್ಣು ನಾವೆಂಬಂತೆ
ಹೆಣ್ಣನ್ನು ಆಗಲೂ ತನ್ನ ಚೌಕಟ್ಟಿನೊಳಗೆ
ಕೊಳ ಹಾಕುವ ಸಂಚದು.[೭೩]

(ಶಾಂತಜಗದೀಶ್, ಪುಟ-೧೬, ೧೯೯೮)

ಎನ್ನುವಲ್ಲಿ ರಾಮನು ಮಾಡಿದ ಅಗ್ನಿ ಪರೀಕ್ಷೆಗೆ ಧಿಕ್ಕಾರದಂತಿದೆ. ಆದಿಕಾಲದ ಸಂಗತಿ, ಕಟ್ಟುಪಾಡುಗಳನ್ನು ಈಗಲೂ ಮುಂದುವರಿಸುವ ರೀತಿಯನ್ನು ನೋಡಿದರೆ, ಕಾಲ ಬದಲಾದರೂ ಹೆಣ್ಣಿನ ಸ್ಥಾನಮಾನಗಳು ಕೊಂಚವು ಬದಲಾಗದೆ ಇರುವುದನ್ನು ಗಮನಿಸಬಹುದು.

ಅಶೋಕವನದಲ್ಲಿ ಕುಳಿತು
ಇಡೀ ಒಂದು ವರುಷ
ಒಂದೇ ಸೀರೆಯಲ್ಲಿ
ಕೊಳೆತು ನಾರುತಿದ್ದ
ಸೀತೆಯ ಕೊಳೆಯಲ್ಲ
ನೀರಲ್ಲಿ ತೊಳೆದರೆ
ಹೋಗುವುದಿಲ್ಲವೆಂದು
ಅವಳನ್ನು ಸೀರೆಯ ಸಮೇತ
ಬೆಂಕಿಯೊಳಗೆ ಅದ್ದಿ ತೆಗೆದಿರಬೇಕು ರಾಮ
ರಾಮ! ರಾಮ![೭೪]

(ಭಾಗ್ಯ, ಪುಟ–೧೬, ೧೯೮೧)

ರಾಮನ ಅಗ್ನಿಪರೀಕ್ಷೆಗೆ ಕವಿಯತ್ರಿಯ ಕುಹುಕತನದಿಂದ ಪ್ರಶ್ನಿಸಿದ್ದಾರೆ. ಪತಿವ್ರತೆ ಎಂಬದು ಬರೀ ಹೆಣ್ಣಿಗೆ ಮಾತ್ರ ಸೀಮಿತ ಎಂಬ ಹಾಗೆ ಹೇಳಿಕೆ ನೀಡುವ ಸಮಾಜವು ಅನಾದಿಕಾಲದಿಂದ ಇಂದಿಗೂ ಬದಲಾಗದೆ ಉಳಿದಿದ್ದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ

ಸೀತಾ
ತನ್ನ ಸ್ವಪ್ರತಿಷ್ಠೆಯಾಗಿ
ಯಾರದೋ ತಲೆತಿರುಕನ ಮಾತಿಗೆ
ಬಾಗಿ
ತುಂಬು ಬಸುರಿಯನ್ನೆ
ಕಾಡಿಗಟ್ಟಿದಾಗ
ನೀನು ಅಮಾಯಕಳಾಗಿದ್ದು ಹೇಗೆ
ತಿಳಿದ ಮೇಲೂ ಲಕ್ಷ್ಮಣನ
ಜೊತೆಯಲ್ಲೇಕೆ ಹಿಂದುರುಗಲಿಲ್ಲ
ನಿನ್ನ ವ್ಯಥೆಯನ್ನೇಕ ಬೆರೆಸಲಿಲ್ಲ.[೭೫]

(ಭಾರತಿ, ಪುಟ–೧೬, ೧೯೯೯)

ಸೀತೆಯನ್ನು ಬಿಟ್ಟರೆ ಪುರಾಣದ ಸ್ತ್ರೀಯಲ್ಲಿ ಹೆಚ್ಚು ಶೋಷಣೆಗೊಳಗಾದ ಪಾತ್ರವೆಂದರೆ ದ್ರೌಪದಿಯೇ. ಪುರಾಣಗಳಲ್ಲಿ ಹೆಚ್ಚು ನೊಂದ ಮತ್ತು ಶೋಷಣೆಗೊಳಗಾದ ಪಾತ್ರಗಳಲ್ಲಿ ದ್ರೌಪದಿಯೂ ಒಬ್ಬಳು.

ಭೀಮ
ಹುಡುಕಿಕೊಂಡಿಹನು ಹಿಂಡಿಂಬೆಯನು
ಅರ್ಜುನ
ಚಿತ್ರಾಂಗದೆ ಉಲೂಚಿಯರನ್ನು
ಧರ್ಮ
ಸದಾ ಧರ್ಮದಲಿ ಮುಳುಗಿಹನು
ಚಿಕ್ಕವರು
ದೊಡ್ಡವರ ಆಜ್ಞೆ ಪಾಲಿಸುಕವಿಬದ್ಧರೂ ಹೊರತು
ತಮ್ಮ ಸ್ವಾರ್ಥಕೆ ನಿನ್ನನ್ನು
ಒತ್ತೆಯಿಟ್ಟಾಗ ನಿನಗಾದ ಗಾಯಕ್ಕೆ
ಔಷಧಿ ಇತ್ತೆ?
ಮೋಸದಲ್ಲಿ ಕೌರವನ ತೊಡೆ
ಮುರಿದಿದ್ದೇನೋ ಸರಿ
ತೃಪ್ತಿಯಾಗಲಿಲ್ಲ ನಿನಗೆ
ಒಂದಷ್ಟು ರವಷ್ಟು[೭೭]

(ಪಿ. ಚಂದ್ರಿಕಾ ಪುಟ-೨೯, ೧೯೯೯)

ಎನ್ನುವಾಗಿನ ಮಹಿಳಾ ಬರಹಗಾರ್ತಿಗೆ ಮಾತ್ರ ದ್ರೌಪದಿಯ ಮನಸು ತಿಳಿಯುವುದು. ಶತಮಾನದ ಹಿಂದೆ ಹುಟ್ಟಿದ ಪ್ರಶ್ನೆಯನ್ನು ಮತ್ತೆ ಕೆದಕುವಂತಿದೆ.

ದ್ರೌಪದಿಯ ನಿರಿಗೆಯ
ಅಗ್ನಿ ಪರ್ವತ ಉಗುಳಿದ
ಲಾವರಸ
ದುಶ್ಯಾಸನ ಜಯಪ್ರಥ ಕೀಚಕರ
ಕುರುಕುಲು ದೇಹಗಳ ಮೇಲೆ
ಭೀಭತ್ಸೆ ನಗೆಯ
ಲಾಸ್ಯಾಟ್ಟಹಾಸ[೭೭]

(ಭಾಗ್ಯ, ಪುಟ-೧೦, ೧೯೮೧)

ತನ್ನ ಹಟದಿಂದಲೇ ತನ್ನ ಹಗೆತನವನ್ನು ನಿವಾರಿಸಿಕೊಂಡ ದ್ರೌಪದಿಯನ್ನು ನೆನಪಿಸುತ್ತದೆ. ಹೆಣ್ಣು ಒಲಿದರೆ ನಾರಿ ಮುನಿದರೆ ಮಾರಿ ಎಂಬ ಮಾತನ್ನು ಒತ್ತಿ ಹೇಳುತ್ತದೆ. ದ್ರೌಪದಿಯ ರೋಷ ಹಲವು ಗಂಡಸರ ದಬ್ಬಾಳಿಕೆಯನ್ನು ಮುರಿದರೂ ಅದರ ಹಿಂದಿನ ನೋವು ಅವಳನ್ನು ಬಾದಿಸಿದ್ದು ಸುಳ್ಳಲ್ಲ[೭೮]

(ಪಿ. ಚಂದ್ರಿಕಾ ಪುಟ-೨೮, ೧೯೯೯)

ಮಹಾಭಾರತದ ಇನ್ನೊಂದು ಪ್ರಣಯ ಭರಿತ ಪಾತ್ರವೆಂದರೆ ಶಕುಂತಲ. ಲೆಕ್ಕಕ್ಕೆ ಗೌತಮನ ಶಾಪದ ಕಾರಣವಾದರೂ ದುಶ್ಯಂತನ ಅಗಲಿಕೆಗೆ ಕಾರಣವಾದ್ದು ಆತನ ಪ್ರುಭುತ್ವವಾದಿ ನಿಲುವು. ದುಶ್ಯಂತನ ದೃಷ್ಟಿಯಲ್ಲಿ ಶಕುಂತಲೆ ಹೆಣ್ಣು ಮಾತ್ರ ಅವನ ಭೋಗಕ್ಕೆ ಬಳಕೆಯಾಗಿ ನಿರ್ಲಕ್ಷತೆ ಒಳಗಾದಳೆ ಹೊರತು ಗೌತಮನ ಶಾಪ ಕಾರಣವಲ್ಲ.

ಶಕುಂತಲಾ
ನಂಬಿಸಿ ಮಜಾ ಮಾಡಿ
ಮತ್ತೆ ಕೈ ಕೊಟ್ಟು
ದುಶ್ಯಂತನನ್ನು ನೆನಪಿಸುತ್ತಾ
ಕಣ್ಣೀರ ಸುರಿಸುತ್ತಾ
ಕಾಲಕಳೆದು
ಮತ್ತೆ ಸೇರಿದೆಯಲ್ಲಾ
ಅವನು ತಿರುಗ ಬಂದಾಗ
ನೀನೂ ಶಾಪ ಕೊಡಬಾರದಿತ್ತೆ...(ಪಿ.ಚಂದ್ರಿಕಾ, ಪುಟ-೨೮, ೧೯೯೯)

ಮಹಾಭಾರತದ ಮತ್ಸಗಂಧಿಯ ಕುರಿತಂತೆ ಸರ್ವಮಂಗಳಾ ಹೀಗೆ ಹೇಳಿದ್ದಾರೆ

ಮೆಲ್ಲನೆ ಮೈಮರೆಯ ಹುಡುಗಿ
ಹುಡುಗಿಯ ತೋಳಿನಲಿ ಒರಗಿಸಿ ಕೇಳುತ್ತಾನೆ
ಮದುವೆಯಾಗುವೆಯಾ ನನ್ನ
ಯಾವ ಸುಗಂಧಕೆ ಮಾರು ಹೋದ ಶಂತನು?
ಮತ್ತೆ ಮಕ್ಕಳ ಹಡೆದು ಕೊಡಲಿಕ್ಕೆ ಹೊರಟು ನಿಂತಿದ್ದು
ಮತ್ಸಗಂಧಿ ಎಂಬುದನ್ನು ಮರೆಮಾಡಿ
ಇಷ್ಟಕ್ಕೂ ಆಗಬೇಕಿತ್ತೇನೆ ನೀ ಯೋಜನಾಗಂಧಿ[೭೯]

(ಸರ್ವಮಂಗಳಾ, ಪುಟ-೬೮, ೧೯೮೮)

ಸುಗಂಧಿ ಪರಾವಸುವಿನ ಕಾಮಕ್ಕೆ ತುತ್ತಾಗಿದ್ದರೂ ಅವಳಿಗೆ ಮೈಯ್ಯ ವಾಸನೆ ನೀಗಿಸುತ್ತಾನೆ. ಇದನ್ನ ವರದ ಹಿಂದಿನ ಕಾಮವನ್ನು ಬಲಿಯಾಗಿದ್ದರ ಅನಿವಾರ್ಯತೆಯನ್ನು ಹೇಳುತ್ತದೆ.

ಅರಿವೆ ಕಳಚಿ ಕೂಡಿದ್ದ ಬಿಟ್ಟು
ನೀನು ನೀನೆ ಆದೆ
ಜಿಡ್ಡುಗಟ್ಟಿದ ಹೆಣತೆಯ ಪ್ರತಿವ್ರತಾ
ಜ್ಯೋತಿಗೆ ನೀರು ಎರಚಿ ಹೊರಟೆ
ಬಿಟ್ಟೆಯಲ್ಲೆ ತಾಯಿ
ಎಂಥ ದಿಟ್ಟ ಹೆಜ್ಜೆ ಇಟ್ಟ ನಮ್ಮವ್ವಾ[೮೦]

(ಶಾಂತಜಗದೀಶ-ಪುಟ-೧೮, ೨೦೦೩)

ಅಕ್ಕಮಹಾದೇವಿ ದಿಟ್ಟತನ ವರ್ಣಿಸುತ್ತಾ 'ಪ್ರತಿವ್ರತಾ' ಜ್ಯೋತಿಗೆ ನೀರು ಎರಚಿ ಹೊರಟೆ ಎನ್ನುವಲ್ಲಿ ಹೆಣ್ಣಿನ ಜನ್ಮದಸುತ್ತಾ ಪುರುಷ ನಿರ್ಮಿಸಿದ ಆಚಾರ, ಸಂಪ್ರದಾಯ - ಕಟ್ಟಲೆಗಳನ್ನು ಮುರಿದು ಸ್ವಾತಂತ್ರ್ಯವಾದುದನ್ನು ಕವಿಯತ್ರಿ ಹೆಮ್ಮೆಯಿಂದ ಗುರುತಿಟ್ಟು ಹೇಳುತ್ತಾಳೆ.

ಪುರಾಣದ ಸ್ತ್ರೀಗಿದ್ದ ಸಮಸ್ಯೆಗಳು ಈ ಶತಮಾನದ ಸ್ತ್ರೀಗಿರುವ ಸಮಸ್ಯೆಗಳೆ ಬೇರೆ. ಅಂತಹ ಸಮಸ್ಯೆಯೆಂದರೆ ಗಂಡನ ಕುಡುಕತನ.

ಹಗಲು ರಾತ್ರಿಯೆನ್ನದೆ
ಅವಳ ಬಾಳ ಸುಖವನ್ನೆಲ್ಲ
ಮೊಗೆ ಮೊಗೆದು ಕುಡಿದು
ಬರಿದು ಮಾಡಿದ ಅವನೀಗ
ಸತ್ತು ಅವಳ ಬದುಕಿನ
ಬಾಟಲಿಯೊಳಗೆ ನೆಮ್ಮದಿ
ತುಂಬಿಸಿ ಹೋಗಿದ್ದಾನೆ.[೮೧]

(ಡಾ. ಮಲ್ಲಿಕಾಘಂಟಿ, ಪುಟ-೯೨, ೨೦೦೧)

ಆಧುನಿಕ ಶತಮಾನದ ಸಮಸ್ಯೆಯೆಂದರೆ ವೇಶ್ಯಾ ಸಮಸ್ಯೆ. ಆಧುನಿಕ ಕವಿಯತ್ರಿ ಈ ಎಲ್ಲಾ ಸಮಸ್ಯೆಯ ಬಗ್ಗೆ ಗಮನಹರಿಸಿದ್ದಾಳೆ.

ಸಾವಿರ ಗಂಡರಿಗೆ ಮೂಲೆಯುಣಿಸಿ
ಲಾಲಿ ಹಾಡುತ್ತಾಳೆ
ಅವರು ಅಲ್ಲೇ...ಹಾಗೆ...
ತಣ್ಣಗೆ, ಅವಳ ಮಡಿಲಲ್ಲಿ
ಮಲಗುವ ಹಾಗೆ.[೮೨]

(ಪಿ. ರತ್ನ, ಪುಟ-೨೪, ೧೯೯೧)

ವೇಶಾ ಸಮಸ್ಯೆಯಷ್ಟೆ ಆಧುನಿಕ ಸಮಾಜಿಕವನ್ನು ಕಾಡುತ್ತಿರುವುದು ವರದಕ್ಷಿಣೆ ಸಮಸ್ಯೆ ಇಂದಿಗೂ ನೂರಾರು ಹೆಣ್ಣು ಮಕ್ಕಳು ಈ ಪಿಡುಗಿಗೆ ಬಲಿಯಾಗುತ್ತಿದ್ದಾರೆ ಎಷ್ಟೋ ಹೆಣ್ಣು ಮಕ್ಕಳು ಬೆಂಕಿಗಾಹುತಿಯಾಗಿದ್ದಾರೆ.

ನೋಡಲಾರರಿ ನೀವು ನನ್ನನ್ನು
ಇದೋ... ನೋಡಿ
ನನಗೆ ದೇಹವಿಲ್ಲ ಕಾಯವಿಲ್ಲ
ಚಿತೆಯಿಂದ ಏಳುತ್ತಿದ್ದೇನೆ ಎದ್ದೀನೆ

ಭೂಮಿ ಪಾತಾಳ ಲೋಕಕ್ಕೆ
ರೇಡಿಯೋ ಟಿ.ವಿ. ವರ್ತಮಾನ ಪತ್ರಿಕೆ
ಸ್ವರ್ಗದಲ್ಲಿ ಸ್ವಾಗತ
ಕಟ್ಟಿಟ್ಟ ಪುಸ್ತಕದ
ತೆರೆದ ಹಾಳೆಗಳ ನೋಡುತ್ತಾ
ಬೆಂಟೆಂಕ್ ರಾಜರಾಮ ಮೋಹನರಾಯ
ಅಳುತ್ತಿದ್ದಾರೆ ನಗುತ್ತಿದ್ದರೆ
ಬೆಪ್ಪು-ಬೆಪ್ಪಾಗಿ[೮೩]

(ಶಾಂತ ಜಗದೀಶ್, ಪುಟ-೭೮, ೨೦೦೩)

ಮಹಿಳಾ ಸಮಸ್ಯೆಗಳೆಲ್ಲಾ ಒಂದು ಮೂಲಭೂತ ಕಾರಣವನ್ನು ಹೊರಹಾಕಲು ಪರೋಕ್ಷವಾಗಿ ಗಂಡನಿಗೆ ಅವಳು ಪರಾವಲಂಬಿಯಾಗಿರುವುದೇ ಮುಖ್ಯ ಕಾರಣವೆನಿಸುತ್ತದೆ. ಅವನು ಆ ಸ್ತ್ರೀಯನ್ನು ಗುಲಾಮಳಾಗಿ ನೋಡುವುದಕ್ಕೆ ಈ ಪರಾವಲಂಬನೆಯೇ ಕಾರಣ ಕಾರಣ ಇರಬಹುದೆನಿಸುತ್ತದೆ. ಇದಕ್ಕಾಗಿಯೇ ಅವಳು ಆದರ್ಶವನ್ನು ಕಾಣಬೇಕೆಂದು ಬಯಸುತ್ತಾಳೆ.

ಹಲವೊಮ್ಮೆ ತಾನು ಸ್ವಾತಂತ್ರ್ಯ
ಪಾದ ತೊಳೆದು ಕುಡಿಯೆನ್ನುವ
ತೀರ್ಥವನ್ನು ನಿಮ್ಮ ಮುಖಕ್ಕೆರಚಿ
ಬೆವರು ಸುರಿಸಿ ದುಡಿದು ಬದುಕುತ್ತೇನೆ.[೮೪]

(ಸುಕನ್ಯಾ ಮಾರುತಿ, ಪುಟ-೬೨, ೧೯೮೫)

ಎನ್ನುವಾಗ ಆ ಹೊತ್ತಿನ ಅವಳ ದಾಸ್ಯದಿಂದ, ಅವಳು ಎಷ್ಟು ಬೇಸತ್ತಿದ್ದಾಳೆಂಬುದನ್ನು ತಿಳಿಸುತ್ತಾಳೆ. ಆರ್ಥಿಕವಾಗಿ ಸ್ವತಂತ್ರ್ಯಳಾದರೆ ಹೆಂಗಸಿನ ಸಮಸ್ಯೆ ಪೂರ್ಣವಾಯಿತಲ್ಲ ಎಂದು ಯೋಚಿಸಿದರೂ ಅಲ್ಲಿಗೆ ಅವಳ ಸಮಸ್ಯೆ ಮುಗಿಯುವುದಿಲ್ಲ.

ಇಲ್ಲೂ ದುಡಿ, ಅಲ್ಲೂ ದುಡಿ
ದುಡಿಯುವ ಮಡದಿ ಅಂದರೆ
ಮಡಿಯೋವರ್ಗೂ ದುಡಿ.[೮೫]

(ಸರ್ವಮಂಗಳಾ ಪುಟ-೨೩ ೧೯೮೮)

ಎಂಬಲ್ಲಿ ಹೆಣ್ಣಿನ ದುಡಿತಕ್ಕೆ ನಿಲುಗಡೆಯೇ ಇಲ್ಲ. ಅಲ್ಲಿಗೆ ಮನೆಯೊಳಗಿನ ದುಡಿಮೆ ಜೊತೆ ಹೊರಗಿನ ದುಡಿಮೆ ಹೆಚ್ಚಾಗುತ್ತದೆಂದು ಹೇಳಿದ್ದಾರೆ.

ಹೀಗೆ ಮದುವೆ, ಸಾಮಾಜಿಕ ಕಟ್ಟಲೆ, ಸಮಾಜದ ಹೊಸ ಸಮಸ್ಯೆಗಳು ಹೀಗೆ ಒಂದಲ್ಲ ಒಂದು ಕಡೆ ಶೋಷಣೆಗೆ ಪುರಷನಿಂದ ಸ್ತ್ರೀ ಒಳಗಾಗುತ್ತಲೆ ಇದ್ದಾಳೆ.

ಅಡಿಟಿಪ್ಪಣಿಗಳು

೧. ಶೈಲಜಾ ಉಡುಚಣ, ಸ್ವಾಗತ, ದಾಂಪತ್ಯ-ಚಂದ್ರನಾಥ ಪ್ರಕಾಶನ, ಧಾರವಾಡ, ೧೯೭೮, ಪುಟ-೨೮

೨. ಮಾಲತಿ ಪಟ್ಟಣಶೆಟ್ಟಿ, ಮಹಿಳಾ ಸಾಹಿತ್ಯ, ಅನನ್ಯ ಚಂದ್ರನಾಥ ಪ್ರಕಾಶನ, ೧೯೯೧, ಪುಟ-೨೬

೩. ಭಾಗ್ಯ, ಸುಳ್ಳಿನಾಚೆಯ ಸತ್ಯ, ನೆಲೆಮನೆ ಪ್ರಕಾಶನ, ಬೆಂಗಳೂರು, ೧೯೯೯, ಪುಟ-೧೬,

೪. ಆರ್.ಶಾಂತಕುಮಾರಿ, 'ಬೆನ್ನು', ಪ್ರಸಾದ ಪುರ ಮಂದಿರ ಪ್ರಕಾಶನ, ೧೯೮೯

೫. ಶಾಂತ ಜಗದೀಶ, ಮೌಲ್ಯ, ಭಾವಸಂಪದ ಪ್ರಕಾಶನ, ಪುಟ-೮

೬. ಶಾಂತ ಜಗದೀಶ, ಮೌಲ್ಯ, ಭಾವಸಂಪದ, ಪ್ರಕಾಶನ, ಪುಟ-೨೬,

೭. ಶಾಂತ ಜಗದೀಶ, ಮೌಲ್ಯ, ಭಾವಸಂಪದ ಪ್ರಕಾಶನ, ಪುಟ-೬೦

೮. ಶೈಲಜಾ ಉಡುಚಣ, ಸ್ವಾಗತ, ದಾಂಪತ್ಯ, ೧೯೭೮, ಪುಟ-೧೯

೯. ಮಾಲತಿ ಪಟ್ಟಣಶೆಟ್ಟಿ, ಮಹಿಳಾ ಸಾಹಿತ್ಯಕ, ಅನನ್ಯ ಚಂದ್ರನಾಥ ಪ್ರಕಾಶನ, ೧೯೮೩, ಪುಟ-೧೨೬

೧೦. ಡಾ. ಮಲ್ಲಿಕಾ ಘಂಟಿ, ರೊಟ್ಟಿ ಮತ್ತು ಹುಡುಗಿ, ಗೌತಮ ಪ್ರಕಾಶನ, ಬಳ್ಳಾರಿ, ೨೦೦೧, ಪುಟ-೧೬

೧೧. ಡಾ. ಮಲ್ಲಿಕಾ ಘಂಟಿ, ರೊಟ್ಟಿ ಮತ್ತು ಹುಡುಗಿ, ಗೌತಮ ಪ್ರಕಾಶನ, ಬಳ್ಳಾರಿ, ೧೯೮೬, ಪುಟ-೧೬

೧೨. ಆರ್. ಶಾಂತಕುಮಾರಿ, ಎರಡು ಸೆಳೆ, ಘಳಿಗೆಗಳು, ಭಾವಸಂಪದ ಪ್ರಕಾಶನ, ಪುಟ-೩೬

೧೩. ಸಿ. ದೇವಮ್ಮ, ಅರೆಕಲ್ಲು ಕವನ ಸಂಕಲನ, ಕುವೆಂಪು ಅಧ್ಯಯನ ಕೇಂದ್ರ

೧೪. ಡಾ. ಮಲ್ಲಿಕಾಘಂಟಿ, ರೊಟ್ಟಿ ಮತ್ತು ಹುಡುಗಿ, ಗೌತಮ ಪ್ರಕಾಶನ, ೨೦೦೧

೧೫. ಶಶಿಕಲಾ ವಸ್ತ್ರದ, ಗುಬ್ಬಿಮನಿ, ನೆಲೆಮನೆ ಪ್ರಕಾಶನ, ಬೆಂಗಳೂರು, ೧೯೯೮

೧೬. ಸರ್ವಮಂಗಳ, ಅಮ್ಮನಗುಡ್ಡ, ರುಜುವಾತು ಪ್ರಕಾಶನ, ಮೈಸೂರು, ೧೯೮೮

೧೭. ಸರಸ್ವತಿಗೌಡ, ಮುಂಗಾರು, ಬಯಲುಸೀಮೆ ಪ್ರಕಾಶನ, ಬೆಂಗಳೂರು, ಅಪ್ಪನ ಆಲ, ೧೯೮೦

೧೮. ಪ್ರತಿಭಾ ನಂದಕುಮಾರ್, ಈ ತನಕ, ಕನ್ನಡ ಸಂಘ, ಕ್ರೈಸ್ತ ಕಾಲೇಜು, ಬೆಂಗಳೂರು, ೧೯೮೮

೧೯. ಡಾ. ಮಲ್ಲಿಕಾಘಂಟಿ, ರೊಟ್ಟಿ ಮತ್ತು ಹುಡುಗಿ, ಗೌತಮ ಪ್ರಕಾಶನ, ೨೦೦೧

೨೦. ಸಹನ, ವೇಣುವನ, ರೋಹಿಣಿ ಪ್ರಿಂಟರ್ಸ್, ೧೯೯೩

೨೧. ಪ್ರತಿಭಾ ನಂದಕುಮಾರ್, ಈತಕ, ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೮೮

೨೨. ಹೆಚ್.ಎಸ್. ಮುಕ್ತಾಯಕ್ಕ, ಹಲವು ಹಾಯಿಕೆಗಳು, ೧೯೯೪

೨೩. ಸಿ.ದೇವಮ್ಮ, ಅರೆಕಲ್ಲು, ಕುವೆಂಪು ಅಧ್ಯಯನ ಕೇಂದ್ರ, ೧೯೯೦

೨೪. ಶಾಂತಜಗದೀಶ್, ಮೌಲ್ಯ, ಭಾವಸಂಪದ ಪ್ರಕಾಶನ ಪ್ರಕಾಶನ, ೨೦೦೩

೨೫. ಸರೋಜಿನಿ, ಸಸ್ಯ ಶ್ಯಾಮಲ, ಶ್ರೀ ಜಗದ್ಗುರು ಮೂರುಸಾವಿರ ಮಠ ಗ್ರಂಥಮಾಲೆ, ಹುಬ್ಬಳ್ಳಿ, ೧೯೯೯

೨೬. ಆರ್.ಶಾಂತಕುಮಾರಿ, ಎರಡು ಸೆಳೆ, ಪ್ರಸಾದ ಮಂದಿರ ಪ್ರಕಾಶನ, ೨೦೦೦

೨೭. ಪ್ರೇಮತಾಶೀಲ್ದಾರ, ಅವಕಾಶ, ನೆಲೆಮನೆ ಪ್ರಕಾಶನ, ಬೆಂಗಳೂರು, ೧೯೯೯

೨೮. ಪ್ರೇಮತಾಶೀಲ್ದಾರ, ಅವಕಾಶ, ನೆಲೆಮನೆ ಪ್ರಕಾಶನ, ಬೆಂಗಳೂರು, ೧೯೯೯

೨೯. ಹೆಚ್.ಎಸ್. ಮುಕ್ತಾಯಕ್ಕ, ನೀವು ಕಾಣಿರೆ-ನೀವು ಕಾಣಿರೆ, ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು ೧೯೯೬

೩೦. ಪ್ರತಿಭಾ ನಂದಕುಮಾರ್, ನಾವು ಹುಡುಗಿಯರೇ ಹೀಗೆ, ಕನ್ನಡ ಕ್ರೈಸ್ಟ್ ಕಾಲೇಜು ಬೆಂಗಳೂರು, ೧೯೮೩

೩೧. ಡಾ. ಮಲ್ಲಿಕಾಘಂಟಿ, ರೊಟ್ಟಿ ಮತ್ತು ಹುಡುಗಿ, ಗೌತಮ ಪ್ರಕಾಶನ, ೨೦೦೧

೩೨. ಶೈಲಜ ಉಡುಚಣ, ಸ್ವಾಗತ, ಹುಚ್ಚ ಹುಚ್ಚಿ, ಚಂದ್ರನಾಥ ಪ್ರಕಾಶನ, ಧಾರವಾಡ, ೧೯೮೧

೩೩. ಪ್ರೇಮ ತಾಶೀಲ್ದಾರ, ಅವಕಾಶ, ಪ್ರತಿಸ್ಪಂದನ, ೧೯೯೯

೩೪. ಲಕ್ಷ್ಮಿದೇವಿಶಾಸ್ತ್ರಿ, ಮರೀಚಿಕೆ, ವಿಶ್ವ ಪ್ರಕಾಶನ, ೧೯೯೮

೩೫. ಕವಿತ ಬಗಲಿ, ಜೋಡಿಜೀವ-ಹೇಮಲತ ಬಗಲಿ, ಬರಡು, ೨೦೦೦

೩೬. ಸರೋಜಿನಿ, ಸಸ್ಯಶ್ಯಾಮಲ, ಶ್ರೀ ಜಗದ್ಗುರು ಮೂರುಸಾವಿರ ಮಠ ಗ್ರಂಥಮಾಲೆ, ಹುಬ್ಬಳ್ಳಿ, ೧೯೯೯

೩೭. ಲೀಲಾಕುಲಾಕೋಟಿ, ನನ್ನ ಧ್ವನಿ, ಅನುಪಮ ಪ್ರಕಾಶನ, ೧೯೯೨

೩೮. ಶಶಿಕಲಾ ವಸ್ತ್ರದ, ಗುಬ್ಬಿಮನಿ, ನೆಲಮನೆ ಪ್ರಕಾಶನ, ಮೈಸೂರು, ೧೯೯೯

೩೯. ಮಾಲತಿ ಪಟ್ಟಣಶೆಟ್ಟಿ, ಮಹಿಳಾ ಸಾಹಿತ್ಯಕ, ಹುಬ್ಬಳ್ಳಿ ಪ್ರಕಾಶನ, ೧೯೮೩

೪೦. ಮಲ್ಲಿಕಾ ಘಂಟಿ, ರೊಟ್ಟಿ ಮತ್ತು ಹುಡುಗಿ, ಗೌತಮ ಪ್ರಕಾಶನ, ೨೦೦೧

೪೧. ಭಾರತಿ ಪಾಟೀಲ, ಅಕ್ಕಕೇಳವ್ವಾ, ಬರದಮಳೆ ನೆಲಮನೆ ಪ್ರಕಾಶನ, ೧೯೯೪

೪೨. ಶಶಿಕಲಾ ವಸ್ತ್ರದ, ಗುಬ್ಬಿಮನಿ, ನೆಲಮನೆ ಪ್ರಕಾಶನ, ಮೈಸೂರು ೧೯೯೭

೪೩. ಪ್ರತಿಭಾ ನಂದಕುಮಾರ್, ನಾವು ಹುಡುಗಿಯರೆ ಹೀಗೆ, ಕನ್ನಡ ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೮೩

೪೪. ಡಾ. ಮಲ್ಲಿಕಾ ಘಂಟಿ, ರೊಟ್ಟಿ ಮತ್ತು ಹುಡುಗಿ, ಗೌತಮ ಪ್ರಕಾಶನ, ಬಳ್ಳಾರಿ, ೨೦೦೧

೪೫. ಪ್ರಮೀಳ, ಪಾರಿಜಾತದ ಹುಡುಗಿ, ಹೇಮಂತು ಪ್ರಕಾಶನ, ನನ್ನನ್ನು ಕಳಕೊಂಡಿದ್ದು, ೧೯೯೮

೪೬. ಮುಕ್ತಾಯಕ್ಕ ಹೆಚ್.ಎಸ್., ನಾನು ಮತ್ತು ಅವನು, ಪ್ರಶಾಂತ ಪ್ರಕಾಶನ, ರಾಯಚೂರು, ೧೯೮೩

೪೭. ಡಾ. ಮಲ್ಲಿಕಾ ಘಂಟಿ, ರೊಟ್ಟಿ ಮತ್ತು ಹುಡುಗಿ, ಗೌತಮ ಪ್ರಕಾಶನ, ಬಳ್ಳಾರಿ, ೨೦೦೧

೪೮. ಭಾರತೀ ಪಾಟೀಲ, ಅಕ್ಕ ಕೇಳವ್ವ, ನೆಲಮನೆ ಪ್ರಕಾಶನ, ಸಿಂದಗಿ, ನಾ-ನೀ, ೧೯೯೪

೪೯. ಡಾ. ಮಲ್ಲಿಕಾ ಘಂಟಿ, ರೊಟ್ಟಿ ಮತ್ತು ಹುಡುಗಿ ನಿರೀಕ್ಷೆ, ನೀವು ಜೊತೆಗಿದ್ದರೆ, ೨೦೦೧

೫೦. ರಾಜಮ್ಮ ಯು. ಶೆಟ್ಟಿ, ಉತ್ತನೂರು, ಅಕ್ಷರ ಹೊಸಕಾವ್ಯ, ೧೯೭೨

೫೧. ಲಕ್ಷ್ಮಿದೇವಿಶಾಸ್ತ್ರಿ, ಮರೀಚಿಕೆ, ವಿಶ್ವ ಪ್ರಕಾಶನ, ೧೯೯೬

೫೨. ಶಶಿಕಲಾ ವಸ್ತ್ರದ, ಗುಬ್ಬಿಮನಿ, ನೆಲಮನೆ ಪ್ರಕಾಶನ, ಮೈಸೂರು, ೧೯೯೭

೫೩. ಡಾ. ಮಲ್ಲಿಕಾಘಂಟಿ, ರೊಟ್ಟಿ ಮತ್ತು ಹುಡುಗಿ, ಗೌತಮ ಪ್ರಕಾಶನ, ೨೦೦೧

೫೪. ಲಕ್ಷ್ಮಿದೇವಿಶಾಸ್ತ್ರಿ, ಮರೀಚಿಕೆ, ವಿಶ್ವ ಪ್ರಕಾಶನ, ೧೯೯೬

೫೫. ಪ್ರತಿಭಾ ನಂದಕುಮಾರ್, ನಾವು ಹುಡುಗಿಯರೆ ಹೀಗೆ, ಕನ್ನಡ ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೮೩

೫೬. ಶಶಿಕಲಾ ವಸ್ತ್ರದ, ಗುಬ್ಬಿಮನಿ, ನೆಲಮನೆ ಪ್ರಕಾಶನ, ಮೈಸೂರು, ೧೯೯೭

೫೭. ಭಾಗ್ಯ, ಬದುಕಿನ ತೆಕ್ಕೆಯಲ್ಲಿ, ಲತಾ ಪ್ರಕಾಶನ, ಬೆಂಗಳೂರು, ೧೯೭೯

೫೮. ಭಾಗ್ಯಲಕ್ಷ್ಮಿ, ಬೆರಳಸಂದಿಯ ಬದುಕು, ಪತ್ರಿಕಾ ಪ್ರಕಾಶನ, ೧೯೭೬

೫೯. ಬಿ.ನಾ. ಮಂಗಳಾ, ಕೆನಡ ಕವನಗಳು, ಸ್ಕ್ಯಾನ್ ಪ್ರಿಂಟ್, ಬೆಂಗಳೂರು, ೧೯೮೮

೬೦. ರಶ್ಮಿ ಟಿ.ಎಸ್., ಅಂತರಾಳ, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೬

೬೧. ಮಾಲತಿ ಪಟ್ಟಣಶೆಟ್ಟಿ, ಭಾ ಪರೀಕ್ಷೆಗೆ, ನಿರ್ಮಾಣ ಪ್ರಕಾಶನ, ೧೯೭೬

೬೨. ಮಲ್ಲಿಕಾಘಂಟಿ, ರೊಟ್ಟಿ ಮತ್ತು ಹುಡುಗಿ, ಗೌತಮ ಪ್ರಕಾಶನ, ೨೦೦೧

೬೩. ಬೆಳಗೆರೆ ಜಾನಕಮ್ಮ, ನೇಮಿಚಂದ್ರ–ಬಳಗೆರೆ ಜಾನಕಮ್ಮ ಬದುಕು ಬರಹ, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, ೧೯೮೮

೬೪. ಶಶಿಕಲ ವಸ್ತ್ರದ, ಮನುವಿಗೊಂದು ಮಾತು, ನೆಲೆಮನೆ ಪ್ರಕಾಶನ, ಮೈಸೂರು, ೧೯೭೯

೬೫. ಎಂ.ಜಿ. ರತ್ನ ಕಾಳೇಗೌಡ, ಕಾವ್ಯನಿಧಿ, ತೃಪ್ತಿ ಪ್ರಕಾಶನ, ೨೦೦೬

೬೬. ಪ್ರತಿಭಾ ನಂದಕುಮಾರ್, ಈತನಕ ಈ ತನಕ, ಕನ್ನಡ ಸಂಘ, ಬೆಂಗಳೂರು, ೧೯೮೯

೬೭. ಕವಿತಬಗಲಿ, ಜೋಡಿಜೀವ ಹೇಮಂತ ಬಗಲಿ, ಸಾಹಿತ್ಯ ಪರಿಷತ್, ೧೯೯೮

೬೮. ವಿಜಯದಬ್ಬೆ ,ಇತಿಗೀತಿಕೆ, ರಚನಾ ಪ್ರಕಾಶನ, ಮೈಸೂರು, ೧೯೯೬

೬೯. ಶಶಿಕಲಾ ವೀರಯ್ಯಸ್ವಾಮಿ, ಸತಿ–ಮಹಿಳಾಕಾವ್ಯ–ಸಾಧನೆ ಅಥವಾ ಸಮಸ್ಯೆಗಳು, ೧೯೯೩

೭೦. ಸುಕನ್ಯಾ, ಮಾರುತಿ, ನಾನು ನನ್ನವರು, ಸಂಗ್ರಾಮ ಪ್ರಕಾಶನ, ಧಾರವಾಡ, ೧೯೮೫.

೭೧. ಶಶಿಕಲಾ ವಸ್ತ್ರದ, ಗುಬ್ಬಿ ಮನಿ, ನೆಲೆಮನೆ ಪ್ರಕಾಶ, ಮೈಸೂರು, ೧೯೭೯

೭೨. ಎಂ.ಜಿ.ರತ್ನ ಕಾಳೇಗೌಡ, ಕಾವ್ಯನಿಧಿ, ಚೌಕಟ್ಟಿನೊಳಗೆ, ೨೦೦೬

೭೩. ಶಾಂತ ಜಗದೀಶ್, ಮೌಲ್ಯ, ಭಾವಸಂಪದ ಪ್ರಕಾಶನ, ೨೦೦೩

೭೪. ಭಾಗ್ಯ, ಸುಳ್ಳಿನಾಚೆಯ ಸತ್ಯ, ಬಳುವಳಿ ನೆಲೆಮನೆ ಪ್ರಕಾಶನ, ೧೯೮೧

೭೫. ಭಾರತಿ ಪಾಟೀಲ, ಅಕ್ಕ ಕಾಳವ್ವ, ನೆಲೆಮನೆ ಪ್ರಕಾಶನ, ಸಿಂದಗಿ, ೧೯೯೯

೭೬. ಪಿ.ಚಂದ್ರಿಕಾ, ನಿಮ್ಮ ಚರಿತ್ರೆಯಲ್ಲಿ ನಮಗೆ ಜಾಗವಿಲ್ಲ, ೧೯೯೯

೭೭. ಭಾಗ್ಯ, ಸುಳ್ಳಿನಾಚೆಯ ಸತ್ಯ, ಬಳುವಳಿ, ನೆಲೆಮನೆ ಪ್ರಕಾಶನ, ಮೈಸೂರು, ೧೯೯೯

೭೮. ಪಿ.ಚಂದ್ರಿಕಾ, ನಿಮ್ಮ ಚರಿತ್ರೆಯಲ್ಲಿ ನಮಗೆ ಜಾಗವಿಲ್ಲ, ೧೯೯೯

೭೯. ಸರ್ವಮಂಗಳ, ಅಮ್ಮನಗುಡ್ಡ, ಋಜವಾತು ಪ್ರಕಾಶನ, ಮೈಸೂರು, ೧೯೮೮

೮೦. ಶಾಂತಜಗದೀಶ್, ಮೌಲ್ಯ, ಭಾವಸಂಪದ ಪ್ರಕಾಶನ, ಕುಡುಕ, ೨೦೦೩.

೮೧. ಡಾ.ಮಲ್ಲಿಕಾ ಘಂಟಿ, ರೊಟ್ಟಿ ಮತ್ತು ಹುಡುಗಿ, ಗೌತಮ ಪ್ರಕಾಶನ, ೨೦೦೧

೮೨. ಪಿ.ರತ್ನ, ತುಂತುರು–ನಗುವನಹಳ್ಳಿ, ಪ್ರಶಾಂತಿ ಪ್ರಕಾಶನ, ಮೈಸೂರು, ೧೯೯೧

೮೩. ಶಾಂತ ಜಗದೀಶ, ಮೌಲ್ಯ, ಭಾವ ಸಂಪದ ಪ್ರಕಾಶನ, ೨೦೦೩

೮೪. ಸುಕನ್ಯಾ ಮಾರುತಿ, ನಾನು ನನ್ನವರು, ಸಂಗ್ರಾಮ ಪ್ರಕಾಶನ, ಧಾರವಾಡ, ೧೯೮೫

೮೫. ಸರ್ವಮಂಗಳ ಅಮ್ಮನಗುಡ್ಡೆ, ಋಜುವಾತು ಪ್ರಕಾಶನ, ಮೈಸೂರು, ೧೯೮೮

ಅಧ್ಯಾಯ ೬

ಕನ್ನಡ ಮಹಿಳಾ ಕಾವ್ಯಗಳಲ್ಲಿ ಕಂಡುಬರುವ ಹಲವು ಸಂಗತಿಗಳ ಅಭಿವ್ಯಕ್ತಿಯ ವಿಶ್ಲೇಷಣೆ

೬

ಕನ್ನಡ ಮಹಿಳಾ ಕಾವ್ಯಗಳಲ್ಲಿ ಕಂಡುಬರುವ ಹಲವು ಸಂಗತಿಗಳ ಅಭಿವ್ಯಕ್ತಿಯ ವಿಶ್ಲೇಷಣೆ

ಮಹಿಳಾ ಕಾವ್ಯದಲ್ಲಿ ಹೆಚ್ಚು ಪುನರಾವರ್ತಿತವಾಗಿರುವ ಸಂಗತಿಗಳು ಆಸಕ್ತಿಯನ್ನು ಮೂಡಿಸುತ್ತವೆ. ಅವುಗಳೆಡೆಗೆ ಗಮನ ಹರಿಸಿದಾಗ ಕವಿಯತ್ರಿಯ ಬಗೆಹರಿಯದ ಸಮಸ್ಯೆಗಳು ಮತ್ತು ಹಂಬಲಿಸುವ ತನ್ನತನದ ಪ್ರತಿಬಿಂಭವಾಗಿದೆ. ಮಹಿಳಾ ಕಾವ್ಯದಲ್ಲಿ ಹೆಚ್ಚು ಪುನರಾವರ್ತಿತವಾಗುವ ಸಂಗತಿಗಳೆಂದರೆ, ಪ್ರಶ್ನೆಗಳ ಮೂಲಕ ತನ್ನ ಬೇಕುಗಳಿಗೆ ಧ್ವನಿ ಗೂಡಿಸಿದ್ದಾಳೆ. ಗಟ್ಟಿ ಪಾತ್ರಗಳ ಮೂಲಕ ತಾನು ಇರಬೇಕಾದ ಅಸ್ತಿತ್ವವನ್ನು ವಿಷಮ ದಾಂಪತ್ಯದ ಸಂಗತಿಯ ಮೂಲಕ ಬಗೆಹರಿಸಲಾಗದ ಸಮಸ್ಯೆಯೊಂದನ್ನು, ಸಮನ್ವಯತೆ ಮೂಲಕ ಶತಮಾನಗಳಿಂದ ತಾವು ದಾಟಲಾಗದ ಅಸ್ತಿತ್ವವನ್ನು ತನ್ನ ಕಾವ್ಯಗಳಲ್ಲಿ ಒಡಮೂಡಿಸಿದ್ದಾಳೆ. ಅಂತಿಮವಾಗಿ ಇವುಗಳೆಲ್ಲದರ ಮೂಲಕ ಆದರ್ಶ ಪುರುಷನನ್ನು ಹುಡುಕುತ್ತಾಳೆ.

೧. ಪ್ರಶ್ನೆ

ಪ್ರಶ್ನಿಸುವುದು ಕೂಡ ಬಂಡಾಯದ ಒಂದು ತಾತ್ವಿಕ ರೂಪ. ಸಮಸ್ಯೆಯಾಗಲಿ, ಶೋಷಣೆಯಾಗಲಿ ಅದಕ್ಕೆ ಹುಟ್ಟು-ಬೆಳವಣಿಗೆಯ ರೂಪದಿಂದ ಅದು ಗಟ್ಟಿಯಾಗಿ ನಿಲ್ಲುವವರೆಗೆ ಬಿಡದೆ, ಅದನ್ನು ಪ್ರಾಥಮಿಕ ಹಂತದಿಂದಲೇ ಪ್ರಶ್ನಿಸತೊಡಗಿದರೆ ಆ ಸಮಸ್ಯೆಯಾಗಲಿ ಶೋಷಣೆಯಾಗಲಿ, ಸ್ಥಾಯಿಯಾಗಿ ನಿಲ್ಲುವುದಿಲ್ಲ.

ಪ್ರಶ್ನಿಸುವುದು ಕೂಡ ಸಮಾಜದಲ್ಲಿ ಕೆಲವರಿಗೆ ಮಾತ್ರ ದಕ್ಕುವ-ಹಕ್ಕು. ಹೆಣ್ಣು ಭಾಗಶಃ ಇದರಿಂದ ಹೊರತಾಗಿರುತ್ತಾಳೆ. ಪುರುಷ ಪ್ರಧಾನ ಸಮಾಜ ರಚನೆಯಲ್ಲಿ ಹುಟ್ಟಿ ಬೆಳೆಯುವ ಹೆಣ್ಣಿನ ಮನಸ್ಸು ಪ್ರಜ್ಞೆ ಸಹ ಪುರುಷ ಮೌಲ್ಯಗಳಿಂದಲೇ ನಿಯಂತ್ರಿತಗೊಂಡಿರುತ್ತದೆ ಮತ್ತು ಪುರುಷನ ಶೋಷಣೆಯನ್ನು ಶೋಷಣೆಯೆಂದೆನಿಸದೆ ಅದನ್ನು ಪುರುಷನ ಸಹಜ ಗುಣವೆಂದು, ತಾನು ಅದಕ್ಕೆ ಬದ್ಧವಾಗಿರಬೇಕೆಂದು ತೆಪ್ಪಗಾಗುತ್ತಾಳೆ. ಈ ಕಾರಣದಿಂದಲೇ ಹೆಣ್ಣಿನ

ಮೇಲಾಗುವ ಶೋಷಣೆಗಳು ಸಾಮಾನ್ಯವೆನಿಸುತ್ತದೆ. ಪ್ರಶ್ನಿಸುವುದರಿಂದ ಸಮಸ್ಯೆಯ ಮೌಲ್ಯಮಾಪನಮಾಡಿದಂತಾಗುತ್ತದೆ. ಪರಿಹಾರವು ಸಿಗುವುದುಂಟು.

ಪ್ರಶ್ನಿಸುವ ಹಕ್ಕು ಸಾಮಾನ್ಯ ಮಹಿಳೆಯರಲ್ಲಿ ಸಿಕ್ಕಿದ್ದು ತೀರಾ ಇತ್ತೀಚಿನ ವರ್ಷದಲ್ಲಿ ಮೊದಲು ಅವಳ ದುಃಖ ಮುಡುವುಗಟ್ಟಿತ್ತು. ಸ್ವಾತಂತ್ರ್ಯ ನಂತರದಲ್ಲಿ ಸಿಕ್ಕ ಬರವಣಿಗೆಯ ಹಕ್ಕು ಹೊಸ ಜಗತ್ತಿನಲ್ಲಿ ಗಂಡಸಿನ ಸಮವಾಗಿ ನಿಲ್ಲುವ ಶಕ್ತಿ ಬಂದತೆಲ್ಲಾ ತನ್ನ ಭೂತಕಾಲವನ್ನೆಲ್ಲಾ ಕೆದಕಿ ಪ್ರಶ್ನಿಸತೊಡಗಿದಳು. ಅಲ್ಲಿಯವರೆಗೂ ಮಡುಗಟ್ಟಿದ ಮೌನ ಬರಹದ ರೂಪದಲ್ಲಿ ಜಗಳಕ್ಕಿಳಿದವು.

ಮಾತುಬೇಡ ಹೂಂಗುಟ್ಟಿ ಸಾಕು ನಮ್ಮ ಪ್ರಶ್ನೆಗಳಿಗೆ
ನಿಮ್ಮಂತೆ ನಾವು ಪ್ಯಾಂಟ್ ತೊಟ್ಟರು ಸೀರೆ ಉಡುವಿರೇನು ನೀವು?
ಉದರದಲ್ಲಿ ನಿಮ್ಮ ಸಂತಾನ ಹೊರವಿರೇನು?
ಸಂಕಟವ ಸಹಿಸುವ ನಗುವ ಬೊಂಬೆಯ ಭೂಮಿಗಿಳಿಸುವಿರೇನು?
ಹೆಣ್ಣಾದರೂ ಮಾತೆ ಮಾಯೆಯಲ್ಲಾ
ಆ ಮಮತೆಯ ಕಲಿಗಳ ಮಾಯ ಮಾಡುವಿರಲ್ಲ[೧]

(ಸುಲೋಚನಾ ಜೆ.ರಾವ್, ಪುಟ-೧೬ ೧೯೮೯)

ಇಲ್ಲಿ ಪ್ರಶ್ನೆ ಸರಳವಾಗಿದೆ. ಆಕ್ರೋಶವಿಲ್ಲದ ಪ್ರತಿಭಟನೆಯಿಲ್ಲದ ತನ್ನ ಪ್ರಶ್ನೆಯನ್ನು ಕೇಳಿದರೆ ಸಾಕೆಂಬ ಧನ್ಯತೆ ಇದೆ. ತನ್ನ ಸ್ತ್ರೀ ಸಹಜ ಕಾರ್ಯಗಳಲ್ಲಿ ಅವಳಿಗೆ ಅಪಾರ ಅಭಿಮಾನವಿದೆ. ಹೆಣ್ಣೆಂದರೆ ಏನು ಮಹಾ? ಎನ್ನುವ ಗಂಡಸರಿಗೆ ಅವಳು ಸಹಜವಾಗಿಯೇ ಪ್ರತಿಭಟಿಸಿದ್ದಾಳೆ.

ಹೊಡೆದರೆ ಮಾತ್ರನೋವೆ? ರಕ್ತ ಸೋರಿದರೆ ಮಾತ್ರ ಗಾಯವೇ?
ಹೃದಯಕ್ಕೆ ಬರೆಯಟ್ಟು ಕಣ್ಣಲ್ಲಿ ಲಾವರಸ ಹರಿಸಿದರೆ
ಸಹಿಸಲಾಗದ ನೋವೇನು? ಅದೇ ತಾನಾಗಿ ನಮ್ಮ ದಹಿಸಲಾರಾದೇನು?[೨]

(ಉಷಾ ಪಿ. ರೈ ಪುಟ-೧೪ ೧೯೯೦)

ಈ ಕವಿತೆ ದೌರ್ಜನ್ಯದ ಇನ್ನೊಂದು ಮುಖವನ್ನು ಹೇಳುತ್ತದೆ. ಹೊಡೆತ-ಬಡಿತಗಳೆಂಬ ನೇರ ದೌರ್ಜನ್ಯಕ್ಕಿಂತ ಸರಳತೆ-ಸಂಪ್ರದಾಯದ ಮುಖವಾಡ ಹೊತ್ತ ಹಿಂಬದಿ ದೌರ್ಜನ್ಯಗಳ ಬಗ್ಗೆ ಹೇಳುತ್ತದೆ. ಸಮಾಜದಲ್ಲಿ ಹೆಣ್ಣಿಗೆ ಸಹನೆ, ತ್ಯಾಗ ಪ್ರೀತಿ ಆದರ್ಶಗಳನ್ನು ಸಮೀಕರಿಸಿ ಅವಳನ್ನು ಎತ್ತರಕ್ಕೇರಿಸುತ್ತದೆ. ಸಮಾಜ ಇದನ್ನು ಬಳಸಿಕೊಂಡು ಅವಳನ್ನು ತನ್ನ ಅನುಕೂಲತೆಗೆ ಬಳಸಿಕೊಳ್ಳುತ್ತದೆ. ಇದನ್ನು ಅರಿವುಳ್ಳ ಕವಿಯಿತ್ರಿ ಪ್ರಶ್ನಿಸಿದ್ದಾಳೆ.

ಲಂಚಕೋರನು ನೀನು ವಂಚನೆಯ ಮಾಡಿರುವೆ
ಮೃದುತನದ ಸ್ತ್ರೀ ವರ್ಗಕ್ಕೆ
ಕಸಕ್ಕಿಂತ ಕಡಿಮೆಯಾಯಿತೆ ಹೆಣ್ಣು ಜನ್ಮವು ನಿನಗೆ
ಈ ಬಾರ ಹೊರೆಸುವುದಕ್ಕೆ ಗಿಡವೆಂದು ಬಗೆದೆಯಾ
ಹೆಣ್ಣು ಜನ್ಮದ ಒಡಲ ಫಲಗಳನ್ನು ಸೃಜಿಸುವುದಕ್ಕೆ
ನಿನ್ನ ಬೆಳಯನ್ನಪ್ಪಿ ತೊಟ್ಟಿಲೊಳು ಲಾಲಿಸುತ
ಜೋಗುಳ ಗುಟ್ಟುವೆವು ನಾವು*[೩]

(ಬೆಳಗೆರೆ ಜಾನಕಮ್ಮ, ಪುಟ-೨೩ ೧೯೮೮)

ನವೋದಯದ ಆರಂಭದ ಕಾಲದಲ್ಲಿ ಕವಯಿತ್ರಿ ಬೆಳಗೆರೆ ಜಾನಕಮ್ಮ ಪ್ರಶ್ನಿಸ ಹೊರಟಿರುವುದು ದೇವರನ್ನು ಹೆಣ್ಣಿನ ಫಲವತ್ತತೆಯ ಬಗ್ಗೆ ಗಂಡಸು ಪ್ರಪಂಚ ನಿರಾಯಾಸ ವಾಗಿ 'ಹೆಚ್ಚೇನಲ್ಲ' ಎಂದ ಅಭಿಪ್ರಾಯ ತೊಡಗಿದಾಗ ಕವಯಿತ್ರಿ ಹೀಗೆ ಗುಡುಗಿದ್ದಾಳೆ.

ಹೇಗೆ ಸಹಿಸಿದೆ ತಾಯಿ ಹೇಗೆ ಸಹಿಸಿದೆ?
ಇರಲು ಹೆಗಲು ಎವೆಮುಚ್ಚದೆ, ಲಂಕೆಯ ದೆವ್ವಬನದಲ್ಲಿ
ಹೆದರಿ ಗೂಡಾಗಿ ಕುಳಿತು ಕಾದ ಮೌಲ್ಯಗಳು
ಅಪಶಂಕೆಯ ಬೆಂಕಿಯಲಿ ಸೀದು ಕರಿಕಾಗುವಾಗ ಹೇಗೆ ನಲುಗಿದೆ
ಬಿಚ್ಚಿತೋರಿಸಬಹುದೆ? ತೋರಿಸಿ ಒಪ್ಪಿಸಬಹುದೆ?
ನಮ್ಮಲ್ಲಿ ಭೂತ ವರ್ತಮಾನದ ಸತ್ಯವನ್ನು?[೪]

(ಪ್ರೇಮ ಶಿರಸಿ ಪು-೮೩-೧೯೯೯)

ಪುರಾಣದ ಪ್ರಖ್ಯಾತ ಸ್ತ್ರೀಯಾದ ಸೀತೆಯ ಪಾತ್ರ ಪರಂಪರೆಯ ಪರಿಸ್ಥಿತಿಯನ್ನು ಪ್ರಶ್ನಿಸಿದ್ದಾಳೆ. ಕವಯಿತ್ರಿಯಲ್ಲಿ ಹಿಡಿದಿಟ್ಟ ಭಾವನೆ ಹೊರಬಿದ್ದುದ್ದು, ಅಲ್ಲಿಯವರೆಗೂ ಪಾತಿವ್ರತ್ಯದ ಸಾಲಿನಲ್ಲಿ ಇರಿಸಿದ್ದ ಪುರಾಣದ ಸ್ತ್ರೀಯರನ್ನು ಒಬ್ಬೊಬ್ಬರು ಕಟಕಟೆಗೆ ಕರೆಯ ಲಾಗಿದೆ. ಕವಿಯತ್ರಿಯ ಪ್ರಕಾರ ಸೀತೆ ಸಹಿಸಿಕೊಂಡಿದ್ದು ಹೆಣ್ತನದ ಪ್ರತೀಕವಲ್ಲ. ಇಲ್ಲಿ ರಾಮ ಶೋಷಕನಾಗಿದ್ದಾನೆ.

ತಳೆದ ಭಾವನೆಗಳಿಗೆ ಸಂಯಮದ ಬಂಡೆ ಎಳವು
ಮರುಭೂಮಿಯ ಹೂವಾದ ಅಹಲ್ಯೆ
ಅದೇ ಗಂಡಸಿನ ಸ್ವಾರ್ಥ ಕೋಪಕ್ಕೆ ಕಲ್ಲಾಗಿ
ನಂತರ ಕಾಲ ತಪಗೈದ ನಿನಗೆ ಮತ್ತೇಕೆ ತಳಮಟ್ಟಿದೆ
ರಾಮನ ಪಾದ ಸ್ಪರ್ಶ ಬೇಕಾಯಿತೆ ಅರಿವಾಗುತ್ತಿಲ್ಲ.[೫]

(ಸರಸ್ವತಿ ಗೌಡ ಪುಟ-೮೩-೧೯೮೦)

ಈಗ ಪ್ರಶ್ನೆಯ ಕಟ-ಕಟೆಯಲ್ಲಿ ನಿಂತಿರುವುದು ಅಹಲ್ಯೆ. ಗೌತಮನಿಂದ ಕಲ್ಲಾದ ಅಹಲ್ಯೆಯನ್ನು ರಾಮನ ಪಾದ ಸ್ಪರ್ಶದಿಂದ ಮರುಜನ್ಮ ಪಡೆದ ಅಹಲ್ಯೆಯನ್ನು. ಇಲ್ಲಿ ಶಾಪ ಕೊಟ್ಟವನು ಮತ್ತು ಶಾಪ ಕಳೆದವನು ಪುರುಷನೆ. ಅವಳು ಮಾತ್ರ ಸೂತ್ರದ ಗೊಂಬೆಯಾಗಿದ್ದವಳು.

ಎಲ್ಲರಿಗೂ ಗೊತ್ತಾಗಿದೆ. ಈ ವರ್ಷ ನೀವು ಪೂರ್ಣ ಸ್ವತಂತ್ರಳೆಂದು
ನಿನ್ನ ಕಗ್ಗೋಲೆಯಿಂದ ರುಣಕ್ಕೆ ಮುಲಾಮು ಹೆಚ್ಚದೆ.
ಅಯ್ಯೋ ನಾರಿಯರ ಕಾಯಕಗಳಲ್ಲಿ ತೆಳಕಳೆಗಾಗಿವೇನೋ
ದ್ರೌಪತಿ, ಸೀತೆ, ಸಾವಿತ್ರಿಯರ ನೆನದದಲೇ ಮಹಾಪಾಪ
ವೆನ್ನುವ ರೀತಿಯಲ್ಲಿ ನಡೆದಿರುವೆ.
ನಿನ್ನ ಈ ವ್ಯಕ್ತಿತ್ವ ಹೆಣ್ಣಿನ ಗುಣಗಳಲ್ಲ
ಅಬ್ಬರದ ಹೆಬ್ಬದಲ್ಲಿ ಕರಗಿ ಹೀಗಿದೆಯೇನೆ?
ಅಂತರಾಷ್ಟ್ರೀಯ ಮಹಿಳಾ ವರ್ಷದ ಅಬ್ಬರದಲ್ಲಿ
ನಿನ್ನ ಹುಡುಕುವುದೇ ದುಸ್ಸಾಹವಾಗಿದೆ.[೬]

(ವಿಜಯಾದಬ್ಬೆ ಪುಟ-೮೨ ೧೯೭೬)

ಮೇಲ್ನೋಟಕ್ಕೆ ಆಧುನಿಕ ಸಮಾಜವು ಹೆಣ್ಣಿಗೆ ಎಲ್ಲಾ ಹಕ್ಕು ಕೊಟ್ಟಂತೆ ಕಂಡರೂ ವಾಸ್ತವಿಕವಾಗಿ ಅವಳನ್ನು ಹಿಂದಿಕ್ಕಿದೆ. ಅಂತರಾಷ್ಟ್ರೀಯ ಮಹಿಳಾ ವರ್ಷದ ಆಚರಣೆ ಮೇಲ್ನೋಟಕ್ಕೆ ಅವಳ ಎತ್ತರಕ್ಕೇರಿಸಿದರೂ ಅವಳ ದುರಂತವೇ ಆಗಿದೆ. ಸಮಾಜದ ಒಳಗೊಂದು ಹೊರಗೊಂದು ಮನೋಭಾವವನ್ನು ಎತ್ತಿಹಿಡಿಯುತ್ತದೆ.

ಮತ್ತೆ ಎಂದು ಬರುತ್ತಿ? ತುದಿಗಾಲಲ್ಲಿ
ಇಲ್ಲಿಯ ಮುಳ್ಳು ಚುಚ್ಚದಾಗೆಲ್ಲ ನಿನ್ನದೇ ನೆನಪು
ಚಿಂತಿಸಬೇಡ, ನನಗೆ ಗೊತ್ತು ನೀನು ಏಕಪತ್ನೀಕನಲ್ಲ[೭]

(ಪ್ರೇಮ ಶಿರಸಿ ಪುಟ ೧೦-೧೯೯೯)

ಸಹನೆ, ತ್ಯಾಗ ಸಾಮಾನ್ಯ ಹೆಣ್ಣು ಒಬ್ಬಳಿಗೆ ಮಾತ್ರ ಸೀಮಿತವೆನಿಸಿದೆ. ಶೀಲವೆಂಬುದು ಹೆಣ್ಣೊಬ್ಬಳಿಗೆ ಮಾತ್ರವಂತೆ ಸಮಾಜ ಶಿಕ್ಷೆ ಕೊಟ್ಟಿದೆ. ಪುರುಷನ ವ್ಯಕ್ತಿತ್ವ ಎಂಥಾ ಕೆಳಮಟ್ಟಕ್ಕಿದ್ದರೂ ಪ್ರೀತಿಯ ದೇವತೆಯಾದ ಸ್ತ್ರೀ ಅದನ್ನು ವಿರೋಧಿಸಿದರೂ ಆತನ ನಿರೀಕ್ಷೆಯಲ್ಲಿದ್ದಾಳೆ.

ನೀನಲ್ಲ ಗೆಳೆಯ ನಗುವ ಹೂವಿಗೆ ಕಂಪ ತುಂಬಿದ್ದು
ಆಗಸದ ಬಯಲಿನಲ್ಲಿ ಚುಕ್ಕೆಗಳ ನಿರಿಸಿದ್ದು
ಹಿಮದ ಗಡ್ಡೆಯಲ್ಲಿ ಶೀತಲತೆಯ ತುಂಬಿದ್ದು
ಕಾಮನ ಬಿಲ್ಲಿಗೆ ಸಪ್ತವರ್ಣವ ಹಚ್ಚಿದ್ದು

ಮಾಗಿದ ಫಲಗಳಲ್ಲಿ ಸವಿಯ ತುಂಬಿದ್ದು
ಅದರನಲ್ಲ ಇವೆಲ್ಲವನ್ನು ನನ್ನೆದೆಯ ಅಂಗಳದಿ ಮೂಡಿಸಿದನೀನು?[೮]

(ಪದ್ಮಶೇಕರ–ಪುಟ–೨೮ ೨೦೦೦)

ಅದರೆನಲ್ಲ ಇವೆಲ್ಲವನ್ನು ನನ್ನೆದೆಯ ಅಂಗಳದಿ ಮೂಡಿಸಿದನೀನು? ಎನ್ನುವಲ್ಲಿ ಪ್ರೀತಿಯ ಎತ್ತರಕ್ಕೇರಿದ ಸ್ಥಾನವನ್ನು ಕಾಣಬಹುದು. 'ನೀನಲ್ಲ' ಎಂಬಲ್ಲಿ ಎಲ್ಲವು ನಿನ್ನಿಂದಲ್ಲ ಎನಿಸಿದರೂ, ಎಲ್ಲವೂ ನಿನ್ನಿಂದ ಮೂಡಿಸಲು ಸಾಧ್ಯ ಎನ್ನುವಲ್ಲಿ ಸಾರ್ಥಕತೆ ಇದೆ. ಪ್ರಶ್ನೆ ಇಲ್ಲಿ ಸಾರ್ಥಕತೆ ಪಡೆದಿದೆ

ದ್ರೌಪದಿಯ ಸ್ವಗತ, ಸೀತೆಯ ಸ್ವಾಗತ ಅಹಲ್ಯೆ ಅಮೃತಮತಿ
ಹೀಗೆ ಅವರವರ ಸ್ವಗತವನ್ನು ಹಾಡುತ್ತಾ
ಅವರೊಳಗೆ ತಮ್ಮನ್ನು ಕಾಡುತ್ತಾ
ಕವಿತೆ ಬರೆಯುವ ಇಂದಿನ ಕವಿಯಿತ್ರಿಯರು.
ಈ ಇವರು ಮಾಡಿದ ಇಷ್ಟನ್ನು ಒಂದು ಹೆಣ್ಣು ಒಂದು ಬಾರಿಗೆ?
ಮಾಡುವ ಅವಕಾಶವಿರುವ ಈ ಕಾಲದಲ್ಲಿ
ಇವಳ ಸ್ವಗತವನ್ನು ಬರೆಯುವವರು ಯಾರು?
ಅಥವಾ ಇವಳಿಗೆ ಸ್ವಗತವೇ ಇಲ್ಲವೋ ಎಲ್ಲವೂ ಬಹಿರ್ಗತವೂ
ಮತ್ತೆ ಪ್ರಶ್ನೆಗಳಿಗೂ ಬರೀ ಪ್ರಶ್ನೆಗಳು[೯]

(ಡಾ. ಪ್ರಭಾವತಿ ಎಸ್.ವಿ. ಪುಟ–೧೦–೧೯೯೯)

ಇಂದಿನ ಕವಿಯಿತ್ರಿಯರು ತಮ್ಮ ಕವಿತೆಗಳಲ್ಲಿ ಸೀತೆ, ದ್ರೌಪದಿ, ಅಹಲ್ಯೆಯರನ್ನೇ ಧರ್ಮದ ಜಾಡಿನಿಂದ ಬಿಡಿಸಿ ಅವರಿಗಾದ ಅನ್ಯಾಯವನ್ನು ಎತ್ತಿ ಹಿಡಿದಿದ್ದಾರೆ. ಆಧುನಿಕ ಕವಿಯಿತ್ರಿಯರ ಹೊಸದಾದ ರೀತಿ ಇದಾಗಿದೆ.ಪುರಾಣದ ಸ್ತ್ರೀಯರನ್ನೆಲ್ಲಾ ಆಧುನಿಕವಾಗಿ ಪುನರ್ ವಿಮರ್ಶಿಸಿಕೊಂಡಿದ್ದಾರೆ.ಆದರೆ ಇಂದಿನ ಶತಮಾನದ ಹೆಣ್ಣು ಸೀತೆ, ಸಾವಿತ್ರಿ ಅಹಲ್ಯೆ ಎಲ್ಲಾ ಕಷ್ಟ ಅವಮಾನಗಳನ್ನು ಕಾಣುತ್ತಾಳೆ. ಮೇಲ್ನೋಟಕ್ಕೆ ಸಮಾಜ ಆಧುನಿಕವಾಗಿ ಕಂಡರೂ ವಾಸ್ತವಿಕವಾಗಿ ಅವಳನ್ನು ಹಿಂದಕ್ಕೆ ತಳ್ಳಿದ್ದನ್ನು ಈ ಕವಿತೆಯಲ್ಲಿ ಗುರುತಿಸಿಕೊಂಡಿದ್ದಾರೆ.

ಬಿಚ್ಚಬಹುದು
ಉಟ್ಟಸೀರೆಯನ್ನು
ಕಟ್ಟಿದ ಪೇಟವನ್ನು
ಬಿಚ್ಚಿ ತೋರಿಸಬಹುದೆ?
ತೋರಿಸಿಒಪ್ಪಿಸಬಹುದೆ?
ನಮ್ಮೆಲ್ಲ ಭೂತ ವರ್ತಮಾನದ ಸತ್ಯವನ್ನು?[೧೦]

(ವಿಜಯಾದಬ್ಬೆ, ಪುಟ ೨೩–೧೯೯೬)

ಮಹಿಳಾ ಪ್ರಜ್ಞೆಯನ್ನು ದಟ್ಟವಾಗಿ ಕಾವ್ಯ ಕ್ರಿಯೆಯಲ್ಲಿ ಕರಗಿಸುವಷ್ಟು ಶಕ್ತಿ, ಅಭಿವ್ಯಕ್ತಿ ತೋರಿರುವ ವಿಜಯಾದಬ್ಬೆ ಅವರಿಗೆ 'ಪರಂಪರೆ' ವರ್ತಮಾನ ಮುಖ್ಯ ಬದುಕಿನ ವಾಸ್ತವತೆ ಅಲ್ಲ. 'ಬಿಚ್ಚಬಹುದು ಉಟ್ಟ ಸೀರೆಯನ್ನು' ಎಂಬಲ್ಲಿ ಹಗುರತನದ ಸಂಕೇತವಾಗಿ ಹಾಗೂ ಸ್ತ್ರೀತ್ವದ ಪ್ರತೀಕವಾಗಿ ಗುರುತಿಸಿಕೊಳ್ಳಬಹುದು. ಅದೇ ರೀತಿ ಪೇಟ' ಎಂಬುದು ಪುರುಷತ್ವವನ್ನು ಸೂಚಿಸುವಂತಹದಾಗಿದೆ. ಇಲ್ಲಿ ಕವಿಯಿತ್ರಿ ಕೇಳುವ ಪ್ರಶ್ನೆ' ಕಟ್ಟಿದ ಪೇಟವನ್ನು ಬಿಚ್ಚಿ ತೋರಿಸಬಹುದು? ಎಂಬಲ್ಲಿ ಗಂಡು ಗಟ್ಟಿತನವನ್ನು ಮತ್ತು ಈ ಸಮಾಜ ವ್ಯವಸ್ಥೆಯಲ್ಲಿ ಪ್ರಾಮುಖ್ಯತೆ ಪಡೆದವರಾಗಿ ಕಂಡುಬರುವಂತಿದೆ. ಅದ್ದರಿಂದ ಪುರುಷ ಮುಖ್ಯವಾಗುವಷ್ಟು ಸ್ತ್ರೀ ಪ್ರಮುಖಳಾಗುವುದಿಲ್ಲ. ಇದನ್ನು ಮೀರಬೇಕಾದ ಅನಿವಾರ್ಯತೆಯೆ ನಮ್ಮ ಮುಂದಿರುವ ಸವಾಲು ಅದನ್ನು ನಾನು ಪರಂಪರೆಯೊಳಗಿನಿಂದಲೇ ಗಳಿಸಬೇಕಿದೆ. ಮಹಿಳಾ ಪ್ರಜ್ಞೆ ಜಾಗೃತವಾದಂತೆಲ್ಲಾ ಸ್ತ್ರೀಯು ಹೆಚ್ಚು ಪ್ರಬುದ್ಧಳಾಗುತ್ತಾಳೆಂಬುದು ಸತ್ಯ.

ನಾನೇಕೆ ಬಳ್ಳಿ ನೀನೇಕೆ ಮರ?
ನನ್ನ ಕಾಲ ಮೇಲಲ್ಲವೇ ನನ್ನ ನಿಲವು
ನನ್ನ ಬಾಳಿಗೂ ಇಲ್ಲವೇ ನಿನ್ನಂತೆ ಛಲವು.
ಆಸರೆಯ ಮಾತೆಲ್ಲಾ ಬೇಸರದ ನುಡಿಗಳೀಗ
ನಾನು ಬಳ್ಳಿಯೂ ಅಲ್ಲ ನೀನು ಮರವು ಅಲ್ಲ.[೧೧]

(ಭಾಗ್ಯ ಪುಟ-೧೩ ೧೯೭೯)

ಮರ, ಬಳ್ಳಿ ಎಂಬ ಪದವೂ ಗಂಡು-ಹೆಣ್ಣನ್ನು ಸೂಚಿಸುತ್ತದೆ. ಆದರೂ ಇಲ್ಲಿ ಸೂಚಿತವಾದ ಪದದಲ್ಲಿ ಗಟ್ಟಿತನ ಮತ್ತು ಮೃದುತ್ವವನ್ನು ಕಾಣಬಹುದು. ಮೊದಲಿನ ಸಾಲಿನಲ್ಲಿ ವ್ಯಕ್ತವಾದ ಭಾವನೆಯನ್ನು ನೋಡಿದಾಗ ಕವಿಯತ್ರಿಯಲ್ಲಿ ಪ್ರಶ್ನೆ ಉದ್ಬವವಾಗಿರಬೇಕು, ಇದು ಪ್ರಕೃತಿಯ ಸೃಷ್ಟಿ ಎಂದು ತಿಳಿದಿದ್ದರೂ ಯಾಕೆ ಹೀಗಾಯಿತು ಎಂಬ ಭಾವನೆ ಬಂದಿರಬೇಕು. ಮರ, ಬಳ್ಳಿ ಎಂಬ ಅರ್ಥಕ್ಕೆ ಮಾತ್ರ ಸೀಮಿತವಾಗದೇ ಮುಂದುವರಿದು ಕವಿಯಿತ್ರಿ 'ನನ್ನ ಕಾಲಮೇಲಲ್ಲವೇ ನನ್ನ ನಿಲುವು' ಎಂದಾಗ ಬಳ್ಳಿಯಾಗಿದ್ದರೂ ಸಹ ತನ್ನ ಕಾಲ ಮೇಲೆ ತಾನು ನಿಂತಿರುವುದು ಎಂಬ ಅರ್ಥವನ್ನು ತಿಳಿಸುತ್ತಾರೆ. ಬಳ್ಳಿಗೂ ಹಬ್ಬಿ ಹೂ ಬಿಡವ ಆಸೆ ಇದ್ದೆ ಇರುತ್ತದೆ. ಹೂ ಬಿಟ್ಟು ಕಾಯಿ ಬಿಟ್ಟಾಗ ಅದರ ಸಾರ್ಥಕತೆ ಪೂರ್ಣವಾಗುತ್ತದೆ. ಇದು ಬಳ್ಳಿಯ ಒಂದು ಗುರಿ.

ಅತ್ತೆ ಮಾವರಿಗಂಜಿ
ಮತ್ತೆ ಮೈದುನಗಂಜಿ
ತೊತ್ತಾಗಿಸತ್ತಂತೆ ಬಾಳಿದವರು

ಧರ್ಮದ ಹೆಸರಿನಲ್ಲಿ ನೀತಿಯ ನೆಪದಲ್ಲಿ
ನಿಮ್ಮ ಬಲೆಯಲ್ಲಿ ಸಿಕ್ಕು ಬಳಲಿದ ಮೀನುಗಳು
ನಿಮ್ಮ ಲಕ್ಷ್ಮಣರೇಖೆ ದಾಟಿದ ಸೀತೆಯರು ಅಲ್ಲವೇ?[೧೨]

(ಪ್ರಭಾವತಿ ಎಸ್.ವಿ. ಪುಟ-೧೫-೧೯೯೯)

ಮೊದಲ ಎರಡು ಸಾಲು ಜನಪದ ಗೀತೆಯಿಂದ ನೇರವಾಗಿ ತೆಗೆದುಕೊಂಡಂತವು. ಧರ್ಮದ ಹೆಸರಿನಲ್ಲಿ ನೀತಿಯ ನೆಪದಲ್ಲಿ ಇದನ್ನೆ ಒಂದು ಸೂತ್ರವನ್ನಾಗಿಸಿಕೊಂಡು ಹೆಣ್ಣನ್ನು ಬೇಕಾದ ಹಾಗೆ ದುಡಿಸಿಕೊಳ್ಳುತ್ತಿದ್ದರು. ಹೆಣ್ಣಿನ ಸ್ಥಿತಿ ಬಲೆಯಲ್ಲಿ ಸಿಕ್ಕಿ ಬಳಲಿದ ಮೀನಿನಂತೆ ಆಗಿತ್ತು . ಸೀತೆಯ ಪ್ರತೀಕವನ್ನು ಪ್ರಸ್ತುತ ಸಂಸ್ಕೃತಿಯ ಹೆಣ್ಣಿನೊಡನೆ ಹೋಲಿಸಲಾಗಿದೆ. ಆಗಿನ ಸೀತೆ ಲಕ್ಷ್ಮಣ ರೇಖೆಯನ್ನು ದಾಟಿ ಕೊರಗಿ ಸಾಯುತ್ತಿದ್ದಾಳೆ.

ಕವಿಯಿತ್ರಿಯರ ಪ್ರಶ್ನೆಗಳು ಇಲ್ಲಿ ಶತಮಾನಗಳಿಂದ ತುಳಿತಕ್ಕೆ ಒಳಗಾದ ಸ್ತ್ರೀಯ ಸ್ವಗತಗಳಾಗಿವೆ. ಎಲ್ಲಿಯವರೆಗೆ ಹೆಣ್ಣಿನಲ್ಲಿ ಗಟ್ಟಿತನ ಬರುವುದಿಲ್ಲವೋ ಅಲ್ಲಿಯವರೆಗೆ ಪ್ರಶ್ನೆಗಳು ಪ್ರಶ್ನೆಗಳಾಗಿ ಉಳಿಯುತ್ತವೆ.

೨. ದೃಢತೆಯುಳ್ಳ ಪಾತ್ರಗಳು

ಬರೀ ಪ್ರಶ್ನೆಗಳಲ್ಲೆ ತನ್ನ ಜೀವನವನ್ನು ಅದಕ್ಕಾದ ಅನ್ಯಾಯವನ್ನು ಸರಿಪಡಿಸಲು ಸಾದ್ಯವಿಲ್ಲವೆಂದು ಸ್ತ್ರೀ ಗ್ರಹಿಸಿದ್ದಳು. ತನ್ನತನದ ಬಗ್ಗೆ ಅದನ್ನು ತನ್ನ ಮೇಲಿನ ಶೋಷಣೆಯನ್ನು ಪ್ರಶ್ನಿಸುವುದಕ್ಕಿಂತ ಬಂಡೇಳುವುದು ತನ್ನ ಹಕ್ಕನ್ನು ಕಿತ್ತುಕೊಳ್ಳುವುದು ಅವಳ ನಿಲುವಾಗುತ್ತದೆ. ಈ ಕಾರಣದಿಂದಲೇ ಅವಳು ದೃಢತೆಯುಳ್ಳವಳಾಗಿ ಬದಲಾದಳು.

ಹುಟ್ಟಿನ ಜೊತೆಗೆ ಅಂಟಿಬಂದ
ಪರಂಪರೆಯ ಸಂಕೋಲೆಯಿಂದ
ಪಡೆ ಬಿಡುಗಡೆಯ
ಬಾಲ್ಯದಲ್ಲಿ ತಂದೆ-ತಾಯ್ಗಳು
ಹಾಕಿದ-ಗೋಡೆಗಳಾಚೆ ಇಣುಕಲಾರದೆ
ಬಾಗಿದ ರೆಪ್ಪೆಗಳು
ಹರೆಯದ ಗಂಡನ ಕೈಗೊಂಬೆಯಾಗಿ
ಅಳಿಸಿದಾಗ ಅತ್ತು
ನಗಿಸಿದಾಗ ನಕ್ಕು
ಉಪಭೊಗದ ವಸ್ತುವಾಗಿ
ಕಳೆದುಕೊಂಡ ಕನಸುಗಳು[೧೩]

(ಮಾಲತಿ ಪಟ್ಟಣಶೆಟ್ಟಿ ಪುಟ-೭೮ ೧೯೭೬)

ಆರಂಭದಲ್ಲಿ ತನ್ನ ಮೇಲಾಗುವ ಶೋಷಣೆಯನ್ನು ಹೇಳುವ ಧೈರ್ಯವನ್ನು ಹೊಂದಿರುವುದೇ ದೊಡ್ಡ ವಿಷಯ. ಯಥಾರ್ಥವನ್ನು ಹಾಗಿಯೇ ಒಪ್ಪಿಕೊಳ್ಳುವ ಹಾಗೂ ಅದೇ ನನ್ನ ಜೀವನವೆಂದು ಪರಿಗ್ರಹಿಸುವ ಸ್ತ್ರೀಗೆ ಅರಿವಿನ ಕಾರಣದಿಂದ ಸರಿ ತಪ್ಪುಗಳ ವಿಶ್ಲೇಷಣೆ ಮಾಡಿದ್ದಾಳೆ. ಆದರ್ಶ ಪುರುಷನೆನ್ನುವಲ್ಲಿ ಈ ಎಲ್ಲಾ ನಕಾರಾತ್ಮಕ ಗುಣಗಳಿಂದ ಮುಕ್ತವಾಗಿರಬೇಕೆಂದು ಬಯಸುತ್ತಾಳೆ. ತನ್ನ ಮೇಲಿನ ಶೋಷಣೆಯನ್ನು ಪ್ರಶ್ನಿಸಿದ ಸ್ತ್ರೀಗೆ ಅದನ್ನು ಮೀರಿ ವಿರೋಧಿಸುವಲ್ಲಿ ಗಟ್ಟಿಯಾಗಿದ್ದಾಳೆ.

ನಾನು ಕುರಿಮರಿಯಲ್ಲ, ನರಿಯೂ ಅಲ್ಲ
ಹೆದರಿಸಿದರೆ ಬೆದರಿಸಿ, ನಿನ್ನ ಬೇಟ ಪಾಲು ಪಡೆದು ಪಾಲುಕೊಟ್ಟು
ಎದೆಗೆ ಜೋಡಿ ಪಾರಿವಾಳದ ಕಾವಿತ್ತು ಗುಹೆಯೊಳಗೆ ಹೆಚ್ಚಿಟ್ಟ ದೀಪ
ಕಾಡುಗತ್ತಲೆ ಸೀಳಿ ಚಳಿಗೆ ಬೆಂಕಿಯಾಗಿ ಬೆಂಕಿಗೆ ಗಾಳಿ ಹಾಕುವ ಬೀಸಣಿಕೆಯಾಗಿ
ಬೀಸಣಿಗೆ ಹಿಡಿವ ಕೈಯಾಗಿ ಹಾಗೆ ಲಾಲಿ ಹಾಡುವ ತುಟಿಯಲ್ಲಿ
ತುಂಬಿದ ಮುತ್ತಾಗಿ ಇನ್ನು ಏನೆಲ್ಲ ಆಗಬಲ್ಲೆ...[೧೪]

(ಭಾಗ್ಯಲಕ್ಷ್ಮೀ, ಪುಟ ೮೬ ೧೯೯೯)

ಬೇಡವೆಂದು ಮುಖ ತಿರುಗಿಸಿದರೆ ಜಾಡಿಸಿ ಹೋಗಬಲ್ಲ ಸಿಂಹಿಣಿ ನಾವು ಸ್ತ್ರೀ ಏನು ಬೇಕಾದರೂ ಆಗಬಲ್ಲಳು ಅವಳು ಪ್ರೀತಿ, ಮಾತೃದೇವತೆ, ಎಲ್ಲ ಕಷ್ಟಗಳ ಸಹಿಸುವ ಸಹಿಷ್ಣುತೆ ಹೀಗೆ ಏನು ಬೇಕಾದರೂ ಆಗ ಬಲ್ಲಳು. ಆದರೆ ಗಂಡಸಿನ ತಿರಸ್ಕಾರ, ಅವಮಾನ ವನ್ನು ತಡೆಯಲಾರಳು. ತಿರಸ್ಕಾರ ಅವಳ ಹೆಣ್ತನಕ್ಕಾದ ಅವಮಾನ.

ಮಗಳೆ ನೀನು ಬಳಕುವ ಬಳ್ಳಿಯಲ್ಲ
ರಂಬೆ ಊರ್ವಶಿ ಮೇನಕೆಯಲ್ಲ
ಥಳಕು ಬಳುಕಿನ ಬೋಂಬೆಯಲ್ಲ
ಬೆಡಗಿನ ಬಿನ್ನಣಾಗಿತ್ತಿಯಲ್ಲ
ಅತ್ತಿದ್ದು ಸಾಕು ಉಳಿಸಿಕೋ ನಿನ್ನತನ
ಸೀತೆಯಾದದ್ದು ಸಾಕು ನಿನಾಗು ಕಾಳಿ
ಅಷ್ಟ ಬುಜದಲೆ ನೀನು ಖಡ್ಗಾದಾರಿಣಿ, ನೀನು
ನಿನ್ನ ಪಟರ್ವ ಪೂರೆವ ಗಾಯಿತ್ರಿ ನೀನು
ಯಮನನ್ನೆ ಗೆದ್ದ ಸಾವಿತ್ರಿ ನೀನು[೧೫]

(ಶಶಿಕಲಾ ವಿರಯ್ಯ ಸ್ವಾಮಿ ಪುಟ-೨೬-೧೯೭೯)

‘ಅತ್ತೆ ಮಾವರಿಗಂಜಿ, ಸುತ್ತೇಳು ನೆರೆಗಂಜಿ’ ಎಂದು ಜಾನಪದದ ಗೀತೆಯಲ್ಲಿ ತಾಯಿಮಗಳಿಗೆ ಸನಾತನ ಧರ್ಮದ ಬಗ್ಗೆ ಹೇಳಿದರೆ ಇಲ್ಲಿ ತಾಯಿ ಮಗಳಲ್ಲಿ ಧೈರ್ಯ ಹೇಳುತ್ತಾಳೆ. ತಪ್ಪುಗಳಿರುವ ಕಡೆ ತಲೆಯೆತ್ತಿ ನಿಲ್ಲವಂತೆ ಹೇಳುತ್ತಾಳೆ.

ಈಗೀಗ ಯಾರೋ ಯಾರದೋ ಅನುಕರಣ ಮಾಡೋದು ನೋಡಿ
ನಂಗೂ ಹಂಗೇ ಮಾಡ್ಬೇಕಂತ ಮನಸ್ಸಾಯಿತು
ಯಾರದು ಮಾಡ್ಲಿ? ನಿರ್ಧರಿಸಿದೆ.
ತ್ರೇತಾಯುಗದ ರಾಮನಂಗೆ ....ಬುದ್ಧನಂಗೆ.......
ರಾಮನ ಸತ್ಯಸಂಧತೆ ಬುದ್ಧನ ಸರಳತೆ ಎಲ್ಲಾ ಇಟ್ಕೊಂಡು
ನನ್ನ ವ್ಯಕ್ತಿತ್ವ ನಾನೇ ಆಗ್ಬೇಕು[೧೬]

(ಚಿ.ನಾ.ಮಂಗಳ ಪುಟ ೮೦-೧೯೮೯)

ಸ್ವಂತಿಕೆ ಹೆಣ್ತನದ ಹೆಗ್ಗುರುತು. ರಾಮನ ಹಾಗೆ ಬುದ್ಧನ ಹಾಗೆ ಎಂದುಕೊಂಡು ಆದರ್ಶದ ಹಾದಿ ಹಿಡಿದವಳು ಕೊನೆಯಲ್ಲಿ ತನಗೆ ಸ್ವಂತಿಕೆ ಮುಂದು ಮಾಡಿದ್ದಾಳೆ.

ಬಂದರಿಗೆ ಹಡಗ ತಾಗಿಸುವ ಸವಿಗನಸಲ್ಲೇ
ಮುಳುಮುಳುಗಿ ಏಳುವ ಎದ್ದೆದ್ದು ಮುಳುಗುವ
ನಿಮಗೆ ವರ್ತಮಾನ ಕಾಣುವುದೆಂತು?
ಆದರೂ ನಡೆದು ಬಂದ ದಾರಿಯನ್ನು
ನಡೆಯಲಿರುವ ದಾರಿಯನ್ನೆ
ಮೈಲಿಕಲ್ಲಿನ ಬಳಿ ಮರದ ನೆರಳಲ್ಲಿ ಕೂತು
ತಣ್ಣಗೆ ನೋಡಿದರೆ
ನಿಮಗೂ ಕ್ಷೇಮ ನಮಗೂ ಕ್ಷೇಮ[೧೭]

(ರಶ್ಮಿ ಟಿ.ಎಸ್. ಪುಟ.೧೦೨-೧೯೯೬)

ಹೆಣ್ಣಿನ ಸಂಕಟಗಳಿಗಾಗಿ ಹಳಹಳಿಸದೆ, ಗೋಗರೆಯದೆ, ಸಮಸ್ಯೆಯ ಸಂಕೀರ್ಣತೆಯನ್ನು ಆಳವಾಗಿ ಪರಿಭಾವಿಸುತ್ತಲೆ ತನ್ನ ಲವಲವಿಕೆಯನ್ನು ಭರವಸೆಯನ್ನು ವ್ಯಕ್ತಗೊಳಿಸುವ ಉಷಾ ಅವರ ಕವಿತೆಗಳು ಸಮಕಾಲೀನ ಮಹಿಳಾ ಕಾವ್ಯದ ಒಳ್ಳೆಯ ಮಾದರಿಯೆನಿಸಿದೆ.

ಅದರೀಗ ಮನದ ನೋವು
ನಿಜದ ಅರ್ಥ ಪಡೆದಿದೆ
ತಡೆಯಾಲಾಗದಂಥ ರೋಷ
ಉಕ್ಕಿ ಭರತವಾಗಿದೆ.*[೧೮]

(ಉಷಾ. ಪುಟ-೯೬-೧೯೯೦)

ಪುರುಷರಿಂದಾಗುವ ಹೆಣ್ಣಿನ ಶೋಷಣೆಯ ವಿರುದ್ಧ ಸೆಟೆದು ನಿಲ್ಲುವ ಧೈರ್ಯ ಕವಿಯತ್ರಿಗಿರುವುದು ಪ್ರಶಂಸನೀಯ ವಿಷಯ. ಶತಮಾನಗಳಿಂದ ತಾನು ನೊಂದಿದ್ದನ್ನು ಪುನರ್ ವಿಮರ್ಶಿಸಿದ್ದಾಳೆ.

ನಸ್ತ್ರಿ ಸ್ವಾತಂತ್ರ ಮರ್ಹತಿ
ಎಂದೊದರಿಂದ ಆ ಮನುವನ್ನು
ಮೃಗವನ್ನು ಎಳೆದೊಯ್ಯುವೆವು
ಧಗಧಗಿಸುವ ಚಿತೆಯಲ್ಲಿ ದೂಡುವೆವು[೧೯]

(ಬಿ.ಟಿ.ಲಲಿತಾನಾಯಕ. ಪುಟ-೯೬ ೧೯೮೩)

ಶತಮಾನಗಳಿಂದ ನೊಂದ ಹೆಣ್ಣು ತನ್ನ ನೋವಿಗೆ ಕಾರಣರಾದ ಶತಮಾನದ ಹಿಂದಿನ ಮನುವನ್ನು, ಇಂದಿನ ತನ್ನ ಹೀನ ಸ್ಥಿತಿಗೆ ಕಾರಣವಾದ ಈ ಶತಮಾನದ ಪುರುಷರನ್ನು ಒಟ್ಟಿಗೆ ನಿಲ್ಲಿಸಿ ತನ್ನ ಆಕ್ರೋಶವನ್ನು ವ್ಯಕ್ತಪಡಿಸುತ್ತಾಳೆ.

ಗಂಡ ಪಂಜರದ ಗಿಳಿಯೇ
ನೀಬಲ್ಲೆ ಏನೆ ಆಚೆಗಿನ ಕಾನುಬಾನು
ಹೀಗೊಂದು ಹೊರಗೊಂದು ಜಾಗವೆಂಬುದುಂಟು
ಮೂಡಣದ ಬೆಳಕುಂಟು
ಪಡವಣದ ಕಡಲುಂಟು
ಹಿಂಡ ಹಕ್ಕಿಗಳು ಪಯಣಿಸುವುದುಂಟು[೨೦]

(ಬಿ.ಟಿ.ಲಲಿತಾನಾಯಕ. ಪುಟ-೯೬ ೧೯೮೩)

ಇಲ್ಲಿ ಕವಿಯತ್ರಿ ಶೋಷಣೆಗೊಳಗಾದ ಸ್ತ್ರೀಗೆ ಗಂಡನ ಪಂಜರದಿಂದ ಹೊರಬರುವಂತೆ ಅವರು ಕರೆ ನೀಡುತ್ತಾರೆ. ಇಂಥ ಅಭಿಪ್ರಾಯಗಳನ್ನು ಸ್ತ್ರೀ ವಿಮೋಚನಾ ಚಳುವಳಿಯ ಪ್ರಭಾವದಿಂದ ಮೂಡಿಬಂದಿವೆ ಎಂದು ಅನೇಕರಿಗೆ ಅನ್ನಿಸಬಹುದು. ಆದರೆ ಗಂಡನ ನೆರಳಲ್ಲೇ ಉಳಿದು ತನ್ನತನವನ್ನೇ ಮರೆಯುವ ಹೆಣ್ಣಿಗೆ ಇಂಥ ಕರೆ ಅಗತ್ಯ ಇದೆಯೆಂದು ಭಾವಿಸುವುದುಂಟು.

ಪಾದ ತೊಳೆದು ಕುಡಿಯೆನ್ನುವ
ತೀರ್ಥವನ್ನು ನಿಮ್ಮಮುಖಕ್ಕೆರಚಿ
ಬೆವರು ಸುರಿಸಿ ದುಡಿದುಬದುಕುತ್ತೇವೆ.[೨೧]

(ಶಶಿಕಲಾವಸ್ತ್ರದ, ಪುಟ ೩೬-೧೯೭೯)

ಈ ಸಾಲುಗಳಲ್ಲಿ ಹೆಣ್ಣಿನ ದಿಟ್ಟತನವ್ಯಕ್ತವಾಗಿದೆ. ಮಹಿಳೆ ತನ್ನ ಚಿಂತನಾ ಕ್ರಮದಿಂದ ಪರಂಪರೆ ಮತ್ತು ಬದುಕಿನ ಕಗಂಟನ್ನು ಬಿಡಿಸಬೇಕಾಗಿದೆ. ಪಿತೃಪ್ರಧಾನ ವ್ಯವಸ್ಥೆಯೊಂದನ್ನು ಪ್ರಶ್ನಿಸುವುದರಿಂದ ಮಹಿಳೆ ತನ್ನತನವನ್ನು ಕಂಡುಕೊಳ್ಳಲು ಸಾಧ್ಯವಿದೆ. ಹೆಣ್ಣಿನ ದೃಢತೆಯು ಕೆಲವೊಮ್ಮೆ ಆಕ್ರೋಶವೆನಿಸಿದರೂ ಅಂತಿಮವಾಗಿ ಸ್ವಾವಲಂಬಿ ಬದುಕಿನ ಕಡೆಗೆ ವಾಲುತ್ತದ.

೩. ವಿಷಮ ದಾಂಪತ್ಯ

ವಿಷಮದಾಂಪತ್ಯ ಇಂದಿನ ಕವಿಯತ್ರಿಯರ ಮುಖ್ಯ ವಿಷಯ. ಹೆಚ್ಚಾಗಿ ಪುನರಾವರ್ತಿತವಾಗುವ ಈ ವಿಷಯ, ಬಹುಷಃ ಸ್ತ್ರೀ ಜಗತ್ತು ಈ ಸಮಸ್ಯೆಯನ್ನೇ ಅತಿಯಾಗಿ ಅನುಭವಿಸಿರುವುದನ್ನು ಕಾಣಬಹುದು. ಹೆಣ್ಣು ಪಿತೃ ಪ್ರಧಾನತೆವುಳ್ಳ ವಾತಾವರಣದಲ್ಲೆ ಬೆಳೆದ ಅವಳಿಗೆ ಸ್ವಂತಿಕೆ ಮತ್ತು ತನ್ಮಯತೆಗಳು ಕೆಲವೊಮ್ಮೆ ಮರೀಚಿಕೆ ಆಸಕ್ತಿ ಅಭಿರುಚಿ ಗಳನ್ನು ಸಂಸಾರದ ಒಟ್ಟಾರೆ ಸುಖಕ್ಕಾಗಿ ಸಮರ್ಪಿತವಾಗುತ್ತದೆ. ಇದರ ಜೊತೆಯಲ್ಲಿ ಪಿತೃ ಪ್ರಧಾನ ಮೌಲ್ಯಗಳು ಗಂಡಸಿಗೆ ಅಡಿಯಾಳಾಗಿರುವುದು ಅವನ ವಿರುದ್ದ ಮಾತನಾಡದೇ ಇರುವುದು ಮುಂತಾದ ಸಂಪ್ರದಾಯಗಳು ಅವಳನ್ನು ಇಡಿಯಾಗಿ ಶೋಷಿಸುವುದುಂಟು. ಗಂಡನ ಮಧ್ಯಪಾನ ಜೂಜು ದುಷ್ಚಟಗಳು ಅವಳನ್ನು ರೊಚ್ಚಿಗೇಳಿಸುವುದುಂಟು. ಅವನ ದಬ್ಬಾಳಿಕೆ ಒಡೆತನಗಳು ಮೂಲದ ಸಂಪ್ರದಾಯದ ಹೇಳಿಕೆಯನ್ನು ವಿಶ್ಲೇಷಣೆಯನ್ನು ಮೀರುವುದುಂಟು ಈ ಎಲ್ಲಾ ಕಾರಣದಿಂದ ಕೆಲವೊಮ್ಮೆ ಸುಖದಾಂಪತ್ಯ ವಿಷಮದಾಂಪತ್ಯ ವಾಗುವುದು

ಆಧುನಿಕ ಕವಿಯತ್ರಿಯರು ಮೂಲತಃ ಸ್ತ್ರೀ ವಾದಿಗಳು. ಅವರು ಎಲ್ಲವನ್ನು ಸ್ತ್ರೀ ವಾದಿನೆಲೆಯಲ್ಲೇ ಪರಿಭಾವಿಸುತ್ತಾರೆ. ಆದ್ದರಿಂದ ಇಡೀ ವಿಷಮ ದಾಂಪತ್ಯ ನೆಲೆಯನ್ನು ಮಹಿಳಾ ನೆಲೆಯಲ್ಲಿ ನೇರವಾಗಿ ಚರ್ಚಿಸುತ್ತಾರೆ. ಜೊತೆಗೆ ಈ ಸಮಸ್ಯೆಯಲ್ಲಿರುವ ಕಾರಣವನ್ನು ಹೇಳಲಾಗುತ್ತದೆ

ಆದರ್ಶ ಪುರುಷನನ್ನು ಹುಡುಕ ಹೊರಟ ಕವಿಯತ್ರಿಗೆ ವಿಷಮ ದಾಂಪತ್ಯದಲ್ಲಿ ಕಾಣಸಿಗವುದು ಆದರ್ಶವನ್ನು ಕಳೆದುಕೊಂಡ ಪತಿಯೇ. ಆದರ್ಶವನ್ನು ನಿಷ್ಠೂರವಾಗಿ ಮೀರುವ ಪತಿರಾಯ, ಆದರ್ಶವಲ್ಲದ ಪತಿಯಲ್ಲಿ ನಕಾರಾತ್ಮಕ ಸಕಾರಾತ್ಮಕ ಗುಣಗಳನ್ನೇ ಹೇಳುವ ಮತ್ತು ಆದರ್ಶದ ಗುಣಗಳನ್ನು ಗುರುತಿಸುವುದು. ಗುಣಗಳನ್ನು ಗುರುತಿಸುವುದರ ಮಳುಕ ಆ ನಿಟ್ಟಿನಲ್ಲಿ ಈ ಪ್ರಬಂಧದ ಮೂಲ ಉದ್ದೇಶ ಮತ್ತು ಆದರ್ಶ ಪುರುಷನನ್ನು ಹುಡುಕಿರುವುದು ಇದೇ ರೀತಿಯಲ್ಲಿ.

ಕುಡಿತದ ಸಮಸ್ಯೆ, ವರದಕ್ಷಿಣೆ ಸಮಸ್ಯೆ, ತನ್ನತನದ ಪ್ರಶ್ನೆ ಸ್ವಾತಂತ್ರ್ಯದ ಬಯಕೆ ಹೀಗೆ ವಿಷಮ ದಾಂಪತ್ಯಕ್ಕೆ ಕಾರಣಗಳು ಹಲವಾರು. ಆಧುನಿಕ ಮಹಿಳಾ ಕವಿಯತ್ರಿಯರು ಸ್ತ್ರೀವಾದಿ ನೆಲೆಯಲ್ಲಿ ಈ ವಿಷಯವನ್ನು ವಿಶ್ಲೇಷಿಸಿದ್ದಾರೆ.

ಮಹಿಳಾ ಕಾವ್ಯದಲ್ಲಿ ಹೆಚ್ಚು ಕಾಣ ಸಿಗುವ ಅಂಶವೆಂದರೆ 'ವಿಷಮ ದಾಂಪತ್ಯ' ಸಮಾಜದಲ್ಲಿ ಪಿತೃ ಪ್ರಧಾನ ಮೌಲ್ಯದ ಕಟ್ಟುನಿಟ್ಟಿನ ಕುಟುಂಬದಲ್ಲಿ ಸಿಲುಕಿಕೊಂಡ ಹೆಣ್ಣು

ಅಂತಿಮವಾಗಿ ಶೋಷಣೆಗೆ ಒಳಗಾಗುವುದುಂಟು. ಸಂಪ್ರದಾಯ ಬದ್ಧ ಪಿತೃ ಪ್ರಧಾನ ಮೌಲ್ಯದ ಕಟ್ಟು ನಿಟ್ಟಾದ ಕುಟುಂಬದಲ್ಲಿ ಸಿಲುಕಿಕೊಂಡ ಹೆಣ್ಣು ಅಂತಿಮವಾಗಿ ಶೋಷಣೆಗೆ ಒಳಗಾಗುವುದುಂಟು. ಈ ಸಂಪ್ರದಾಯ ಬದ್ಧ ಸಮಾಜದಲ್ಲಿ ಹೆಣ್ಣು ಮೂಲತಃ ಎರಡನೆ ದರ್ಜೆಯ ಪ್ರಜೆ. ಸಮಾಜದ ಎಲ್ಲ ಅನುಕೂಲಗಳು, ಸುಖಗಳು ಕಾನೂನುಗಳು ಪುರುಷನಿಗೆ ಪರೋಕ್ಷವಾಗಿ ಮುಖ ಮಾಡಿರುತ್ತವೆ. ಇಂತಹ ಸಮಾಜದಲ್ಲಿ ಹುಟ್ಟಿದ ಗಂಡು ಪುರುಷ ಪ್ರಧಾನವಾದ ಕಟ್ಟಳೆಯನ್ನೇ ಎತ್ತಿ ಹಿಡಿಯುತ್ತಾನೆ. ಅದನ್ನೆ ತನ್ನ ಹಕ್ಕೆಂದು ಭಾವಿಸುತ್ತಾನೆ. ಈ ಸಂದರ್ಭದಲ್ಲಿ ಹೆಣ್ಣಿನ ಯಾವುದೇ ಭಾವನೆ ಹಕ್ಕುಗಳಿಗೆ ಬೆಲೆಯಿರುವುದಿಲ್ಲ, ಇದನ್ನು ಸ್ವಾಭಿಮಾನದ ಹೆಂಗಸು ವಿರೋಧಿಸುತ್ತಾಳೆ. ಸ್ವಾಭಾವಿಕವಾಗಿ ಇದನ್ನು ಗಂಡು ವಿರೋಧಿಸಿದಾಗ ಅಲ್ಲಿ ವಿಷಮ ದಾಂಪತ್ಯವೇರ್ಪಡುತ್ತದೆ.

ನಾವು ಸ್ತ್ರೀಯರು
ಶತ ಶತಮಾನಗಳಿಂದ
ನಿಮ್ಮ ಭೋಗದ ವಸ್ತುಗಳಾಗಿ
ಕರಗಿ-ಕೊರಗಿ ಹೋದವರು
ಪತಿಯ ಪಾದಪೂಜೆಯಲ್ಲೇ
ಆಯುಷ್ಯ ಸವೆಸಿದವರು.''

(ವಿಜಯಶ್ರೀ ಸಬರದ, ಪುಟ-೯೧-೯೯೧)

ಪತಿಯೇ ಪರದೈವ ಎಂದು ನಂಬಿದ ಸ್ತ್ರೀಕುಲ ತನ್ನ ಜೀವನವನ್ನೆಲ್ಲ ಪತಿಯ ಸೇವೆಯಲ್ಲಿಯೇ ಕಾಲ ಕಳೆದಿದೆ. ಇದು ಇಂದು ನಿನ್ನೆಯ ಮಾತಲ್ಲ. ಶತ-ಶತಮಾನಗಳಿಂದಲೂ ನಡೆದುಕೊಂಡು ಬಂದ ಸಂಗತಿ, ಹಿಂದಿನ ಯಾವುದೇ ಕೃತಿ ಪುರಾಣವಾಗಲಿ, ಕಾವ್ಯವಾಗಲಿ ಗಮನಿಸಿದರೆ ಹೆಣ್ಣು ಭೋಗದ ವಸ್ತುವಾಗಿ, ಪುರುಷರು ಹಿಡಿತದಲ್ಲಿಟ್ಟುಕೊಂಡು ತಮಗೆ ಇಷ್ಟ ಬಂದ ರೀತಿಯಲ್ಲಿ ನಡೆದಿಕೊಂಡಿದ್ದನ್ನು ನೋಡ ಬಹುದು. ಇದರಿಂದ ಹೆಣ್ಣಾದವಳು ಕಷ್ಟವೋ ಸುಖವೋ ಪತಿಯು ಹೇಳಿದಂತೆ ಕೇಳಿಕೊಂಡು ಆತನ ಪಾದ ಪೂಜೆ ಮಾಡುತ್ತಾ ಜೀವನದ ಅಂತ್ಯ ಕಾಣುತ್ತಿದ್ದಳು.

ಮನೆಗೆ ಬಂದು ನೋಡು
ನಮ್ಮಮ್ಮನ ಪಟಕ್ಕೆ
ಎಂಥ ಮಜಭೂತಾದ ಬೆಳ್ಳಿಕಟ್ಟಿದೆ
ಅಪ್ಪನ ಶಂಕೆ ಬೆಳೆದಂತೆ
ಅಮ್ಮ ಕೃಶ ವಾಗತೊಡಗಿದಳು
ನಮ್ಮ ಅಕ್ಕ ತಂಗಿಯರಿಗೆಲ್ಲ

ಬಿಸಿಲು ತಗಲದಂತೆ
ಖುದ್ದು ಬುರ್ಕಾ ಹೊಲಿಸಿದ್ದು ಸುಳ್ಳೆ?[೨೩]

(ವಿಜಯಾದಬ್ಬೆ, ಪುಟ ೧೦೪–೧೯೯೬)

ನಮ್ಮಮ್ಮನ ಪಟಕ್ಕೆ ಎಂಥ ಮಜಭೂತಾದ ಬೆಳ್ಳಿಕಟ್ಟಿದೆ ಎಂಬುದು ಹೆಣ್ಣಿನ ಬಂಧನದ ಬಿಗಿಯನ್ನು ಹೇಳುತ್ತಾ ಅವಳು ಪಟಮಾತ್ರವಾಗಿರುವ ಕಟು ಸತ್ಯವನ್ನು ಅನಾವರಣಗೊಳಿಸುತ್ತದೆ. 'ಅಪ್ಪನ ಶಂಕೆ ಬೆಳೆದಂತೆ ಅಮ್ಮ ಕೃಶವಾಗತೊಡಗಿದಳು' ಎಂದು ಸೂಚಿಸುವಲ್ಲಿ ಪುರುಷ ಪ್ರಧಾನ ಸಮಾಜದಲ್ಲಿ ಗಂಡಸರ ದಬ್ಬಾಳಿಕೆಯಿಂದ ಸ್ತ್ರೀ ಕುಲದ ಬಾಳ್ವೆ ನಶಿಸಿ ಹೋಗುತ್ತಿರುವುದನ್ನು ಗಮನಿಸಬಹುದು.

ಅವಳ ಹಾಸಿಗೆ ಹೂರಗೆ ಹಾಕು
ಅವಳ ಸೊಕ್ಕು ಮುರೀಲಿ
ಅಡಗಿ ಮನಿ ಬೀಗ ಹಾಕು
ಉಪವಾಸ ಸಾಯಲಿ[೨೪]

(ಶೈಲಾಜ ಉಡುಚಣ, ಪುಟ–೫೯–೧೯೮೮)

ಈ ಕವನ ಟಿಪಿಕಲ್ ಸಂಪ್ರದಾಯದ ಸಂಸಾರದ ಹೆಣ್ಣಿನ ಚಿತ್ರಣ ಕೊಡುತ್ತದೆ. ತಾಯಿಯನ್ನು ದೇವರೆಂದೆ ಭಾವಿಸುತ್ತಾ ಅವರು ಹೇಳಿದಂತೆ ಕೇಳಿಕೊಂಡು ಗಂಡಸೇ ದೇವರೆಂದು ನಂಬಿ ಬಂದ ಹೆಂಡತಿಗೆ ಚಿತ್ರಹಿಂಸೆ ಕೊಡುವುದನ್ನು ಚಿತ್ರಿಸಿದ್ದಾರೆ.

ಗಂಡ ಹೆಂಡಿರ ಜಗಳದಲ್ಲಿ ಕೂಸುಬಡವಾಯಿತಂತೆ.
ನಿಜ ಆದರೆ ಕೂಸೇ ಇಲ್ಲದ ನಮ್ಮ ಮನೆಯಲ್ಲಿ
ಭಾಗಿಲುಕಿಟಕಿಯದೇ ಆರ್ಕೆಸ್ಟ್ರಾ ತಟ್ಟೆ ಲೋಟಗಳದ್ದೆ ಮೇಳಗೀತ
ಲೈಟ್ ಸ್ವಿಚ್ ಗಳಿಗೆ ಕನ್ಫೂಷನ್
(ಕಾರಣ ಒಬ್ಬರು ಹಾಕಿದರೆ ಮತ್ತೊಬ್ಬರು ಆರಿಸುವರು)[೨೫]

(ಟಿ.ಸಿ ಪೂರ್ಣಿಮ ಪುಟ–೪೬–೧೯೯೯)

ವಿಷಮ ದಾಂಪತ್ಯದ ಜಗಳದ ಸರಳ ಚಿತ್ರಣವನ್ನು ಇಲ್ಲಿಕೊಟ್ಟಿದ್ದಾರೆ ಸಾಮರಸ್ಯವಿಲ್ಲದ ಜೀವನ ಅಂತಿಮವಾಗಿ ಹಳ್ಳ ಹಿಡಿಯುತ್ತದೆ.

ನಾನವನ ಅರ್ಧಾಂಗಿ
ಅವನ ಯಾವ ಅಂಗದ ಮೇಲೆ ನನಗೆ ಅಧಿಕಾರವಿದೆ. ಹೇಳು
ನನ್ನ ನಗು ಅಳುವಿನ ಮೇಲೆ ಅವನದೇ ಅಧಿಕಾರ
ಅಷ್ಟೆಯೇಕೆ ಅವನ ಒಪ್ಪಿಗೆ ಪಡೆದು ನಾನು ಫಲ ಧರಿಸಬೇಕು
ಭ್ರೂಣ ಹೆಣ್ಣಾಗಿದ್ದರೆ ಹೃದಯ ಕತ್ತರಿ ಪ್ರಯೋಗ

ನಿನ್ನಹೆಡೆದ್ವನ ಕಿವಿಗೆ ಕೇಳಿಸುವುದೇನೆ_.
.....ವರ್ಷದ ೩೬೪ ದಿನಗಳು ಗಂಡಸರದೇ
ಆದರೂ ನಮಗಾಗಿ ಒಂದು ದಿನದ ಆಚರಣೆ ಸಾಕಲ್ಲವೇ?[೨೬]

(ಶರಿಫಾ, ಪುಟ–೧೦೨–೧೯೯೭)

ಹೆಣ್ಣು ಗಂಡಿನ ಸಾಮರಸ್ಯಕ್ಕೆ ಬೇಕಿರುವುದು ಪ್ರೀತಿ ಹೊರತು ದಬ್ಬಾಳಿಕೆಯಲ್ಲ. ಸಂಪ್ರದಾಯ, ಪುರಾಣಗಳು, ಧರ್ಮಶಾಸ್ತ್ರಗಳು ಹೆಣ್ಣನ್ನು ಸ್ವಾಭಾವತಃ ರೂಪಿಸಿವೆ. ಅವಳು ತ್ಯಾಗಮಯಿ ಕರುಣಾಳು, ಕಷ್ಟ ಸಹಿಷ್ಣುತೆ ಹೀಗೆ ಅವಳಿಗೆ ಪುರುಷನಿಗೆ ಅನುಕೂಲ ವಾಗುವ ಎಲ್ಲಾ ಅವಶ್ಯಕತೆಯನ್ನು ತುಂಬಿದ್ದಾರೆ ಇದರಿಂದ ಹೆಣ್ಣು ಗುಲಾಮಳೆನಿಸುತ್ತಾಳೆ. ತನ್ನ ಸ್ವಾತಂತ್ರವನ್ನು ಕಳೆದುಕೊಳ್ಳುತ್ತಾಳೆ.

ನೆರಮನೆಯ ರಂಗು ರಂಗಿನ ಕಿಟಕಿ ಕದ ಸಂದಿಯಿಂದ
ಬೇಡವೆಂದರೂ ತೂರಿ ಬಂದು ತಿವಿದ ಸ್ವರ
ಸ್ವತಂತ್ರೋತ್ಸವಕ್ಕೆ ಕಟ್ಟಿದ ತಳಿರೆ ತಟ್ಟಿ ಎಬ್ಬಿಸಿತ್ತು
ಬೇಕಾದ್ದು ಮಾಡುವ ಸ್ವಾತಂತ್ರ ನನಗಿದೆ ನೀ ಯಾರು
ಕೇಳುವಳು ನನ್ನ? ಎಂದು ನೆರೆಮನೆಯವಳ ಗಂಡ
ಸಿಡಿದು ನಡೆದಿದ್ದ ಕೆಂಪು ಕೆಂಡದಂತೆ
ಸಿಟ್ಟಾಗದಿರಿ ತಾಳಿ ಇದೋ ಕೇಳಿ ಎಂದವಳ ಧ್ವನಿ ಪ್ರತಿಧ್ವನಿಸಿ
ಮತ್ತೆ ಇಂದಿನ
ಬೆಳಕ ಮರ್ಮಕ್ಕೆ
ಚುಚ್ಚುತ್ತದೆ.[೨೭]

(ಮಾಲತಿ ಪಟ್ಟಣಶೆಟ್ಟಿ ಪುಟ–೩೭–೧೯೭೬)

ಇಲ್ಲಿ ಸ್ವಾತಂತ್ರ್ಯದ ಅರ್ಥ ಪೂರ್ಣತೆಯನ್ನು ಗಂಡು–ಹೆಣ್ಣಿನ ಜೀವನದ ಹಿನ್ನಲೆಯನ್ನು ವ್ಯಾಖ್ಯಾನಿಸುವ ರೀತಿ, ಜತೆಗೆ ಶಬ್ದ ಬಳಕೆಯಲ್ಲಿನ ಎಚ್ಚರ, ಮೆಚ್ಚತಕ್ಕದ್ದಾಗಿದೆ. ಅಲ್ಲಲ್ಲಿ ಮಿಂಚುವ ಈ ಕಲೆಗಾರಿಕೆಯ ಗುಣಗಳು ಕಾವ್ಯದಲ್ಲಿ ಸ್ಥಾಯಿಗೊಳ್ಳದಿರುವುದೆ ಸಂಕಲನಗ ಕೊರತೆಯೆನಿಸುತ್ತದೆ.

ಭಾವಪೂರ್ಣವಾಗಿ ಗಜಲ್ ಹಾಡುವ ನಮ್ಮ ಗೆಳೆಯ
ಹೆಂಡತಿಯನ್ನು ಹೊಡೆದು ಅಲಾಪ ಕದಿಯುತ್ತಾನೆ.
ನೋಟುಗಳನ್ನೆಣಿಸುತ್ತಲೇ ಲಯ ಕಟ್ಟುತ್ತಾನೆ.[೨೮]

(ಶೈಲಜಾ ಉಡುಚಣ ಪುಟ–೪೦–೧೯೮೮)

ಹೊರಜಗತ್ತಿನಲ್ಲಿ ಪ್ರತಿಷ್ಠೆಗಳಿಸಿದವನು ತನ್ನ ಸಂಸಾರದಲ್ಲೂ ಬೇರೆಯದೇ ಆದ ರೀತಿಯಲ್ಲಿರುತ್ತಾನೆ. ಹೆಂಡತಿ ಆತನ ಪ್ರಕಾರ ಒಂದು ಸ್ವತ್ತು. ಅದು ಸ್ವಂತ ಬಳಕೆಯಾದ್ದರಿಂಗ

ಆತನಿಗೆ ಸ್ವತಂತ್ರವಾಗಿದೆ ಎನಿಸುತ್ತದೆ. ಹೊಡೆತ-ಬಡಿತಗಳು ಆತನ ಪಾಲಿಗೆ ವಿರೋಧವೆನಿಸುವುದಿಲ್ಲ.

ಮತ್ತೆ ಎಂದು ಬರುತ್ತಿ? ತುದಿಗಾಲಲ್ಲಿ ನಿಂತಿದ್ದೇನೆ
ಇಲ್ಲಿಯ ಮುಳ್ಳು ಚ್ಚುಚಿದಾಗೆಲ್ಲ ನಿನ್ನದೇ ನೆನಪು
ಚಿಂತಿಸಬೇಡ ನನಗೆ ಗೊತ್ತು ನೀನು ಏಕಪತ್ನೀಕನಲ್ಲ
ಆದರೂ ನಾನು ಪತಿವ್ರತೆ[೨೯]

(ವಿಜಯದಬ್ಬೆ ಪುಟ-೧೩೮-೧೯೯೬)

ಶೀಲವಿಲ್ಲದ ಗಂಡನಿಗೆ ಮರ್ಯಾದೆ ಕೊಡುವುದು ಅವಶ್ಯಕತೆ ಅಲ್ಲದಿದ್ದರೂ ಅವನು ಅವಳಿಗೆ ಅವಶ್ಯಕ ಕ್ಷಮಿಸಲು ಸಿದ್ಧಳಾಗಿರುತ್ತಾಳೆ. ಶೀಲ ಎನ್ನುವುದು ಕೇವಲ ಸ್ತ್ರೀಗೆ ಮಾತ್ರವೇ ಎಂದು ಗಂಡಸು ಭಾವಿಸುತ್ತಾನೆ.

ಅಳುತ್ತ ಮರಳಿದೆ ಗಂಡನೆಂಬ ತೆಗಣಿ ಮನಗೆ
ಬರಿಗೈ ತಂದೆ ನೋಡಿ ಪರಮೇಶ್ವರನ ಮೂರನೇ ಕಣ್ಣಬಿಟ್ಟಾರು.[೩೦]

(ಶಾರದ ಬಸವರಾಜ, ಪುಟ-೨೦ ೧೯೯೩)

ವರದಕ್ಷಿಣೆ ಪಿಡುಗು ಸಮಾಜ ಕಂಡ ಅತ್ಯಂತ ಹೀನ ವಿಕೃತಿ ಪದ್ಧತಿ. ಸಂಸಾರದ ಸುಂದರ ಭಾವನಾತ್ಮಕ ಸಂಬಂಧವನ್ನು ಅಳಿಸಿ ಹಾಕುತ್ತದೆ.

‘ವಿಷಮ ದಾಂಪತ್ಯ’ದ ಬಗ್ಗೆ ಕನ್ನಡ ಕವಿಯಿತ್ರಿಯರು ಬಹಳಷ್ಟು ಕವನವನ್ನು ರಚಿಸಿದ್ದಾರೆ. ವಿಷಮ ದಾಂಪತ್ಯಕ್ಕೆ ಮೂಲವಾಗಿ ಗಂಡು ಕಾರಣವಾಗಿರುತ್ತಾನೆ. ಪುರುಷರಿಗೆ ಸಮನಾದ ಹಕ್ಕುಗಳನ್ನು ಮಹಿಳೆಯರಿಗೆ ಎಲ್ಲಿಯ ತನಕ ನೀಡಲಾಗುವುದಿಲ್ಲವೂ ಅಲ್ಲಿಯತನಕ ಭಾರತದಲ್ಲಿ ಸಾಮಾಜಿಕ ನ್ಯಾಯ ಇರಲಾರದು.

೪. ಸಮನ್ವಯತೆ

ಸ್ತ್ರೀ ಒಂದಲ್ಲ ಒಂದು ರೀತಿಯಿಂದ ಪುರುಷ ಪ್ರಧಾನ ಸಮಾಜವನ್ನು ಒಪ್ಪಿಕೊಂಡಿದ್ದಾಳೆ. ಪುರುಷ ಅವಲಂಬನೆಯನ್ನು ತನ್ನ ಅನಿವಾರ್ಯತೆಯೆಂದು ಹೇಳಿದ್ದಾಳೆ. ತಾತ್ವಿಕವಾಗಿ ಹೆಣ್ಣು ವಿರೋಧಿಸಿದರೂ ಪಿತೃ ಪ್ರಧಾನತೆಯುಳ್ಳ ಹಿನ್ನೆಲೆಯಿಂದ ಬಂದ ಸ್ತ್ರೀ ಇವುಗಳನ್ನೆಲ್ಲಾ ಸಾಮಾನ್ಯವೆಂದು ಭಾವಿಸುತ್ತಾಳೆ. ಹೆಣ್ಣು ಸ್ವಾಭಾವತಃ ಪುರಾಣಗಳಿಂದ ಧರ್ಮ ಶಾಸ್ತ್ರಗಳಿಂದ ರೂಪಿಸಲ್ಪಟಿದ್ದವಳು ಗಂಡಿನ ಪರಮಾಧಿಕಾರಗಳನ್ನು ದಬ್ಬಾಳಿಕೆಗಳು ಅವಳಿಗೆ ಶೊಷಣೆ ಎನಿಸಿದರೂ ಅವುಗಳನ್ನೆಲ್ಲಾ ನನ್ನ ಜನ್ಮಕ್ಕಂಟಿದವು, ತನ್ನ ಕರ್ತವ್ಯಗಳೆಂದು ಭಾವಿಸುತ್ತಾಳೆ. ಇದರಲ್ಲಿ ಸಮನ್ವಯತೆ ಸಾಧಿಸುತ್ತಾಳೆ ಕೆಲವೊಮ್ಮೆ ಮಹಿಳಾ ಪರ ವಾದಗಳು

ಅವಳಿಗೆ ಅನಗತ್ಯವೆನಿಸುತ್ತವೆ. ವಿರೋಧಿ ಭಾವದಿಂದ ಸಾಧಿಸಬಹುದಾದರೂ ಏನು ಎಂಬ ಪ್ರಶ್ನೆ ಅವಳದು.

ಎಲ್ಲರಂತೆ ನಾನು ವ್ಯಂಗವಾಡುತ್ತ ಗಂಡಸರನ್ನು ದ್ವೇಷಿಸುತ್ತಾ
ಹೆಂಗಸರ ಸ್ವಾತಂತ್ರ್ಯ ಹಕ್ಕುಗಳ ಕುರಿತು ಮಾತನಾಡುತ್ತಾ
ಹೊಸ ಹೊಸ ಸಮಸ್ಯೆಗಳ ಹುಟ್ಟಿಸಿಕೊಂಡು ಹೊಡೆದಾಡುತ್ತಾ
ಸಿನಿಕತನವನು ಮಾತುಮಾತಿನಲಿ ಇಣಿಕಾಡಿಸುತ್ತಾ
ಅಲೆಯುತ್ತಿಲ್ಲವಲ್ಲ ಎಂದು ವಿಷಾದನೆನಿಸುತ್ತದೆ.[೩೧]

(ಸುಮಿತ್ರ ಎಲ್ .ಜಿ. ಪುಟ-೩೦ ೧೯೮೮)

ಮಹಿಳಾಪರ ವಾದಗಳು ಬಿತ್ತರಿಸುವ ವ್ಯಕ್ತಿತ್ವದ ಪ್ರಜ್ಞೆ (*Feminist Conscience*) ಲೈಂಗಿಕ ನ್ಯಾಯ(*Gender Justice*) ಸ್ವಾತಂತ್ರ್ಯ(*Freedom*) ಇವುಗಳು ಹೆಣ್ಣಿನ ಮೇಲೆ ಅಷ್ಟೊಂದು ಪ್ರಭಾವ ಬೀರಲಾರವು. ಸಂಪ್ರದಾಯದ ಬಿಗಿ ಹಿಡಿತದಲ್ಲಿ ಬೆಳೆದ ಟಿಪಿಕಲ್ ಹೆಂಗಸಿಗೆ ಈ ಎಲ್ಲಾ ಹಕ್ಕುಗಳು ಅರ್ಥ ಹೀನವೆನಿಸುತ್ತದೆ.

ಹೋರಾಡುವ ಛಲವ ಬದಿಗೊತ್ತಿ
ಹಣ್ಣಾಗುವರೆಗೊ ಬಾಳುತ್ತೇವೆ.
ಹೆಣ್ಣೆಂಬ ಹಣೆಪಟ್ಟಿಯ ಕೆಳಗೆ ನರಳುತ್ತೇವೆ.[೩೨]

(ರಜಿಯಾ ಬೇಗಂ, ಪುಟ ೩೦ ೧೯೯೯)

'ಹೆಣ್ಣೆಂಬ ಹಣೆಪಟ್ಟಿಯ ಕೆಳಗೆ ನರಳುತ್ತೇವೆ' ಎನ್ನುವಲ್ಲಿ ತನ್ನ ಪರಿಸ್ಥಿತಿಯ ಬಗ್ಗೆ ಅರಿವಿದೆ. ಅದರೆ 'ಹಣ್ಣಾಗುವವರೆಗೆ ಬಾಳುತ್ತೇವೆ' ಎನ್ನುವಲ್ಲಿ ತನ್ನತನದ ಛಲವಿದೆ. ತನಗಂಟಿದ ಸಮಾಜವನ್ನು ಜಯಿಸಬೇಕೆಂಬ ಛಲವಿದೆ. ಹೊರತು ಅದನ್ನು ವಿರೋಧಿಸುನ ಗೋಜಿಗೆ ಹೋಗುವುದಿಲ್ಲ.

ನಾವು ದಣಿದಿದ್ದೇನೆ ಗೆಳೆಯ
ಮತ್ತೊಂದು ಹೆಜ್ಜೆ ಮುಂದಿಡಲಾರದಷ್ಟು
ಒಂದಿಷ್ಟು ವಿಕ್ರಮಿಸೋ ಸಾಕು, ಎಲ್ಲುಂಟು ನೆರಳು_
ಸೂತ್ರದ ಬೊಂಬೆಯಂತೆ ನೀನು ನಡೆದತ್ತ ನಡೆಯುತ್ತಾ
ಎದ್ದು ಬಿದ್ದು ಹೇಗಾದರೂ ಒಮ್ಮೆ ಆ ತೋಟ ಸೇರಿ
ಸಿಹಿ ನೀರ ಕುಡಿದು ತಂಪಾದ ನೆರಳಲ್ಲಿ ಮಲಗುವುದು
ನೆನೆಯುತ್ತಾ ಬಯಸುತ್ತಾ ನಡೆದೆ
ಈಗ ಹೇಳು ನಿಜವೇನು ಗೆಳೆಯ ಆ ನಿನ್ನ ಹಸಿರು ತೋಟ
ಅದು ಇದೆಯೇನು ಗೆಳೆಯ__.?[೩೩]

(ಶಾಲಿನಿ ಶ್ರೀನಿವಾಸನ್ ಪುಟ-೨೮-೨೦೦೧)

ತನಗಾದ ನೋವು ಬೇಜಾರುಗಳು ಪ್ರತಿಭಟನೆಯ ರೂಪದಲ್ಲಿ ಹೊರಹೊಮ್ಮುವ ಬದಲು ವಿಧೇಯವಾಗಿ ವಿನಂತಿಸುತ್ತಾಳೆ. ಅವಳ ವಿಧೇಯತೆ ಅಂತಿಮವಾಗಿ ಪ್ರೀತಿಯನ್ನು ಅರಸುತ್ತದೆಯೇ ಹೊರತು ಪುರುಷ ವಿರೋಧಿ ಕ್ರಮವಲ್ಲ.

ನಾನು ಅಳುತ್ತೇನೆ ಯಾಕೆ ಗೊತ್ತಾ?
ಅಡುಗೆ ಮನೆಯಲ್ಲಿ ಉಪ್ಪು- ಖಾರ ತೂಗುತ್ತಾ
ನಾನು ಮುದುಕಿಯಾಗಬಹುದೇನೋ ಎಂದು
ನನ್ನಕಣ್ಣೀರು ಕೈಲಾಗದ ಸೋಲಲ್ಲ
ನಾನು ಕಣ್ಣು ಬಿಟ್ಟಾಗಿನಿಂದ ತಿಂದ
ನೋವು ಅವಮಾನ ಅಸಹಾಯಕತೆ
ಹೆಣ್ಣುತನದ ನೆಪ ಹೇಳಿ ಸದೆಬಡಿದ ನಿಮ್ಮಲ್ಲರ ಸೋಗು
ಮುದ್ದಟ-ಅಂದಚೆಂದ-ಶೃಂಗಾರ-ಆಡಂಬರಗಳಲ್ಲಿ ಬೆಸೆದ
ನನ್ನ ಜೀವ ಶಕ್ತಿಯನ್ನು ಕೊಂದ ನಿಮ್ಮ ದೂರ್ತತನ
ಹೌದು ಎಲ್ಲಾ ನನ್ನೊಳಗೆ ಹೆಪ್ಪುಗಟ್ಟಿದೆ.[೩೪]

(ಎಸ್. ಮಾಲತಿ ಪುಟ-೧೦೨-೧೯೯೦)

ಅಳುವುದು ಹೇಡಿತನದ ಲಕ್ಷಣ. ಕೈಲಾಗದವರು ಮಾತ್ರ ಅಳುವುದು ಎಂಬ ನಂಬಿಕೆ ಜನರಲ್ಲಿದೆ. ಪುರುಷರು ಹೆಣ್ಣನ್ನು ಅಳುಬುರುಕಿ ಎಂದು ವ್ಯಂಗ ಮಾಡುತ್ತಿರುವುದನ್ನು ಟೀಕಿಸುತ್ತಾ ಕವಿಯಿತ್ರಿ 'ನನ್ನ ಕಣ್ಣೀರು ಕೈಲಾಗದ ಸೋಲಲ್ಲ' ಬದಲಾಗಿ ಅಬಲೆಯಾಗಿ ಬದುಕುತ್ತಿರುವ ಜೀವನಕ್ಕೆ ಮರಗುತ್ತಿದ್ದಾಳೆ ಎಂಬುದನ್ನು ವ್ಯಕ್ತಪಡಿಸುತ್ತಿದ್ದಾರೆ. 'ನನ್ನೊಳಗೆ ಹೆಪ್ಪುಗಟ್ಟಿದೆ' ಎಂಬುವುದರಲ್ಲಿ ಪ್ರತಿಭಟಿಸಲಾಗದ ಪರಿಸ್ಥಿತಿಯನ್ನು ಅದನ್ನು ಸ್ವೀಕರಿಸಿದ ಭಾವವನ್ನು ಹೇಳುತ್ತದೆ.

ಬದುಕುತ್ತೇವೆ
ಬಯಕೆಗಳ ಸಮಾದಿಯ ಮೇಲೆ
ತೃಪ್ತಿಯ ಮುಖವಾಡ ತೊಟ್ಟು[೩೫]

(ಡಿ.ಬಿ. ರಜಿಯಾ, ಪುಟ ೧೨ ೧೯೯೧)

ಬದುಕುವುದರಲ್ಲಿ ಅತ್ಮ ತೃಪ್ತಿಗಿಂತ ಬದುಕಲೇ ಬೇಕಾದ ಪರಿಸ್ಥಿತಿಯನ್ನು ಅದನ್ನು ಹೇಗಾದರೂ ಸರಿ ಹೊಂದಾಣಿಕೆ ನಡೆಸುವುದು ತನ್ನ ಕರ್ತವ್ಯ ಎಂದು ಭಾವಿಸುತ್ತಾಳೆ. ಬದುಕೆಂದರೆ ಅವಳಿಗೆ ಕೇವಲ ಹೊಂದಾಣಿಕೆ ಆಸೆ-ಆಕಾಂಕ್ಷೆ. ತನ್ನತನವನ್ನು ಹೂತಿಟ್ಟು ಹೊಂದಾಣಿಕೆ ನಡೆಸುತ್ತಾಳೆ.

ಇಲ್ಲ ನಿಮ್ಮ ಚರಿತ್ರೆಯೊಳಗೆ ನಾವು ಬರುವುದಿಲ್ಲ
ಮಡಿಚಿಟ್ಟು ಕೊಳ್ಳುತ್ತೇವೆ ನಮ್ಮನ್ನು ನಾವೇ
ಬೆಂಕಿ ಪೊಟ್ಟಣ್ಣಗಳ ಒಳಗೆ ಮಸ್ಲಿನ್ ಬಟ್ಟೆಯ ಹಾಗೆ
ಮೇಜು ಗುದ್ದುವುದಕ್ಕೆ ಒಡೆದ ಕೈಗಳಲ್ಲಿ ರಕ್ತಸೇರಿತ್ತು ಎಂಬುದು
ಗೊತ್ತು ನಿಮ್ಮ ಚರಿತ್ರೆಯಲ್ಲಿ ನಮಗೆ ಜಾಗವಿಲ್ಲ ಭಯ
ಆದರೂ ಓದುತ್ತೇನೆ.
ನಿನ್ನ ಕೊಳಕುಗಳಿಗೆ ಪಾಪಕ್ಕೆ ಮುಚ್ಚಿಹೋದ
ಸತ್ಯಗಳ ಕಾಡಲು ನಿರಾಳವಾಗಲು.[೩೬]

(ಚಂದ್ರಿಕಾ ಪುಟ-೨೦ ೧೯೯೫)

ನಿಮ್ಮ ಚರಿತ್ರೆಯೊಳಗೆ ನಾವು ಬರುವುದಿಲ್ಲ ಎನ್ನುವುದರಲ್ಲಿ ಶತಮಾನದಿಂದ ಹೆಣ್ಣು ಬೆಳೆದ ರೀತಿ-ನೀತಿಗಳನ್ನು ಪುರುಷ ಸಮಾಜ ಅವಳಿಗೆ ದೊರಕಿದ ಸ್ಥಾನ ಮಾನವನ್ನು ಹೇಳುತ್ತದೆ. ಶತಮಾನದಿಂದ ತುಳಿಯಲ್ಪಟ್ಟ ಅವಳು 'ಪ್ರತಿಭಟನೆ'ಗೆ ಹಿಂಜರಿಯುತ್ತಾಳೆ. ಮೇಜು ಗುದ್ದುವುದಕ್ಕೆ ಒಡೆದ ಕೈಗಳಲ್ಲಿ ರಕ್ತ ಸೋರಿತು ಎಂಬುದು ಗೊತ್ತು ಎಂಬುವುದರಲ್ಲಿ ಪ್ರತಿಭಟನೆ ತನ್ನಿಂದ ಸಾಧ್ಯವಿಲ್ಲವೆಂದು ಹೇಳಿದಂತಾಗುತ್ತದೆ. ಮಡಚಿಟ್ಟು ಕೊಳ್ಳುತ್ತೇವೆ. ನಮ್ಮನ್ನು ನಾವೇ ಬೆಂಕಿಪೊಟ್ಟಣಗಳ ಒಳಗೆ ಎನ್ನುವಲ್ಲಿ ಸಮಾಜದ ನೀತಿಗೆ ತಲೆಬಗ್ಗಿಸುವುದನ್ನು ಕಾಣಬಹುದು.

ಚಿಕ್ಕಂದಿನಿಂದಲೂ ಒಲೆ ಮುಂದೆ ಅಜ್ಜಿ ಅಮ್ಮ ಬೇಯುತ್ತಾ ಕುದಿಯುತ್ತಾ ಜೀವಂತಿಕೆಯ ಹಿಂಡಿ ಹಿಪ್ಪೆ ಮಾಡಿ ನೀರೆರೆದು ಬೆಳೆಸಿದ ಕೋಮಲ ಕನಸುಗಳನ್ನು ತರಕಾರಿಯಂತೆ ಕಚಕಚನೆ ಕಡದು ಬದುಕ ಇಡಿಯಾಗಿ ಅರೆಅರೆದು ಸವೆದು ಬಡಿಸಲು ಸಜ್ಜಾಗುವ ಅದೇ ದಿನಚರಿಯ ಕಂಡು ಕೇಳಿದ

ಏನಿದೆಯಮ್ಮ ಅಡುಗೆ ಮನೆಯಾಚೆ ಮಗಳೆ ಅಲ್ಲಿ ಗಂಡಸರಿದ್ದಾರೆ
ಅವರಾಣತಿಯಂತೆ ಅವರಿಗಾಗಿಯೇ ನಾವಿದ್ದೇವೆ.
ಶಾಪ ಕೊಟ್ಟು ಕಲ್ಲು ಮಾಡಿದ ಕಲ್ಲು ಹೃದಯದ ಮಹಾಪುರುಷರುಷರು
ಸಂಶಯದ ಬೆಂಕಿಯಲಿ ಸುಟ್ಟ ಪಾತಿವೃತ್ಯ ಅಳೆದ ಪುರುಷೋತ್ತಮರು
ಎಚ್ಚರ ತಿಳಿಯದೆ ಎಂದಾದರೂ ದಾಟಿಗೀಟಿ ಬಿಟ್ಟೀಯ ಹೊಸಿಲ[೩೭]

(ಗೀತಾವಸಂತ ಪುಟ-೬೦-೧೯೯೯)

ಪರಾಂಪರಿಕ ಮೌಲ್ಯಗಳ ಆವರಣದಲ್ಲಿಯೇ ಬೆಳೆದ ಹೆಣ್ಣುಮಗಳು ತನ್ನ ಮಗಳಿಗೆ ಹೇಳುವ ಬುದ್ದಿ ಮಾತುಗಳು, ಅನುಕ್ರಮವಾಗಿ ಪಾರಂಪರಿಕ ಮೌಲ್ಯಗಳನ್ನೆ ಪುರುಷ ಪ್ರಧಾನ್ಯತೆಯನ್ನು ಅನುಸರಿಸುತ್ತವೆ.

ಪಂಚಕನ್ಯೆಯರು ಈ ಮಹಾಸತೀಯರು
ವಂಚನೆಗೆ ಒಳಗಾದರೆ ಎಲ್ಲಾ
ಆ ಕಾಲ ಈ ಕಾಲ ಒಂದೆ
ನೂರ್ಕಾಲ ಕಳೆದರೂ ಧನಿಯೊಂದೆ[೩೦]

(ಪ್ರೇಮಭಟ್ ಪುಟ-೨೪-೨೦೦೧)

ಕುಟುಂಬದ ಸಂರಕ್ಷಣೆ ಮಾಡಬೇಕಾದವಳು ಸ್ತ್ರೀ ಕೆಟ್ಟುಹೋದ ಪುರುಷನನ್ನು ಸರಿದಾರಿಗೆ ತಂದು ನಿಲ್ಲಿಸುವ ಸಚೇತನ ಶಕ್ತಿ ಅಥವಾ ಕೆಚ್ಚು ಅವಳಲ್ಲಿದೆ. ಸಮಸ್ಯೆಗಳ ತಿರುವುಗಳು ಬದಲಾಗಿರಬಹುದಷ್ಟೆ ಏನೇ ಆದರೂ ತಾಳ್ಮೆ ಸಂಯಮದ ಪ್ರತೀಕ ಮಹಿಳೆ ಎಂದುಕೊಂಡಿದ್ದಾರೆ. ಶತಮಾನ ಕಳೆದರೂ ಮಹಿಳೆಯ ಸ್ಥಿತಿ ಒಂದೇ ಆಗಿರುತ್ತದೆ. ಎನ್ನುವಲ್ಲಿ ಅದನ್ನು ಸ್ವೀಕರಿಸುವ ಮನೋಭಾವ ಹಾಗೆಯೇ ಉಳಿದಿದೆ.

ನಾ ನಡೆಸುವ ಯುದ್ಧದಲ್ಲಿ
ಆಸೆಗಳಿದ್ದರೂ ಅಸ್ತ್ರಗಳಿಲ್ಲ
ತಕ್ಕು ಹಿಡಿಯಲಾಗದ ಸಾಣೆ ಆಕಲಾರದ
ಮಣ್ಣಿನ ಆಕಾರಗಳಷ್ಟೆ
ಅದಕ್ಕೆ ಸೋಲಿನ ಸುತ್ತಲೇ ಸುತುತ್ತದೆ.[೩೧]

(ಭಾಗ್ಯ ಸುದರ್ಶನ, ಪುಟ-೨, ೧೯೯೩)

ಸ್ತ್ರೀಗೆ ಪುರುಷನಂತೆಯೇ ಪ್ರತಿಭಟಿಸಿ ಹೋರಾಡಬೇಕು ಎಂಬ ಭಾವನೆ ಇದ್ದರೂ ಹೋರಾಡಲು ಸಾಧ್ಯವಾಗುತ್ತಿಲ್ಲ. ಆಸೆಗಳಿದ್ದರೂ ಅಸ್ತ್ರಗಳಿಲ್ಲ. ಖಡ್ಗಗಳಿದ್ದರೂ ಅವು ಹೋರಾಡಲು ಬೇಕಾದಂತಹ ಆಯುಧಗಳಾಗುವುದಿಲ್ಲ. ಅವು ಕೇವಲ ನಾಮಮಾತ್ರ ಖಡ್ಗಗಳು. ಅವು ತುಕ್ಕು ಹಿಡಿಯುವುದಿಲ್ಲ. ಸಾಣೆ ಹಾಕಲು ಸಾಧ್ಯವಿಲ್ಲ ಎಂದರೆ ಮಣ್ಣಿನಿಂದ ಆಕಾರ ಪಡೆದುಕೊಂಡ ಖಡ್ಗಗಳು ಇಲ್ಲಿ ಹೆಣ್ಣಿನ ವಾಸ್ತವತೆಯ ಪರಿಕಲ್ಪನೆಯನ್ನು ಕಾಣಬಹುದು. ಹೀಗೆ ಸಮನ್ವಯತೆ ಕೆಲವೊಮ್ಮೆ ಪಲಾಯನವಾದದಂತೆ ಕಂಡರೂ ಶತಮಾನಗಳಿಂದ ಸ್ತ್ರೀ ಮೀರಲಾರದ ಪರಿಸ್ಥಿತಿಯನ್ನು ಒತ್ತಿ ಹೇಳುತ್ತದೆ.

ಟಿಪ್ಪಣಿಗಳು

೧. ಸುಲೋಚನ ಜೆ.ರಾವ್, ಪಲ್ಲವಿ, ಚಿನ್ಮಯಿ ಪ್ರಕಾಶನ, ೧೯೮೪

೨. ಉಷಾ ಪಿ.ರೈ, ಗಂಡ-ಹೆಂಡತಿ, (ಸಂಗ್ರಹ) ಕನ್ನಡ ಕವಯಿತ್ರಿಯರು-ಕುಲಶೇಖರಿ ಚಿನ್ಮಯಿ, ಪ್ರಕಾಶನ ೧೯೯೯

೩. ಜಾನಕಮ್ಮ, ಬದುಕು-ಬರಹ, ನೇಮಿಚಂದ್ರ ಕರ್ನಾಟಕ ಲೇಖಕಿಯರ ಸಂಘ ಬೆಂಗಳೂರು ಅಪ್ರಕಟಿತ ಸಾಹಿತ್ಯ ಸಂಚಿಕೆ ಸಂ. ೧೯೮೮

೪. ಪ್ರೇಮ ಶಿರಸಿ, ಚುಕ್ಕೆಗಳು, ಚಿತ್ರಬಾನ ಪ್ರಕಾಶನ, ೧೯೯೯

೫. ಸರಸ್ವತಿ ಗೌಡ, ಮುಂಗಾರು, ಬಯಲುಸೀಮೆ ಪ್ರಕಾಶನ, ಚನ್ನಪಟ್ಟಣ್ಣ ೧೯೮೦

೬. ವಿಜಯಾದಬ್ಬೆ, ಇತಿಗೀತಿಕೆ, ರಚನಾ ಪ್ರಕಾಶನ ಮೈಸೂರು, ೧೯೯೯

೭. ಪ್ರೇಮ ಶಿರಸಿ, ಚುಕ್ಕೆಗಳು, ಚಿತ್ರಬಾನು ಪ್ರಕಾಶನ, ೧೯೯೯

೮. ಪದ್ಮಾ ಶೇಕರ–ಹಕ್ಕಿ ಹರೆಯ, ಪ್ರತಿಬಾ ಪ್ರಕಾಶನ, ೧೯೮೯

೯. ಪ್ರಭಾವತಿ ಎಸ್.ವಿ, ಉಳಿದಿದ್ದು ಆಕಾಶ, ಜ್ಞಾನ ಬಿಂದು ಪ್ರಕಾಶನ ೧೯೯೦(ಕುಲಶೇಕರಿ ಕನ್ನಡ ಕವಿಯಿತ್ರಿಯರು ಚಿನ್ಮಯಿ ಪ್ರಕಾಶನ)

೧೦. ವಿಜಯದಬ್ಬೆ, ಇತಿಗೀತೆಗೆ, ಸಾಹಿತ್ಯ ಅಕಾಡೆಮಿ ಪ್ರಕಾಶನ, ರಚನಾ ಪ್ರಕಾಶನ, ಮೈಸೂರು, ೧೯೯೬

೧೧. ಭಾಗ್ಯ, ಬದುಕಿನ ತೆಕ್ಕೆ, ಲತಾ ಪ್ರಕಾಶನ ಬೆಂಗಳೂರು, ೧೯೭೯

೧೨. ಮಾಲತಿ ಪಟ್ಟಣಶೆಟ್ಟಿ, ಬಾ ಪರೀಕ್ಷೇಗೆ, ನಿರ್ಮಾಣ ಪ್ರಕಾಶನ ಧಾರವಾಡ, ೧೯೯೯

೧೩. ಭಾಗ್ಯಲಕ್ಷ್ಮಿ, ಬೆರಳಸಂದಿಯ ಬದುಕು, ಸಂಗ್ರಾಮ ಪ್ರಕಾಶನ, ೧೯೯೯

೧೪. ಶಶಿಕಲಾ ವೀರಯ್ಯಸ್ವಾಮಿ, ಗುಬ್ಬಮನಿ ನೆಲಮನೆ ಪ್ರಕಾಶನ, ಮೈಸೂರು, ೧೯೭೯

೧೫. ಚಿ.ನಾ. ಮಂಗಳಾ, ಕೆನಡ ಕವನಗಳು, ಸ್ಕ್ಯಾನ್ ಪ್ರಿಂಟ್, ೧೯೮೯

೧೬. ರಶ್ಮೀ ಟಿ.ಎಸ್, ಅಂತರಾಳ, ಲಿಪಿ ಪ್ರಕಾಶನ, ೧೯೯೬

೧೭. ಉಷಾ ಸ, ತೊಗಲುಬೊಂಬೆಯ ಆತ್ಮಕಥೆ ಮಸ್ತಕ ಚಿಲುಮೆ, ಮೈಸೂರು, ೧೯೮೧

೧೮. ಬಿ.ಟಿ.ಲಲಿತಾನಾಯಕ್, ನಂರೂಪ್ಲಿ ಪತ್ರಿಕೆ ಪ್ರಕಾಶನ, ಬೆಂಗಳೂರು, ೧೯೮೩

೧೯. ಬಿ.ಟಿ.ಲಲಿತಾನಾಯಕ್, ನಂರೂಪ್ಲಿ ಪತ್ರಿಕೆ ಪ್ರಕಾಶನ, ಬೆಂಗಳೂರು, ೧೯೮೩

೨೦. ಶಶಿಕಲಾವಸ್ತ್ರದ, ಗುಬ್ಬಿಮನಿ, ನೆಲೆಮನೆ ಪ್ರಕಾಶನ, ಮೈಸೂರು, ೧೯೯೯.

೨೧. ವಿಜಯಶ್ರೀ ಸಬರದ, ಲಕ್ಷ್ಮಣರೇಕೆ ದಾಟಿದವರು ಪಲ್ಲವಿ ಪ್ರಕಾಶನ, ಬೀದರ್, ೧೯೯೧

೨೨. ವಿಜಯದಬ್ಬೆ, ನೀರು ಲೋಹದ ಚಿಂತೆ, ಸಂಸ್ಕೃತಿ ಪ್ರಕಾಶನ, ೧೯೯೦

೨೩. ಶೈಲಜಾ ಉಡುಪಣ, ಕಪ್ಪು ನೆಲೆದ ಸೊಕ್ಕಿದ ಸೂರ್ಯ, ಚೇತನ ಪ್ರಕಾಶನ, ಗುಲ್ಬರ್ಗಾ, ೧೯೮೮

೨೪. ಟಿ.ಸಿ.ಪೂರ್ಣಿಮಾ, ಮೌನಗೀತೆ, ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಪರಿಕಲ್ಪನೆ, ಪ್ರತಿಭಾ ಪ್ರಕಾಶನ, ೧೯೮೮

೨೫. ಉಷಾ ಪಿ.ರೈ., ಗಂಡ ಹೆಂಡತಿ, ಸಂಗ್ರಹ ಕುಲಶೇಕರಿ, ಚಿಲುಮೆ ಪ್ರಕಾಶನ, ೧೯೯೧

೨೬. ಶರೀಪಾ, ನೂರೇನೇಳ ಅಂತರಂಗ, ಕುಲಶೇಖರಿ ಸಮಥಾ ಪ್ರಕಾಶನ, ೧೯೯೭

೨೭. ಮಾಲತಿ ಪಟ್ಟಣ ಶೆಟ್ಟಿ ಬಾ ಪರಿಕ್ಷೆಗೆ ನಿರ್ಮಾಣ ಪ್ರಕಾಶನ ಧರವಾಡ, ೧೯೭೬

೨೮. ಶೈಲಜಾ ಉಡುಪಣ, ಕಪ್ಪು ನೆಲೆ ಸೊಕ್ಕಿದ ಸೂರ್ಯ, ಚೇತನ ಪ್ರಕಾಶನ ಗುಲ್ಬರ್ಗಾ, ೧೯೮೮

೨೯. ವಿಜಯದಬ್ಬೆ, ಪರಂಪರೆ, ಸಾಹಿತ್ಯ ಪರಿಷತ್ ಪ್ರಕಾಶನ, ೧೯೯೬

೩೦. ಶಾರದ ಕೆ. ಬಸವರಾಜ, ಜೋಡಿ ಜೀವ, ಗೌತಮ ಪ್ರಕಾಶನ, ೧೯೯೩

೩೧. ಸುಮಿತ್ರಾ ಎಲ್.ಜಿ, ಸ್ಪರ್ಶ ರೇಖೆಗಳು, ಅಕ್ಷರ ಪ್ರಕಾಶನ, ಸಾಗರ, ೧೯೮೮

೩೨. ರಜಿಯಬೇಗಂ, ಕನ್ನಡ ಕವಿಯತ್ರಿಯರು, ಪ್ರಸನ್ನ ಚಂದ್ರ ಪ್ರಕಾಶನ, ಬೆಂಗಳೂರು, ೧೯೯೯

೩೩. ಶಾಲಿನಿಶ್ರೀನಿವಾಸ್, ನಿಜವೇನೋ ಗೆಳೆಯಾ, ಆ ಹಸಿರು ತೋಟ, ಲಿಖಿತ ಪ್ರಕಾಶನ, ೧೯೯೯

೩೪. ಎಸ್.ಮಾಲತಿ, ಒಂದು ಹೆಣ್ಣು ಹೇಳಿದ್ದು, ಸಂಸ್ಕೃತಿ ಪ್ರಕಾಶನ, ೧೯೯೦

೩೫. ಡಿ.ಬಿ.ರಜಿಯಾ, ಛಾಯೆ, ಕಾವ್ಯಾನಂದ ಪ್ರಕಾಶನ, ೧೯೯೧

೩೬. ಚಂದ್ರಿಕಾ ಪಿ., ನಿಮ್ಮ ಚರಿತೆಯಲ್ಲಿ ಜಾಗವಿಲ್ಲ, ನವಕರ್ನಾಟಕ ಪಬ್ಲಿಕೇಷನ್ಸ್, ೧೯೯೯

೩೭. ಗೀತಾವಸಂತ, ಹೊಸ್ತಿಲಾಚೆ, ಹೊಸ ಹೆಜ್ಜೆ ರುಜುಮಾತು ಪ್ರಕಾಶನ, ೧೯೯೯

೩೮. ಪ್ರೇಮಭಟ್, ಭೂಮಿಕಾ, ಸಾಯಿ ಪ್ರಕಾಶನ ಬೆಂಗಳೂರು, ೨೦೦೧

೩೯. ಭಾಗ್ಯ ಜಯಸುದರ್ಶನ, ಭೂಮಿ ಪದ್ಯಗಳು ಸ್ನೇಹಲತಾ ಪ್ರಕಾಶನ, ಬೆಂಗಳೂರು, ೧೯೯೩

ಅಧ್ಯಾಯ ೭

ಪಿತೃಪ್ರಧಾನ ಮೌಲ್ಯಗಳನ್ನು ಪ್ರತಿಬಿಂಬಿಸುವ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ

೭

ಪಿತೃ ಪ್ರಧಾನ ಮೌಲ್ಯಗಳನ್ನು ಪ್ರತಿಬಿಂಬಿಸುವ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ

ಪಿತೃ ಪ್ರಧಾನ ಮೌಲ್ಯಗಳು ಸ್ತ್ರೀಯರನ್ನು ಶತಮಾನಗಳಿಂದ ಕಟ್ಟಿಹಾಕಿದೆ. ಪ್ರಾಚೀನ ಮೂಲಭೂತವಾದಿ ಮನು ಹೇಳಿದಂತೆ ಬಾಲ್ಯದಲ್ಲಿ ತಂದೆ, ಯೌವನದಲ್ಲಿ ಗಂಡ, ಮುಪ್ಪಿನಲ್ಲಿ ಮಗ ಇವರು ಹೆಣ್ಣಿನ ಬಾಳನ್ನು ನಿರ್ಧರಿಸಿದವರಾಗಿದ್ದರು. ಇದಕ್ಕೆ ಕೊಟ್ಟಂತೆ ನಮ್ಮ ಪುರಾಣಗಳು, ದೈವಿಕತೆ, ಪುಣ್ಯ ಗ್ರಂಥಗಳಲ್ಲಿ ಪಿತೃಪ್ರಧಾನ ಮೇಲಸ್ಥರಕ್ಕೇರಿಸುತ್ತದೆ.

ವೇದಗಳಲ್ಲಿ ಸ್ತ್ರೀ ಎಂದರೆ ಭಾರತೀಯ ಸಂಸ್ಕೃತಿಯ ಪ್ರತಿಭೆಯ ಪರಿಕಲ್ಪನೆಯಂತೆ ಹೆರುವವಳು, ಸ್ತ್ರೋತ್ರಿ, ಸೂತ್ರ ಎಂಬ ಧಾತುಗಳ ಅರ್ಥದಂತೆ ಹೆರುವ ಪ್ರಾಣಿ ಆದ್ದರಿಂದ ಹೆಣ್ಣು ಪ್ರಾಣಿಗಳಿಗೂ ಸ್ತ್ರೀ ಎಂದು ಹೆಸರು ಎಂದು ಆರ್ಕೆ ಅವರು ಸೂಚಿಸಿದ್ದಾರೆ.[೧]

ನಮ್ಮ ಒಟ್ಟು ಸಮಾಜ ವ್ಯವಸ್ಥೆಯೇ ಪುರುಷ ಪ್ರಧಾನವಾಗಿರುವುದರಿಂದ ನಮ್ಮ ಶಿಕ್ಷಣ–ನೀತಿಶಾಸ್ತ್ರ–ಕಾನೂನು–ಆಡಳಿತ, ಉದ್ಯೋಗ ಈ ಎಲ್ಲಾ ಕ್ಷೇತ್ರಗಳಲ್ಲೂ ಗಂಡಿಗೊಂದು ಪ್ರತ್ಯೇಕ ಮಾನದಂಡ ಏರ್ಪಟ್ಟಿರುವುದು ಸಹಜವೇ ಆಗಿದೆ. ಪಿತೃ ಪ್ರಧಾನ ಮೌಲ್ಯಗಳಿಂದ ಆವರಿಸಲ್ಪಟ್ಟ ಸಮಾಜದಲ್ಲಿ ಬೆಳೆದ ಹೆಣ್ಣು ಆ ಮೌಲ್ಯಗಳಿಂದ ಪ್ರಭಾವಿ ಆಗಿರುತ್ತಾಳೆ. ಅವುಗಳನ್ನು ನಂಬಿರುತ್ತಾಳೆ. ಇಂತಹ ವಾತಾವರಣದಲ್ಲಿ ಬೆಳೆದ ಕವಿಯತ್ರಿಯೊಬ್ಬಳು ರಚಿಸಿದ ಕಾವ್ಯವು ಸಾಮಾನ್ಯವಾಗಿ ಪಿತೃಪ್ರಧಾನ ಮೌಲ್ಯಕ್ಕೆ ಜೋತು ಬಿದ್ದಿರುತ್ತವೆ. ಈ ವಾತಾವರಣದ ಕವನಗಳು ಗಂಡಿನ ಮೆಲ್‌ಸ್ತರದ ಧೈವಿಭಾವನೆ, ಪತಿಸೇವೆ, ಇಂತಹ ಮೌಲ್ಯಗಳನ್ನು ಎತ್ತಿ ಹಿಡಿಯುತ್ತವೆ. ಇದರಲ್ಲಿ ಯಾವುದೇ ರೀತಿಯ ಸ್ತ್ರೀ ಶೋಷಣೆಯ, ದಬ್ಬಾಳಿಕೆ ಅಸ್ತಿತ್ವಕ್ಕೆ ಬೆಲೆ ಇಲ್ಲ. ಸ್ತ್ರೀಯು ಸೇವಾ ಮನೋಭಾವನೆಯಿಂದ ಆತನ ಪಾದಕ್ಕೆರಗಿ ದರೆ ದೈವನೆನಸುತ್ತಾನೆ.

೧. ಸಮರ್ಪಣೆ

ಆದರ್ಶ ಪುರುಷನನ್ನು ಮನಸಾರೆ ಮೆಚ್ಚಿ ಆತನನ್ನು ದೈವತ್ವಕ್ಕೇರಿಸಿದ ಮಹಿಳೆಯ ಕವನಗಳು ಸಾಮಾನ್ಯವಾಗಿ ಸಕಾರಾತ್ಮಕವಾದ ಸಮರ್ಪಣಾ ಭಾವವುಳ್ಳವಾಗಿರುತ್ತದೆ.

ಹೊಸ ಚಂದ್ರತಾರೆ ತುಂಬಿ
ಚೆಲುವು ತಂದವನು
ಬಳ್ಳಿಗೆ ಹೊರಸವಿತ್ತು
ಜೇನು ಹೂ ಅರಳಿಸಿದವನು
ಬತ್ತದ ಚಿಲುಮೆಯಾಗಿ
ತನ್ನೆರಕ್ಕೂ ಆಸರೆ ನೀಡಿದವನು
ತನ್ನೊಳಗೆ ನನ್ನನೊಂದಾಗಿಸಿಕೊಂಡವನು[೨]

(ಶಾಂತ ಜಗದೀಶ-ಪುಟ-೬೦, ೧೯೯೯)

ಭಾವನಾತ್ಮಕವಾದ ರೀತಿಯಲ್ಲಿ ಯೋಚಿಸುತ್ತಿರುವ ಹೆಣ್ಣಿನ ಅಂತರಾಳದಲ್ಲಿನ ಭಾವನೆ, ತನ್ನಿಡೀ ಭಾವನೆಗಳನ್ನು ಪ್ರಕೃತಿಯೊಳಗೆ ನಡೆಯುವ ಸಮಸ್ತ ಸುಂದರ ವ್ಯಾಪಾರವು ತನ್ನ ಗಂಡನ ತಾಕತ್ತಿಗೆ ಸಮವೆಂದು ಹೇಳುತ್ತಾಳೆ.

ನನ್ನ ಹಾಗೆ ನಿಷ್ಪ ಸರಳ
ನೆರಳಿನಂತೆ ನಡೆವ
ಇಷ್ಟಮಿತ್ರ
ಎಂಥ ಕಷ್ಟದಲ್ಲಿದ್ದರೂ
ಯಾರು ಕೈಬಿಟ್ಟರೂ
ಇನ್ಯಾರು ಕೈಕೊಟ್ಟರು
ಬೆಂಬಿಡದೆ ನನ್ನ ಹದ್ದಿನಲ್ಲೆ
ಹುಂಬನಂತೆ ಸುತ್ತುವ ಕಾಯ
ವಾಚ ಮನಸಾ ಕೈ ಹಿಡಿದ
ಸಾಚಾ ಗಂಡ[೩]

(ಮಾಲತಿಪಟ್ಟಣಶೆಟ್ಟಿ ಪುಟ-೪೮, ೧೯೮೩)

ಸಾಚಾ ಗಂಡನ, ಕವಿಯತ್ರಿಯ ಕಲ್ಪನೆ ಎಲ್ಲಾ ಮಧ್ಯಮ. ಮೇಲ್‌ವರ್ಗ ಹೆಣ್ಣು ಸಂಕುಲದ ಮಾಮೂಲಿನ ಆಸೆಯಾಗಿದೆ.

ಗೆಳೆಯಾ
ನಾನು ನಿನ್ನನ್ನು ನೋಡು ನೋಡುತ್ತಾ
ಒಳಗೊಳಗೆ ಸೇರಿಬಿಟ್ಟೆ
ಒಳಗಣ್ಣಿನಲ್ಲಿ ನಿನ್ನನ್ನು ತುಂಬಿಸಿಕೊಂಡು ಬಿಟ್ಟೆ
ಹೊರನೋಟದಲ್ಲಿ ಇನ್ನೇಕೆ ನೋಡಲಿ ಹೇಳು
ಒಳದನಿಗೆ ದನಿ ನೀಡಿ ಎದೆ ತುಂಬಿದ ಬಾಳು
ಸರದಾರ ನೀನಿರಲು ಬಾಳೆಲ್ಲವೂ ನಿತ್ಯೋತ್ಸವ[೪]

(ಡಿ.ಎಲ್. ವಿಜಯಲಕ್ಷ್ಮಿ ಪುಟ-೬೦, ೧೯೯೧)

ಆದರ್ಶ ಪುರುಷನೊಬ್ಬನು ದಕ್ಕಿದ ಮಾನವೀಯ ಹೃದಯ ತುಂಬಿದ ಮಾತುಗಳು ಇದಾಗಿದೆ. ಇಲ್ಲಿ ಹೆಣ್ಣು ಬಯಸಿದ ಆದರ್ಶ ಪುರುಷ ದೊರೆತಿದ್ದಾಗಿದೆ. 'ಒಳದನಿಗೆ ಧನಿ ನೀಡಿ ಎದೆ ತುಂಬಿದ ಬಾಳು' ಎನ್ನುವಲ್ಲಿ ತನ್ನನ್ನು ಉದ್ಧರಿಸಿದ ಪುರುಷನಿಗೆ ಚಿರಋಣಿಯಾಗಿದ್ದಾಳೆ. ಪುರುಷನಿಂದ ತನ್ನ ಜೀವನ ಉದ್ದರಿಸಿತೆಂದು ತನ್ನ ಕನಸಿನ ಪುರುಷ ಸಿಕ್ಕಿದಾಕ್ಷಣ ಬಾಳು ನಿತ್ಯೋತ್ಸವವೆಂದು ಹೇಳುತ್ತಾಳೆ.

ಈತನನ್ನು ಕಂಡರೆ ನನಗೆ ಆಶ್ಚರ್ಯವಾಗುತ್ತದೆ
ನೋವನುಂಗಿ ನಗುವ ಕಲೆಯನ್ನು
ಎಷೋ ಎದೆಗಳಲ್ಲಿ ಹೊಸ
ಹಾಡು ತುಂಬುವುದನ್ನು ಶಿಶಿರ ಸುಳಿದ
ಮರದಲ್ಲಿ ವಸಂತವಾಗಿ ಬೀಸಿ ಕೊಂಬೆ
- - - - - - -
- - - - - - -
ಈ ನೋವ ನುಂಗಿ ನಗುವ ಕಲೆಗೆ
ಬದುಕಿನ ಮುಖವು ನಾಚಿ ನೀಲಿಗಟ್ಟುವುದು[೫]

(ಎಚ್.ಎಸ್. ಮುಕ್ತಾಯಕ್ಕಾ, ಪುಟ-೪೦, ೨೦೦೦)

ಗಂಡ ಅಥವಾ ಪ್ರೇಮಿಯ ಹೊರತಾದ ಆದರ್ಶ ಪುರುಷನ ಮತ್ತೊಂದು ರೂಪಕ ತಂದೆ. ಆತನೇ ಹೆಣ್ಣಿನ ಮೊದಲ ಹಂತದ ಪೋಷಕ, ರಕ್ಷಕ, ಮೊದಲ ಹಂತದ ಪ್ರತಿಬಂಧಕ ಅಪ್ಪನ 'ನೋವ ನುಂಗಿ ಕಲೆಗೆ ಮಾರು ಹೋಗಿದ್ದಾಳೆ. ಅಪ್ಪನ ಜೀವನ ಪ್ರೀತಿಯನ್ನು ಕಂಡು ಮಾರು ಹೋಗಿದ್ದಾಳೆ.

ಗತ್ತೇನು ಗೊತ್ತೇನು
ನನ್ನ ಮಗ ಇರುವಾಗ ಎನಗೆ
ನನ್ನೆದೆಯ ಪ್ರೀತಿಯಲ್ಲಿ ಬೆಳೆವ
ಬಳ್ಳಿ ಮುಂದೊಮ್ಮೆ[೬]

(ಗೀತ ಮಹದೇವ ಪ್ರಸಾದ, ಪುಟ-೨೬, ೨೦೦೨)

ಮಗ ಪುರುಷ ಪ್ರತಿರೂಪವಾದರೂ ಈತ ಸ್ತ್ರೀಯ ಭಾವನಾತ್ಮಕ ಕರುಳಬಳ್ಳಿ, ಗಂಡ-ಪ್ರೇಮಿ ತಂದೆಗಿಂತ ಕೆಲವೊಮ್ಮೆ ಮಿಗಿಲಾಗುತ್ತಾನೆ.

ನಿಮ್ಮ ಕನಸನ್ನು ಬಿಟ್ಟು
ಆಚೆ ಬಾರೆವು ನಾವು
ಹೀಗೆ ತಡೆದರೆ ನೀವು ತಬ್ಬಿ ಹಿಡಿದು
ನಿಮ್ಮ ಪ್ರೀತಿಯ ನಮಗೆ

ಒಂದಂಗುಲದ ಜಾಗ
ಕನಸಿನಂತಪುರದ ತೋಟದೋಳಗೆ[೭]

(ಮಲ್ಲಿಕಾಘಂಟಿ, ಪುಟ-೧೦, ೨೦೦೧)

ಹೊಂದಾಣಿಕೆ (*Adjustment*) ದಾಂಪತ್ಯದಲ್ಲಿ ಅನಿವಾರ್ಯ. ಆದರ್ಶ ಪುರುಷ ದಕ್ಕಿದಾಕ್ಷಣ ಎಲ್ಲವೂ ಸಿಕ್ಕಿತೆಂಬ ಭಾವ. ಸ್ತ್ರೀಯ ಸಮರ್ಪಣಾ ಭಾವ ಪ್ರೀತಿಯ ಉತ್ಕರ್ಷಕ್ಕೆ ಏರಿದಾಗ ಜಗತ್ತೆಲ್ಲವೂ ತನ್ನ ಆದರ್ಶ ಪುರುಷನ ಮುಂದೆ ಶೂನ್ಯವಾಗುತ್ತದೆ. ತನ್ನ ಬದುಕು, ತನ್ನ ಜೀವನ ಈ ಪುರುಷನಿಲ್ಲದೆ ಅಪೂರ್ಣವಾದಿತೆಂದು ನಂಬುತ್ತಾಳೆ.

ಈ ಎಲ್ಲಾ ಸಮರ್ಪಣಾ ಕಾವ್ಯದಲ್ಲೂ ಗಮನಿಸತಕ್ಕ ವಿಷಯಗಳಷ್ಟೆ ಆತನಿಲ್ಲದ ಬದುಕು ಸಾಧ್ಯವಿದೆಯೆಂಬ ವಾಸ್ತವವಾದರೂ ಅವಳ ಭಾವನೆಗಳು ಅವಳ ಗುರಿ ಎಲ್ಲವೂ ಪಿತೃಪ್ರಧಾನ ಮೌಲ್ಯಗಳಿಂದ ಬಿಡಿಸಿಕೊಳ್ಳದೆ ಆತನ ಮೊರೆ ಹೋಗಿರುತ್ತಾಳೆ. ಸಮರ್ಪಣಾ ಭಾವ ಆದರ್ಶ ಪುರುಷನನ್ನು ವೈಭವೀಕರಿಸಿದರೂ ಪ್ರೇಮದ ಉತ್ಕಟವಾದ ಆಲೋಚನೆಯನ್ನು ತಳ್ಳಿ ಹಾಕುವಂತಿಲ್ಲ.

೨. ಆಶಯ-ಕನಸು

ಆದರ್ಶ ಪುರುಷನ ಕುರಿತಂತೆ ಅರಸುವ ಕನಸುಗಳನ್ನು ಭಾವನೆಗಳನ್ನು ತಿಳಿಸುವಂತ ಹಲವು ಕವನ ನೋಡಬಹುದು. ಅಭಿವ್ಯಕ್ತಿ ಸ್ವಾತಂತ್ರ್ಯ ಸಿಕ್ಕಿದ್ದು ಇತ್ತೀಚಿನ ವರ್ಷಗಳಲ್ಲಿ. ಸಾವಿರಾರು ವರ್ಷಗಳಿಂದ ಅಕ್ಷರ ಸಂಸ್ಕೃತಿಯಿಂದ ದೂರವಿದ್ದ ಸ್ತ್ರೀಗೆ ತನ್ನ ಆಲೋಚನೆಗಳನ್ನು ಆಸಕ್ತಿಗಳನ್ನು ಹೊರಕೆಡವಿದ್ದು ಇತ್ತೀಚಿನ ದಿನಗಳಲ್ಲಿ ಪಿತೃಪ್ರಧಾನ ಸ್ತ್ರೀ ತನ್ನ ಬದುಕಿನಲ್ಲಿ ಪುರುಷನನ್ನು ಮೂಲಧಾರವಾಗಿಟ್ಟುಕೊಂಡಿರುತ್ತಾಳೆ.

ಬೆಳೆದಿರುವ ಬಿದುರುಮಳೆ
ಕೆತ್ತಿ ನೀನದರ ಕೊಳೆ
ಬಣ್ಣ-ಬಣ್ಣದ ಕೊಳಲು
ನಾನಾಗಬೇಕು
ಕೊಳಲು ಕೊರಳಿಗೆ ಜೀವ
ನೀ ತುಂಬಬೇಕು.*[೮]

(ಭಾರತಿ ಪಾಟೀಲ, ಪುಟ-೪೫, ೧೯೯೨)

ಪುರುಷ ಇಲ್ಲಿ ಸಂಕೇತಗೊಂಡಿರುವುದು ಆಶಯದ ನೆಲೆಯಾಗಿ. ಪ್ರಕೃತಿಯ ಹಿನ್ನಲೆಯಂತೆ ಮರ-ಗಿಡ-ಬಳ್ಳಿಯೋಪಾದಿಯಲ್ಲಿ, ಆಶ್ರಯದ ಪರಿಕಲ್ಪನೆಯು ಪಿತೃ

ವ್ಯವಸ್ಥೆಯಲ್ಲಿ ಹೆಣ್ಣಿಗೆ ಗಂಡಿನ ಹೊರತಾದ ಜೀವನದ ಕನಸು ಕಾಣುವುದು ಅಸಾಧ್ಯವಾಗಿರುತ್ತದೆ. ಜೀವನದ ಉನ್ನತಿಯನ್ನು ಗಂಡ ರೂಪಿಸುತ್ತಾನೆಂದು ಕನಸು ಕಾಣುತ್ತಾಳೆ.

ಸ್ತ್ರೀವಾದದ ಪರಿಕಲ್ಪನೆಯಂತೆ ವ್ಯಕ್ತಿತ್ವದ ಪ್ರಜ್ಞೆ (*Feminist Conscience*) ಹೊರತಾದದ್ದು ಪುರುಷನ ಆಶ್ರಯವೇ ಮುಖ್ಯವಾಗುತ್ತದೆ.

ಗಂಟಾದ ಚಿತ್ರದಲ್ಲಿ
ಗಂಟಾಗಿ ಉಳಿಯೋಣ
ಗಂಟೆಲ್ಲವೂ ರಟ್ಟಾಗದಂತೆ
ಗಟ್ಟಿಯಾಗಿ ಬಾಳೋಣ*

(ಶ್ರೀಮತಿ ಪದ್ಮಾ ಬಸವರಾಜು, ಪುಟ-೨೦, ೧೯೮೯)

ದಾಂಪತ್ಯದ ಸಖೀಗೀತದಂತಿರುವ ಈ ಕಾವ್ಯ 'ಗುಟ್ಟು' ಸಂಸಾರದ ಕಣ್ಣು ಎಂಬ ಹೇಳಿಕೆ ನೀಡಿದೆ. 'ಗಂಡ-ಹೆಂಡಿರ ಜಗಳ ಉಂಡು ಮಲಗುವ ತನಕ' ಎಂಬ ಗಾದೆಯಂತೆ ಜಗಳ ಗಂಡ-ಹೆಂಡತಿಯರಲ್ಲಿ ಸಾಮಾನ್ಯ. ಆದರೆ ಅದು ಸಂಸಾರದ ಆಚೆಗಿನ ಪ್ರಪಂಚಕ್ಕೆ ಗೊತ್ತಾಗದಂತೆ ನಿಭಾಯಿಸುವುದು ಯಶಸ್ವಿ ದಾಂಪತ್ಯದ ಗುಟ್ಟಾಗಿದೆ. ಆದರ್ಶ ಪುರುಷನನ್ನು ಕುರಿತಂತೆ ಹೆಣ್ಣು ಸುಂದರ ದಾಂಪತ್ಯಕ್ಕೆ ತಿಳಿ ಹೇಳಿ ದಾಂಪತ್ಯವನ್ನು ಸುಂದರವಾಗಿಟ್ಟುಕೊಳ್ಳಲು ಪ್ರಯತ್ನಿಸಿದ್ದಾಳೆ.

ನಾವಿಬ್ಬರೂ ರಸಸಿದ್ದರು
ಮನೆಯ ಮುಂದಿನಂಗಳದಿ
ಪಾರಿಜಾತದ ಹೂವಿನ ರಂಗೋಲಿ
ಬೆಳಗಿನ ಮಂದಿರದಿ ನಂದಾದೀಪ
ಗಂಧದ ದೂಪ, ಕರ್ಪೂರದಾರತಿ
ಹೊಸ್ತಿಲಲ್ಲಿ ಕುಂಕುಮ ತಳಿರು ತೋರಣ
....
ಒಲವೇ ದೇವಗಂಗೇ
ಮಿಂದ ದೇವಗಂಗೇ
ಮಿಂದ ನಾವಿಬ್ಬರೂ
ಜೀವನ ಪಥಕ್ಕೆ ರಸಸಿದ್ದರೂ.[೧೦]

(ಕುರುರಾಣಿ ನಾಗಲಕ್ಷ್ಮಿ, ಪುಟ-೬೯, ೨೦೦೧)

ಒಟ್ಟಾರೆ ಸುಖ ಸಂಸಾರದ ಒಂದು ಚಿತ್ರಣ ಕೊಡುವ ಕಾವ್ಯ 'ರಸಸಿದ್ಧರು' ಆಗಿದೆ. ಆದರ್ಶ ಪುರುಷನ ಜೊತೆ ತನ್ನನ್ನು ಸೇರಿಸಿಕೊಂಡು ಜೋಡಿಕಲ್ಪನೆಯು ಸಂಸಾರದ ಗಾಡಿಯಲ್ಲಿ ನಾವಿಬ್ಬರೂ ಸೇರಿ ಮುಂದೆ ಹೋದರೆ ಮಾತ್ರ ಜಯ ಸಾಧ್ಯವೆಂದು ಹೇಳಿದ್ದಾರೆ.

ಮಗನೇ ನೀನು ಹೊಟ್ಟೆಯಲ್ಲಿ
ಚಲಿಸುವಾಗ ಈಜಾಡುವಾಗ ಮೀನು
ನಮ್ಮೂರ ಕೆಟ್ಟ ಬಿಸಲಿನಲ್ಲಿ
ಅರಳಿದ ಕೆಂಪು-ಸುಕೇಶದ ಹೂವು[೧೧]

(ಹೆಚ್.ಎಸ್. ಮುಕ್ತಾಯಕ್ಕ, ಪುಟ-೧೦, ೧೯೮೩)

ಗಂಡನ ಬಾಂಧವ್ಯಕ್ಕಿಂತ ಕೆಲವೊಮ್ಮೆ ಮಗನೆಂಬ ಕರುಳಬಳ್ಳಿ ಸಂಬಂಧ ಹೆಚ್ಚು ಆತ್ಮೀಯವಾಗಿರುತ್ತದೆ. ಆತನ ಪ್ರತಿಯೊಂದು ಚಲನೆಯು ಅವಳಿಗದ್ಭುತ.

ನನ್ನ ಕಣ್ಣಂಚಲಿ ಮಿಂಚುವ
ಮಿನುಗುತಾರೆ.
ನನ್ನಿ ನೀಲಾಕಾಶದಲೊಮ್ಮೆ
ಹೊಳೆಯಲೆಂದು ಹಾರೈಸಿ
ಎಷ್ಟು ಹಗಲು ರಾತ್ರಿಗಳು
ಕಳೆದವು.[೧೨]

(ಶೈಲಜಾ ಉಡುಚಣ, ಪುಟ-೩೮, ೧೯೮೧)

ತನ್ನ ಸುಪ್ತ ಭಾವನೆ ಕನಸು ಆಕಾಂಕ್ಷೆಗಳು ಎಲ್ಲವನ್ನು ತನ್ನ ಆದರ್ಶ ಪುರುಷನು ಗಮನಿಸಬೇಕೆಂದು ಹೆಣ್ಣಿನ ಆಶಯ. ಅದಕ್ಕಾಗಿಯೇ ಕನಸು ಕಾಣುತ್ತಾಳೆ. ನಾನಿನಗೆ-ನೀನನಗೆ ಎಂಬ ಕನಸು ಕಲ್ಪನೇ ಅವಳದ್ದಾಗಿದೆ. ಅವನಿಲ್ಲದ ಬದುಕು - ಕನಸು ಸಾಧನೆ ಅವಳಿಗೆ ಶೂನ್ಯವಾಗಿದೆ.

೩. ನಿರೀಕ್ಷೆ

ಪಿತೃ ಪ್ರಧಾನ ಮೌಲ್ಯವುಳ್ಳ ಸಮಾಜದಲ್ಲಿ 'ಆಯ್ಕೆಯ ಸ್ವಾತಂತ್ರ್ಯ' ಹೆಣ್ಣಿಗಿಲ್ಲವಾದರೂ ಬಾಲ್ಯದಲ್ಲಿ ತಂದೆ, ಕಾಮಾರ್ಯದಲ್ಲಿ ಗಂಡ, ಮುದಿತನದಲ್ಲಿ ಮಗ, ಹೀಗೆ ಪುರುಷ ಪ್ರಪಂಚದ ಮಧ್ಯದಲ್ಲೇ ತನ್ನ ಜೀವನವನ್ನು ಕಳೆಯುವ ಮಹಿಳೆಗೆ ಆಯ್ಕೆಯ ಸ್ವಾತಂತ್ರ್ಯವಿಲ್ಲದವರು ಸುಪ್ತ ಮನಸ್ಸಿನಲ್ಲೇ ತನ್ನ ಆಕಾಂಕ್ಷೆ ಭಾವನೆಗಳನ್ನು ಒತ್ತಿಟ್ಟಿರುತ್ತಾಳೆ. ತನ್ನ ಆದರ್ಶ ಪುರುಷನ ಬಗ್ಗೆ ನಿರೀಕ್ಷೆಗಳು ಹಲವಿರುತ್ತದೆ. ಸುಪ್ತ ಮನಸ್ಸಿನ ಭಾವನೆಗಳಿಗೆ ಸುಪ್ತ ಮನಸ್ಸಿನ ನಂಟಿರುವುದಿಲ್ಲ. ಸಮಾಜದ ಕಟ್ಟಲೆಗಳಿರುವುದಿಲ್ಲ. ನಿರೀಕ್ಷೆಗಳಲ್ಲಿ ತನ್ನ ಬದುಕನ್ನು ಕಳೆಯುತ್ತಾಳೆ ಕೆಲವು ನಿರೀಕ್ಷೆ ನಿರೀಕ್ಷೆಯಾಗಿಯೇ ಉಳಿಯುತ್ತದೆ.

ಎಷ್ಟೊಂದು ಕಾಯುವುದು ಮರಾಯ
ನಿನ್ನ ಆಗಮನಕ್ಕಾಗಿ
ಬಿರಿದ ಎದೆ ತುಡಿಯುತ್ತದೆ

ಇಪ್ಪತ್ತೊಂದರ ಹರೆಯದ
ನಿನ್ನ ತೋಳ್ತೆಕ್ಕೆಗಾಗಿ
ತಲೆಕೆಟ್ಟಿದೆ ಮರಾಯ
ತಪ್ಪದೆ ಬರುವೆಯಲ್ಲಾ
ಇಪ್ಪತ್ತೊಂದರ ಅಭಿನಯಕೆ ಪರದೆ ಎಳೆಯಲು[೧೩]

(ಮಾದವಿ ಬಂಡುಕೆರಕೋಣು, ಪುಟ-೧೦, ೨೦೦೧)

ಹದಿಹರೆಯದ ಹೆಣ್ಣು ತನ್ನ ಪ್ರಣಯಸಖನ ಆಗಮನಕ್ಕಾಗಿ ಹಾತೊರೆದಿದ್ದಾಳೆ. ಇಪ್ಪತ್ತೊಂದರ ಹರೆಯದ ಹುಡುಗಿಯದು ಕನಸುಗಣ್ಣಿನ ಕಾಲ. ಜೀನಮಾನದ ಆದರ್ಶ ಪುರುಷನ ಕನಸನ್ನು ಕಾಣುವ ಪರ್ವ ಕಾಲ. ಆದರ್ಶ ಪುರುಷನನ್ನು ಬರುವಿಕೆ ಅವಳ ಇಪ್ಪತ್ತೊಂದರ ಹರೆಯದ ಕನಸು, ನಿರೀಕ್ಷೆ, ಉತ್ತರವಾಗಿದೆ. ನಿರೀಕ್ಷೆ ನಿವೇದನೆ ಮಟ್ಟಕ್ಕೆ ಬೆಳೆದಿದೆ.

ಸುಡುವ ಸೂರ್ಯನಿಗೆ
ಕಂಬಳಿಯ ಮುಸುಕು ಹಾಕಿ
ಚುಕ್ಕಿ-ಚಿತ್ತಾರಗಳಲ್ಲಿ ಬಟ್ಟಲಲ್ಲಿ ಬಳಿದಿಟ್ಟು
ಕಾಮನಬಿಲ್ಲು ಕುಟ್ಟಿ ಪುಡಿ ಮಾಡಿ
ಮನದಂಗಳದಲ್ಲಿ ರಂಗೋಲಿ ಬರೆದು
ಕಾಯುತ್ತಿರುವವಳು ನನ್ನೊಳಗಿನ ಶಬರಿ[೧೪]

(ಮಲ್ಲಿಕಾಘಂಟಿ, ಪುಟ ೨೦-೨೦೦೧)

ತನ್ನ ಕನಸಿನ ಆದರ್ಶ ಪುರುಷನ ನಿರೀಕ್ಷೆ ಇಲ್ಲಿ ಉತ್ಕಟಕ್ಕೇರಿದೆ. ಆತನಿಲ್ಲದ ಬದುಕು ನೀರಸವಾಗಿದೆ. ಅವಳು ಪ್ರೀತಿಗಾಗಿ ಏನು ಬೇಕಾದರೂ ಮಾಡುವಳು. ಅವಳ ಉತ್ಕಟ ಪ್ರೀತಿ ಸೂರ್ಯನಿಗೆ ಮುಸುಕು ಹಾಕಿ ಚುಕ್ಕಿ ಬಟ್ಟಲಲ್ಲಿ ಬಳಿದಿಡುವಂತಾದ್ದು.

ನೀ ಬಾಳಗಗನದಲ್ಲಿ
ಚಂದಿರ ನಿನ್ನ ನಿರೀಕ್ಷಿಸಿದೆ
ದೇವ...
ಆದರೆ ಪೌರ್ಣಿಮೆ ಮಾತ್ರ
ಎಂದಿಗೂ ಬರಲಿಲ್ಲ
ತಾನು ತಾರೆಯಾಗಿ
ಮಿನುಗಲಿಲ್ಲ
ನಿರೀಕ್ಷೆಯಲ್ಲಿ ಬಾಳು ಕಳೆದು
ಬರಡಾಯಿತು.[೧೫]

(ಕವಿತಾಬಗಲಿ-ಹೇಮಲತಬಗಲಿ, ಪುಟ-೨೮, ೧೯೯೯)

ಅತಿಯಾದ ಮಹತ್ವಾಕಾಂಕ್ಷೆ ಆದರ್ಶ ಪುರುಷನ ಮೇಲಿಟ್ಟಿರುವ ನಂಬಿಕೆಯ ಸಂಕೇತವಾಗಿದೆ. ಆತನಿಗಾಗಿ ಏನೆಲ್ಲಾ ಮಾಡಿದರೂ ಅವಳ ನಿರೀಕ್ಷೆ ಶಬರಿಯಂತಾದರೂ ನಿರೀಕ್ಷೆ–ಬರೀ ನಿರೀಕ್ಷೆಯಾಗಿ ಉಳಿದಾಗ ಅವಳಿಗೆ ಬದುಕು ಬರಡೆನಿಸುತ್ತದೆ. ಆದರ್ಶ ಪುರುಷನಿಲ್ಲದ ಬದುಕು ಅವಳ ದೃಷ್ಟಿಯಲ್ಲಿ ಅರ್ಥವಿಲ್ಲವೆಂದಾಗುತ್ತದೆ.

ನೀ ಬಂದೆ ಬರುತಲಿರುವೆ
ಎಂದು ಕ್ಷಣ ಕ್ಷಣಕ್ಕೂ ಸುಖಿಸುವೆ
ಯನ್ನಾದರೂ
ಒಡೆಯ ದುಗುಡ ಕಳೆಯಲಿಲ್ಲ[೧೬]

(ಶೈಲಜಾ ಉಡುಚಣ, ಪುಟ–೫೬, ೧೯೮೧)

ನಿರೀಕ್ಷೆ ಅವಳಿಗೆ ದುಗುಡ ಮೂಡಿಸಿದೆ. ಬರುವನೆಂಬ ಭಾವ ಬಾರದಿದ್ದರೆ ಎನ್ನುವಲ್ಲಿ ಭಯವನ್ನಿರಿಸಿದೆ.

೪. ನಿವೇದನೆ

ಆದರ್ಶ ಪುರುಷನ ಕನಸುಗಳ ಬೆನ್ನು ಹತ್ತಿದ ಮಾನಿನಿಗೆ ಸದಾ ಅವಳಿಗೆ ಅವನ ಬಗ್ಗೆ ಕನಸು, ದಕ್ಕುವನೆಂಬ ನಿರೀಕ್ಷೆ ಇರುತ್ತದೆ. ಇಲ್ಲಿ ಉತ್ಕಟ ಪ್ರೇಮಿಯಾಗಿ ತಾನು ಸುರಿಸುವ ಸಮರ್ಪಣಾ ಭಾವ ಅಂತಿಮದಲ್ಲಿ ಸಿಕ್ಕ ಆ ಆದರ್ಶ ಪುರುಷನಿಗೆ ತನ್ನ ಪ್ರೇಮವನ್ನು ನಿವೇದಿಸುತ್ತಾಳೆ. ನಿವೇದನೆ ಅವಳ ದುರ್ಬಲತೆ ಅಲ್ಲ, ಕೈಲಾಗದಿದ್ದರ ಸಂಕೇತವಲ್ಲ, ಅದು ತನ್ನ ಆದರ್ಶ ಪುರುಷನಿಗೆ ಸಂಪೂರ್ಣ ಶರಣಾಗತಿ.

ಬೇಡಲಿಲ್ಲ ಗೆಳೆಯ
ನೀಲನಭದಲ್ಲಿ
ಸಾಗಿ ಹೋಗುವ
ಬೆಳ್ಳಿ ಬೆಳ್ಮುಗಿಲ
ಗೆಳೆಯ
ಕರಮುಗಿದು ಬೇಡುವೆ
ಬಾಯಾರಿದೆನ್ನೆದೆಗೆ
ನೀಡಲಾರೆಯಾ
ನಿನ್ನಂದೆಂತು ಹೋಂಗನಿಸಹನ
ಮಧುರ ಪ್ರೇಮರಸವ?[೧೭]

(ಪ್ರೇಮತಾಶಿಲ್ದಾರ ಪುಟ–೩, ೧೯೯೯)

ಪ್ರಣಯದಯಾ ಭಿಕ್ಷೆ ಕೇಳುವಲ್ಲಿ ಪ್ರೇಮ ಬಹಿರಂಗದಿಂದ ಅಂತರಂಗವನ್ನು ಪ್ರವೇಶಿಸಿದೆ. 'ಕೈ ಮುಗಿದು ಬೇಡುವೆ' ಎನ್ನುವಲ್ಲಿ ಪ್ರೇಮದ ಉತ್ಕಟತೆ ತುಂಬಿ ನಾನೆಂಬ ಅಹಂಕಾರ ಅಳಿಸಿ ಹೋಗುತ್ತದೆ. ಪ್ರೇಮವೇ ಅತ್ಯುನ್ನತ ಎನ್ನುವುದು ಸ್ಥಾಯಿಯಾಗಿ ನಿಲ್ಲುತ್ತದೆ.

ನಿನ್ನ ಬಗೆಗನ
ಈ ಮಾತನ್ನು
ಮನವಿ ಆಗ್ರಹ ಕೋರಿಕೆ
ಏನನ್ನಾದರೂ ಅನ್ನು
ಆದರೆ ನೀನು
ದುಗುಡ ಕಳಚಿ
ಬಿಗುವು ಬಿಟ್ಟು
ಸದಾ ನಗುತ್ತಿರಬೇಕು[೧೮]

(ಬಿ.ಕೆ.ಮಿನಾಕ್ಷಿ, ಪುಟ–೫೬, ೧೯೯೧)

ನಿವೇದನೆ ಕೆಲವೊಮ್ಮೆ 'ಆಗ್ರಹ' 'ಅಪ್ಪಣೆ'ಯ ಮಟ್ಟ ತಲುಪುವುದೆಂಬ ಭಾವನೆ ಕವಿಯತ್ರಿಯರಲ್ಲಿ ಭಯ ಹುಟ್ಟಿಸುತ್ತದೆ. ತನ್ನ ಕಾಳಜಿ ತನ್ನ ಪ್ರೇಮ ಆಗ್ರಹದ ಮಟ್ಟ ತಲುಪಬಹುದೆಂಬ ಭಯದಿಂದ ಇನಿಯನಿಗೆ ಈ ರೀತಿ ನಿವೇದಿಸುತ್ತಾಳೆ. ತನ್ನ ನಿವೇದನೆ ಕೆಲವೊಮ್ಮೆ ಆಗ್ರಹವೆನಿಸಿದರೂ ಅವಳಿಗೆ ತನ್ನ ಆದರ್ಶ ಪುರುಷನಲ್ಲಿ ತನ್ನ ಮನದಾಳದ ಭಾವನೆ ಅರುಹಲು ನಿವೇದನೆಯನ್ನುಳಿದು ಬೇರೆ ಮಾರ್ಗವಿರುವುದಿಲ್ಲ.

ಓ ಗೆಳೆಯ
ನನ್ನಿಂದ ನೀನು ನಿನ್ನಿಂದ ನಾನು
ಬಯಸುವುದಾದರೂ ಏನನ್ನು
ಸುಂದರವಾದ ಬದುಕನ್ನು
ಆ ಸಹನೀಯ ಯಾತನೆಗಳನ್ನಂತೂ
ಅಲ್ಲ ಅಲ್ಲವೇ?[೧೯]

(ಬಿ.ಕೆ. ಮೀನಾಕ್ಷಿ, ಪುಟ–೫೬, ೧೯೯೧)

ನಿವೇದನೆ ಇಲ್ಲಿ ಅಂತಿಮ ರೂಪವನ್ನು ಪಡೆದಿದೆ. ತನ್ನ ನಿವೇದನೆಯ ಒಟ್ಟು ಅರ್ಥ ಸಾರಾಂಶವನ್ನು ಹೇಳಿದಂತಿದೆ. ನಿವೇದನೆ ಆಗ್ರಹವಲ್ಲ, ಅಪ್ಪಣೆಯಲ್ಲ, ಅದು ತಮ್ಮಿಬ್ಬರ ಬದುಕಿನ ಸುಂದರ ಚಿತ್ತಾರ ಕುರಿತಂತೆ ಹೇಳಿದ್ದಾಗಿದೆ ಎಂಬ ಅಭಿಪ್ರಾಯ ಪಟ್ಟಿದ್ದಾರೆ. ನಿವೇದನೆ ತನ್ನ ಅಂತರಂಗ ಭಾವನೆಗಳನ್ನು ತನ್ನ ಆದರ್ಶ ಪುರುಷನಿಗೆ ರವಾನಿಸುವ ತಂತ್ರವಾಗಿದೆ ಎಂಬುದನ್ನು ಹೇಳಿದಂತಿದೆ.

ಈ ಎಲ್ಲಾ ಕವನಗಳು ಪುರುಷ ಪ್ರಧಾನ ಸಮಾಜ ಹಾಕಿದ ಚೌಕಟ್ಟಿನೊಳಗೆ ಇರುವ ಸಿದ್ಧ ಪಾತ್ರಗಳಿಗೆ ಜೀವಂತಿಕೆಯನ್ನು ನೀಡಿರುವುದನ್ನು ಕಾಣಬಹುದು. ಇಲ್ಲಿ ಹೆಣ್ಣೊಬ್ಬಳ ಮನದಾಳದ ಭಾವನೆಗಳಿದ್ದರೂ ಎಲ್ಲಿಯೂ ಪ್ರತಿರೋಧ, ವಿರೋಧ, ಕಠಿಣ ಮಾತುಗಳಿಲ್ಲ. ಎಲ್ಲವೂ ಕೂಡ ಪುರುಷನ ಅನುಕೂಲವಾದ ಸ್ಥಿತ್ಯಂತರಗಳಲ್ಲಿ ಮುಂದುವರೆಯುತ್ತದೆ ಹೊರತು ಎಲ್ಲಿಯೂ ಸ್ತ್ರೀತನ (*Woman Conscias*) ಬಂಡೇಳುವುದು ಕಂಡು ಬರುವುದಿಲ್ಲ.

ಟಿಪ್ಪಣಿಗಳು

೧. ಆರ್ಕೆ. ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀ, ಸಂಕ್ರಮಣ ಪ್ರಕಾಶನ ೧೯೮೬

೨. ಶಾಂತ ಜಗದೀಶ್, ಮೌಲ್ಯ, ಭಾವಸಂಪದ ಪ್ರಕಾಶನ ೧೯೯೯

೩. ಮಾಲತಿ ಪಟ್ಟಣಶೆಟ್ಟಿ, ಮಹಿಳಾ ಸಾರ್ವತ್ರಿಕ, ಹುಬ್ಬಳ್ಳಿ ಪ್ರಕಾಶನ ೧೯೯೯

೪. ಡಿ.ಎಲ್.ವಿಜಯಲಕ್ಷ್ಮಿ, ಒಳರಾಗ, ಮನು ಪ್ರಕಾಶನ ೧೯೯೧

೫. ಎಚ್.ಎಸ್. ಮುಕ್ತಾಯಕ್ಕ, ಕಭಿ-ಕಭಿ, ನೆಲೆಮನೆ ಪ್ರಕಾಶನ ೨೦೦೦

೬. ಗೀತ ಮಹದೇವ ಪ್ರಸಾದ, ನಿವೇದನೆ, ವೈದ್ಯವಾರ್ತ ಪ್ರಕಾಶನ ೨೦೦೨

೭. ಮಲ್ಲಿಕಾಘಂಟೆ, ರೊಟ್ಟಿ ಮತ್ತು ಹುಡುಗಿ ಗೌತಮ ಪ್ರಕಾಶನ ೨೦೦೧

೮. ಭಾರತೀಪಾಟೀಲ, ಅಕ್ಕಕೇಳವ್ವ ನೆಲೆಮನೆ ಪ್ರಕಾಶನ ೧೯೯೨

೯. ಶ್ರೀಮತಿ ಪದ್ಮಾ ಬಸವರಾಜು, ಸೆಲೆ, (ಒಮ್ಮತ-ಸಮ್ಮತ)ರುಜುವಾತ ಪ್ರಕಾಶನ ೧೯೮೯

೧೦. ಕುರುರಾಣಿ ಕೆ. ನಾಗಲಕ್ಷ್ಮಿ, ಅರೆಕಲ್ಲು, ಸ್ನೇಹಸೇತು ಪ್ರಾಕಾಶನ ೨೦೦೧

೧೧. ಹೆಚ್.ಎಸ್. ಮುಕ್ತಾಯಕ್ಕ.ನಾನು ಮತ್ತು ಅವನು ಪ್ರಶಾಂತ ಪ್ರಕಾಶನ ರಾಯಚೂರು ೧೯೮೩

೧೨. ಶೈಲಜಾ ಉಡುಚಣ, ಸ್ವಗತ, ಧಾರವಾಡ, ಚಂದ್ರನಾಥ ಪ್ರಕಾಶನ ೧೯೮೧

೧೩. ಮಾಧವಿ ಬಂಡು ಕೆರಕೋಣ, ಹರಿದ ಶರ್ಟಿನ ಹುಡುಗಿ, ರಾಘವೇಂದ್ರ ಪ್ರಕಾಶನ ೨೦೦೧

೧೪. ಮಲ್ಲಿಕಾಘಂಟೆ, ರೊಟ್ಟಿ ಮತ್ತು ಹುಡುಗಿ, ಗೌತಮ ಪ್ರಕಾಶನ, ಬಳ್ಳಾರಿ ೨೦೦೧

೧೫. ಕವಿತಬಗಲಿ-ಹೇಮಲತಾಬಗಲಿ, ಜೋಡಿಜೀವ, ೧೯೯೯ ಧಾರವಾಡ ಪ್ರಕಾಶನ ೧೯೯೯

೧೬. ಶೈಲಜಾ ಉಡುಚಣ, ಸ್ವಗತ, ಚಂದ್ರನಾಥ ಪ್ರಕಾಶನ ಧಾರವಾಡ ೧೯೮೧

೧೭. ಪ್ರೇಮ ತಾಶೀಲ್ದಾರ, ಅವಕಾಶ, ನೆಲೆಮನೆ ಪ್ರಕಾಶನ ೧೯೯೯

೧೮. ಬಿ.ಕೆ.ಮೀನಾಕ್ಷಿ, ಭಾವದೊಂದು ಬಿಂದು, ಶ್ರೀದೇವಿ ಪ್ರಕಾಶನ ೧೯೯೧

೧೯. ಬಿ.ಕೆ. ಮೀನಾಕ್ಷಿ, ಭಾವದೊಂದು ಬಿಂದು, ಶ್ರೀದೇವಿ ಪ್ರಕಾಶನ ೧೯೯೧

ಅಧ್ಯಾಯ ೮

ಜಾಗೃತ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ

೮

ಜಾಗೃತ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ

'ಜಾಗೃತಿ' ಎಂಬ ಪದವು ಹಲವು ಪರ್ಯಾಯ ಅರ್ಥಗಳನ್ನು ಸೂಚಿಸುತ್ತದೆ. ಅರಿವು, ಜ್ಞಾನ, ಪ್ರಜ್ಞೆ ಹೀಗೆ ಹಲವು ಅರ್ಥಗಳನ್ನು ಪಡೆಯುತ್ತಿವೆ. ಜಾಗೃತಿ ಮಹಿಳೆಯು ಪಿತೃಪ್ರಧಾನ ಮಹಿಳೆಗಿಂತ ಭಿನ್ನವಾಗುವುದು ಈ ಕಾರಣದಿಂದಲೇ. ಪಿತೃಪ್ರಧಾನ ಮಹಿಳೆಯ ಸಾಂಪ್ರದಾಯಿಕ ಸಂಕೋಚಗಳನ್ನು, ಪುರುಷ ನಿಯಮಿತವಾದ ಕಟ್ಟುಪಾಡುಗಳನ್ನು ಕಿತ್ತೊಗೆದು ಮುಕ್ತವಾಗಿ ಸಂಗಾತಿಯೊಡನೆ ಸಂಭಾಷಿಸುವ, ಆತ್ಮೀಯ ಲಹರಿಯಲ್ಲಿ ಬರೆಯುತ್ತಿರುವ ಇವರ ಸಂವೇದನೆಯ ಮೂಲವನ್ನು ಶೋಧಿಸುತ್ತಾ ಹೊರಟಂತೆಲ್ಲಾ ಸ್ತ್ರೀವಾದಿ ಜಗತ್ತು ಬಾಗಿಲು ತೆರೆಯುತ್ತದೆ.

ಪಿತೃಮೌಲ್ಯ ಸಾಮಾಜಿಕ ಕವನಗಳಿಗಿಂತ ಭಿನ್ನವಾದ ಚೌಕಟ್ಟನ್ನು ಈ ಜಾಗೃತ ಮಹಿಳಾ ಕಾವ್ಯದಲ್ಲಿ ಕಾಣಬಹುದು. ಸಮಾಜದ ಪಿತೃ ವ್ಯವಸ್ಥೆ ಲಿಂಗಾಧಾರಿತ ಸಮಾಜೀಕರಣ ವ್ಯವಸ್ಥೆಗಳು ಸೃಷ್ಟಿಸಿದ ನಿಯಮ ಕಟ್ಟಲೆ, ಸಂಪ್ರದಾಯಗಳು ಇವುಗಳನ್ನು ಹಿಂಬಾಲಿಸಿದ ವರದಕ್ಷಿಣೆ, ಅತ್ಯಾಚಾರ ಲೈಂಗಿಕ ಕಿರುಕುಳ, ಹೀಗೆ ಎಲ್ಲವನ್ನು ಮಹಿಳೆಯು ತನ್ನ ಸ್ತ್ರೀ ಸಂವೇದನೆಯಿಂದ ಅಭಿವ್ಯಕ್ತಿಸಿದ್ದಾಳೆ.

ತನ್ನ ಕವನಗಳಲ್ಲಿ ಪ್ರತಿಭಟನಾತ್ಮಕವಾಗಿಯೇ ಸ್ತ್ರೀ ಅಭಿವ್ಯಕ್ತತೆಯನ್ನು ಶೋಷಿತ ನೆಲೆಗಳ ಅನಾವರಣ, ಆಕ್ರೋಶದ ಪ್ರತಿಭಟನೆ ಹೇಳುವುದರ ಜೊತೆಗೆ ಸ್ತ್ರೀಯ ಅದುಮಿಟ್ಟ ಆಕ್ರೋಶ ಭಾವ, ಸಂವೇದನೆ ಯಥೇಚ್ಛವಾಗಿ ಹರಿದು ಬಂದಿದೆ. ಆಕ್ರೋಶದ ಹಂತದಲ್ಲೇ ಮುಂದುವರೆಯದೆ ಶೋಷಿತ ನೆಲೆಗಳ ಸುತ್ತಾ ಪ್ರಪಂಚವನ್ನು ಬದಲಿಸುವ ಪ್ರಜ್ಞಾಪೂರ್ವಕ ಪ್ರಯತ್ನದ ಮಹತ್ವಾಕಾಂಕ್ಷೆಯನ್ನು ಹೊಂದಿದೆ. ಬದುಕನ್ನು ಸ್ತ್ರೀ ಪುರುಷರಿಬ್ಬರೂ ತಾರತಮ್ಯವಿಲ್ಲದೆ ತೆರೆದಿಡಲು ಬಯಸುವ ಸ್ತ್ರೀದೃಷ್ಟಿಕೋನವು ಪುರುಷ ದೃಷ್ಟಿಕೋನಕ್ಕೆ ಪ್ರಧಾನ ಮಾದರಿಗೊಂದು ಪ್ರತಿಸೃಷ್ಟಿಸಿ ಸವಾಲೆಸೆಯುವುದಿಲ್ಲ. ಇತಿಹಾಸದ ಅಸ್ಪಷ್ಟತೆಗಳನ್ನು ದುರಂತಗಳ ಅನುಪಸ್ಥಿತಿಯನ್ನು ಅರ್ಥೈಸಲು ಹೊರಟಿದೆ. ಪ್ರಧಾನ ಸಂಸ್ಕೃತಿಯ್ನೂ ಭೇದಿಸಿದ ಸಾಧ್ಯತೆಗಳ ಹೊರತಾಗಿಯೂ ಸಾಧ್ಯತೆಗಳಿವೆಯೆಂದು ಮತ್ತೊಂದು ಕಣ್ಣ ನೋಟಕ್ಕೂ, ಪ್ರಧಾನ ಸಂಸ್ಕೃತಿ ಕುರುಡಾಗಿದೆಯೆಂದೂ

ಒತ್ತಿ ಹೇಳುತ್ತದೆ. ದಾಖಲಿಸುವ ಮಾನವ ಅನುಭವಗಳು ಅರ್ಧ ಸತ್ಯವಾಗಿ, ಏಕರೂಪವಾಗಿ, ಪುರುಷ ಪೋಷಿತವಾಗಿ ಅಪೂರ್ಣವಾಗದೆ ಸ್ತ್ರೀಯನ್ನು ಆಕೆಯ ಅನುಭವಗಳನ್ನು ಸಾಧನೆಗಳನ್ನು ಒಳಗೊಂಡು ಪರಿಪೂರ್ಣವಾಗಲು ಸ್ತ್ರೀ ದೃಷ್ಟಿಕೋನ ಅಗತ್ಯವಿದೆ.

ಜಾಗೃತ ಮಹಿಳೆಯ ಕವನಗಳು ನೇರವಾದ ಆಶಯ, ಅನಿಸಿಕೆ, ಆ ವಿಷಯದ ಬಗ್ಗೆ ನಿಖರವಾದ ನಿರ್ಧಾರಗಳು ಒಳಗೊಂಡಿರುತ್ತವೆ. ಜಾಗೃತ ಮಹಿಳೆಯ ಕವನಗಳನ್ನು ಸರದಿಯಂತೆ ನಾಲ್ಕು ವಿಭಾಗವಾಗಿ ಮಾಡಿದ್ದಾರೆ. ಇಲ್ಲಿ ಆದರ್ಶ ಪುರುಷನ ಹುಡುಕಾಟ ಕವನಗಳಲ್ಲಿ ಆತನ ಆದರ್ಶ ಗುಣಗಳನ್ನು ಹೇಳುವ ಜೊತೆಗೆ ಆತನ ಆದರ್ಶವಲ್ಲದ ಗುಣಗಳನ್ನು (*Negative Thoughts*) ತೌಲನಿಕವಾಗಿ ಚರ್ಚಿಸಲಾಗಿದೆ.

ಮಾತಿರಲಿ–ಮೌನವಿರಲಿ
ಜಿಜ್ಞಾಸೆಯಾಕೆ?
ನಡುವೆ ಅರಿವ ತಂತುವೊಂದೇ
ಮನಮನಗಳ ಬೆಸುಗೆ
....
....
ಆತ್ಮರೂಪಿ ಒಲವು ಸದಾ
ಕಾಣದಿದ್ದರೇನು? ಪ್ರೇಮವಿರಲು ದೇಹ ಬರೀ
ನೆಪ ಅಲ್ಲವೇನು?[೧]

(ಜ್ಯೋತಿಗುರುಪ್ರಸಾದ್, ಪುಟ–೭೨, ೧೯೯೧)

ಪ್ರತಿಬಿಂಬಿಸುವಿಕೆ, ಕೆಲವೊಮ್ಮೆ ಹೆಚ್ಚು ಪ್ರೀತಿ, ಇನ್ನೊಮ್ಮೆ ಕೊಚ್ಚಿ ಕೊಲ್ಲುವ ಹುಚ್ಚು ರೋಷ, ಇನ್ನು ಕೆಲವು ಕವನಗಳು ನಿವೇಧನೆಯು ದೈನ್ಯ ಸ್ಥಿತಿಯಲ್ಲಿದ್ದರೂ (*Soft*) ಅಂತಿಮದಲ್ಲಿ ತೆಗೆದುಕೊಳ್ಳುವ ನಿರ್ಧಾರ ಸ್ವಾತಂತ್ರ್ಯ ಹೀಗೆ ಮುಂದುವರೆಯುತ್ತದೆ. ಇದನ್ನು ಒಟ್ಟಾರೆ ಪಿತೃಪ್ರಧಾನ ಚೌಕಟ್ಟನ್ನು ನುಚ್ಚು ನೂರು ಮಾಡುವ ಪ್ರತಿಭೆ. ಇದನ್ನು ಡಿ.ಆರ್. ನಾಗರಾಜುರವರು ಕಾತ್ಯಾಯಿನಿ ಪ್ರತಿಭೆ ಎನ್ನುವರು.

ನಾನೂನು ಹೊಸಬಳು ನೀನೇನು ಹೊಸಬಳು
ಹೊಸತೊಂದು ಹರುಷದ ಹಡಗನಿಂದು
ನಡೆಸಬೇಕಾಗಿದೆ. ಕೂಡಿ ಜೋಡಿ ನಿಂದು
ಅದಕ್ಕಾಗಿ ಪೇಳುವೆ ಒಲುಮೆಯೇ
ಚುಕ್ಕಾಣಿಯಾಗಲೆಂದು
ಅದಕ್ಕಾಗಿ ಪೇಳುವೆ ಒಲುಮೆಯೇ ನಮ್ಮ
ಉಸಿರಾಗಲೆಂದು[೨]

(ಇಂದುಮತಿ ವಿ. ವಿಭೂತಿ, ಪುಟ–೯, ೧೯೬೫)

ಸಮರ್ಪಣಾ ಭಾವವೆಂಬುದು ಪಿತೃಪ್ರಧಾನ ಮೌಲ್ಯ ಕಾವ್ಯಗಳಲ್ಲಿ ಏಕಪಕ್ಷೀಯವಾಗುತ್ತದೆ. ಹೆಣ್ಣು ಮಾತ್ರ ಅಲ್ಲಿ ಸಮರ್ಪಣೆಯ ಭಾವ ಹೊಂದಿರುತ್ತಾಳೆಯೇ ಹೊರತು ಗಂಡು ಆ ಪಾತ್ರದಲ್ಲಿ ಬರುವುದೇ ಇಲ್ಲ. ಆದರೆ ಜಾಗೃತ ಮಹಿಳೆಯ ಕವನಗಳು ಸಮರ್ಪಣಾ ಭಾವವು ಯಾವುದೇ ಲಿಂಗಭೇದವಿಲ್ಲದೆ ಏಕಪಕ್ಷೀಯವಾಗಿರುತ್ತದೆ. ಈ ಕವನದಲ್ಲಿ ನಾನು-ನೀನು ಎನ್ನುವಲ್ಲಿ ನಮ್ಮಿಬ್ಬರ ಭಾವ ಕ್ರಿಯ-ಭಾವನೆಗಳು ಒಂದಾದರೆ ಮಾತ್ರ ಸಂಸಾರದ ಪರಿಕಲ್ಪನೆ ಸುಂದರವಾಗಿರಲು ಸಾಧ್ಯವೆಂದು ಹೇಳಿದ್ದಾರೆ. ಇಲ್ಲಿ ಹೆಣ್ಣು ಹೆಚ್ಚಲ್ಲ, ಗಂಡು ಕಮ್ಮಿಯಲ್ಲ ಇಬ್ಬರೂ ಒಂದು ಗೂಡಿ ಅವರ ನಡುವೆ ಒಲುಮೆ ಇದ್ದರೆ ಮಾತ್ರ ಪ್ರೀತಿ ಸಾಧ್ಯ. ಒಲುಮೆ ದಾಂಪತ್ಯದ ಉಸಿರು. ಆದರೆ ಇದು ತಲೆಕೆಳಗಾದರೆ.

ನನ್ನ-ನಿನ್ನಗಳ ನಡುವೆ ತೋಡಿದ ಈ
ಗೋರಿಯಲ್ಲಿ ಸಮಾದಿಯಾಗುತ್ತಿದ್ದೇನೆ
ನಿನ್ನ ಉದಾಸೀನದ ತೀವ್ರ ವಿಶಾಧಗಳ
ಕೆಂಡದುಂಡೆಗಳು ಇಡಿಯಾಗಿ ಸುಡುವುದು
ಈ ನಿರ್ಭಾವ ಪ್ರೇಮ ಚಿತೆಯಲ್ಲಿ
ನಾ ನಿನ್ನ ಸತಿ ನೀ ಬದುಕಿದಾಗಲೇ
ನಿನ್ನದುರಿಗೆ ಹೀಗೆ ಸತಿ ಹೋಗುತ್ತಿದ್ದೇನೆ.[೩]

(ಶಶಿಕಲಾ ವೀರಯ್ಯಸ್ವಾಮಿ, ಪುಟ-೧೦, ೧೯೯೨)

ಭಾವ ಪೂರ್ಣತೆ, ಸಹಬಾಳ್ವೆ ದಾಂಪತ್ಯದ ಸೂಚನೆಯಿದೆ. ಆದರೆ ಮಹಿಳೆಯ ವಾಸ್ತವದ ಅನುಭವ ಬೇರೆಯೇ ಆಗಿದೆ. ವೈವಾಹಿಕ ಸಂಬಂಧಗಳ ವಿಷಮತೆ, ವೈಫಲ್ಯ, ಅವಳನ್ನು ಕಾಡುತ್ತಲೆ ಬಂದಿದೆ.

ಹೇಗೆ ಹೇಳಲಿ ಗೆಳತಿ
ಅತಿಶೋಕ್ತಿಯ ಮಾತೆನ್ನದಿರು
ಸ್ವರ್ಗಿಯ ಕ್ಷಣಗಳು
ಅವನೊಂದಗಿರುವ ಬದುಕಿನ
ಈ ಕ್ಷಣಗಳು[೪]

(ಲತಾ ರಾಜಾಶೇಖರ್, ಪುಟ-೨೮, ೧೯೯೮)

ಪ್ರೇಮದ ಅತ್ಯುನ್ನತ ಹಂತವೆಂದರೆ ಅದು ಸಮರ್ಪಣೆ. ತಾನು ಕಂಡ ಆದರ್ಶ ಪುರುಷನ ಜೋಡಿ ಸಿಕ್ಕಿದಾಗ ಅವನೊಂದಿಗಿನ ಆ ಕ್ಷಣಗಳು ಸ್ವರ್ಗೀಯ ಭಾವನೆ ತರುತ್ತದೆ. ಆದರ್ಶ ಪುರುಷನ ಕನಸುಗಳ ನನಸಾದ ಸಂದರ್ಭಗಳು ಆ ಕ್ಷಣಗಳಿಗೆ ಸ್ವರ್ಗೀಯವಾಗಿದ.

ಪ್ರಿಯಾ
ನಿನ್ನೆದೆಯಲ್ಲಿ ಮುಖವಿಟ್ಟು
ನಿನ್ನಾಧರಿಸಿ ನಿಂತಾಗೆಲ್ಲಾ
ನಾನೆಂಬುವಳಿದ್ದೇನೆಂಬುದೇ
ಮರೆತು ಹೋಗುತ್ತದೆ.
....
ಆದರೆ ಭಿನ್ನಾಭಿಪ್ರಾಯದ ಒಂದು ಎಳೆ ಇಣುಕಿದರೂ ಸಾಕು
ನೆತ್ತಿಯಿಂದ ಉಂಗುಷ್ಟದವರೆಗೂ
ನರನರದಲ್ಲೂ ನನ್ನ ತನವೆಂಬುದು
ಛಟ್ಟನೆದ್ದು ಬಿಡುತ್ತದೆ.
ವ್ಯಕ್ತಿತ್ವ ತನ್ನಷ್ಟಕ್ಕೆ ತಾನೆ
ಅಸ್ತಿತ್ವಕ್ಕೆ ಬರುತ್ತದೆ.[೫]

(ಶಾಂತಜಗದೀಶ್, ಪುಟ–೧೦. ೧೯೯೧)

ಸಮರ್ಪಣಾ ಭಾವ ಇಲ್ಲಿ ತನ್ನತನದ ವ್ಯಕ್ತಿತ್ವ *Women Conscious* ಜಾಗೃತಗೊಂಡಿದೆ. ಪುರುಷನೊಬ್ಬನ ಬಗ್ಗೆ ಆಳವಾದ ಪ್ರೀತಿ, ಗೌರವ ಅಭಿಮಾನ ಹಾಗೂ ಪ್ರೇಮದ ಉತ್ಕಟಕ್ಕೇರಿದಾಗ ಸ್ಥಿತಿಯಲ್ಲಿನ ಸಮರ್ಪಣಾ ಭಾವ ಇಂಥಾ ಸ್ಥಿತ್ಯಂತರಗಳ ಪುರುಷನ ಅಧೀನಳಾದಳೆಂಬ ಫ್ಯೂಡಲಿಜಂ ಭಾವನೆಯನ್ನು ಒತ್ತಿ ಹೇಳಿದಂತಾಗುತ್ತದೆ. ಆದರೆ ತನ್ನ ಪ್ರೀತಿಯ ಅತ್ಯುತ್ಸಾಹದ ಜೊತೆಗೆ ತನ್ನತನವ(*Self Consciousnes*) ಉಳಿಸಿಕೊಂಡ ಮಹಿಳೆ ಮಾತ್ರ ಜಾಗೃತ ಎನಿಸುತ್ತಾಳೆ.

ಒಡಲ ಕಡಲಲ್ಲಿ
ಮರಿಮೀನಾಗಿ ನೀನು ಈಜುವಾಗ
ಕಚಗುಳಿಯಾಗಿ ಪುಳಿಕಿತವಾಗಿ ಮೈಯೆಲ್ಲಾ
ಜೂಂ ಎಂದಹಾಗೆ
ಮಂಥನದ ನಂತರ ಬಂದ ಬೆಣ್ಣೆ ಮುದ್ದೆಯಂತೆ
ಜಾರಿ ಬಟ್ಟಲಲ್ಲಿ ಕಂಗೊಳಿಸುವೆನು.[೬]

(ಪ್ರತಿಭಾ ನಂದಕುಮಾರ್, ಪುಟ–೮೦, ೧೯೮೮)

ಮಾತೃತ್ವದ ಭಾವತೀರೇಖ ಪ್ರೇಮಿ, ಗಂಡ, ಅಪ್ಪನಷ್ಟೆ ಮಿಗಿಲಾದ ತನ್ನ ಕರುಳಬಳ್ಳಿ ಸಂಬಂಧ ಮಗ ತನ್ನ ಆತ್ಮತಂತು. ತನ್ನ ಅಂತಿಮ ಕಾಲದಲ್ಲಿ ಮುಪ್ಪಿಡಿದಾಗ ಸಂತೈಸುವ ಪಾಲಕನೆಂದು ಕನಸು ಕಾಣುತ್ತಾನೆ. ಆದರೆ ಕೆಲವೊಮ್ಮೆ ಈ ನಿರೀಕ್ಷೆಗಳು ಸುಳ್ಳಾಗಬಹುದು.

ಮಗನಿಗೆ ದೊಡ್ಡ ವಹಿವಾಟು
ಮುಂಬಯಿಯಲ್ಲಿ

ಹಣ್ಣು-ಹಣ್ಣು ಮುದುಕ-ಮುದುಕಿ
ಸಾಗರದ ಒಂದು ಮೂಲೆ
ಚಿಕ್ಕ ಹಳ್ಳಿಯಲ್ಲಿ
ತಪ್ಪದೇ ಬರುವುದು ಮನಿಯಾರ್ಡರ್
ತಿಂಗಳ ಕೊನೆಯಲ್ಲಿ
ಮನೆ ಕಡೆ ಹುಷಾರು
ಕೊಡಿ ತೆಂಗಿಗೆ ನೀರು
ಸಂದೇಶವಿರುವುದು ಮೂಲೆಯಲ್ಲಿ.[೭]

(ಸವಿತಾ ನಾಗಭೂಷಣ್-ಪುಟ-೮೧, ೨೦೦೨)

ಗೂಡಿನಿಂದ ಹಾರಿದ ಹಕ್ಕಿಗೆ ತಾನು ಸ್ವತಂತ್ರ್ಯನೆಂಬ ಭಾವನೆ ಕೆಲವೊಮ್ಮೆ ನಿರೀಕ್ಷೆಗಳು ಸುಳ್ಳಾಗುವುದು ಸಹಜ.

ಜಾಗೃತ ಮಹಿಳಾ ಕಾವ್ಯದಲ್ಲಿ ಆಶಯ

ಜಾಗೃತ ಮಹಿಳೆಯಲ್ಲಿನ ಕಾವ್ಯದಲ್ಲಿ ಆಕೆಯದೆ ಸ್ವರೂಪ ಭಿನ್ನವಾಗಿರುತ್ತದೆ. 'ಆಶಯ' ವೆಂಬ ಭಾವ ತುಂಬಿ ಭಾವನಾತ್ಮಕವಾದ ನೆಲೆಯಲ್ಲಿರುವುದಕ್ಕಿಂತ ಹೆಚ್ಚಾಗಿ ಗಟ್ಟಿ ವ್ಯಕ್ತಿತ್ವದಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ.

ಏಕಾಂತ ಸಮಯದಲ್ಲಿ
ಮೋಹದಪ್ಪುಗೆಯಲ್ಲಿ
ಮೈಮರೆತು ನಿನ್ನೊಡನೆ
ಇರುವ ಪುಳಿಸುವ ಕ್ಷಣವ
ಸ್ಥಿರವಾಗಿ ಅಲ್ಲಿಯೇ ನಿಲ್ಲಿಸುವ ಬಯಕೆ[೮]

(ಎಚ್. ಪ್ರೇಮಲೀಲಾ, ಪುಟ-೫೮, ೨೦೦೧)

ಆದರ್ಶ ಪುರುಷನ ಬಗ್ಗೆ ತಾನು ಕಟ್ಟಿಕೊಂಡ ಕನಸುಗಳು ಸಾವಿರದಷ್ಟಿರುತ್ತದೆ. ಆದರ್ಶ ಪುರುಷ ದಕ್ಕಿದಾಕ್ಷಣ ಅವಳಲ್ಲಿ ಪುಳಕವೇಳುತ್ತದೆ. ಅವನ ಆಕರ್ಷಣೆ ಅಷ್ಟರ ಮಟ್ಟಿಗೆ ಹಿಡಿತ ಸಾಧಿಸುತ್ತದೆ.

ಹುಡುಗ
ನೀನಂದುಕೊಂಡಿರುವಂತೆ
ನಿನ್ನಾಕರ್ಷಣೆ ನನಗೆ
ಸಾಗರದಷ್ಟಿಲ್ಲ
ಆಗಸದಷ್ಟಿಲ್ಲ
ಆಯಸ್ಕಾಂತದಂತೆಯೂ ಅಲ್ಲ

ಆದರೆ ನಿನ್ನ ಪ್ರೀತಿಯ ಸೆಳೆತ
ನನ್ನೂರ ಹುಚ್ಚು ಹೊಳೆಯಲ್ಲಿ
ಕಂಡ ಜೋಡಿ ಮೀನು
ಸುಳಿ ಲೆಕ್ಕಿಸದೆ ಹಿಡಿಯಹೋಗಿ
ಕೈಯ ಬಿಂದಿಗೆ ಜಾರಿ
ಕಕ್ಕಾಬಿಕ್ಕಿಯಾಗಿ ನಿಂತಂತೆ

(ಸಿ.ಎಚ್.ಶಶಿಕಲಾ, ಪುಟ-೧೦, ೨೦೦೪)

ಆಕರ್ಷಣೆಗೊಳಗಾಗುವುದೇ ಅವಳ ಜಾಯಮಾನವಲ್ಲ. ಅವಳು ಆದರ್ಶ ಪುರುಷನಿಗೆ ಅಡಿಯಾಳಾಗಿ ಬಯಸುವುದಿಲ್ಲ ಎಂದು ಒಪ್ಪಿಕೊಂಡಿದ್ದರೂ, ಪ್ರೀತಿಯ ಸೆಳೆತ ಅವಳನ್ನು ಆದರ್ಶ ಪುರುಷನನ್ನು ಹತ್ತಿರಕ್ಕೆ ಸೆಳೆಯುವುದನ್ನು ಒಪ್ಪುತ್ತಾಳೆ.

ಏನ ಕಂಡೆ ನನ್ನಲ್ಲಿ
ಬೆರಗಾದೆ ಏಕೆ
ಮಿರುಗು ಬಣ್ಣಕ್ಕಾ
ಮೈಯ ನುಣುಪಿಗಾ
ಕನಸು ಕಣ್ಣಿಗಾ?[10]

(ದು.ಸರಸ್ವತಿ, ಪುಟ-೧೮, ೧೯೯೭)

ಆಕರ್ಷಣೆ ಅವಳಲ್ಲಿ ಸಹಜವಾದರೂ ಅದರ ಮೋಡಿಯಲ್ಲಿ ಉಳಿಯುವುದಿಲ್ಲ. ಅದಕ್ಕಿಂತ ಮಿಗಿಲಾದುದು ಬೇರೊಂದು ಅಮೂರ್ತತೆಯ ವಿಷಯ. ತಾನು ಆದರ್ಶ ಪುರುಷನ ಮೆಚ್ಚುವದರಲ್ಲಿದೆ ಎಂದಿದ್ದಾಳೆ.

ಒಮ್ಮೆ ಕಣ್ಮುಚ್ಚಿ, ಮನವ ತೆರೆದಿಡು
ಖುಲ್ ಜಾ ಸಿಮ್ ಹಾಡು
ನಿಜಕ್ಕೂ ಧೈರ್ಯವಿದ್ದರೆ
ಆಳದಲ್ಲೇ ಹುದುಗಿ ಹೋದ
ಅವಳ ಭಾವಗಳ ಅರ್ಥೈಸಲು ನೋಡು[11]

(ರೂಪಾ ಹಾಸನ, ಪುಟ-೬೦, ೨೦೦೨)

ಆತ್ಮರೂಪಿ ಆಕರ್ಷಣೆ ಮುಖ್ಯವಾದ್ದು, ಹೊರಗಿನ ಬಾಹ್ಯ ಸೌಂದರ್ಯಕ್ಕಿಂತ ಒಳಗಿನ ಸೌಂದರ್ಯ ಮುಖ್ಯವಾದದ್ದು. ಆದರ್ಶ ಪುರುಷನಲ್ಲಿ ಆಕರ್ಷಣೆಯ ಹೊರತಾದ ಆ ಮೂರ್ತತೆಯ ವಿಷಯ ಆತ್ಮರೂಪಿ ಆಕರ್ಷಣೆ ಎಂಬುದು ಅರಿವಿಗೆ ಬಂದಿದೆ.

ಜಾಗೃತ ಮಹಿಳಾ ಕಾವ್ಯದಲ್ಲಿ ನಿರೀಕ್ಷೆ

ನಿರೀಕ್ಷೆ ಕೇವಲ ಜಾಗೃತ ಮಹಿಳೆಯಲ್ಲಿ ಮಾತ್ರ ಉಳಿದಿಲ್ಲ. ಕಾದ ನಂತರದಲ್ಲಿ ಶಬರಿಯಾಗಿ ಉಳಿಯಲು ಬಯಸುವುದಿಲ್ಲ. ಹಾಗೆಂದ ಮಾತ್ರಕ್ಕೆ ಅವಳ ಉತ್ಕಟ ಪ್ರೇಮಕ್ಕೆ ಧಕ್ಕೆಯೆಂದಲ್ಲ. ಕಾಯುವಿಕೆಯು ಗಂಡಸಿನ ಪ್ರೀತಿಗೆ ಸಂಬಂಧಿಸಿದರೂ ಅವನ ಅಹಂಕಾರವನ್ನು, ಸಮಯ ಸಾಧಕತೆಯನ್ನು ದ್ರೋಹವನ್ನು ಕ್ಷಮಿಸುವುದಿಲ್ಲ.

ಈಗೊಮ್ಮೆ ಆಗೊಮ್ಮೆ
ಬಂದು ಕಾಡುವ ನಿನಗೆ
ಅಲ್ಲಲ್ಲಿ
ಬಂದಂತೆ ಬರಿಯ ಕನಸಾಗಿ
ಕಾಡುವ ನಿನಗೆ
ಏನೆನ್ನಲಿ?
ಕರೆದಾಗ ಬರಲಿಲ್ಲ
ಹಂಬಲಿಸಿದಾಗ ಓಗೊಡಲಿಲ್ಲ
ಈಗ
ಮಾಗಿದ ನೆನಪಾಗಿ ಉಳಿದೆಯಾ[೧೨]

(ಸುಧಾ ಹರೀಶ್, ಪುಟ–೨೮, ೨೦೦೧)

ನಿರೀಕ್ಷೆ ಇಲ್ಲಿ ಜಡವಾಗಿದೆ. ಆದರ್ಶ ಪುರುಷ ಕಲ್ಪನೆ ತಕ್ಕಮಟ್ಟಿಗೆ ಹುಸಿಯಾದಂತಿದೆ. ಹಂಬಲಿಸಿದಾಗ ಕರೆದಾಗ ಬರದ ಗೆಳೆಯ ಇಲ್ಲಿ ಹುಸಿಯಾದ ವ್ಯಕ್ತಿತ್ವದಲ್ಲಿ ಕಂಡು ಬಂದಿದ್ದಾನೆ. ಕಾಯುವುದು ಇಲ್ಲಿ ಅನಗತ್ಯವೆನಿಸಿದೆ. ಆದರ್ಶದ ಹಂಗಿದ್ದಾಗ ಮಾತ್ರ ಬೆಲೆ ಇರುತ್ತದೆ. ಕಾಯುವಿಕೆಗೂ ಅಂತಿಮವಿರುತ್ತದೆ. ಮನವನ್ನು ಮುಟ್ಟದ ಪುರುಷ ಆದರ್ಶ ಪುರುಷನಾಗಲು ಯೋಗ್ಯನಾಗುವುದಿಲ್ಲ.

ಕಪ್ಪು ಕತ್ತಲಿನ ಚಳಿಯೊಳಗೆ
ನಾನಿದ್ದೆ ನೀನಿರಲಿಲ್ಲ
ತಂಗಾಳಿಗೆ ತೂಗುವ ಚಿಗುರೆಲೆಯಾಗಿ
ನೀನಿದ್ದೆ ನಾನಿರಲಿಲ್ಲ
ಹೇಗೆ,
ನೀ ಕೊಂಚ ಸರಿದು ಬಾ
ಬೆಳಕಿನವ ಬಂದಾಗ
'ನಾ' ಇರಲೇಬೇಕು.[೧೩]

(ದು. ಸರಸ್ವತಿ, ಪುಟ–೧೦, ೧೯೯೭)

ನಿರೀಕ್ಷೆ ಇಲ್ಲಿ ಬೇರೊಂದು ಹಾದಿ ಹಿಡಿದಿದೆ. ಇಲ್ಲಿ ಬಳಸಿರುವ ಉಪಮೆ ಕಪ್ಪು-ಕತ್ತಲೆ ಬಿರುಗಾಳಿ–ಇವೆಲ್ಲಾ ಕಷ್ಟದ ಹಾದಿ, ತಂಗಾಳಿ, ಚಿಗುರೆಲೆ, ಬೆಳಕು–ಇವೆಲ್ಲಾ ಸುಖದ ಹಾದಿ, ಕಷ್ಟದ ಹಾದಿಯಲ್ಲಿ ಅಸ್ತಿತ್ವ ಉಳಿಸಿಕೊಳ್ಳದೆ ಸುಖದ ಹಾದಿಯಲ್ಲಿ ಮಾತ್ರ ಜೊತೆಯಲ್ಲಿದ್ದರೆ ಅದು ಆದರ್ಶ ಪುರುಷನ ಸ್ಥಾನ ತುಂಬಲು ಸಾಧ್ಯವಿಲ್ಲ. ಅವಶ್ಯಕತೆಯು ಇಲ್ಲಿ ಅಪ್ರಸ್ತುತವೆನಿಸುತ್ತದೆ.

ಬಿಸಿಲಿನ ತಾಪಕ್ಕೆ ಬಾಯ್ಬಿಡುಮಳೆ
ಹೊಸಜವ್ವನದ ಹೊಸ್ತಿಲ ಹೊಂಗನಸ
ಹಸುಳೆ ಕಾಯ್ದಿಹಳು ತುದಿಬೆರಳಲಿ
ಕಾವೇರಿ ತನುಮನವ
ಹಾಸಿ
ಪ್ರೀತಿ ಸೂಸುವ ಇನಿಯನ ಭರದಪ್ಪುಗೆ
ಬಯಸಿ ಆಲಿಂಗನ
ಹಸಿ ನೆನಪಿನ ಬಿಸಿಯುಸಿರಿಗೆ
ಬಾಯ್ತೆರೆದು[೧೪]

(ಸರೋಜಿನಿ ಪುಟ–೩೦–೧೯೯೯)

ನಿರೀಕ್ಷೆ ಇಲ್ಲಿ ಅವನ ಬರುವಿಕೆಗಾಗಿ ಕಾದು ನಿಂತಿದೆ. ಇಲ್ಲಿ ನಲ್ಲರ ಬರುವಿಕೆಗೆ ಬಿಸಿಲಿನ ತಾಪಕ್ಕೆ ಹಾತೊರೆಯುವ ಇಳೆಯಷ್ಟೆ ಇಲ್ಲಿ ಗಂಭೀರವಾದ್ದು.

ಅಂತೂ ಬಂದಾನು ಕೆಲವೊಮ್ಮೆ ಬಂದಾನೆಂದು ನೀಲಿ
ಸೆರಗಿನ ಕನ್ಯೆ ಕಾದಿದ್ದಾಳೆ ಉಡಿಯಲ್ಲಿ
ಮುತ್ತು ಪಚ್ಚೆ ಹವಳದ ಕುಡಿಗಳು ಹಾಕಿ ನೋಡುತ್ತೇವೆ
ಮನದಲ್ಲಿ
ನೂರು ಮುದ್ದಾನೆಗಳ ತಾಕಲಾಟದ ಮೊರೆಯ[೧೫]

(ಡಾ. ಮಲ್ಲಿಕಾಘಂಟಿ, ಪುಟ–೪೮, ೨೦೦೦)

ಇಲ್ಲಿ ನೂರು ಮದ್ದಾನೆಗಳ ತಾಕಲಾಟದ ಸದ್ದಿನಷ್ಟೆ ಅವಳ ಸಫಲವಾಗಿದೆ ಅವನು ಬಂದಾಗ.

ಜಾಗೃತ ಮಹಿಳಾ ಕಾವ್ಯದಲಿ ನಿವೇದನೆ

ನಿವೇದನೆ ಇಲ್ಲಿ ದೈನ್ಯದ ಸ್ಥಿತಿಯಿಂದ ಬೇರೊಂದು ಸ್ಥಿತಿಗೆ ಸ್ಥಿತ್ಯಂತರ ಹೊಂದಿದೆ.

ನನ್ನ ಕಣ್ಣಿನ ನಿಗೂಢವಾಗಿ
ಶಬ್ದದ ಅರ್ಥವಾಗಿ

ಆತ್ಮದೊಂದಿಗೆ
ಜೀವಂತವಾಗಿದೆ
ಈ ಚಾಲನೆಗೆ ಸಂಚಾಲನೆಯಾಗಿ
ನೀ ಇಲ್ಲದೆಯೇ ನನ್ನಿರುವಿನ ಅರಿವು
ಜಗಿಯುತ್ತಹುದು.[೧೬]

(ಡಿ.ಬಿ.ರಜಿಯಾ, ಪುಟ-೧೦, ೨೦೦೧)

'ನೀ ಇಲ್ಲದೆಯೇ ನಾನಿರುವೆನು ಜಗಿಯುತ್ತಿಹುದು' ಎನ್ನುವಲ್ಲಿ ತನ್ನ ಅಸ್ತಿತ್ವದ ಹುಡುಕಾಟದಲ್ಲಿ ಮಹಿಳೆ ಸಿದ್ಧಳಾಗಿರುವುದು ಎಂದಿದ್ದಾರೆ.

ನೀನು ಸ್ವತಂತ್ರಳು
ಎಂದ ಮಾತ್ರಕ್ಕೆ
ನಾ ಸ್ವತಂತ್ರನಾದೆ
ಎಂದು ಭ್ರಮಿಸದಿರು
ನನ್ನ ಹಳೆಯ ನೆನಪುಗಳು ನನ್ನ
ಹೊಸ ಮನುಷ್ಯಳನ್ನಾಗಿ
ಮಾಡಲಾರೆವು.[೧೭]

(ಲಕ್ಷ್ಮೀದೇವಿಶಾಸ್ತ್ರೀ, ಪುಟ-೧೦, ೨೦೦೨)

ನೀ ಇಲ್ಲದೆಯೂ ನನ್ನಿರುವಿನ ಜಗಿಯುತ್ತಿಹುದೆಂದೂ ತನ್ನ ಅಸ್ತಿತ್ವದ ಬಗ್ಗೆ ಹೇಳಿಕೆ ನೀಡಿದ ಕವಿಯತ್ರಿ 'ನನ್ನ ಹಳೆಯ ನೆನಪುಗಳನ್ನು ನಮ್ಮನ್ನು ಹೊಸ ಮನುಷ್ಯನನ್ನಾಗಿ ಮಾಡಲಾರೆವು'.

ನಿನ್ನ ಸಿಟ್ಟು ಸೆಡವುಗಳನ್ನು
ದಿಕ್ಕರಿಸುತ್ತೇನೆ
ನಿನ್ನ ಪಂಜಿನಂತಹ ಕೈಗಳು
ಸುಕೋಮಲ ಹೂಗಳನು
ಹೊಸಕಿ ಹಾಕುವುದನ್ನು
....
....
ಜ್ವಾಲಾಮುಖಿಯಾಗಲಿ
ಸೂರ್ಯನೆ ಆಗಲಿ
ಸಿಟ್ಟಿನಿಂದ ಆಕ್ರೋಶದಿಂದ
ಯಾರನ್ನು ಸುಟ್ಟ ದಾಖಲೆಗಳು ಇಲ್ಲ

ನೀನು ಭೂಮಿಯ ಆಕಾಶದ
ನಿಯಮಗಳನ್ನು ಮೀರಲಾರೆ.*೧೮

(ಸ. ನಾಗಲಕ್ಷ್ಮಿ, ಪುಟ-೧೦, ೧೯೯೭)

ಸಿಟ್ಟು ಸೆಡವುಗಳನ್ನು ದಿಕ್ಕರಿಸುತ್ತೇನೆ ಎನ್ನುವಲ್ಲಿ, ಸ್ತ್ರೀ ಪ್ರಜ್ಞೆಯನ್ನು ಬಳಸಿದರೂ ನೀನು ಭೂಮಿಯ ಆಕಾಶದ ನಿಯಮಗಳನ್ನು ಮೀರಲಾರೆ ಎನ್ನುವಲ್ಲಿ ಸಮಾಜದ ಕಟ್ಟಲೆಯನ್ನೇ ಪುರುಷನ ಮೇಲಿರಿಸಿ ಒದಲಾಯಿಸುವ ಮೋಹವಿದೆ.

ನಾನು ರಾವಣನ ಹೆಂಡತಿ
ಯಾಗಿರಬೇಕಿತ್ತು ನಿನ್ನಂಥ
ರಾವಣನ ಆಸೆಯಾಗ ಬೇಕಿತ್ತು
ರಾವಣನಿಗೂ ರಾಮನಿಗೂ
ಯಾರಿಗಾದರೂ ಬೇಕೆನಿಸ ಬೇಕಿತ್ತು
ಬೇಡಿಕೆಯನ್ನು ಬೇಡಿ ಪಡೆಯಬೇಕೆ?೧೯

(ಟಿ.ಸಿ.ಪೂರ್ಣಿಮ, ಪುಟ-೧೭, ೨೦೦೧)

ಸ್ತ್ರೀ ಪ್ರಜ್ಞೆಯ ಜಾಗೃತಗೊಂಡು ನಿನ್ನ ಸಿಟ್ಟು-ಸೆಡವುಗಳನ್ನು ಧಿಕ್ಕರಿಸುತ್ತೇನೆ ಎಂದರೂ ಆತನನ್ನು ಸಮಾಜದ ಕಟ್ಟಲೆಗೆ ಸಿಲುಕಿಸಿ ತಾನು ಮಾಮೂಲಿನ ಪಿತೃಪ್ರಧಾನ ವ್ಯವಸ್ಥಿತ ಹೆಣ್ಣಾಗಿ ಉಳಿದಳು. ಅಲ್ಲಿನ ಆಸೆ, ಗಂಡನೊಂದಿಗೆ ಸಹಬಾಳ್ವೆ ಆತನಲ್ಲಿ ಪುರುಷನನ್ನು ನೆಲೆಕಾಣುವುದನ್ನು ಕಾಣಬಹುದು. ಇಲ್ಲಿನ ಕವಿತೆ ರಾಮನ ಹೆಂಡತಿಯಾಗಿ ರಾವಣನ ಆಸೆಯಾಗಿರುವುದು ಎಲ್ಲೋ ಒಂದು ಕಡೆ ಪುರುಷನ ನಿರಾಕರಣೆ, ತಿರಸ್ಕಾರದ ನಡುವಳಿಕೆ ಅವನಲ್ಲಿ ಅಸಂಗತವಾದ 'ಯಾರಿಗಾದರೂ ಬೇಕೆನಿಸುವ ವಿಕ್ಷಿಪ್ತ ಭಾವನೆ ಮುಂದುವರೆದಿರಬೇಕು.

ಹೇಳು ಗೆಳೆಯ
ನಿನಗನ್ನಿಸುವುದಿಲ್ಲವೇ
ನಿನ್ನ ಕನಸಿಗೆ ನಾನು
ಬಣ್ಣ ತರಬಹುದೆಂದೂ
ನನ್ನ ಕನಸಿನ ಹಾಡು
ಕೇಳಿ
ನೀನು ಹಗುರಾಗಬಹುದೆಂದು೨೦

(ಸ.ಉಷಾ, ಪುಟ-೪೨, ೧೯೯೨)

ಪಿತೃ ಪ್ರಧಾನ ಮೌಲ್ಯಗಳನ್ನು ಲಿಂಗವ್ಯವಸ್ಥೆಯನ್ನು ವಿರೋಧಿಸುತ್ತಲೇ ಎಲ್ಲೋ ಒಂದು ಕಡೆ ಅದರ ನೆಲೆಗೆ ಆಶ್ರಯಕ್ಕೆ ಹಾತೊರೆಯುವ ಲಕ್ಷಣ ಕಾಣಬಹುದು. ಧಿಕ್ಕರಿಸುತ್ತೇನೆ ನಿನ್ನ ಸಿಟ್ಟುಗಳನ್ನು ಎಂದ ಹೆಣ್ಣು ಸಮಾಜದ ಕಟ್ಟಲೆ ತೋರಿಸಿ ನೀನು ಭೂಮ್ಯಾಕಾಶದ

ನಿಯಮ ಮೀರಲಾರೆ ಎಂದು ಯಾವ ಹಂಗು ನನಗಿಲ್ಲವೆಂದರೂ, ರಾಮನ ಹೆಂಡತಿ ರಾವಣನ ಹೆಂಡತಿಯಾಗುವ ವಿಕ್ಷಿಪ್ತ ಆಸೆ ಮೂಲಕ ಪುರುಷನೊಬ್ಬನ ಆಕರ್ಷಣೆ ಹಿಡಿಸಬೇಕೆಂಬ ಬಯಕೆ ಅವಳಲ್ಲಿ ಉಂಟಾಯಿತು. ಎಲ್ಲವೂ ಬಿಟ್ಟು ನಡೆವನೆಂಬ ಆಸೆ ಹೊತ್ತ ಹೆಣ್ಣು 'ಹೇಳು ಗೆಳೆಯ ನಿನಗನ್ನಿಸುವುದಿಲ್ಲವೇ ನಿನ್ನ ಕನಸಿಗೆ ನಾನು ಬಣ್ಣ ತರಬಹುದೆಂದೂ, ಎನ್ನುವಲ್ಲಿ ನಿನಗೆ ನನ್ನ ಅವಶ್ಯಕತೆ ಇದೆಯೆಂಬ ಭಾವನೆಯನ್ನು ಒತ್ತಿ ಹೇಳುವುದನ್ನು ನೋಡಿದರೆ ತಾನು ಪುರುಷನ ಹಿಂಬದಿಯಾಗಿ ನೆಲೆ ನಿಲ್ಲಲು ಪ್ರಯತ್ನಪಟ್ಟಂತಿದೆ.

ಟಿಪ್ಪಣಿಗಳು

೧. ಜ್ಯೋತಿ ಗುರುಪ್ರಸಾದ್, ಚುಕ್ಕಿ, ಗುರುವಾತು ಪ್ರಕಾಶನ, ೧೯೯೧, ಪುಟ-೧

೨. ಇಂದುಮತಿ ವಿ. ವಿಭೂತಿ, ಜೀವನಕತೆ, ಲೇಖಕಿಯಿಂದ ಪ್ರಕಟಿತ ಔರಂಗಾಬಾದ್, ೧೯೬೫

೩. ಶಶಿಕಲಾ ವೀರಯ್ಯಸ್ವಾಮಿ, ಗುಬ್ಬಿಮನಿ, ನೆಲಮನೆ ಪ್ರಕಾಶನ ಮೈಸೂರು, ೧೯೮೯

೪. ಲತಾರಾಜಶೇಖರ್, ಅತಿಶೋಕ್ತಿಯ ಮಾತೆನ್ನದಿರು, ರುಜುವಾತು ಪ್ರಕಾಶನ, ೧೯೯೮

೫. ಶಾಂತಜಗದೀಶ್, ಮೌಲ್ಯ, ಭಾವಸಂಪದ ಪ್ರಕಾಶನ, ೧೯೯೧

೬. ಪ್ರತೀಭಾನಂದಕುಮಾರ್, ಈತನಕ, ಕನ್ನಡ ಸಂಘ ಕ್ರಿಸ್ಟ್ ಕಾಲೇಜ್ ೧೯೮೮

೭. ಸವಿತಾನಾಗಭೂಷಣ, ಜಾತ್ರೆಯಲ್ಲಿ ಶಿವ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೨೦೦೨

೮. ಹೆಚ್.ಪ್ರೇಮಲೀಲಾ, ಜೋಡಿ ದೀಪದ ನೆನಪು, ಶೂದ್ರ ಪ್ರಕಾಶನ, ೨೦೦೧

೯. ಸಿ.ಹೆಚ್. ಶಶಿಕಲಾ, ಹುಡುಗ ಮತ್ತು ಪ್ರೀತಿ, ಚಿತ್ರಭಾನು ಪ್ರಕಾಶನ, ೨೦೦೪

೧೦. ದು. ಸರಸ್ವತಿ, ಹೆಣೆದರೆ ಜೇಡದಂತೆ, ಇಳಾ ಪ್ರಕಾಶನ, ಬೆಂಗಳೂರು, ೧೯೯೭

೧೧. ರೂಪಾ ಹಾಸನ, ಒಂದಿಷ್ಟು ಹಸಿಮಣ್ಣು, ನೆಲಮನೆ ಪ್ರಕಾಶನ, ೨೦೦೨

೧೨. ಸುಧಾ ಹರೀಶ್, ನಾದನಿನಾದ, ಸುರೇಖ ಪ್ರಕಾಶನ, ೨೦೦೧

೧೩. ದು. ಸರಸ್ವತಿ, ಹಣೆದರೆ ಜೇಡದಂತೆ, ಇಳಾ ಪ್ರಕಾಶನ, ೧೯೯೭

೧೪. ಸರೋಜಿನಿ, ಸಸ್ಯಶ್ಯಾಮಲ, ಶ್ರೀ ಜಗದ್ಗುರು ೩೦೦೦ ಮಠ, ಇಳಾ ಪ್ರಕಾಶನ, ೧೯೯೯

೧೫. ಡಾ. ಮಲ್ಲಿಕಾಘಂಟಿ, ರೊಟ್ಟಿ ಮತ್ತು ಹುಡುಗಿ, ಗೌತಮ ಪ್ರಕಾಶನ, ೨೦೦೧

೧೬. ಡಿ.ಬಿ. ರಜಿಯಾ, ಕಳೆದುಹೋಗುತ್ತದೆ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ೨೦೦೧

೧೭. ಲಕ್ಷ್ಮೀದೇವಿಶಾಸ್ತ್ರೀ, ಮರೀಚಿಕೆ, ವಿಶ್ವ ಪ್ರಕಾಶನ, ೨೦೦೨

೧೮. ಸ.ನಾಗಲಕ್ಷ್ಮೀ, ಚಂದ್ರನನ್ನು ಕರೆಯಿರಿ, ಭೂಮಿಗೆ ಸಂವಾದ ಪ್ರಕಾಶನ, ೧೯೯೭

೧೯. ಟಿ.ಸಿ.ಪೂರ್ಣಿಮಾ, ಭೂಮಿ ನಿನ್ನದಲ್ಲ, ಪ್ರತಿಭಾ ಪ್ರಕಾಶನ, ೨೦೦೧

೨೦. ಸ.ಉಷಾ, ಈ ನೆಲದ ಹಾಡು, ಸಂವಾದ ಪ್ರಕಾಶನ, ೧೯೯೦

ಅಧ್ಯಾಯ ೯

ಆಧುನಿಕ ಮಹಿಳಾ ಪೌರಾಣಿಕ ಸ್ತ್ರೀ ಪಾತ್ರಗಳ ಮೂಲಕ ಆದರ್ಶ ಪುರುಷನ ಹುಡುಕಾಟ

೯

ಆಧುನಿಕ ಮಹಿಳಾ ಪೌರಾಣಿಕ ಸ್ತ್ರೀ ಪಾತ್ರಗಳ ಮೂಲಕ ಆದರ್ಶ ಪುರುಷನ ಹುಡುಕಾಟ

ಆಧುನಿಕ ಕವಿಯತ್ರಿಯರು ಬಂಡಾಯಕ್ಕೆ ಸಮೀಪವಾದ ಮನೋಧರ್ಮದಿಂದ ಕಾವ್ಯ ರಚಿಸುತ್ತಿದ್ದಾರೆ. ಹಿಂದಿನಿಂದಲೂ ಪೌರಾಣಿಕ ಸ್ತ್ರೀ ಸುತ್ತಾ ಹೆಣೆದ ಪಾತಿವ್ರತ್ಯ ವಿಚಾರ, ಸಂಪ್ರದಾಯ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸುವುದರ ಮೂಲಕ ತಮ್ಮ ಪರಿಕಲ್ಪನೆಯನ್ನು ಅಭಿವ್ಯಕ್ತಗೊಳಿಸಿದರು. ಇಲ್ಲಿ ಕಂಡುಬರುವ ಹೆಣ್ಣಿನ ಚಿತ್ರಣಗಳು ಭೂತಕಾಲದ ಆದರ್ಶಕರವೆನಿಸುವ, ಇಂದಿನ ಜನಾಂಗಕ್ಕೆ ಅನುಕರಿಸುವಂತಹ ಪಾತ್ರಗಳಂತೆ ಚಿತ್ರಿತಗೊಂಡಿದ್ದರೂ ಕೂಡ ಇಂದಿನ ಜಾಗೃತ ಸ್ತ್ರೀ ಕವಿಯತ್ರಿಯರು ಅಂಥಹ ಆದರ್ಶೀಕರಣ ಪಾತ್ರಗಳನ್ನು ಪುನರ್ ವಿಮರ್ಶಿಸುತ್ತಾ ಪ್ರಶ್ನಿಸಿದ್ದಾರೆ. ಆದರ್ಶೀಕರಣ ಸಿದ್ಧಪಾತ್ರಗಳನ್ನು ಪಾತಿವ್ರತ್ಯ, ಧರ್ಮ, ಆದರ್ಶೀಕರಣದ ವರ್ತುಲದಿಂದ ಈಚೆ ಎಳೆದು ಆ ಪಾತ್ರಗಳನ್ನು ಸಾಮಾನ್ಯ ಹೆಣ್ಣಿನಂತೆ ಚಿತ್ರಿಸುವ ಪುರಾಣ, ಧರ್ಮಗಳು ಅವುಗಳನ್ನು ಪಾತಿವ್ರತ್ಯ, ಧರ್ಮದಡಿಯಲ್ಲಿ ಶೋಷಿಸಿರುವ ಬಗ್ಗೆ ಬೆಳಕು ಚೆಲ್ಲುತ್ತಾರೆ.

ಮಹಿಳಾ ಕಾವ್ಯ ಪ್ರಧಾನವಾಗಿ ಪುರಾಣದ ಪಾತ್ರಗಳನ್ನು ಪುನರ್ ವಿಮರ್ಶೆಗೆ ಒಡ್ಡುತ್ತದೆ. ಹೀಗೆ ಒಡ್ಡುವಾಗ ಪುರಾಣ ಸ್ತ್ರೀ ಪಾತ್ರಗಳ ಬಗೆಗೆ ಅನುಕಂಪ, ಪುರುಷ ಆಕ್ರಮಣ ಪ್ರವೃತ್ತಿಯ ವಿರೋಧ ಪುರಾಣ ಪಾತ್ರಗಳನ್ನು ಕಾವ್ಯ ಪ್ರತಿಮೆಯಾಗಿಸುವ ಪ್ರಯತ್ನ ಕಾಡುತ್ತದೆ.

ಶತಮಾನಗಳಿಂದ ಪಂಚಪತಿವ್ರತೆಯರ ಹೆಸರನ್ನು ಒತ್ತಿ ಹೇಳುತ್ತಿರುವ ಪುರಾಣಗಳು ಅವರನ್ನು ಸಾಧ್ವಿ, ಸಾತ್ವಿಕತೆಯ ರೂಪವನ್ನು ಕೊಟ್ಟು ಪುರುಷನ ದಬ್ಬಾಳಿಕೆಯನ್ನು ಸಹಿಸುವಂತೆ ರೂಪಿಸಿಕೊಂಡ ಪುರುಷ ಪ್ರಪಂಚದ ಕುತಂತ್ರವನ್ನು ಆಧುನಿಕ ಕವಿಯತ್ರಿಯರು ಗಮನಿಸಿದ್ದಾರೆ. ಸೀತೆ, ಸಾವಿತ್ರಿ, ದ್ರೌಪತಿಯರನ್ನು ಕಾಣುವ ದೃಷ್ಟಿ ಹೊಸದು. ಅವರ ಮೇಲೆ ಕನಿಕರದ ಜೊತೆಯಲ್ಲಿ ಅವರ ಮೇಲೆ ನಡೆದ ಮೌಲ್ಯಗಳ ಆಕ್ರಮಣವನ್ನು ಕವನ ಹೇಳುತ್ತದೆ.

ಆಧುನಿಕ ಕವಿಯತ್ರಿಯರು ರಾಮಾಯಣ ಮತ್ತು ಮಹಾಭಾರತ ಸ್ತ್ರೀ ಪಾತ್ರಗಳ ಒಳಿತು ಮತ್ತು ಮಾನವೀಯ ಮೌಲ್ಯ, ಮಾನಸಿಕ ವಿಶ್ಲೇಷಣೆಯಡೆಗೆ ಗಮನಹರಿಸುತ್ತಾರೆ. ಪುರಾಣ ಚರಿತ್ರೆಯ ಮೂಲಕ ಗುರುತಿಸಿಕೊಳ್ಳುವ ಹೆಣ್ಣಿಗೂ ಆಧುನಿಕ ಕವಿಯತ್ರಿಯರ ಕಾವ್ಯಗಳಲ್ಲಿ ಗುರುತಿಸಿಕೊಳ್ಳಲು ಪುರಾಣದ ಸ್ತ್ರೀ ಪಾತ್ರಗಳಿಗಿಂತ ಬಿನ್ನವಾಗಿರುತ್ತದೆ. ಪುರಾಣದಲ್ಲಿ ರಚಿತವಾದ ಹೆಣ್ಣು ಮೂಲ ಪುರುಷನ ತಾಳಕ್ಕೆ ತಕ್ಕಂತೆ ನಿರ್ಮಿತವಾದುವುಗಳು. ಸಹನೆ, ತಾಳ್ಮೆಗಳೆಲ್ಲಾ ಆದರ್ಶದ ಬಣ್ಣ ಮೆತ್ತಿಕೊಂಡು ಅಂತರಾಳದ ತುಮುಲವನ್ನೆಲ್ಲಾ ಮುಚ್ಚಿಟ್ಟು ಒಳಗೊಳಗೆ ನಲುಗಿದವಳು.

ಆದರೆ ಪುರಾಣ ಸ್ತ್ರೀ ಪಾತ್ರಗಳು ಆಧುನಿಕ ಮಹಿಳಾ ಕಾವ್ಯಗಳ ಕೈಗೆ ಸಿಕ್ಕಿ ಮರುಜೀವ ಪಡೆದಿವೆ. ಮೈಮೇಲೆ ಆದರ್ಶದ ಬಣ್ಣ ಕಳಚಿ ಅದುಮಿಟ್ಟ ಭಾವನೆಗಳನ್ನೆಲ್ಲಾ ಹೊರಹಾಕಿ ನಿರಾಳವಾಗಿದ್ದಾರೆ. ಬದುಕಿನೊಂದಿಗೆ ತಾದ್ಯತ್ಮತೆ ಹೊಂದುವುದರ ಜೊತೆಗೆ ಬದುಕನ್ನು ಬಗೆಯುವ ಕ್ರಿಯೆಯಲ್ಲಿ ತೊಡಗಿದ ಮಹಿಳೆ ತನ್ನ ದುರಂತದ ಶೋಷಣೆಯ ಬೀಜಗಳನ್ನು ನಮ್ಮ ಪರಂಪರೆಯಲ್ಲಿ ಗುರುತಿಸಿದ್ದಳು.

ಹಲವಾರು ವರ್ಷಗಳ ಒಳಸಂಘರ್ಷ ತಪ್ತ ಭಾವನೆಗಳ ಕಾರಣ ತಿಳಿದ ಕೂಡಲೇ ಹೆಣ್ಣು ಸ್ಫೋಟಿಸಿದಳು. ಆರ್ಭಟಿಸಿದಳು. ಅದಕ್ಕೆ ಅವಳು ಬಳಸಿಕೊಂಡಿದ್ದು ಪರಂಪರಾಗತವಾದ ಆದರ್ಶ ಸ್ತ್ರೀ ಮಾಧರಿಗಳನ್ನು ಆ ಮಾದರಿಗಳು ಈ ಕಾಲಕ್ಕೆ ಅಪ್ರಸ್ತುತವಾಗಿದ್ದರೂ ಅವು ಶಾಶ್ವತ ಸ್ತ್ರೀ ಕುಲಕೆ ಪ್ರಸ್ತುತವಾಗಿದೆ ಎಂಬ ಅರಿವು ಮೂಡಿತು. ಪುರಾಣ ಬಾಜಕತೆಯಿಂದ ಅಭಿವ್ಯಕ್ತಿ ಸಮರ್ಥವಾಯಿತು.

ಪ್ರಸ್ತುತ ಹೊಸಗನ್ನಡ ಮಹಿಳಾ ಕಾವ್ಯದಲ್ಲಿ ಪುರಾಣದಲ್ಲಿ ಆದರ್ಶ ಪುರುಷನ ಹುಡುಕಾಟದ ಅಧ್ಯಯನದಲ್ಲಿ ಒಟ್ಟು ಮೂರು ಭಾಗಗಳಾಗಿ ಮಾಡಲಾಗಿದೆ.

೧. ಪುರಾಣದ ಸ್ತ್ರೀಯರು ಮತ್ತು ಅವರ ಕಲ್ಪನೆಯಲ್ಲಿ ಆದರ್ಶ ಪುರುಷನ ವಿಶ್ಲೇಷಣೆ.

೨. ಪೌರಾಣಿಕ ಪುರುಷ ಮತ್ತು ಪ್ರಸ್ತುತತೆ

೩. ಪೌರಾಣಿಕ ಪುರುಷ ಮತ್ತು ಪ್ರಭುತ್ವದ ನೆಲೆಗಳು

ಪುರಾಣದ ಸ್ತ್ರೀಯರು ಮತ್ತು ಅವರ ಕಲ್ಪನೆಯಲ್ಲಿ ಆದರ್ಶ ಪುರುಷನ ವಿಶ್ಲೇಷಣೆ

ಪ್ರತಿಯೊಂದು ಹೆಣ್ಣಿನ ಅಂತರಾಳದ ತುಮುಲಗಳು ಪ್ರತಿಯೊಂದು ಗಂಡಿನಲ್ಲಿ ಆದರ್ಶತೆಯನ್ನು ಬಯಸುತ್ತದೆ. ಆದರ್ಶತೆ ಎಂಬುದನ್ನು ಮೂಲವಾಗಿಟ್ಟುಕೊಂಡರೆ ಆದರ್ಶದ ಅರ್ಥಗ್ರಹಿಕೆಯ ಹಲವು ಸ್ಥಿತ್ಯಂತರಗಳನ್ನು ಪಡೆಯುತ್ತದೆ. ಮೆಲ್ನೋಟಕ್ಕೆ

ಆದರ್ಶವೆಂದರೆ ಒಳ್ಳೆಯತನ ಮಾದರಿ ವ್ಯಕ್ತಿತ್ವ ಎಂಬ ಸೀಮಿತ ಅರ್ಥ ದೊರಕುತ್ತದೆ. ಆದರೆ ಆದರ್ಶದ ಮಜಲುಗಳು ಬೇರೆಯಾಗಿರುತ್ತದೆ.

ರಾಮನಲ್ಲಿ ಸೀತೆ ಕಂಡ ಆದರ್ಶ, ದ್ರೌಪದಿ ಪಾಂಡವರಲ್ಲಿ ಕಂಡ ಆದರ್ಶ ಬೇರೆ-ಬೇರೆಯಾಗಿರುತ್ತದೆ. ಹೆಣ್ಣಿನ ಪಾತ್ರಗಳು ಪಾತಿವ್ರತ್ಯವನ್ನು ಎತ್ತಿ ಹಿಡಿದರೆ ಪುರುಷ ಪಾತ್ರಗಳು ಆದರ್ಶತೆಯನ್ನು ಎತ್ತಿಹಿಡಿಯುತ್ತದೆ. ಪಾತಿವ್ರತ್ಯೆಯು ಹೆಣ್ಣಿಗೆ ಅನಿವಾರ್ಯ ಮತ್ತು ಅನುಸರಿಸಲೇಬೇಕಾದ ನಿಯಮ ಆದರೆ ಪುರುಷನಿಗೆ ಅದು ಭೂಷಣವೆನಿಸಿದರೂ ಆಗಾಗ್ಗೆ ಮೀರುವ ಅವಕಾಶ ಉಂಟು ಉದಾ. ರಾಮ ವಾಲಿಯನ್ನು ಮರೆಯಲ್ಲಿ ನಿಂತು ಬಾಣ ಹೊಡಿದಿದ್ದು, ಧರ್ಮರಾಯ ಅಶ್ವತ್ಥಾಮ ಸತ್ತನೆಂದು ಸುಳ್ಳಾಡುವುದು.

ಆದರ್ಶದ ಹಂಬಲ ಪೌರಾಣಿಕ ಕಾವ್ಯಗಳ ಸ್ತ್ರೀ ಪಾತ್ರಗಳಿಗೆ ಇಲ್ಲ. ಶ್ರೀ ರಾಮನಲ್ಲಿ ಹಲವು ತಪ್ಪುಗಳಿದ್ದರೂ ದಯಾಳು ಸೀತೆ ಶ್ರೀ ರಘು ರಾಮನಲ್ಲಿ ತಪ್ಪಿಲ್ಲವೆಂದು ಹೇಳುತ್ತಾಳೆ. ಆದರೆ ಆಧುನಿಕ ಕನ್ನಡ ಕವಿಯತ್ರಿಯರ ದೃಷ್ಠಿಯಲ್ಲಿ ಸೀತೆಯೇ ನಿಂತು ಅವನ ತಪ್ಪುಗಳನ್ನು ಖಂಡಿಸುತ್ತಾಳೆ.

ಅಹಲ್ಯಾ ಅಮೃತಮತಿಯರು ಪಾತಿವ್ರತ್ಯವೆಂಬ ಆದರ್ಶದ ಹಂಬಲ ತೊರೆದು ತನ್ನ ಕಾಮನೆಗಳನ್ನು ತೀರಿಸಿಕೊಂಡವರು. ಆದರ್ಶದ ಹಂಬಲ ಅವರಲ್ಲಿ ನಿರಂತರವಾಗಿರುವುದಿಲ್ಲ. ರಾಮಾಯಣ ಇದ್ದಂತಹ ಅತೀ ಆದರ್ಶವು ಮಹಾಭಾರತಕ್ಕೆ ಹೋದೆಂತೆಲ್ಲಾ ಸಡಿಲವಾಗುತ್ತದೆ.

ಆದರ್ಶದ ಹಂಬಲದ ಜಾಡು ಹಿಡಿದ ಸೀತೆ, ದ್ರೌಪತಿ, ಅಹಲ್ಯೆ ದಮಯಂತಿ ಜಾಡು ಹಿಡಿದು ನಡೆಸುವವರಿಗೆ ಕೊನೆಗೆ ಆದರ್ಶ ಪತಿ ದೊರಕಿದ ನಂತರ ಅವರಿಗೆ ತೃಪ್ತಿ ದೊರೆಯಿತೆ? ಎನ್ನುವುದು ದೊಡ್ಡ ಪ್ರಶ್ನೆ. ಆದರ್ಶದ ಆಧುನಿಕ ಕವಿಯತ್ರಿಯರು ಪೌರಾಣಿಕ ಪುರುಷನ ಕವನಗಳಲ್ಲಿ ಆದರ್ಶಕ್ಕಿಂತ ನಕಾರಾತ್ಮಕ ಪುರುಷನನ್ನು ಗುರುತಿಸುವುದು ಹೆಚ್ಚು. ಆದರ್ಶ ಪುರುಷನನ್ನು ಈ ನಕರಾತ್ಮಕ ಗುಣಗಳ ಮೂಲಕ ಸಕಾರಾತ್ಮಕ ಆದರ್ಶದ ಗುಣವನ್ನು ಬಯಸುವ ಬಗೆಯನ್ನು ಹೇಳಲಾಗಿದೆ. ಅವಳ ಆದರ್ಶನದ ಜಾಡು ಎಂತದು ಎಂಬುದು ಹುಡುಕಬೇಕಾಗಿದೆ.

ಸೀತೆಯ ದೃಷ್ಟಿಯಲ್ಲಿ ಆದರ್ಶ ಪುರುಷನಾದ ಶ್ರೀರಾಮನ ಹುಡುಕಾಟ

ಸೀತೆ ಜನಕರಾಜನ ಮಗಳು. ಶ್ರೀರಾಮ ಸೀತೆಯನ್ನು ತನ್ನ ಸ್ವಯಂವರದಲ್ಲಿ ತನ್ನ ಬಿಲ್ವಿದ್ಯೆಯನ್ನು ಪ್ರದರ್ಶಿಸಿ ಮದುವೆಯಾದನು. ಸಾಧ್ವಿ ಸಹನಶೀಲೆ, ಕ್ಷಮಯಾಧರಿತ್ರಿ, ಇಡೀ ರಾಮಾಯಣದ ತುಂಬಾ ಚಿರಪರಿಚತಳಾದ ಸೀತೆ, ಎಲ್ಲಿಯೂ ಹಳಿತಪ್ಪದ ಶ್ರೀರಾಮನ

ಮೇಲಿನ ಪ್ರೀತಿ, ದ್ರೌಪದಿಗೆ ಹೋಲಿಸಿದರೆ ಸೀತೆ ಅನ್ಯಾಯಕ್ಕೊಳಗಾಗಿದ್ದು ಹೊರಗಿನ ಪುರುಷನಿಂದಲ್ಲ (ದುರ್ಯೋಧನ, ದುಶ್ಯಾಸನ) ಆಕೆ ಅನ್ಯಾಯಕ್ಕೊಳಗಾಗಿದ್ದು ತನ್ನ ನೆಚ್ಚಿನ ಪತಿ ರಾಮನಿಂದಲೇ. ರಾಮ ಅಗಸನ ಮಾತಿಗೆ ಕಟ್ಟುಬಿದ್ದು ಕಾಡಿಗೆ ಹೆಂಡತಿಯನ್ನು ಕಾಡಿಗೆ ಕಳಿಸಿದ್ದೆ ವಿಪರೀತದ ವರ್ತನೆ, ಸೀತೆ ಎಲ್ಲವನ್ನು ಸಹಿಸಿ ಶ್ರೀ ರಘು ರಾಮನಲ್ಲಿ ಎಳಷ್ಟು ತಪ್ಪಿಲ್ಲವೆಂದರೂ, ಅಂತಿಮದಲ್ಲಿ ಧರೆಗಿಳಿದು ಹೋದ ಬಗ್ಗೆ ತರ್ಕಿಸಿದಾಗ ಸೀತೆಗೆ ರಾಮನೆಡೆಗೆ ಇದ್ದ ಅಸಮಾಧಾನವಿದ್ದುದರ ಬಗ್ಗೆ ಖಚಿತವಾಗುತ್ತದೆ.

ದ್ರೌಪದಿಯ ಪ್ರತಿಭಟನೆ ಬೋರ್ಗರೆಯುವ ಜಲಪಾತದಂತಿದ್ದರೆ ಸೀತೆಯ ಪ್ರತಿಭಟನೆ ಸಣ್ಣಗೆ ಹರಿವ ಶಾಂತ ಸರೋವರ ಇದ್ದಂತೆ. ಆದರೆ ಅಂತಿಮದ ಪ್ರತಿಭಟನೆಯ ತೀವ್ರತೆ ಶ್ರೀರಾಮನನ್ನು ಮಾನಸಿಕವಾಗಿ ನೋಯುವಂತೆ ಮಾಡಿದ್ದು ಖಚಿತವೆ. ಇಂತಹ ಸೀತೆ ರಾಮನೆಂಬ ಪುರುಷನಲ್ಲಿ ಹುಡುಕಿದ ಆದರ್ಶದ ಹಂಬಲವೇನು?

ಅವಳು ಸೀತೆ ನಿಂತಹಳಲ್ಲೆ
ಲಕ್ಷ್ಮಣ ಎಳೆದ ಲಕ್ಷ್ಮಣ ರೇಖೆಯೊಳಗಲ್ಲೆ
ಲಕ್ಷ್ಮಣ ರೇಖೆಯ ಸವೆದ ಗೆರೆಯ ಹಿಂದೆ
ನೋಡರಿದ ಕೃಶ ಶರೀರವನು
ಹಗಲಿರಳು ನಿಂದು[೧]

(ಸುಧಾಹರೀಶ್–ಪುಟ–೬೧ ೧೯೯೬)

ಸೀತೆಯ ಜೀವನ ಒಂದು ರೀತಿಯಲ್ಲಿ ನಿರ್ದೇಶಿಸಲ್ಪಟ್ಟಿರುವ ಜೀವನ. ಸಹನೆ, ಶೀಲಾ ಸುಂದರಿಯೆಂಬ ಪಟ್ಟಗಳನ್ನು ಹೊತ್ತ ಸೀತೆಗೆ ಸ್ವಂತಿಕೆಗೆ ಜಾಗವೆಲ್ಲಿತ್ತು. ಜೀವನಪೂರ್ತಿ ಲಕ್ಷ್ಮಣರೇಖೆಯ ಹಿಂದೆ ಬಾಳಿದಳು. ದಾಟಿದ ಮರುಕ್ಷಣ ರಾವಣನ ಪಾಲಾದಳೆಂಬ ಭಾವ. ಲಕ್ಷಣ ರೇಖೆಯ ಮಹತ್ವಕ್ಕಿಂತ ಅಲ್ಲಿಯವರೆಗೂ ರಾಮನ ಅಂಕೆಯಲ್ಲಿದ್ದ ಸೀತೆ ಆಸೆಯಿಂದ ಹೊರಬಿದ್ದದ್ದಕ್ಕೆ ಬಿದ್ದ ಪೆಟ್ಟೆಂದು ನಿರ್ಧರಿಸಲಾಗುತ್ತದೆ.

ಅಶೋಕವನದಲ್ಲಿ ಕುಳಿತ
ಇಡೀ ಒಂದು ವರುಷ
ಒಂದು ಸೀರೆಯಲ್ಲಿ
ಕೊಳೆತು ನಾರುತ್ತಿದ್ದ
ಸೀತೆಯ ಕೊಳೆಯಲ್ಲಿ
ನೀರಲ್ಲಿ ತೊಳೆದರೆ
ಹೋಗುವುದಿಲ್ಲವೆಂದು
ಅವಳನ್ನು ಸೀರೆಯ ಸಮೇತ

ಬೆಂಕಿಯೊಳಗೆ ಅದ್ದಿ ತೆಗೆದಿರಬೇಕು
ರಾಮ-ರಾಮ[೨]

(ಶಾಂತ ಜಗದೀಶ್. ಪುಟ-೭೦ ೧೯೯೯)

ರಾಮನಿಗೆ ಸೀತೆಯ ಅಗ್ನಿಪ್ರವೇಶ ಅನಾವಶ್ಯಕವೇ. ಅದೊಂದು ರೀತಿಯ ತೋರ್ಪಡಿಕೆ. ತನ್ನವಳು ಪಾತಿವ್ರತೆಯುಳ್ಳ ಸ್ತ್ರೀ ಎಂದು ಸ್ವತಃ ಗ್ರಹಿಸಿದರೂ ಬೆಂಕಿಗೆ ಹಾಕುವ ಸಾಹಸ, ಜಗತ್ತಿನ ಕಣ್ಣಲ್ಲಿ ತನ್ನ ಸತಿಯ ಪಾತಿವ್ರತ್ಯ ಸಾಧಿಸುವ ರಾಮ ಸೀತೆಗೆ ರಾಮನ ಎಲ್ಲಾ ನಡುವಳಿಕೆಗಳ ಸಹ್ಯವೇನು ಅಲ್ಲ. ಶ್ರೀ ರಘು ರಾಮನಲ್ಲೇನು ತಪ್ಪಿಲ್ಲ ಎಲ್ಲಾ ವಿಧಿ ನಿಯಮವೆಂದರೂ, ಅಂತಿಮದಲ್ಲಿ ಭೂಮಿ ಬಾಯ್ದೆರೆದು ನಿಂತಾಗ ಒಳಗೆ ನಿರ್ಲಿಪ್ತವಾಗಿ ಇಳಿದು ಹೋಗುವ ಸೀತೆಗೆ ಶ್ರೀರಾಮನ ಮೇಲೆ ತಣ್ಣಗಿನ ಪ್ರತಿಕ್ರಿಯೆ.

ನಾ ನಿನ್ನ ಬಯಸಲಿಲ್ಲ ಬಯಸಿದವ ಸಿಕ್ಕಿಲ್ಲ
ಬಿಡೋ ರಾಮ ಬಿಟ್ಟು ಬಿಡೋ
ನಿನ್ನ ತೆಕ್ಕೆಯನ್ನು
ಭೂಮಿ ಬಾಯ್ದೆರೆದು ನುಂಗಿ
ಬಿಡಬಾರದೆ ಎನ್ನ
ಇದೇ ಕೂಗು ಮತ್ತೆ ಮತ್ತೆ ಅರಣ್ಯಧ್ವನಿಕವಾಗುತ್ತದೆ.
ಸೀತೆ ಬದಲಾಗಿಲ್ಲ ಏನೇನು
ಇಲ್ಲಿಯ ಈಗಿನ ಕಥೆ[೩]

(ಬಿ.ಟಿ.ಲಲಿತನಾಯಕ್, ಪುಟ-೧೦ ೧೯೯೦)

ಇಲ್ಲಿ ನಾನು ಬಯಸಲಿಲ್ಲ ಬಯಸಿದವ ಸಿಕ್ಕಿಲ್ಲ ಎನ್ನುವ ಸೀತೆ ಬಯಸಿದ್ದು ಶ್ರೀರಾಮನಾದರೂ, ಆತನ ಆದರ್ಶವಂತ ಒಳ್ಳೆಯ ಪತಿಯನ್ನು. ಅಗ್ನಿಪ್ರವೇಶ ಅವಳ ಶೀಲಕಂಟಿದ ಕೊಳೆಯನ್ನು ತೊಳೆಯುವಂತಾದರೂ ನಂತರದಲ್ಲಿ ಅವಳಿಗೆ ಮುಕ್ತಿ ದೊರಕಲಿಲ್ಲ. ಮತ್ತದೇ ಶೀಲದ ಪ್ರಶ್ನೆ. ಅಗಸನ ಮಾತಿಗೆ ಕಟ್ಟುಬಿದ್ದು ಸೀತೆಯು ಕಾಡಿಗೆ ಹೋಗಬೇಕಾಯಿತು. ಪ್ರೀತಿಸಿದ್ದು ಶ್ರೀರಾಮನಾದರೂ ಆತನ ಪ್ರಶ್ನೆ ಶೀಲದ್ದಾಗಿರುವುದರಿಂದ ಶ್ರೀರಾಮನ ಸಖ್ಯ ಬೇಡವೆನಿಸುತ್ತದೆ.

ತನ್ನ ಸ್ವಪ್ರತಿಷ್ಠೆಗಾಗಿ
ಯಾರಾದರೂ ತಲೆಹಿಡುಕನ ಮಾತಿಗೆ
ಬಾಗಿ ತುಂಬು ಬಸಿಯರನು
ಕಾಡಿಗಟ್ಟಿದಾಗ
ನೀನು ಅಮಾಯಕಳಾಗಿದ್ದು ಹೇಗೆ?[೪]

(ಭಾಗ್ಯ, ಪುಟ-೧೫, ೧೯೮೧)

ಸಾಧ್ವಿ ಸೀತೆ ಅಗ್ನಿಪ್ರವೇಶ ಮಾಡಿದಾಗಲೂ ತನ್ನತನದ ಪ್ರಶ್ನೆ ಎತ್ತಲಿಲ್ಲ. ಅಗಸನ ಮಾತಿಗೆ ಕಟ್ಟು ಬಿದ್ದು ಶ್ರೀರಾಮ ಕಾಡಿಗಟ್ಟಿದ ಶ್ರೀರಾಮನ ಧೋರಣೆ ಎಂತದ್ದು? ದೈವಾಂಶ ಸಂಭೂತನಾದ ಶ್ರೀರಾಮ ಸೀತೆಯನ್ನು ಅಗ್ನಿ ಪ್ರವೇಶ ಮಾಡಿಸಿದ್ದು ಲೋಕದ ತಿಳುವಳಿಕೆಗೆ. ಅದೇ ರಾಮ ಅಗಸನ ಮಾತಿಗೆ ಕಟ್ಟುಬಿದ್ದು ಸೀತೆಯನ್ನು ಕಾಡಿಗೆ ಕಳಿಸಿದ್ದು ಅನಪೇಕ್ಷಣೀಯ. ಇಷ್ಟು ನಿರ್ದಯವಾಗಿ ವರ್ತಿಸುವ ರಾಮನಿಗೆ ಸೀತೆಯ ಅಗ್ನಿಪ್ರವೇಶ ಅವಶ್ಯಕತೆ ಇರಲಿಲ್ಲ. ಸೀತೆಯ ಅಗ್ನಿಪ್ರವೇಶ, ನಂತರದಲ್ಲಿ ಅವಳನ್ನು ಕಾಡಿಗಟ್ಟಿದ್ದು ಎರಡು ಕೂಡ ಲೋಕದ ಜನರ ಮುಂದೆ ದೊಡ್ಡವನಾಗಲು, ಸೀತೆ ಸಾಧ್ವಿಯಾದರೂ ಇಷ್ಟರ ಮಟ್ಟಿಗೆ ಅಮಾಯಕಳಾಗಿರುವ ಅವಶ್ಯಕತೆ ಸೀತೆಗೆ ಇರಲಿಲ್ಲ.

ಸೀತೆಗೆ ಅಗ್ನಿಪರೀಕ್ಷೆ ಮಾಡಿದರೇನಂತೆ?
ಶ್ರೀರಾಮನ ಪಿಶಾಚಿ ಅಗ್ನಿಪ್ರವೇಶ ಮಾಡಲೇ ಇಲ್ಲ.
ಮತ್ತೆ ಆತ ತನ್ನ ಅಟ್ಟ ಹಾಸ ಮೆರೆದಿದ್ದು ಕೊನೆಗೂ
ಅಸಂಬದ್ಧ ನೆಪಗಳು ಹುಡುಕಿ ಅವಳನ್ನು ಕಾಡಿಗಟ್ಟಿತ್ತು
ತಪ್ಪು ಯಾರಾದೋ? ಶಿಕ್ಷೆ ಮಾತ್ರ ಸೀತೆಗೆ
ಅವಳ ವನವಾಸ ಮಾತ್ರ ತಪ್ಪಲಿಲ್ಲ.[೫]

(ಕಾಂತ ದತ್ತಾತ್ರೇಯ, ಪುಟ-೧೦೨ ೧೯೯೬)

ಸೀತೆಯ ಸಾಧ್ವಿತನ ಅವಳಿಗೆ ವರವಾಯಿತೆನ್ನುವುದಕ್ಕಿಂತ ಶಾಪವಾಯಿತು. ಸೀತೆಯ ಅಗ್ನಿಪ್ರವೇಶವು, ಪಾತಿವ್ರತ್ಯದ ಹೆಂಗಸು ತನ್ನ ಸತಿ ಎಂದು ಶ್ರೀರಾಮ ಜನಕ್ಕೆ ಕೈ ತೋರಿಸಿ ಕೊಡುವುದಾಗಿತ್ತು. ಒಂದು ರೀತಿಯಲ್ಲಿ ಶ್ರೀರಾಮ ಪ್ರಭುತ್ವವಾದಿ ಆತ ಸೀತೆಯ ಪತಿಯಾಗಿ ಯೋಚಿಸಲಿಲ್ಲ. ಮತ್ತೆ ಅಗಸನೆಂಬ ಬೇರೆಯವನ ಮಾತಿಗೆ ಕಟ್ಟುಬಿದ್ದು ಕಾಡಿಗಟ್ಟಿದ್ದು ಆತನ ಇನ್ನೊಂದು ರೀತಿಯ ವಿಕೃತವೆ.

ಪತಿಯೆ ಪರದೈವವೆಂದು ನಂಬಿ ನಡೆದ
ಅಭಿಮಾನಿ ಸೀತೆ ಮುದ್ದು ಮಕ್ಕಳ ತಾಯಿ
ಭೂಮಿಯನ್ನು ತೊರೆದು ಹೋಗುವಾಗ
ಭಾವಿಸಿದ ಪರಿಯೇನು ತನ್ನಿಯನೆ?[೬]

(ಸುಮಿತ್ರಾ ಎಲ್.ಜಿ. ಪುಟ-೯೮ ೧೯೯೦)

ಶ್ರೀರಾಮನ ಸಖ್ಯದಲ್ಲಿದ್ದಷ್ಟು ದಿನ ಆತನ ಅನುರಣಿಯಾಗಿ ನಡೆದ ಸೀತೆಗೆ ಯಾವ ಹಂತದಲ್ಲೂ ಪ್ರತಿಭಟನೆ ವ್ಯಕ್ತವಾಗಿರಲಿಲ್ಲ. ಅದು ಅವಳ ಸಾಧ್ವಿತನವಾದರೂ ಅದೇ ಅವಳನ್ನು ಕಾಡಿಗಟ್ಟಿದ್ದು ಸತ್ಯವೇ. ಅಂತಿಮದಲ್ಲಿ ಧರೆಗಿಳಿದು ಹೋಗುವ ನಿರ್ಧಾರ ಒಂದು ರೀತಿಯಲ್ಲಿ ಶ್ರೀರಾಮನಿಗೆ ಬೆಚ್ಚಿ ಬೀಳುವಂತೆ ಮಾಡಿದ್ದು ಖಚಿತವೇ.

ಉಂಟು ಮಿಥಿಲಿಯ ಶಿಲೆಗೆಲ್ಲೂ ರಾಮಪಾದಸ್ಪರ್ಶ.
ಕೇಳಬಹುದು ವಾಲ್ಮೀಕಿ ಆಶ್ರಮದಲ್ಲಿ ಕೂಸುಗಳಗೇಕೆ
ಬೃಹಸ್ಪತಿಯ ತಾರೆಗೂ ಚಂದ್ರೋದಯವಾಗಬಹುದು
ನೋವುಗಳು ಹೆತ್ತ ಕನಸುಗಳು ಕಾದು ಕೂತ ನೋವಿಗೆ
ಮಳೆಯಿಂದ ಎಂದಿಗೆ
ರಾಮಾವತಾರ ಚಂದ್ರೋದಯ ಬರೀ ಕನಸು ಹೆಣ್ಣಿಗೆ[೬]

(ಗಿರಿಜಾಶಾಸ್ತ್ರೀ, ಪುಟ-೧೦, ೧೯೯೫)

ಪ್ರಜಾಪಾಲಕ ಶ್ರೀರಾಮ ಅಯೋಧ್ಯೆಯಲ್ಲಿ ಎಲ್ಲಾ ಪ್ರಜೆಗಳಿಗೂ ದೇವರಾದರೆ, ಪ್ರೀತಿಸಿದ ಹೆಂಡತಿ ಸೀತೆಮಾತೆಗೆ ಕಾಡೆ ಗತಿಯಾಯಿತು. ಎಲ್ಲೋ ಒಂದು ಕಡೆ ಶ್ರೀರಾಮ ಪ್ರಭುತ್ವವಾದಿ ನಿಲುವು ಆತನನ್ನು ಹಾಗೆ ಮಾಡಿತೆನ್ನಬಹುದು. ಪ್ರಭುತ್ವವಾದಿ ರಾಮನಿಗೆ ಜಗತ್ತು ಗೆಲ್ಲುವ ಹಂಬಲ. ಆದನಿಗದೇ ಪ್ರಪಂಚ. ಸೀತೆಗೆ ಶ್ರೀರಾಮನನ್ನು ಹಂಬಲಿಸಿದರೂ ಶ್ರೀರಾಮ ದಕ್ಕಲಿಲ್ಲ. ಶ್ರೀರಾಮನಿಗೆ ತನ್ನ ಪ್ರಭುತ್ವ, ರಾಜ್ಯವೇ ಮಿಗಿಲಾಯಿತು. ಸೀತೆಯ ಅಂತಸತ್ವ ಸ್ಥಿತಿ ಅದೇಕಾಲದ ಅಹಲ್ಯೆ ಮತ್ತು ಶಬರಿಗಿಂತ ಬಿನ್ನವಾಗಿರುವುದನ್ನು ಹೇಳುವಾಗಲೇ ಅವಳ ಮನಸ್ಥಿತಿಯ ಆಳವನ್ನು ಕೆದಕುತ್ತದೆ.

ಅಪ್ಪ ಜನಕ ಕಲಿಸಿದ ಅಕ್ಷರವಿತ್ತು
ಸಾಕವ್ವೆಯರು ಹೇಳಿಕೊಟ್ಟ ಹಾಡ ಮುಟ್ಟಿತ್ತು
ಸುತ್ತ-ಮುತ್ತ ತಾಡಪತ್ರ ಚೆಲ್ಲಿತ್ತು
ಯಾಕೆ ಸುಮ್ಮನೆ ಕುಳಿತೇ ಸೀತಾ ನೀನು[೭]

(ಡಿ.ವಿಜಯಾ ಪುಟ-೧೧೮, ೨೦೦೬)

ರಾಮಾಯಣದಲ್ಲಿ ಪ್ರಾರಂಭದಿಂದ ಅಂತಿಮದವರೆಗೂ ಸೀತೆ ಮೂಕಳಾಗಿದ್ದು ಏತಕ್ಕಾಗಿ. ನುಸುಳಾರಲಾಗದ ಪಾರಂಪರಿಕ ಧರ್ಮ ಪರಂಪರೆಗಾಗಿಯೇ? ಅಥವಾ ಆಗಿನ ಅಂದಿನ ಸಾಮಾಜಿಕ ಪರಿಸ್ಥಿತಿ ಅವಳ ಮೌನಕ್ಕೆ ಕಾರಣವಾಯಿತೇ? ಎನ್ನುವ ಮಾತು ಪ್ರಶ್ನೆಗಳಾಗಿಯೇ ಉಳಿಯುತ್ತದೆ. ಆದರೆ ಶ್ರೀರಾಮನನ್ನು ಪ್ರತಿಭಟಿಸುವ ಅವಕಾಶಗಳಿದ್ದರೂ, ಶ್ರೀರಾಮನೆಡೆಗಿದ್ದ ಅತೀವ ಪ್ರೀತಿ ಅವಳನ್ನು ಮೂಕಳಾಗಿ ಮಾಡಿತೆನ್ನಬಹುದು. ಅಗ್ನಿ ಪ್ರವೇಶದಲ್ಲಾಗಲಿ, ಕಾಡಿಗಟ್ಟಿದಾಗಲಿ ಏರದಿದ್ದ ಪ್ರತಿಭಟನೆ ಅಂತಿಮದಲ್ಲಿ ನೆಲದಾಳಕ್ಕೆ ಇಳಿದು ಹೋಗುವ ಪರಿ ಅವಳ ತಣ್ಣಗಿನ ಪ್ರತಿಕ್ರಿಯೆಯಾಗಿತ್ತು.

ಸೀತೆಯು ಹುಡುಕಿದ ಆದರ್ಶಪುರುಷ ಸಿಕ್ಕಿದ್ದಾನೋ ಇಲ್ಲವೋ? ಆದರೆ ಆಕೆ ಶ್ರೀರಾಮನಲ್ಲಿ ಕಂಡ ಅತೀವ ಪ್ರೀತಿ, ಅದಕ್ಕೆ ಶ್ರೀರಾಮನದು ತಣ್ಣಗಿನ ಪ್ರತಿಕ್ರಿಯೆ. ಆದರ್ಶ ಪುರುಷನನ್ನು ಹುಡುಕ ಹೋಗಿ ಸೋತ ಪ್ರಕ್ರಿಯೆಯನ್ನು ಹೇಳುತ್ತದೆ.

ದ್ರೌಪದಿ ದೃಷ್ಟಿಕೋನದಲ್ಲಿ ಆದರ್ಶ ಪುರುಷ

ದ್ರೌಪದಿ ಮಹಾಭಾರತದ ಪ್ರಮುಖ ಪಾತ್ರ, ಪಂಚ ಪಾಂಡವರ ಪತ್ನಿ. ದ್ರುಪದ ರಾಜನ ಮಗಳಾದ ದ್ರೌಪದಿಯನ್ನು ವೀರನಾದ ಅರ್ಜುನ ಸ್ವಯಂವರದಲ್ಲಿ ಗೆದ್ದು ತಂದನು. 'ಅಮ್ಮ ಹೆಣ್ಣು ತಂದಿದ್ದೇನೆ ನೋಡು' ಎನ್ನುವ ಮಾತು ಅಮ್ಮ 'ಹಣ್ಣು' ತಂದಿದ್ದೇನೆ ಎನ್ನುವ ಹಾಗೆ ಭ್ರಮಿಸಿ ಕುಂತಿ ಐವರು 'ಹಂಚಿ ತಿನ್ನಿ' ಎಂದಳು. ಈ ರೀತಿಯಾಗಿ ಐವರ ಪತ್ನಿಯಾದ ದ್ರೌಪಧಿಯು ಐವರು ಪಾಂಡವರ ಜೀವನದಲ್ಲಿ ಪ್ರಮುಖ ಪಾತ್ರವಹಿಸುತ್ತಾಳೆ.

ಕೌರವರ ಪಗಡೆಯಾಟದಲ್ಲಿ ಪಣದ ವಸ್ತುವಾದ ದ್ರೌಪತಿಯ ಮನೋವ್ಯಥೆ ವಸ್ತ್ರಾಪಹರಣದ ಸಂಧರ್ಬದಲ್ಲಿ ಆದ ಅವಮಾನ ಬೀಕರವಾದ್ದು. ಆದ ಅವಮಾನಕ್ಕೆ ತಕ್ಕ ಹಾಗೆ ಮುಡಿ ಬಿಟ್ಟು ದುರ್ಯೋಧನನ ಅವಸಾನದ ನಂತರದಲ್ಲಿ ಕಟ್ಟಿಕೊಳ್ಳುವೆ ಎಂದು ಪ್ರತಿಜ್ಞೆ ಮಾಡಿದಳು. ಅದರಂತೆ ಮಹಾಭಾರತದ ಯುದ್ಧ ಕಾಲದಲ್ಲಿ ಅವಳು ಪತಿಯನ್ನು ಕೌರವರ ವಿರುದ್ಧ ರೂಚ್ಚಿಗೆಬ್ಬಿಸಿ ಅವರ ಅವಸಾನಕ್ಕೆ ಕಾರಣಳಾದಳು. ಹದಿನಾಲ್ಕು ವರ್ಷದ ವನವಾಸದಲ್ಲಿ ಕಾಡಿನಲ್ಲಿ ಅಲೆದು, ಒಂದು ವರ್ಷ ಅಜ್ಞಾತವಾದಲ್ಲಿ ಸೈರೆಂಧ್ರಿಯಾಗಿ ಪಾಂಡವರ ಜೊತೆಗಿದ್ದುದ್ದು ಸುಲಭವಲ್ಲ.

ಮಹಾಭರತದ ಯುದ್ದದಲ್ಲಿ ತನ್ನ ಎಲ್ಲಾ ಮಕ್ಕಳನ್ನು ಕಳೆದುಕೊಂಡ ದ್ರೌಪದಿಯ ನೋವು ಕಡಿಮೆಯೇನಲ್ಲ. ಅಂತೂ ಅಂದುಕೊಂಡದನ್ನು ಸಾಧಿಸಿದ ದ್ರೌಪದಿಯು ಕೌರವನ ಅವಸಾನದ ನಂತರದಲ್ಲಿ ಧರ್ಮರಾಜನೊಂದಿಗೆ ಸಿಂಹಾಸನ ಏರುವುದರೊಂದಿಗೆ ದ್ರೌಪಧಿಯ ಧಿರೋತ್ತೆಯ ಪಾತ್ರ ಮುಗಿಯುತ್ತದೆ.

ದ್ರುಪದ ರಾಜನ ಮಗಳು ಪಾಂಡವರ ಪತ್ನಿ ಮಹಾಭಾರತದಲ್ಲಿ ತುಂಬಾ ಪ್ರೌಢತೆ ಯುಳ್ಳ ಪಾತ್ರ, ಸೀತೆಯ ಮೃದು ಸ್ವಭಾವಕ್ಕೆ ವಿರುದ್ಧ ಗುಣದವರು. ಸಹಿಸದ ಅನ್ಯಾಯವನ್ನು ಬಂಡೇಳುವಂತೆ ಹೇಳುವ ಬಂಡಾಯಗಾರ್ತಿ.

> ಹೆಣ್ಣಿದ್ದರೂ ಹಣ್ಣಿನಂತೆ
> ಐವರ ಪಾಲಾಗಿದ್ದೇನೆ. ಚಕ್ರವರ್ತಿಯಾಗ
> ಬೇಕಾದವಳು ಆಳು ಆಗಿದ್ದೇನೆ.
> ....
> ಅರ್ಜುನ ಅಣ್ಣನಾಜ್ಞೆಗೆ ನಿಜವಾಗಿಯೂ
> ಹೆಣ್ಣಾಗಿದ್ದಾನೆ

(ಎಂ.ಎಸ್.ವೇದ, ಪುಟ-೬೮, ೧೯೮೯)

ದ್ರೌಪದಿಯು ಐವರ ಪಾಲಾಗಿದ್ದಕ್ಕೆ ಅವಳ ಕಾರಣದಿಂದಲ್ಲ. ಅರ್ಜುನ ದ್ರೌಪತಿಯನ್ನು ಸ್ವಯಂವರದಲ್ಲಿ ಮತ್ಸಯಂತ್ರವನ್ನು ಬೇಧಿಸಿ ಈಕೆಯನ್ನು ವಿವಾಹವಾದರೂ ಕುಂತಿಯ ಮತ್ತು ವ್ಯಾಸರ ಅಪ್ಪಣೆಯಂತೆ ಈಕೆಯು ಐವರು ಪಾಂಡವರ ಪತ್ನಿಯಾದವಳು.

ಇಡೀ ಪಾಂಡವ ವಂಶದ ಮಹಾರಾಣಿ ಈಕೆ. ಐವರು ಪತ್ನಿಯರಿದ್ದು ಅನಾಥೆ. ತಾನು ಹೆಣ್ಣಿನಂತೆ ಐವರ ಪಾಲಾಗಿದ್ದರ ಬಗ್ಗೆ ಚಕ್ರವರ್ತಿಯಾಗಬೇಕಿದ್ದವಳು ವಿರಾಟ ನಗರದ ಸೈರಂಧ್ರಿಯಾದ ಬಗ್ಗೆ ಅಸಮಾಧಾನವಿದೆ. ಭೋಗದ ಅನಾನುಕೂಲತೆಗಳಿಗಿಂತ ತಾನು ಪ್ರೀತಿಸಿದವರಿಂದ ತನಗೆ ದಕ್ಕದೇ ಇರುವ ಪ್ರೀತಿಯ ಬಗ್ಗೆ ಅಸಮಾಧಾನವಿದೆ.

ಕುಂತಿ ಮತ್ತು ವ್ಯಾಸರ ಧರ್ಮದ ಮಾತಿಗೆ ಕಟ್ಟುಬಿದ್ದರೂ ಐವರ ಪತ್ನಿಯಾದದ್ದು ಒಂದು ಕಡೆಯಾದರೆ ಧರ್ಮಜನ ಮಾತಿಗೆ ಕಟ್ಟುಬಿದ್ದ ಅರ್ಜುನನ ನಿರ್ಲಿಪ್ತವರ್ತನೆ ಅವಳ ಮನಸ್ಸನ್ನು ಕೆಡೆಸುತ್ತದೆ.

ಕಪ್ಪುನಾಗರದಂತಹ ಕೂದಲಲ್ಲಿ
ಬಿಳಿಗೂದಲಂತೆ
ಆಳವಾಗುತ್ತಿದ್ದ ನೀನು ಕಿತ್ತು ಹಾಕಿದರೆ
ಮೇಲೇಳಬಹುದು ಬಯಕೆ ಸಂತಾನ
ನಾನು ಸತಿ ಕರ್ಣ ಪತಿಯಾಗೊಮ್ಮೆ
ಎಂದು ಬಯಸುತ್ತಾಳೆ
ದ್ರೌಪದಿ ಪತಿವ್ರತೆ ಮದ್ಯಾಹ್ನ[೧೦]

(ಸುಕನ್ಯಾ ಮಾರುತಿ, ಪುಟ–೬೦, ೧೯೮೫)

ಪಂಚಪತಿವ್ರತೆಯರಲ್ಲಿ ಒಬ್ಬಳು ದ್ರೌಪದಿ, ಶೀಲದ ಪ್ರಶ್ನೆ ಎತ್ತಿದಾಗ ಐವರ ಪತ್ನಿಯಾದ ದ್ರೌಪದಿ ಮತ್ತೆ ಕರ್ಣನನ್ನು ಬಯಸುವುದು ಅಸಂಬದ್ಧವೆನಿಸಿದರೂ ಕುಂತಿಯ ಮಕ್ಕಳ ಪಾರಂಪರ್ಯ ಬಯಸುತ್ತಾಳೆ. ದ್ರೌಪತಿ ಕಾಮುಕಿಯಲ್ಲ. ಆಕೆ ಅಕ್ಷರಸಹಃ ಪ್ರಭುತ್ವದ ಬಂದಿ. ಶಿವನಲ್ಲಿ ತಪಸ್ಸು ಮಾಡಿ ಶಿವನಲ್ಲಿ ನನಗೆ ೫ ಪತಿಗಳಲ್ಲಿ ಒಬ್ಬರೊಡನೆ ಸಂಗವು ಪ್ರಾಪ್ತಿಯಾದಾಗಲೆಲ್ಲಾ ನನ್ನ ಯೌವನವು ಇಳಿಯದೆ ಹೆಚ್ಚುತ್ತಿರಬೇಕು ಎನಲು ಶಿವನು ಭದ್ರೆ ಕಾಮಸುಖವು ತಪಸ್ಸಿದ್ದಿಯು ಕೇವಲ ವಿರುದ್ಧಗಳಾದರೂ ನಿನಗೆ ನಿನ್ನ ಬಯಕೆಯಂತೆ ಅವರೆಡೂ ಒಟ್ಟು ಲಬಿಸಲಿ ಎಂದನು. ಕಾಮದಲ್ಲಿ ತಪಸ್ಸಿದ್ದಿ ಕಾಣುವ ದ್ರೌಪದಿಯು ಕಾಮುಕಿಯಲ್ಲ.

ಜಗತ್ತಿನ ಸುಂದರಿ ಕೃಷ್ಣನ ಕಣ್ಣಿನ
ಪ್ರಪಂಚದ ತುಂಬಾ ಮೆತ್ತಿಕೊಂಡಿದ್ದು
ಸಾಮ್ರಾಜ್ಯ ಕನಸು

ಐದು ಬೆರಳ ಮುಷ್ಟಿಯಲ್ಲೆ ಕಳೆದುಹೋಯ್ತಲ್ಲೆ
ಹಗಲು ರಾತ್ರಿ
ವನವಾಸದುದ್ದಕ್ಕೂ ಬಿಚ್ಚದೇ ಹೋದ
ಹಳೆಹಳಿಕೆಯ ಗಂಟನ್ನು ಹೀಗೇಕೆ
ಬಿಚ್ಚುತ್ತೀಯಾ
ಇಲ್ಲಿಗೇತಕೆ ಹೀಗೆ ಬಿಕ್ಕುತ್ತೀಯೊ?
ಹುಶ್ ಸುಮ್ಮನಿರು
ಜಗತ್ತಿಗೆ ಗೊತ್ತಾಗಬಾರದು[೧೧]

(ಅನುಸೂಯ ಎಂ.ಕೆ.–ಪುಟ–೮೦, ೨೦೦೦)

'ಐದು ಜನರ ಮುಷ್ಟಿಯಲ್ಲೆ ಕಳೆದು ಹೊಯ್ತಲ್ಲೆ ಸಾಮ್ರಾಜ್ಞೆಯ ಕನಸು' ಎನ್ನುವಲ್ಲಿ ಐವರು ಗಂಡಂದಿರು, ಧರ್ಮಜನ ಧರ್ಮ ಅದಕ್ಕೆ ಕಟ್ಟುಬಿದ್ದ ನಾಲ್ವರು, ಪಾಂಡವರ ತಲೆತಗ್ಗಿಸಿದ ಮನೋಭಾವ ಅವಳಲ್ಲಿ ಸಾಮ್ರಾಜ್ಞೆಯ ಕನಸು ಕಮರಿಸಿತು. ಅಜ್ಞಾತ ವಾಸದಲ್ಲಿ ಸೈರಂಧ್ರಿಯಾಗಿ ಸೇವೆ ಸಲ್ಲಿಸುವ ದ್ರೌಪದಿಗೆ ಸಾಮ್ರಾಜ್ಞೆ ಕನಸು ಕಮರಿದ್ದು ಸತ್ಯವೇ.

ಒಳಗಿದ್ದ ಚೈತನ್ಯವಾಯುವಲ್ಲ
ದುರ್ಯೋಧನ ದುಶ್ಯಾಸನರ ಆಟೋಟಪಕ್ಕೆ
ಕೋಪಕ್ಕೆ ಪಟ್ಟೆಂದು ಒಡೆದು ತೂತಾಗಿ
....
ಚೈತನ್ಯ ಕಣ್ಣು ತೆರೆಯುವಾಗಲೆಲ್ಲಾ
ಕೇಳುತ್ತೇನೆ
ದ್ರೌಪದಿ ನೀನು ಹೇಗೆ ಸತ್ತಿದ್ದೀಯಾ
ಮತ್ತೆ ಬದುಕಿದ್ದೀಯಾ?[೧೨]

(ಭಾಗ್ಯ–ಪುಟ–೭೦, ೧೯೮೧)

ಗಳಿಸಿದ್ದಕ್ಕಿಂತ ಕಳೆದುಕೊಂಡಿದ್ದು ಬಹಳವೇ ಎನ್ನುವ ದ್ರೌಪದಿ ಅಂದುಕೊಂಡ ಗುರಿಗಿಂತ ಆದ ಅಪಮಾನವೇ ಹೆಚ್ಚು. ದ್ರೌಪದಿ ಬದುಕು ಸೀತೆಗಿಂತ ಕ್ರಿಯಾಶೀಲ ಎಲ್ಲಿಯೂ ಬೆಂಡಾಗಲಿಲ್ಲ. ನೊಂದ ಹೆಣ್ಣಿನ ಪರವಹಿಸಿದ ಕವಿಯತ್ರಿ ಯಾವುದೇ ಒಂದು ದುರ್ದಿನ ಹಂತದಲ್ಲಿ ದ್ರೌಪದಿಯನ್ನು ನೆನಪಿಸುತ್ತಾಳೆ. ದ್ರೌಪದಿ ದಿಟ್ಟೆ, ಸೀತೆಯ ಹಾಗೆ ತನ್ನೆಲ್ಲಾ ನೋವುಗಳನ್ನು ತನ್ನಲ್ಲೆ ಮಡುಗಟ್ಟಿಸುವುದಿಲ್ಲ. ಕೈ ಚೆಲ್ಲಿ ಕೂರಲಿಲ್ಲ. ಆಕ್ರೋಶಗೊಂಡಳು, ಧರ್ಮದ ಅಮಲಿನಲ್ಲಿದ್ದ ಪಾಂಡವರನ್ನು ಚುಚ್ಚು ಮಾತಿನಲ್ಲಿ ಚುಚ್ಚಿ ಅವರಲ್ಲಿ ಚೇತನವನ್ನು ತುಂಬಿ ಅವರನ್ನು ಕುರುಕ್ಷೇತ್ರಕ್ಕೆ ಅಣಿಮಾಡಿಸಿದಳು.

ಅಜ್ಞಾತದ ಬರಡು ಬೇಸಿಗೆಯಾಗಿ
ಮತ್ತೆ ಹಸಿರು ಕನಸ ಚಿಗಿರಿಸಿಕೊಂಡು

ವರ್ಷದುದ್ದಕ್ಕೂ ಬದಲಾಯಿಸುತ್ತಲೇ
ಬದುಕಿದ
ಋತುವಿನಂತೆ ಬಾಳಿದ ದ್ರುಪದ
ನಂದನೆಯ
ಎದುರು ಬೆಟ್ಟದಂಥೆ ಬೆಳೆದ ಯುದಿಷ್ಠರನ
ಹಿಡಿಯಗಲಿದ ಎದೆಯಲ್ಲಿ[೧೩]

(ಸರಸ್ವತಿ ಗೌಡ, ಪುಟ-೧೦೮, ೧೯೮೦)

ಹೆಣ್ಣಿನ ಜಾಯಮಾನಕ್ಕೆ ದ್ರೌಪತಿಯ ಹಿರಿಯ ಬಾಳಿಗೆ ತುಂಬ ತಕ್ಕುದಾದ ಋತು ಪರಿವರ್ತನಶೀಲ, ಜೀವಂತ ಬೆಲೆ, ಸ್ಥಿರ. ನಿರ್ಜೀವ ದ್ರೌಪದಿ ಬದಲಾಯಿಸುತ್ತಲೇ ಇರುವವಳು ಬೆಳೆಯುತ್ತಲೇ ಇರುವಳು. ಯುದಿಷ್ಠರ ಬೆಳೆದವನು. ಬೆಳೆದು (ಬೆಳೆಯುವುದು) ನಿಂತಿರುವವನು. ಈ ವೈದೃಶ್ಯ(contrast)ವನ್ನು ಇವರಿಬ್ಬರ ಪಾತ್ರ ಕಲ್ಪನೆಯಲ್ಲಿ ಗುರುತಿಸಿದಾಗ ಗಂಡನನ್ನು ಬೆಳೆಸುವವಳು ಸ್ವತಃ ವಿಕಸನಶೀಲೆಯ ಚೈತನ್ಯದ ಬಗ್ಗೆಯೂ ಆದ ಹೆಣ್ಣು-ಎಂಬ ತರ್ಕಬದ್ಧವಾದ ಸತ್ಯ ಸ್ಥಾಪಿತವಾಗುತ್ತದೆ.

ದ್ರೌಪದಿಯ ಸೆರೆಗಳೆದ ದುಶ್ಯಾಸನನ
ದೌರ್ಜನ್ಯ ಕಡಿಮೆಯಿತ್ತೇನು?
....
ಮಾತು ಮಾತಿಗೂ
ನನ್ನ ಇಂದು ನಾಳೆಗೂ
ಹೆಣ್ಣೆ ಎಲ್ಲಕ್ಕೂ ಕಾರಣ ಎನ್ನದಿರು
ನಿನ್ನ ಮಾತಿನ ಸಮರ್ಥನೆಗೆ
ಹೆಣ್ಣೆ ಮೇಲಿನ ದೋಷಣೆಗೆ
ಮಹಾಭಾರತ ರಾಮಾಯಣ ಮುಂದೆ ಮಾಡಿದರು[೧೪]

(ವೇದ, ಪುಟ-೬೯, ೧೯೮೭)

'ಪುರುಷ-ದ್ರೌಪದಿಯ ಜೀವನದಲ್ಲಿ ಕೇಂದ್ರಬಿಂದು. ಐವರು ಪಾಂಡವರ ಪತ್ನಿ ಕರ್ಣನನ್ನು ಜೊತೆಗೆ ಬಯಸಿದಾಕೆ. ಹಂಬಲಿಸಿದ್ದು ಪ್ರೀತಿಯನ್ನು ವಸ್ತ್ರಾಪಹರಣದ ಅವಧಿಯಲ್ಲಿ ಸೆರೆಗಳೆದವನು ದುಶ್ಯಾಸನೆಂಬ ಪುರುಷ, ವಿರಾಟನಗರ ಕಾಮಪಿಪಾಸಿ ಕೀಚಕ, ಮಕ್ಕಳನ್ನು ಕೊಂದ ಅಶ್ವತ್ಥಾಮ... ಅಣ್ಣನ ಪ್ರೀತಿಯ ಕೊಟ್ಟ ಶ್ರೀಕೃಷ್ಣ ಹೀಗೆ ಅವಳ ಜೀವನದ ಕೇಂದ್ರ ಬಿಂದು ಅವಳ ಜೀವನದಲ್ಲಾದ ತಿರುವುಗಳೆಲ್ಲಾ ಪುರುಷನಿಂದಲೇ ಆದದ್ದು. ಮಹಾಭಾರತ, ಅದರ ಪರಿಸ್ಥಿತಿಗಳ ಕಾರಣ ಒತ್ತಡ, ತಿರುವುಗಳು ಸಂಪೂರ್ಣವಾಗಿ

ಪುರುಷನಿಂದ ಅವಲಂಬಿತವಾದದ್ದು ಆದರೆ ಇಡೀ ಮಹಾಭಾರತ ದ್ರೌಪದಿ ಸೇಡು ಎಂಬುದಾಗಿ ಅರ್ಥೈಸುವುದು ಅಸಂಬದ್ಧ.

ಪುರುಷ ಸಾಮ್ರಾಜ್ಯದ ಆಸ್ಥಾನದಲ್ಲಿ
ದುಶ್ಯಾಸನರ ಮರುಹುಟ್ಟು ಆಗುತ್ತಲೇ ಇದೆ
ದೃತರಾಷ್ಟ್ರನಿಗೆ ಕಿರೀಟ ದಕ್ಕುತ್ತಲೇ ಇದೆ
ತೇಲುತಿದೆ ಬಾನಗಲ ಹೆಣ್ಣು ಬಿಚ್ಚಿಹ
ಸೀರೆಗಳು
ಬಾನಲ್ಲಿ ಅನುಕರಣಿಸುತ್ತದೆ ದ್ರೌಪತಿಯರ
ಬೇರಾವ
ಪತಿಯ ಆದರ್ಶಕ್ಕೆ ಸತಿಯ ಅಕ್ಷಯಪಾತ್ರೆ[೨೫]

(ಇಂದಿರಾ ಹೆಗಡೆ, ಪುಟ-೯೧ ೧೯೮೫)

ವಸ್ತ್ರಾಪಹರಣ ಇಡೀ ಮಹಾಭಾರತಕ್ಕೆ, ಆಧಾರ ಸೂತ್ರ, ಅಧಿಕಾರಶಾಯಿಯೊಂದೇ ಕಾರಣವಾಗಿದ್ದರೆ ಕುರುಕ್ಷೇತ್ರ ದಾಯಾದಿ ಯುದ್ಧವಾಗುತ್ತದೆ. ಆದರೆ ದ್ರೌಪದಿಯ ವಸ್ತ್ರಾಪಹರಣ ಒಂದು ರಾಜಕೀಯ ತಂತ್ರ. ಇದೇ ಪಾಂಡವರ ಕುಲಕ್ಕೆ ತಲೆತಗ್ಗಿಸುವ ಕೈಲಾಗದ ಪರಿಸ್ಥಿತಿಯನ್ನು ಎತ್ತಿತೋರಿಸುತ್ತದೆ. ಇಲ್ಲೂ ಪುರುಷ ವರ್ಗದ ಅಹಂನ್ನು ಎತ್ತಿ ತೋರಿಸುತ್ತದೆ.

ಪತ್ನಿಯನ್ನು ಕಾಪಾಡುವುದು ಗಂಡಸಿನ ಕರ್ತವ್ಯ ಎನ್ನುವುದಕ್ಕಿಂತ ಪುರುಷತ್ವ, ಪೌರುಷ, ಗಂಡಸುತನದ ಪ್ರಶ್ನೆ ಇದಾಗಿದೆ. ವಸ್ತ್ರಾಪಹರಣ ಪಾಂಡವರ ಪೌರುಷತ್ವದ ಅವಮಾನದ ಪ್ರಶ್ನೆಯಾಗಿ ಕೌರವರನ್ನು ಕಾಡಿತ್ತು. ಪಾಂಡವರಿಗೆ ದ್ರೌಪದಿಯ ವಸ್ತ್ರಾಪಹರಣ ತನ್ನ ಪೌರುಷತ್ವದ ಅಪಮಾನ ಹೀಗೆ ಎಲ್ಲವೂ ಪುರುಷನ ಅಮಲುಗಳು.

ಮಹಾಭಾರತದ ಸ್ತ್ರೀ ಪಾತ್ರಗಳಲ್ಲಿ ಎದ್ದು ನಿಲ್ಲುವ ಪಾತ್ರಗಳೆಂದರೆ ದ್ರೌಪತಿಯೊಬ್ಬಳೇ. ಅಪ್ರಕೃತಿಕವಾದ ಜನನ ಮನೋಹರವಾದ ರೂಪ ಹೆಂಗಸಿಗೆ ಸಾಮಾನ್ಯವಾಗಿ ಸಹಜವಲ್ಲದ ಕ್ಷಾತ್ರ ಪ್ರವೃತ್ತಿ. ಬೇರಾವ ಕಾವ್ಯದಲ್ಲಿ ಕಂಡು ಬಾರದ ಬಹುಪತ್ನಿತ್ವದ ತೊಡಕು ಇವು ಒಟ್ಟಾಗಿ ಸೇರಿ ಅವಳ ಪಾತ್ರವನ್ನು ವಿಶಿಷ್ಟವಾಗಿಸಿವೆ. 'ಮಹಾಭಾರತದಲ್ಲಿ ಯಾರಾದರೂ ಗಂಡಸಿದ್ದರೆ ಅದು ದ್ರೌಪದಿ'(ವಚನ ಭಾರತ–ಎ.ಆರ್.ಕೃಷ್ಣಶಾಸ್ತ್ರಿ, ಪು.೩೬) ಎನ್ನುವಂತಾಗಿದೆ.

ಭಾರತದ ಮಹಾಕಾವ್ಯಗಳು ಸಾಮಾನ್ಯವಾಗಿ ಚಿತ್ರಿಸುವ ಸ್ತ್ರೀ ಪಾತ್ರಗಳು ಶೀಲ, ಸಹನೆ, ತ್ಯಾಗ, ಗುಣವುಳ್ಳವಾಗಿದ್ದವು. ಪಾತಿವ್ರತ್ಯ ಕಲ್ಪನೆ ಅವಳಿಗೆ ವಿಶೇಷತಃ ಅರಿವಿರುತ್ತದೆ, ಆದರೆ

ದ್ರೌಪದಿಯದು ಬಹುಪತ್ನಿತ್ವದ ಪಾತ್ರ, ಅವಳು ಐವರು ಗಂಡಂದಿರನು ಪಡೆಯುವ ವೈಚಿತ್ರ ಪಾತ್ರ

ಅವಳ ಸಂಪೂರ್ಣ ಜೀವನವೇ ಹಲವು ತಿರುವುಗಳ ಹಂದರ. ದ್ರೌಪದ ರಾಜನ ಮಗಳಾಗಿ, ವೈಭವಯುತವಾಗಿ ಬೆಳೆದಿದ್ದು, ಸ್ವಯಂವರದ ನಂತರದಲ್ಲಿ ಕುಂತಿಯ ಮಾತಿನ ತಪ್ಪಾಗಿ ಹೆಣ್ಣು ಹಣ್ಣಾಗಿ, ಐವರ ಪತ್ನಿಯಾರಾಗಿದ್ದು, ವಸ್ತ್ರಾಪಹರಣ ಅರಣ್ಯವಾಸ, ಕುರುಕ್ಷೇತ್ರ, ಪುತ್ರಶೋಕ ಹೀಗೆ ದ್ರೌಪತಿ ಮಹಾಭಾರತದ ಪ್ರತಿಯೊಂದು ಸನ್ನಿವೇಶಕ್ಕೂ ಕಾರಣಕರ್ತಳು.

ಐವರ ಪತ್ನಿಯಾಗುತ್ತಲೇ ಒಬ್ಬೊಬ್ಬರ ಮನೋಭಾವದ ಪತಿಯನ್ನು ಕಟ್ಟಿಕೊಂಡ ಆಕೆಯ ಮನಸ್ಸಿನಲ್ಲಿ ಆದರ್ಶ ಪುರುಷನನ್ನು ಹೇಗೆಲ್ಲಾ ಹುಡುಕಿದ್ದಳು, ಹೇಗೆಲ್ಲಾ ಹಲುಬಿದಳೋ ಆಕೆಗೆ ಗೊತ್ತು. ಐದು ಜನ ಪಾಂಡವರ ಪತ್ನಿಯಾಗಿದ್ದು ಬಯಸಿದ್ದು ಅಪಾರವಾದ ಪ್ರೀತಿಯನ್ನು. ಪ್ರತಿವರ್ಷ ಒಬ್ಬೊಬ್ಬನ ಜೊತೆ ಹೆಂಡತಿಯಂತೆ ಬಾಳಿದ ದ್ರೌಪದಿ ಪ್ರತಿ ಪಾಂಡವನನ್ನು ಹತ್ತಿರದಿಂದ ಬಲ್ಲವಳು. ಐವರು ಐದು ತರಹದ ಮನೋಭಾವನೆಗಳೇ ಆದರೂ ದ್ರೌಪದಿಯ ಪ್ರೀತಿಯೇ ಸೆಲೆ ಝುರಿಯಾಗಿ ಹರಿಯಲಿಲ್ಲ.

ಅಹಲ್ಯೆಯ ಆದರ್ಶ ಪುರುಷನ ಹುಡುಕಾಟ

ಅಹಲ್ಯೆ ಗೌತಮನ ಪತ್ನಿ. ಅಹಲ್ಯೆ ಋಷಿ ಪತ್ನಿಯರಲ್ಲಿ ಅಗ್ರಗಣ್ಯನೆನಿಸಿದ್ದ ವಿಶ್ವಾಮಿತ್ರ ಮೇನಕೆಯ ಮಗಳೇ ಅಹಲ್ಯೆ. ರೂಪದಲ್ಲಿ ಸುಂದರಿಯಾದ ಅಹಲ್ಯೆಯು ಗೌತಮನ ಪತ್ನಿಯಾದಳು ಗೌತಮನ ಪತ್ನಿಯಾಗಿ ಧರ್ಮಮಾರ್ಗಿಯಾಗಿ ಸಂಸಾರ ಮಾಡುತ್ತಿದ್ದಳು. ಒಮ್ಮೆ ಆಕಾಶಮಾರ್ಗದಲ್ಲಿ ಹೋಗುತ್ತಿದ್ದ ಇಂದ್ರನ ರೂಪವನ್ನು ಕಂಡು ಮೋಹಗೊಂಡಳು. ಇಂದ್ರನು ಅಹಲ್ಯೆಯ ಸೌಂದರ್ಯವನ್ನು ಕಂಡು ಮೋಹಗೊಂಡು, ಗೌತಮನ ವೇಶದಲ್ಲಿ ಅವಳನ್ನು ಮೋಹಿಸಿದನು. ಇಂದ್ರ ಮೋಹಿಸಿದ್ದು ನಿಜವಾದರೂ ಅಹಲ್ಯೆ ಇಂದ್ರನೆಡೆಗೆ ಮೋಹಗೊಂಡಿದ್ದು ನಿಜ ಇಂದ್ರನೆಂದು ತಿಳಿದರೂ ಆತನೊಂದಿಗೆ ಮೋಹಗೊಂಡಳು. ಗೌತಮನ ಆಗಮನದಿಂದಾಗಿ ಅಹಲ್ಯೆಗೆ ಕಲ್ಲಾಗಿ ಶಾಪಕೊಟ್ಟನು. (ಪುರಾಣ ಭಾರತ ಕೋಶ–ಯಜ್ಞನಾರಾಯಣ ಉಡುಪ–ಕನ್ನಡ ಪುಸ್ತಕ ಪ್ರಾಧಿಕಾರ–೨೦೦೩) ಇಡೀ ಕಥೆ ಶೀಲಗೆಟ್ಟವಳಿಗೆ ಪೆಟ್ಟು ತಿಂದ ಕಥೆಯೆಂಬಂತೆ ಸಾಮಾನ್ಯವಾಗಿ ರೂಪಿತವಾಗಿದೆ. ಆದರೆ ಜ್ಞಾನದ ಮಾನವೀಯ ವೇಧನೆಯಲ್ಲಿ ಗ್ರಹಿಸಿದಾಗ ಆಹಲ್ಯೆ ಜಾರಿದ್ದಕ್ಕೆ ಇಂಥಾ ಒಂದು ಶಿಕ್ಷೆಯ ಅವಶ್ಯಕತೆ ಇತ್ತೆ. ಇದರ ಹಿಂದಿನ ಪ್ರಭುತ್ವವಾದಿ ನೆಲೆಗಳೇನು? ಎಂಬುದರ ಚಿಂತನೆಯು ಮೂಡುತ್ತದೆ.

ತಪ್ಪೊ-ಒಪ್ಪೊ ಹೇಳುವುದೇನು?
ಅಹಲ್ಯೆ ಜಾರಿದಳು
ಸುರುಪ ಮತಿಹೀನನಾದ
ಮರಳಲ್ಲಿ ಬಿದ್ದಳು[೧೬]

(ಪಾರ್ವತಿದೇವಿ ಹೆಗಡೆ, ಪುಟ-೪೯, ೨೦೦೧)

ಅಹಲ್ಯೆ ಜಾರಿದ್ದಕ್ಕೆ ಬೆರಳೆತ್ತಿ ತೋರಿದ ಗೌತಮ ಅವಳ ಆಂತರ್ಯವನ್ನು ಅರಿಯುವಲ್ಲಿ ಸೋತಿರಬೇಕು. ತನ್ನ ತಾಳಕ್ಕೆ ನಡೆಸಿಕೊಂಡು ತನ್ನದೇ ಜಪ-ತಪಗಳನ್ನು ಕಳೆದುಹೋದ ಸನ್ಯಾಸಿ, ಗಂಡನ ಜಯಮಾನ, ಅಹಲ್ಯೆಯನ್ನು ಮಾರುವೇಶದಲ್ಲಿ ಕೂಡಿದ ಇಂದ್ರ ಇಬ್ಬರೂ ಗಂಡಸರೇ ಇಬ್ಬರು ಸ್ವಂತದ್ದನ್ನು ಸಾಧಿಸಿದವರೆ.

ಪಂಜರದ ಪ್ರಜ್ಞೆ ಇದ್ದವರಿಗೆ
ಬದುಕು ಬಂಗಾರ
ಬಂಧನದ ಅರಿವು ಇರುವವರಿಗೆ
ಬದುಕು ಬಾರ ನಿಸ್ಸಾರ
ನನ್ನ ಕೊಲೆಯಾಗುವ ಮುನ್ನ
ನಾನು ಶಿಲೆಯಾಗಿ ಬಿಡಬೇಕು
ಗೌತಮನ ಶಾಪದಿಂದ ಅಲ್ಲ
ಬಣ್ಣ ಬಣ್ಣದ ವೃಂದಾವನದಲ್ಲಿ
ಸುತ್ತಿ ಸುಳಿಯುವ ಮನಕೆ
ಕತ್ತು ಹಿಚುಕುವ ಮುನ್ನ
ನಾನು ಶಿಲೆಯಾಗ ಬೇಕು
ಎಂದು ಕೊರಗುತ್ತಲೇ ಗಿಡ
ಗಿಡಕೂ ನೀರುಣಿಸಿದೆ
ಕ್ಷಣ ಮಾತ್ರ ಸುಖಿಸಿದೆ ಅಷ್ಟೇ
ಗೌತಮನ ಶೀತಲಗಾಳಿಗೆ ನಾವಿಬ್ಬರೂ ತತ್ತರಿಸಿದೆವು
ನಾನು ಮಂಜುಗಡ್ಡೆಯಾದೆ
ಇಂದ್ರ ಮೈತುಂಬಿ ಕಣ್ಣಾದ
ರಾಮಸ್ಪರ್ಶಕ್ಕೆ ಶಲೆ ಸ್ಫೋಟವಾಗಿದೆ
ಅಷ್ಟೆ ಹೆಣ್ಣಾಗಲಿಲ್ಲ[೧೭]

(ಸುಕನ್ಯಾ ಮಾರುತಿ, ಪುಟ-೯೨, ೧೯೯೧)

ಆಹಲ್ಯೆ ಜಾರಿದ್ದೇಕೆ ಎಂಬ ಪ್ರಶ್ನೆ ಕಾಡುತ್ತದೆ ಅವಳ ನೈತಿಕತೆಯನ್ನು ಪ್ರಶ್ನಿಸಬೇಕಾಗಿದ್ದು ಸತ್ಯವಾದರೂ ಅವಳು ಹಾಗೆ ನಡೆದುಕೊಂಡ ಬಾವವನ್ನು ಅರಿಯಬೇಕಾಗುತ್ತದೆ. ಅವಳಿಗಿದುದ್ದು ಅಪಾರ ಸೌಂದರ್ಯ. ಆದರೆ ಆಕೆ ಗೌತಮನ ಋಷಿಪತ್ನಿ ಗೌರವಯುತವಾದ

ಸ್ಥಾನ. ಗೌತಮನಿಗೆ ಯುದ್ಧ ಯಜ್ಞಗಳನ್ನು ಗೆಲ್ಲುವ ಹುಮ್ಮಸ್ಸು ಅಹಲ್ಯೆಯಡೆಗೆ ಪ್ರೀತಿ ಹರಿಸುವುದನ್ನು ಕಡಿಮೆ ಮಾಡಿದ್ದರು. ಹೊರಗಿನ ಪ್ರಪಂಚವೇ ಸರ್ವಶ್ರೇಷ್ಠ. ಅದು ಕೊಡುವ ಮರ್ಯಾದೆಯ ಅತ್ಯುತ್ತಮವೆಂದು ಭಾವಿಸಿದ ಗೌತಮನ ಮನೋಭಾವ ತನ್ನ ತಪಃಶಕ್ತಿಯಿಂದ ಹೊರಗೂ ಜಗತ್ತನ್ನು ಗೆಲ್ಲುವ ಆತನ ಮಹತ್ವಾಕಾಂಕ್ಷೆಯೇ ಆತನಿಗೆ ಮಿಗಿಲೆನಿಸಿದೆ. ಅಹಲ್ಯೆ ಗೃಹಸ್ಥೆ ಇದನ್ನು ಪಂಜರದ ಪ್ರಜ್ಞೆ, ಇಲ್ಲದವರಿಗೆ ಬದುಕು ಬಂಗಾರ ಎನ್ನುವಲ್ಲಿ ತನಗೆ ದೊರಕಿದ ಋಷಿಪತ್ನಿಯೆಂಬ ಪಂಜರ ಅವಳ ಮನಸ್ಸನ್ನು ಕೆಡಿಸಿರಬೇಕು.

ಕಲ್ಲಾಗಿ ಬಿದ್ದಿಹೆನು ಕಲ್ಲು ಎಂದೆಣಿಸಿದಿರು
ಒಳಗೆಹುದು ಹೂವಮನಸು
ಕಲ್ಲೆಂದು ಜರೆಯದಿರು ತುಳಿದು
ಓಡಾಡದಿರು ಹುದುಗಿ ಹೋಗಿದೆ
ನೂರು ಕನಸು
ಮುಕ್ತಿದಾತನು ರಾಮಬಂದಾನೆ
ಕಾಯುತ್ತಿಹೆ
ತಿಳಿದಾಗ ಅವನಾದರೂ ನನ್ನ ವ್ಯಥೆಯ[೧೮]

(ಶೋಭ ಹಳಬೆ, ಪುಟ-೧೦೧, ೧೯೮೯)

ನೈತಿಕತೆಯನ್ನು ಪ್ರಶ್ನೆಯಾಗಿಟ್ಟುಕೊಂಡು ಅವಳನ್ನು ದೋಷಿಸುವುದು ಬೇರೆಯಾಗಿ ನಿಲ್ಲುವುದು. ಇಂದ್ರನೊಂದಿಗೆ ಕೂಡಿದಳೆಂಬ ತಪ್ಪಿಗೆ ಕಲ್ಲಾಗಿಸಿದ ಗೌತಮ ಅವಳ ಅಂತರ್ಯವನ್ನು ಅರಿಯುವಲ್ಲಿ ಸೋತಿದ್ದ. ಸತ್ಯವೇ ಕಲ್ಲಾದ ಅಹಲ್ಯೆಯ ಅವಿನಾಭವ ಗೌತಮನಿಗೆ ಅಪೇಕ್ಷಣೀಯ. 'ಕ್ಷಣಕಾಲ ಸುಖಿಸಿದ್ದೆ ಅಷ್ಟೆ' ಅನ್ನುವಲ್ಲಿ ಅವಳು ಜಾರಿದ್ದಕ್ಕೆ ಕ್ಷಮೆ ಕೋರುವುದಕ್ಕಿಂತ ಜಗತ್ತು ಗೆಲ್ಲಲು ಹೊರಟ ಗೌತಮನ ಬೇಜಾವಬ್ದಾರಿಯನ್ನು ಖಂಡಿಸುವುದು. ತಿರಸ್ಕಾರ ಅವಳನ್ನು ಆ ಸಮಯದಲ್ಲಿ ಹಾಗೆ ಮಾಡಿತೆನ್ನಬಹುದು. ಕಲ್ಲಾದ ಅಹಲ್ಯೆಯ ಪಾಡು ಕಂಡ ಗೌತಮನಿಗೆ ಕೂಡಿದ ಇಂದ್ರನಿಗೆ ತಟ್ಟಲಿಲ್ಲ ಆದ್ದರಿಂದ ರಾಮನ ಮೊರೆ ಹೋಗುತ್ತಾಳೆ.

ಗಂಡನೆಂದು ಕೊಡಿದ್ದಾಕೆ
ತಪ್ಪಿಲ್ಲದ ತಪ್ಪಿಗೆ
ನೀನು ಬಾಧ್ಯಸ್ಥಳಾಗಿ
ಕಲ್ಲಾಗುವ ಮುಂಚೆರೇ
ಯಾಕೆ ಕೊಡವಿಬರಲಿಲ್ಲ
ನಿಮ್ಮ ಇತಿಹಾಸವನ್ನು
ತಿರುವಿ ಹಾಕಲಿಲ್ಲವೆ?[೧೯]

(ಭಾಗ್ಯ, ಪುಟ-೨೦, ೧೯೮೧)

ಇಂದ್ರನ ಮಾರುವೇಶ, ಪ್ರೀತಿಯ ಹಂಬಲಿಸಿದ ಅಹಲ್ಯೆಯ ಸಂದರ್ಭಗಳು ಆಹಲ್ಯೆ ಜಾರಿದಳು ಸತ್ಯವೇ. ಆದರೆ ತಪ್ಪಿಲ್ಲದ ತಪ್ಪಿಗೆ ಹಿಂದೆ – ಮುಂದೆ ನೋಡದೆ ಶಾಪವಿಡುಪ ಗೌತಮ, ಅವಳು ಕಲ್ಲಾಗುವ ಮುಂಚೆಯೇ ಪ್ರತಿಭಟಿಸಬೇಕಾಯಿತು ಎಂಬುದು ಕವಿಯತ್ರಿಯ ಭಾವ.

ನನಗೆ ಗೊತ್ತು ಮತ್ತೆ ಗೌತಮನ ಸರ್ಪ
ಹೆಡೆಯತ್ತಲಾರದು? ನನ್ನೊಳಗೆ ಏನನ್ನು
ಬಿತ್ತಲಾರದು
ರಾಮಸ್ಪರ್ಶಕೆ, ಶಿಲೆಸ್ಫೋಟವಾಗಿದೆ ಅಷ್ಟೆ
ಹೆಣ್ಣಾಗಲಿಲ್ಲ[೨೦]

(ಸುಕನ್ಯಾ ಮಾರುತಿ, ಪುಟ–೧೦, ೧೯೮೫)

ಅಹಲ್ಯೆಯ ಶಾಪವಿಮೋಚನೆ ಸೀತೆ ಧರೆಗಿಳಿದು ಹೋಗುವುದು ಎರಡು ಅಂತಿಮದ ನಿರ್ಧಾರಗಳು. ಸೋತ ಹೆಣ್ಣಿನ ಧ್ವನಿಗಳು ರಾಮಸ್ಪರ್ಶಕ್ಕೆ ಶಿಲೆ ಸ್ಫೋಟವಾಗಿದೆ ಅಷ್ಟೇ ಹೆಣ್ಣಾಗಲಿಲ್ಲ ಎನ್ನುವ ಮಾತು ಧ್ವನ್ಯಾತ್ಮಕವಾದುದು. ಅವಳು ಮತ್ತು ಮುಗ್ಧಗೌತಮಿಯಲ್ಲಿ ನೂರು–ನೂರಾರು ವರುಷ ಕಲ್ಲು ಬಂಡೆಯಾಗಿ ತಪ್ಪಿಲ್ಲದ ತಮಗೆ ಕಣ್ಣೀರಿಡುತ್ತಾ ಕೂತ ಅಹಲ್ಯೆ ಶಾಪ ವಿಮೋಚನೆಯಾದರೂ ಅವಳು ಹೆಣ್ಣಾಗಲಿಲ್ಲ ಎಂಬುದು ಸತ್ಯ. ಅಹಲ್ಯೆಯ ದೃಷ್ಟಿಯಲ್ಲಿ ಆದರ್ಶದ ಪುರುಷರೆಂದರೆ ಯಾರು? ಅನ್ನುವ ಪ್ರಶ್ನೆ ಕೂಡಿದ ಇಂದ್ರ, ಕಟ್ಟಿಕೊಂಡ ಗಂಡ ಶಾಪವಿಮೋಚನೆ ಶ್ರೀರಾಮ ಇವರಲ್ಲಿ ಯಾರು ಎಂಬುದು ಕೇವಲ ಪ್ರಶ್ನೆಯಾಗೆ ಉಳಿಯುತ್ತದೆ.

ಆದರ್ಶದ ಪುರುಷನ ಹಂಬಲ ಹೊತ್ತ ಹುಡುಕಾಟದ ಹಂತದಲ್ಲಿರುವ ಪುರಾಣದ ಸ್ತ್ರೀಯ ಸ್ಥಿತಿ ಪ್ರಸ್ತುತತೆಗಿಂತ ಬಿನ್ನವಾಗಿಲ್ಲ. ಅದೇ ಹಂಬಲದ ಅಕಾಂಕ್ಷೆಯಿಂದ ಹೊರಟ ಸೀತೆ, ದ್ರೌಪದಿ, ಅಹಲ್ಯೆಯಂತೆಯೇ ಶಕುಂತಲೇ, ಕುಂತಿ, ರಂಬೆ, ಕೈಕೇಯಿ, ಊರ್ಮಿಳೆ, ಶಿವೆ (ಪಾರ್ವತಿ), ರಾಧ, ದುರ್ಗ ಇವರೆಲ್ಲರದೂ ಆದರ್ಶ ಪತಿಯ ಹುಡುಕಾಟವೇ. ಆದರೆ ಆಧುನಿಕ ಕವಿಯತ್ರಿ ದ್ರೌಪದಿ, ಸೀತೆ, ಅಹಲ್ಯೆಯರನ್ನು ಆಳವಾಗಿ ಅಭ್ಯಯಿಸಿದಷ್ಟು ಇವರನ್ನು ಕುರಿತು ಅಷ್ಟಾಗಿ ಕಾವ್ಯಗಳನ್ನು ಬರೆದಿಲ್ಲ. ಬರೆದಿರುವ ಪಕ್ವ ಕಾವ್ಯಗಳನ್ನು ಓರೆಗಲ್ಲಿಗೆ ಹಚ್ಚಿ ನೋಡಿದಾಗ ಇವರೆಲ್ಲರ ದೃಷ್ಟಿಯಲ್ಲಿ ಅದರ್ಶಪತಿ ಏಂದರೆ ಏನು? ಎಂಬುದು ಪ್ರಶ್ನೆಯಾಗಿ ಉಳಿಯುತ್ತದೆ.

ಊರ್ಮಿಳೆಯ ಸೀತೆಯ ತಂಗಿ, ಸೀತೆಯಷ್ಟೆ ನೋವುಗಳನ್ನು ಕಷ್ಟಗಳನ್ನು ಅನುಭವಿಸಿದಳು. ಸೀತಾ ಸ್ವಯಂವರದ ದಿನವೇ ಊರ್ಮಿಳೆಯನ್ನು ವರಿಸಿ ಆಯೋಧ್ಯೆಗೆ ಲಕ್ಷ್ಮಣ ಕರೆತಂದನು. ಸೀತೆಯ ಕಷ್ಟ ನಷ್ಟಗಳು ಜಗಜ್ಜಾಹೀರು. ಆದರೆ ಊರ್ಮಿಳೆಯದು ಲಕ್ಷ್ಮಣ ನಡೆಗೆ ಇದ್ದದ್ದು ಅತೀವ ಪ್ರೀತಿ. ಲಕ್ಷ್ಮಣ ವನವಾಸ ಮಾಡಿದಷ್ಟು ದಿನ ಅವಳು ತಪಸ್ಸನ್ನು ಆಚರಿಸಿದ್ದು ಸೀತೆಗೆ ತಾನಾಗೆ-ಒದಗಿ ಬಂದಿದ್ದು ಕಷ್ಟಗಳು. ಊರ್ಮಿಳೆಗೆ ತಾನಾಗಿ ಆ ಸಂಕಷ್ಟವನ್ನು ತನ್ನದೆಂದು ಕೊಂಡು ಅನುಭವಿಸಿದಳು. ಅವಳು ಸೀತೆಯಷ್ಟೆ ಲಕ್ಷ್ಮಣನ ಆದರ್ಶ ಸತಿ. ಉತ್ಕಟ ಪ್ರೇಮಿ, ಸೀತೆ ಶ್ರೀರಾಮನನ್ನು ಪ್ರೀತಿಸಿದಷ್ಟೇ ಆಳವಾಗಿ ಲಕ್ಷ್ಮಣನನ್ನು ಊರ್ಮಿಳೆ ಪ್ರೀತಿಸಿದ್ದಳು.

ಆದರೆ ರಾಮನ ಬೆಂಗಾವಲಿಗೆ ಲಕ್ಷ್ಮಣ ಹೊರಟು ನಿಂತಾಗ ಊರ್ಮಿಳ ತಲ್ಲಣಿಸಿದ್ದು ಸತ್ಯವೇ. ಉತ್ಕಟ ಪ್ರೇಮಿಯಾದ ಊರ್ಮಿಳಾ ಮನೋಭಿಲಾಶೆಯನ್ನು ಗ್ರಹಿಸುವಲ್ಲಿ ಲಕ್ಷ್ಮಣಾ ಪ್ರಯತ್ನಿಸಿರಲಿಲ್ಲ.

ಕಲ್ಲಾದಳು ಊರ್ಮಿಳೆ ಪತಿಯ
ನಿಶ್ಚಯ ಕೇಳಿ
ಕೈಕೇಯಿಯ ಆಟಕ್ಕೆ ಜಾನಕಿಯ
ಹಠಕ್ಕೆ
ಲಕ್ಷ್ಮಣನ ಬೆಂಗಾವಲಿಗೆ ಬೆರಗಾಗಿ
ಆದರ್ಶ ಸತಿಯೆನಿಸಿ ವೈದೇಹಿ
ಸೌಭಾಗ್ಯ ಕಂಡು
ಕಣ್ಣಂಚಿನ ಹನಿಹಿಂಗಿದವು ಹದಿನಾಲ್ಕು
ವರ್ಷದ ವಿರಹದುರಿಗೆ
ಮಾತು ಮೂಕ ದೇಹ ಕಲ್ಲಾಯಿತು[೨೧]

(ತಾರಿಣಿ ಯು. ರಾವ್-ಪುಟ-೭೦, ೧೯೯೯)

ಊರ್ಮಿಳೆ ಪರಿಸ್ಥಿತಿ ಕೈಗೊಂಬೆ. ಹದಿನಾಲ್ಕು ವರ್ಷದ ವಿರಹದುರಿಗೆ ಅವಳು ಸೋತು ಹೆದರಿದ್ದಳು. ಲಕ್ಷ್ಮಣನಿಗೆ ಇದಾವುದು ಸಖ್ಯವಲ್ಲ. ಆತನಿಗೆ ರಾಮನ ಹಾಗೆ ರಾಜ್ಯ, ಅಣ್ಣನ ನೀತಿ ಅವಶ್ಯಕ. ಊರ್ಮಿಳೆಯ ಪ್ರೀತಿ ಆಗಾದವಾಗಿದ್ದರೂ ಅದನ್ನು ಗ್ರಹಿಸದೆ ಸೋತ.

ಶಕುಂತಲೆ

ದುಶ್ಯಂತ-ಶಕುಂತಲೆ ಮಹಾಭಾರತದ ರಸಿಕ ದಂಪತಿಗಳು. ಬೇಟೆಗೆಂದು ಕಾಡಿಗೆ ಹೋದ ಚಂದ್ರವಂಶದ ಅರಸು ದುಶ್ಯಂತನು ಕಣ್ವರ ಸಾಕುಮಗಳು ಶಕುಂತಲೆಯನ್ನು ಕಂಡು ಮನಸೋತನು. ಗಾಂಧರ್ವ ವಿವಾಹವಾಗಿ ತನ್ನ ರಾಜ್ಯಕ್ಕೆ ಮರಳಿದ ದುಶ್ಯಂತ ಈ ಕಡೆ ಶಕುಂತಲೆ ಸರ್ವದಮನೆಂಬ ಮಗನನ್ನು ಹೆತ್ತಳು. ಕಣ್ವರು ತನ್ನ ಹಲವು ಸಹಾಯಕರೊಡನೆ ಶಾಕುಂತಲೆಯನ್ನು ಕಳಿಸಿಕೊಟ್ಟರು. ಸರೋವರದಲ್ಲಿ ದೋಣಿಯಲ್ಲಿ ಪ್ರಯಾಣಿಸುತ್ತಿದ್ದಾಗ ನೀರಿನೊಂದಿಗೆ ಆಟ ಆಡುತ್ತಿದ್ದಾಗ ಶಕುಂತಲೆಯ ಉಂಗುರ ಆಕಸ್ಮಾತಾಗಿ ಜಾರಿ ಬಿದ್ದಿತ್ತು. ತನ್ನ ಉಂಗುರವನ್ನು ಕಳೆದುಕೊಂಡ ಶಕುಂತಲೆಯು ದುಶ್ಯಂತನ ಅಸ್ಥಾನದಲ್ಲಿ ಅವಮಾನ ಹೊಂದಬೇಕಾಯಿತು.

ಇದರಿಂದ ಅಂತಿಮವಾಗಿ ಕಣ್ವನ ಆಶ್ರಯಕ್ಕೆ ಮತ್ತೆ ಹಿಂದಿರಿಗಿದಳು. ಕಳೆದುಕೊಂಡ ಉಂಗುರವನ್ನು ಮೀನು ನುಂಗಿ ಅದು ಅಕಸ್ಮಾತಾಗಿ ಬೆಸ್ತರದವನಿಗೆ ಸಿಕ್ಕಿ, ಅಲ್ಲಿಂದ ಆ ಉಂಗುರ ದುಶ್ಯಂತನಿಗೆ ಸಿಕ್ಕು ತನ್ನ ಪೂರ್ವವೃತ್ತಾಂತ ತಕ್ಷಣ ಹೊಳೆದು ಶಕುಂತಲೆಯನ್ನು ಮತ್ತೆ ಬರ ಮಾಡಿಕೊಂಡು, ಅವಳಲ್ಲಿ ಶಾಪವೃತ್ತಾಂತ ತಿಳಿಸಿ ಮತ್ತೆ ಶಕುಂತಲೆಯೊಂದಿಗೆ ಸುಖವಾಗಿ ಜೀವನ ಮಾಡಿದರು. ಹೀಗೆ ಅಮರ ಪ್ರೇಮಿಗಳ ವೃತ್ತಾಂತ ಪ್ರೇಮ ವಿವಾಹದಿಂದ ಅರಂಭವಾಗಿ ಮಧ್ಯದಲ್ಲಿ ಶಾಪವೃತ್ತಾಂತದಿಂದ ವಿರಹಿಗಳಾಗಿ, ಅಂತಿಮದಲ್ಲಿ ಉಂಗುರದ ಕಾರಣದಿಂದ ಎಲ್ಲವೂ ಮಂಗಳವಾಯಿತು ಎನ್ನುವಲ್ಲಿ ಮುಕ್ತಾಯವಾಗುತ್ತದೆ. ಆದರೆ ಶಕುಂತಲೆಯ ಇಡೀ ವೃತ್ತಾಂತದಲ್ಲಿ ಪ್ರಭುತ್ವತೆ ಅತೀವವಾಗಿ ಕಾಡಿಸಿದೆ. ಅರಸನಾದ ದುಶ್ಯಂತ ತರುಣನಲ್ಲ. ಅವಿವಾಹಿನಾಗಿದ್ದ ಶಕುಂತಲೆಯ ನೋಡುವಷ್ಟರಲ್ಲೆ ಆತನಿಗೆ ಲಾಕ್ಷಿ ಎಂಬ ಪತ್ನಿಯಿದ್ದಳು. ರಾಜನಿಗೆ ಇದೇನು ಮೊದಲ ಪ್ರೀತಿ ಆಗಿರಲಿಲ್ಲ. ಶಕುಂತಲೆ ಅತೀ ರೂಪವಾದ ಹೆಣ್ಣು ಮಗಳು. ಹಲವು ಪತ್ನಿಯರನ್ನು ಹೊಂದಲು ರಾಜನಿಗೆ ಅವಕಾಶವಿತ್ತು.

ಕಾಡಿನಲ್ಲಿ ಸುಂದರಿಯಾದ 'ಶಕುಂತಲೆ' ಯನ್ನು ನೋಡಿದ ಅವಳನ್ನು ಹೊಂದಲು ಒಂದು ಕಾರಣಬೇಕಾಗಿತ್ತು. ಗಾಂಧರ್ವ ವಿವಾಹದ ಮೂಲಕ ತನ್ನ ಮೋಹವನ್ನು ಕಳೆದುಕೊಂಡು ತನ್ನೆಲ್ಲಾ ಬಯಕೆಗಳನ್ನು ಕಳೆದ ನಂತರ ತನ್ನ ರಾಜ್ಯಕ್ಕೆ ಹಿಂದಿರುಗಿದ. ತನ್ನ ಕಾಣಲು ಬಂದ ಶಕುಂತಲೆಯನ್ನು ಪ್ರಭುತ್ವವಾದಿ ದುಶ್ಯಂತ ಹೊರಗೆ ಹಾಕಿದ. ಇಡೀ ಪ್ರೇಮ ಪ್ರಕರಣ ಪ್ರಭುತ್ವವಾದಿ ನೆಲೆಯಲ್ಲೆ ಸಾಗಿದೆ. ಇಲ್ಲಿ 'ಉಂಗುರ, ಕಣ್ವನ ಶಾಪ' ಒಂದು ನೆಪ.

ಅಪ್ಸರೆಯ ಮಗಳು ಬೆರಳಿಗೆ
ಉಂಗುರದ ತುದಿಯಲ್ಲಿ
ಗುರುಕುಲದ ಅರಸು ಬೇಟೆಗೆಂದು
ಬಂದವನು ಸೌಂದರ್ಯವನ್ನು ಕಂಡು
ಚಿತ್ರದಲ್ಲಿ ಬರೆದ ಪ್ರತಿಮೆಯಾದಳು
ಹುಡುಗಿ ಶಕುಂತಲೆಗೆ ಬೇರು ಕಿತ್ತ ಭಾವ
ಚಿಗುರು ಬೆರಳಿಗೆ ಮತ್ತೆ ಉಂಗುರದ ಸಂಭ್ರಮ.
ಹಿಮಗಟ್ಟಿದ ಹುಡುಗಿ ಅಲ್ಲಲ್ಲ ಪ್ರೌಢೆ.
ತಣ್ಣಗೆ ನುಡಿದಳು ನನಗೆ ಈ ಉಂಗುರದಲ್ಲಿ
ನೆಚ್ಚಿಗೆಯಿಲ್ಲ...”

(ಎಂ.ಆರ್.ಕಮಲ, ಪುಟ–೮೬, ೨೦೦೧)

ಪುರಾಣದಲ್ಲಿ ಉಂಗುರದ ಕಳೆದು ಹೋಗುವಿಕೆ ಶಾಪದ ಕಾರಣ ಕೊಟ್ಟ ನಂತರದಲ್ಲಿ ಎಲ್ಲವೂ ಸುಖಾಂತ್ಯ, ಶಕುಂತಲೇ ಕಷ್ಟಗಳೆಲ್ಲಾ ಮಾಯವಾದವು ಎನ್ನುವಂತ ದುಶ್ಯಂತನ ಅರಮನೆ ಹೊಕ್ಕುತ್ತಾಳೆ. ಆದರೆ ಆಧುನಿಕ ಕನ್ನಡ ಕವಿಯತ್ರಿಯರು ಗ್ರಹಿಕೆಯಲ್ಲಿ ದುಶ್ಯಂತ ಪ್ರಭುತ್ವವಾದಿ. ಶಕುಂತಲೆಯೊಂದಿಗೆ ಪ್ರೇಮ ಕೇವಲ ಹಣ್ಣಿನಾಸೆ ಆನಂತರದಲ್ಲಿ ಅವಳ ನಿರಾಕರಣೆ ಪ್ರಭುತ್ವದ ಸಂಕೇತವೆಂದು ಚಿತ್ರಿಸುತ್ತಾರೆ.

ರಂಬೆ

ರಂಬೆ ಇಂದ್ರಲೋಕದ ಅಪ್ಸರೆ. ಕಶ್ಯಪ ಮುನಿ ಮತ್ತು ಪ್ರಾದೆ ಎಂಬಾಕೆಯ ಮಗಳು. ತುಂಬರನೆಂಬ ಗಂಧರ್ವನ ಹೆಂಡತಿ. ಇಂದ್ರನ ಅಪ್ಪಣೆಯಂತೆ ವಿಶ್ವಾಮಿತ್ರನ ತಪ್ಪಸ್ಸನ್ನು ಕೆಡಿಸುವ ಯತ್ನದಲ್ಲಿ ಹತಾಶಳಾದಳು. ಈಕೆ ದೇವಲೋಕದ ವೇಶ್ಯೆಯರನ್ನೆಲ್ಲಾ ಸುಪ್ರಸಿದ್ಧಳು. ಇವಳು ಕುಬೇರನ ಕಿರಿಯ ಮಗನಾದ ನಳಬೀಕರನ ಪ್ರೇಮ ಪಾತ್ರಳು(ಭಾರತ ಪುರಾಣ ಕೋಷ–ಯಜ್ಞನಾರಾಯಣ ಉಡಪ, ಪುಟ.೧೦೨).

ಇಂದ್ರನ ಕಾಮ ಅಸ್ತ್ರ ರಂಬಾ, ತಪ್ಪಸ್ಸು ಕೆಡಿಸಲು ಇಂದ್ರಾದಿಗಳನ್ನು ಸಂತೈಸಲು ಇವಳು ಸೀಮಿತ. ರಂಬೆಗೂ ಈ ತೆರನಾದ ಜೀವನ ಅಸಹ್ಯವೇ.

ಏನೇನೋ ನಾನೆಂದು ಬಣ್ಣಿಸದಿರು ಗೆಳೆಯ
ನಾನು ಒಂದು ಜೀವಿಯೆಂಬುದನ್ನು ಮರೆಯದಿರು
ಮಹರಾಯ
ದೇವಲೋಕದ ರಂಬೆ ಭಾವಲೋಕದ ಬೊಂಬೆ
ಅಂತೆಯೇ ಬರೀ ಹೆಣ್ಣು ಮಾತ್ರ ನಾನಲ್ಲ
ನಾನು ನಿನ್ನ ಹಾಗೆ ಒಂದು ಜೀವಿ

ನೋವು ನಲಿವುಗಳಿಗೆ ಆಗರವಾದ ಮನಸ್ಸು
ಮೊದಲು ಕೊಡು ತನ್ನತನದ ಧ್ವನಿಗೆ
ನಿನ್ನ ಕಿವಿ[೩೩]

(ಎಂ.ಎಸ್.ವೇದ, ಪುಟ-೭೦, ೧೯೮೭)

ದೇವೇಂದ್ರನ ಸ್ವಾರ್ಥಕ್ಕೆ ಆತನ ಲೋಲುಪತಿಗೆ ಒಳಗಾದ ರಂಬೆಗೆ ಅವಳಿಗೆ ತನ್ನತನದ ಪ್ರಶ್ನೆ ಕಾಡದೇ ಇರದು. ಆದರ್ಶ ಪುರುಷ ಕಲ್ಪನೆ ಅವಳಿಗೆ ಕನಸಲ್ಲೂ ಬಾರದು. ಅವಳು ದೇವಲೋಕದ ವೇಶ್ಯೆ, ಅವಳನ್ನು ಪ್ರೀತಿಸುವವರು ಕಡಿಮೆಯೇ. ಅದಕ್ಕಾಗಿಯೇ ತನ್ನತನದ ಪ್ರಶ್ನೆ ಎತ್ತಿ ಇಡಿದ್ದಿದ್ದಾಳೆ.

ಕೈಕೇಯಿ

ಸೂರ್ಯವಂಶದ ದಶರಥನ ಪತ್ನಿ, ಭರತನ ತಾಯಿ. ಈಕೆಯ ತಂದೆ ಕೇಕೆಯ ದೇಶದ ಅಶ್ವಾಪತಿರಾಜ. ಈಕೆ ಮಂಥರೆಯ ದುರ್ಬೋಧನೆಗೆ ಒಳಗಾಗಿ ಶ್ರೀರಾಮನ ಹದಿನಾಲ್ಕು ವರ್ಷದ ವನವಾಸಕ್ಕೆ ಕಾರಣಳಾದಳು. ಒಮ್ಮೆ ಶಂಭನೆಂಬ (ತಿಮಿದ್ವಿಜ) ರಾಕ್ಷಸನು ಇಂದ್ರನನ್ನು ತುಂಬಾ ಪೀಡಿಸಲು ಇಂದ್ರನು ದಶರಥನ ಸಹಾಯದಿಂದ ತಿಮಿದ್ವಜನೊಡನೆ ಹೋರಾಡಿ ಅತನನ್ನು ಕೊಂದನು. ಈ ಯುದ್ದಕ್ಕೆ ದಶವಥನು ಕೈಕೇಯಿಯನ್ನು ಕರೆದುಕೊಂಡು ಹೋಗಿದ್ದನು. ಅಲ್ಲಿ ತಿಮಿದ್ವಜನ ಬಾಣದ ಹೊಡೆತದಿಂದ ದಶರಥನು ಎಚ್ಚರ ತಪ್ಪಿದ. ರಥವನ್ನು ಸುರಕ್ಷಿತ ಸ್ಥಳಕ್ಕೆ ಕರೆದುಕೊಂಡು ಹೋದಳು. ಆಕೆಯ ಸಾಹಸ ಮೆಚ್ಚಿ ಎರಡು ವರವನ್ನು ಕೇಳುವಂತೆ ಹೇಳಿದನು. ಕೈಕೇಯಿ ಮುಂದೆ ಈ ವರವನ್ನು ರಾಮನ ಪಟ್ಟಾಭಿಶೇಕದ ಕಾಲದಲ್ಲಿ ಕೇಳಿ ರಾಮನ ಅರಣ್ಯ ವಾಸಕ್ಕೆ ಕಾರಣವಾದಳು.

ಇದಿಷ್ಟು ಪುರಾಣ ಕಥೆಯಾದರೆ, ಅಂತರ್ಯದಲ್ಲಿ ತಾಯಿಯಾದವಳು ತನ್ನ ಮಗ ಸರ್ವಾಧಿಕಾರಿಯಾಗ ಬಯಸಿದ್ದು ತಪ್ಪಿಲ್ಲವೇನೋ; ಆದರೆ ಅತೀ ಚಿಕ್ಕ ವಯಸ್ಸಿನ ಕೈಕೆ ಮುದುಕನಾದ ದಶರಥನು ವರಿಸುವಾಗಿನ ಸ್ಥಿತಿ ದಶರಥನ ಪ್ರಭುತ್ವವಾದಿ ನಿಲುವಿನಲ್ಲಿ- ಅವಳು ನಲುಗಿರಬೇಕು.

ಇಬ್ಬರೂ ಹೆಂಡಿರಿದ್ದರೂ ಹೆಣ್ಣಿನ ಮೋಹ
ದುಬ್ಬರದಲ್ಲೆ ತೇಲುತ್ತಿದ್ದ ದಶರಥನನ್ನು
ಕೈಕೇಯಿ ಸ್ವಯಂವರಕ್ಕೆ ಕರಿದಿದ್ದಳೇನು?
ಒಂದು ಪಕ್ಷ ಕರೆದಿದ್ದರೂ ಆ ಆರ್ಯನ
ಬುದ್ಧಿ ಕಳ್ಳೆಪುರಿ ತಿನ್ನಲು ಹೋಗಿತ್ತೇನು?
ವೃದ್ಯಾಪ್ಯದ ಮಕ್ಕಳು ಸುಂದರ

ಹೆಂಡತಿಯಿದ್ದರೂ ಅರಿವಿರಲಿಲ್ಲವೇನು?
ಹೋಗಲಿ ರಣರಂಗದಲ್ಲಿ ತಾ ಮಾಡಿದ
ಸಹಾಯಕ್ಕೆ ವರಬೇಕೆಂದು ಕೋರಿದ್ದಳೇನು?*[೨೪]

(ಗಂಗೋತ್ರಿ ವೇದ, ಪುಟ-೭೦, ೧೯೮೭)

ರಾಮಾಯಣದ ಅಷ್ಟು ಘಟನಾವಳಿಗೆ ಕೈಕೇಯಿಯನ್ನು ಕಾರಣ ಮಾಡುತ್ತಾ, ಅವಳನ್ನು ಮೋಹಿಸುವ ಶ್ರೀರಾಮಾಯಣದ ಆರಾಧಕರೂ ಕೈಕೆಯ ಪರಿಸ್ಥಿತಿಯನ್ನು ಊಹಿಸಲು ಸಾಧ್ಯವಿಲ್ಲ.

ಶಿವಪಾರ್ವತಿ

ಆದರ್ಶ ಪುರುಷನ ಪರಿಕಲ್ಪನೆಯ ಪುರಾಣಗಳು ಹುಡುಕಿದವರು ಕಡಿಮೆ. ಆದರೆ ಆಧುನಿಕ ಕವಿಯತ್ರಿಯರು ಸಾಹಿತ್ಯದಲ್ಲಿ ಪುರಾಣ ಪ್ರವೇಶಗಳಲ್ಲಿ ಹುಡುಕ ಹೊರಟ ಕವಿಯತ್ರಿಯಲ್ಲಿ ಬಹಳ ಪಾರ್ವತಿ ಆದಿಶಕ್ತಿ, ಗಂಡನಷ್ಟೆ ಪರಾಕ್ರಮಿ, ಶೂರೆ, ಆಕೆಯದು ಆದರ್ಶದ ಹುಡುಕಾಟವೇ.

ನೀರೊಳಗೆ ಗೌರಿ ಕಂಬನಿಬಿಂದು
ಬೆರೆತು ಬಿಸಿಯಾಗಲಿ
ಆಯ್ ಎಂದ ಶಿವ
ನನ್ನನೆಂದು ಕೊಂಡೆ? ನಿನ್ನ
ಬಿಟ್ಟರೆ ಶುದ್ಧ ಭ್ಯರಾಗಿ
ಈ ಮನೆಗೆ ಶಿವನೇ ನಾನೆಷ್ಟನೆಯ
ನಾರಿ?
ಎನ್ನುತ ಮೃದು ಚಿವುಟ ಮೀಸುವಳು
ನಮ್ಮ ಗೌರಿ
ಬೈರಾಗಿ ಬೂದಿ ತೊಳೆಯುತ್ತಾ
ಹೆಚ್ಚಿಗೆ ನೋಡುವಳು
ಮೆತ್ತಗೆ ಮೈಬಲಿಸಿ ತುಂಬಾಲು
ಕುಡಿಸಿ
ತೊಡೆ ಮೆತ್ತೇಯನು ನೀಡಿ
ಕೊರುವಳು[೨೫]

(ವೈದೇಹಿ, ಪುಟ-೭೩, ೧೯೯೩)

ಶಿವನ ವಿರಮಿಸುತ್ತಾ ಅವನ ಸೇವೆಯಲ್ಲಿ ತೊಡಗಿದ ಜಗತ್‌ಶಕ್ತಿ ಆತನ ದೈವಿತ್ವಕ್ಕೆ ತಾನು ಅಡಿ ಆಳಾಗಿದ್ದನ್ನು ನಿರಾಕರಿಸುತ್ತಾ ನನ್ನನೆಂದುಕೊಂಡೆ? ನಿನ್ನ ಬಿಟ್ಟರೆ ಶುದ್ದ

ಬೈರಾಗಿ ಎಂಬ ಮಾತಿನಲ್ಲಿ ಹೊಗಳಿಕೆ ಮಾತಿಗೆ ತಾನು ದಾಸಳಲ್ಲ ಎಂದು ಹೇಳಿದ್ದಳು. ಪ್ರೇಮದ ಉತ್ಕಟ ಆರಾಧನೆ ಮನೋಭಾವವಿದ್ದರೂ ತನ್ನತನವ ಬಿಟ್ಟುಕೊಡುವುದಿಲ್ಲ.

ಈ ದುರ್ಗ ನಿನ್ನ ನೆನಸಿಕೊಂಡರೆ
ಅಸೂಯೆಯಾಗುತ್ತೆ
ನೀನೊಬ್ಬಳೇ ಆದಿ ನಿನ್ನಂನಂತರದವರೆಲ್ಲಾ
ಮಾಯೆಯಾಗಿ ಮೋಹವಾಗಿ ಮೋಹಿನಿಯಾಗಿ
ಕೊನೆಗೆ ಬರಿ ಮಾನಿನಿಯರಾಗಿ
ಈಗೆಲ್ಲಾ ಷಂಡರಿಗೂ ಹೆದರುವ ಮುಂಕುಗಳಾಗಿ
ದುರ್ಗೆ ನಿನ್ನಂಶವಲ್ಲೂ ಇಲ್ಲ
ನಮ್ಮ ಕೈಯಲ್ಲಿ ಆಯುಧಗಳಿಲ್ಲ[೨೬]

(ಪ್ರತಿಭಾ ನಂದಕುಮಾರ್, ಪುಟ-೬೩, ೧೯೮೩)

ದುರ್ಗೆಯ ಶಕ್ತಿಯನ್ನು ಕುರಿತು ಆಕೆಯಲ್ಲಿರುವ ಅಂತಃಶಕ್ತಿಯನ್ನು ಹೊಗಳುತ್ತಾರೆ. ಅಪಾರವಾದ ಪ್ರೀತಿಯ ಜೊತೆಗೆ ಶಿವಶಕ್ತಿಯೊಡನೆ ಅಷ್ಟೆ ಬಲಾಢ್ಯವನ್ನು ಹೊಂದಿದ್ದ ಶಿವೆಯೂ ತನ್ನತನ-ಅಧುನಿಕ ಕನ್ನಡ ಕವಿಯತ್ರಿಯರಿಗೆ ಮೆಚ್ಚಲಾರ್ಹವಾದುದು.

ರಾಧೆ-ಕೃಷ್ಣಾ

ಶ್ರೀ ಕೃಷ್ಣನನ್ನು ಭಕ್ತಿಯಿಂದ ಒಲಿಸಿಕೊಂಡ ಗೋಕುಲದ ಒಬ್ಬ ಸ್ತ್ರೀ ಈಕೆ. ಇವಳು ಪೂರ್ವಜನ್ಮದಲ್ಲಿ ಸುಗ ಎಂಬ ರಾಮನ ದಾಸಿಯಾಗಿದ್ದಳು. ಆಗ ಶ್ರೀರಾಮನ ಬಾಯಿಯ ತಂಬೂಲಕ್ಕೆ ಕೈ ನೀಡಿದುದರಿಂದ ಮೆಚ್ಚಿದ ರಾಮನು ಬಂದು ವರವನ್ನು ಕೇಳೆನ್ನಲು, ಶ್ರೀರಾಮನ ಅಂಗಸುಖವನ್ನು ಆಕೆ ಅಪೇಕ್ಷಿಸಲು ಮುಂದಿನ ಜನ್ಮದಲ್ಲಿ ನೀನು ರಾಧೆಯಾಗಿ ಹುಟ್ಟಿ ನಾನು ಕೃಷ್ಣನಾಗಿ, ನಿನ್ನನ್ನು ಸಂತೋಷಪಡಿಸುತ್ತೇನೆ ಎಂದನು.

ರಾಧೆ ಬಿಟ್ಟು ಹೋದರೆ ನಿನ್ನ ಕೃಷ್ಣ
ಕೈಗೆ ಕೊಳಲು ಕೊಟ್ಟ
ಪ್ರೀತಿ ತುಂಬ ಪಾಕವ ಎರಕ ಹೊಯ್ದು
ಕೊಟ್ಟು ಹೋದನವಾ ವೇಣುಗೋಪಾಲ
ತನ್ನ ಹೃದಯ ಅದರೊಳಗಿಟ್ಟು
ರಾಧೆ-ಕೃಷ್ಣ ಎಂದು ಉಳಿಯಲಿ
ಕೊಳಲೆಂದು[೨೭]

(ಪ್ರೇಮಭಟ್, ಪುಟ-೯೦ ೧೯೯೮)

ರಾಧೆಯ ಪ್ರೀತಿ ರಮ್ಯ. ಅವಳದು ದೈವಿ ಪ್ರೀತಿ. ಅವಳು ಸದಾ ಕೃಷ್ಣನ ಅನುಯಾಯಿ ಅತೀ ಪ್ರೀತಿ. ಕನಸಿನಲ್ಲಿ ಕಾಡುವ ಅವನದೇ ನೆನಪು. ಅಂತಿಮದವರೆಗೆ ಪ್ರೇಯಸಿಯಾಗಿಯೇ ಉಳಿದಳು. ಆದರೆ ಅವಳಿಗೆ ಹೆಂಡತಿಯ ಸ್ಥಾನ ಸಿಗಲಿಲ್ಲ.

ರಾಧೆ ಕೊನೆ ಕೊನೆಗೂ ಹೆಂಡತಿಯೂ
ಆಗಲಿಲ್ಲ ಪ್ರೇಯಸಿಯೂ ಆಗಲಿಲ್ಲ
ಅವಳಿಗೆ ದಕ್ಕಿದ ಭಾಗ್ಯವೊಂದೇ
ಕೊನೆಯವರೆಗೂ
ಕೃಷ್ಣನ ನೆನಪು ಸಿಹಿಯಾಗಿ
ಹಲವೊಮ್ಮೆ ಕಹಿಯಾಗಿ[೨೮]

(ಪ್ರೇಮಭಟ್, ಪುಟ-೯೦, ೧೯೯೮)

ರಾಧೆಯ ನೋವು ಅಂತೀನಾದವರೆಗೂ ಮುಂದುವರೆಯುತ್ತದೆ ಅವಳ ಸತ್ಯವಂತೆ ಪ್ರೀತಿ, ಪ್ರೇಮಿಯಾಗಿಯೂ ಗುರುತಿಸಿಕೊಳ್ಳುತ್ತಾಳೆ.

ಅಮೃತಮತಿ

ಜೈನಧರ್ಮದ ಜನ್ಮಾವಳಿ ಕಥೆಯಲ್ಲೊಂದು ಅಮೃತಮತಿ ಮತ್ತು ಅಷ್ಟಾವಂಕ್ರನ ಕಾಮುಕ ಕಥಾ ಹಂದರವುಳ್ಳ ಕಥೆ. ಮಹಾರಾಣಿಯಾಗಿ ಮೆರೆದ ಅಮೃತಮತಿಗೆ ಸಕಲ ಐಶ್ವರ್ಯಗಳಿದ್ದರೂ ಯಶೋಧರನ ಅಪ್ಪುಗೆಯಿದ್ದರೂ ಆನೆಲಾಯದ ಅಷ್ಟಾವಂತಕ್ರನನ್ನು ಬಯಸಿದ್ದಳು. ಇದೇ ಕಥೆ ಭೋಗದ ಹಾದಿಯಲ್ಲೆ ನಡೆವ ಅಮೃತಮತಿ ಮಹಾರಾಜ ಮತ್ತು ಆತನ ತಾಯಿ ಚಂದ್ರಮತಿಯ ಕೊಲೆಗೈಯುತ್ತಾಳೆ.

ಯಶೋಧರನ ಪ್ರೀತಿಗಿಂತ ಅಷ್ಟಾಂಗಗಳು ಊನವಾದ ಅಷ್ಟಾವಂಕ್ರನ ಪ್ರೀತಿಯು ಸಹ್ಯವಾಗುತ್ತದೆ. ದೂರದಿಂದ ಧರ್ಮದ ಹಂತದ ಅಮೃತಮತಿಯ ಪಾಪ ಮತ್ತು ಅದರಿಂದ ಆಕೆ ಜನ್ಮಾಂತರಗಳ ಕಾಲ ಪಾಪಕೂಪಕ್ಕೆ ಬಿದ್ದು ನರಕವುಳ್ಳ ಜನ್ಮವನ್ನು ಎತ್ತುತ್ತಾಳೆ. ಇದನ್ನೆ ಮೂಲವಾಗಿಟ್ಟುಕೊಂಡು ಜೈನಧರ್ಮದ ಪಾಪಪ್ರಜ್ಞೆಯ ಬೋದನೆಯನ್ನು ಮೂಲವಾಗಿಸಿಕೊಂಡು ಅಮೃತಮತಿಯ ಕಥೆ ಮುಂದುವರೆಯುತ್ತದೆ.

ನಾವೆಲ್ಲರೂ ಅಮೃತಮತೀಯರು
ನೀವೆ ಎಳೆದ ಅನುಲ್ಲಂಘನೀಯ
ಲಕ್ಷಣ ರೇಖೆಯೊಳಗೆ ನಮ್ಮಾಳಗನ್ನು
ಅರಸುತ್ತಾ ಹೊರಟ ಪತಿತೆಯರು

ಹೆಣ್ತನದ ಗುಂಡಿಗೆಯ ಮಟ್ಟದ
ಅತ್ಯಾಚಾರಕ್ಕೆ ಶತಶತಮಾನಗಳಿಂದ
ಒಳಗಾಗುತ್ತಿರುವ ಅಬಲೆಯರು"

(ಹೆಚ್.ಎಲ್.ಪುಷ್ಪ, ಪುಟ-೭೬, ೧೯೯೨)

ಅಮೃತಮತಿಯ ಭೋಗದ ಕಲ್ಪನೆಯನ್ನು ಅತೀವ ಲೈಂಗಿಕ ಆಕಾಂಕ್ಷೆಯನ್ನು ಆಧುನಿಕ ಕನ್ನಡ ಕವಿಯತ್ರಿಯರು ಕಾಮದೇಹದ ಮೂಲಭೂತ ಅಗತ್ಯಗಳಲ್ಲಿ ಒಂದೆಂದು ಸಮರ್ಥಿಸುತ್ತಾರೆ. ಬೋಗದಲ್ಲೆ ಮುಳುಗಿ ಎದ್ದ ನೂರಾರು ಮಹಾರಾಜರು ಇತಿಹಾಸದಲ್ಲಿದ್ದಾರೆ. ಆದರೆ ಅಮೃತಮತಿಯ ಈ ಧೋರಣೆ ಹೆಣ್ಣಾಗಿದ್ದರ ಕಾರಣದಿಂದಲೇ ಅವಳಿಗೆ ಧರ್ಮದ ಏಟು ಬಿದ್ದಿತು.

ಯಶೋಧರನ ತುಂಬು ಪ್ರೀತಿಯ ಮಧ್ಯೆ ಆನೆಲಾಯದ ಮಾವುತನನ್ನು ಬಯಸಿ ಹೊರಟ್ಟಿದ್ದು ಎಂತಹ ಆದರ್ಶ ಪುರುಷನ ಹುಡುಕಾಟ ಎನ್ನುವುದು ಪ್ರಶ್ನೆಯಾಗುತ್ತದೆ. ಆದರ್ಶ ಪರದಿ ಬಹು ದೊಡ್ಡದೆಂಬ ಭಾವನೆಯು ಕೂಡ ಬರುವುದುಂಟು.

ಮಹಿಳಾ ಕಾವ್ಯದಲ್ಲಿ ಪೌರಾಣಿಕ ಪುರುಷ ಮತ್ತು ಪ್ರಸ್ತುತತೆ

ಹೊಸಕನ್ನಡ ಮಹಿಳಾ ಕಾವ್ಯದ ಪುರಾಣ ಕಾವ್ಯದಲ್ಲಿ ಗಂಡಿನ ಕುರಿತ ಚಿಂತನೆಯ ಅಧ್ಯಯನ ಮಾಡುತ್ತಾ ಹೋದಂತೆಲ್ಲಾ ಹಲವು ಆಲೋಚನೆಗಳು ಏಳುತ್ತವೆ. ಆಧುನಿಕ ಮಹಿಳಾ ಕವಿಯತ್ರಿ ತನ್ನ ಕವಿತೆಗಳಲ್ಲಿ ಪುರಾಣದ ಸ್ತ್ರೀ ಪಾತ್ರಗಳು, ಪುರುಷ ಪಾತ್ರಗಳು ಇಂದಿನ ಪ್ರಸ್ತುತತೆಯಲ್ಲಿ ಹೇಗೆ ಸಾರ್ವತ್ರಿಕವಾಗುತ್ತವೆ? ಎಂದು ಸ್ತ್ರೀಯ ಸ್ಥಿತಿ-ಗತಿಗಳು ಪುರುಷನ ಸ್ತ್ರೀಯಡೆಗೆ ಇದ್ದ ಭಾವನೆ ಮತ್ತು ನಡಾವಳಿಗಳು ಎಲ್ಲಾ ಕಾಲದಲ್ಲೂ ಒಂದೇ ಆದ ಬಗೆ ಏನು?

ಪುರಾಣದಲ್ಲಿನ ಸ್ತ್ರೀಯ ಶೋಷಣೆ, ನೋವು, ಹಿಂಸೆಗಳು ಇಂದಿನ ಆಧುನಿಕ ಜಗತ್ತಿನ ಸ್ತ್ರೀಯ ಸಮಸ್ಯೆಗಳು ಪರಸ್ಪರ ಹೇಗೆ ತಾಳೆಯಾಗುತ್ತದೆ? ಎಂಬ ಆಲೋಚನೆ ಪ್ರಶ್ನೆಗಳು ಬರುವುದು ಸಹಜ. ಯಾವುದೇ ಹಂತದ ಅಥವಾ ಕಾಲಘಟ್ಟದಲ್ಲಿ ಆದ ಕೆಲವು ಕಾಲ್ಪನಿಕತೆ ಎನಿಸುವ ನಡೆದಿರುವ, ಅನುಮಾನಗಳಂತೆ ರಾಮಾಯಣ ಮಹಾಭಾರತ ಪಾತ್ರಗಳು ಪ್ರಸ್ತುತದಲ್ಲಿ ಸಾರ್ವತ್ರಿಕವೆನಿಸುತ್ತವೆ ಎಂಬುದೇ ದೊಡ್ಡ ಪ್ರಶ್ನೆ.

ರಾಮಾಯಣ ಮತ್ತು ಮಹಾಭಾರತಗಳು ನಿಜವಾಗಿಯೂ ಸಾಧ್ಯವೇ ಅಥವಾ ಮಿಥ್ಯವೇ ಅನ್ನುವುದಕ್ಕಿಂತ, ಸಂಶೋಧನಾತ್ಮಕ ಅಧ್ಯಯನಕ್ಕಿಂತ ಅವುಗಳಲ್ಲಿನ ಪಾತ್ರಗಳು,

ಇಡೀ ಭಾರತದ ಸಾಮಾಜಿಕ ಜೀವನದ ಮೇಲೆ ಅವು ಬೀರಿದ ಪ್ರಭಾವಗಳಡೆಗೆ ಗಮನ ಹರಿಸಬೇಕು.

ರಾಮಾಯಣ ಮತ್ತು ಮಹಾಭಾರತಗಳ ಸತ್ಯಘಟನೆಗಳಿಗಾಗಿ ಅವು ನಡೆದ ಸಮಯದ ನಿಖರತೆಗಿಂತ ಅವುಗಳಲ್ಲೂ ೧೦೦೦ ವರ್ಷಗಳ ಹಿಂದೆ ರಚನೆಯಾದವುಗಳು ಎಂಬುದು ಸತ್ಯ. ಒಂದು ಕೃತಿ ರಚನೆಯ ಹಂತದಲ್ಲಿ ಅದರ ವಿಷಯ ವಸ್ತು ಎಷ್ಟೇ ಕಲ್ಪನಾತೀತ ವಾಗಿರಲಿ(Fantancy), ಕಥಾ ವಸ್ತುವು ಮಾನವನ ವಾಸ್ತವಿಕತೆ ಮೀರಲಿ ಆದರೆ ಕೃತಿರಚನೆಗೆ ಅಂದಿನ ಸಾಮಾಜಿಕತೆ, ಧಾರ್ಮಿಕ ಆರ್ಥಿಕ ಸಂಬಂಧಗಳೆಂಬ ಹಲವು ಆಚರಣೆ, ಸಾಮಾಜದ ಮೌಲ್ಯಗಳ ಪ್ರಭಾವಗಳಿಂದ ಆ ಕೃತಿ ತಪ್ಪಿಸಿಕೊಂಡಿರುವುದಿಲ್ಲ. ಸಮಾಜವನ್ನು ಅರಿಯಲು ಸಹಾಯವಾಗುತ್ತದೆ. ಕಾಲನಂತರದ ಹಲವು ಬದಲಾವಣೆಗಳು ಈ ಗ್ರಂಥಗಳು ಒಳಗೊಂಡಿರುತ್ತವೆಯಾದರೂ ಕೆಲವು ವಿಷಯಗಳನ್ನು ಬಿಟ್ಟು ಬದಲಾವಣೆಯಾಗಿರುವುದಿಲ್ಲ. ಇಲ್ಲಿನ ಸ್ತ್ರೀ ಪಾತ್ರಗಳು ಸೀತೆ, ದ್ರೌಪದಿ, ಮಂಡೋಧರಿ, ಕೈಕೇಯಿ ಆಹಲ್ಯೆ ಎಲ್ಲಾ ಪಾತ್ರಗಳು ಅನುಭವಿಸಿದ ನೋವುಗಳು ಬಾಧೆಗಳು ಈಗಿನ ಸಾಮಾಜಿಕ ಸಂದರ್ಭದಲ್ಲೂ ಪ್ರಸ್ತುತವಾಗುತ್ತದೆ.

(Feminium)ಸ್ತ್ರೀವಾದದ ಚಿಂತನೆಗೆ ತೊಡಗಿದಾಗ ಹೆಣ್ಣಿನ ಸ್ಥಿತಿ–ಗತಿಯನ್ನು ಅವಲೋಕಿಸುವ ಸಂದರ್ಭದಲ್ಲಿ ಸಮಾಜದ ಪುನರ್ವಲೋಕನ ಮಾಡುವುದು ಅಗತ್ಯ. ಇಂದಿನ ಎಲ್ಲಾ ಸ್ಥಿತಿ–ಗತಿಗಳಿಗೂ ಸ್ತ್ರೀ ಸಮಾಜದ ಎಲ್ಲಾ ಸ್ಥಿತಿಗತಿಗಳು ಅವಳ ಶೋಷಣೆ ಎಲ್ಲವೂ ಒಂದೇ ಬಾರಿ ಉದ್ಭವಿಸಿದ ಸಮಸ್ಯೆಗಳೆಲ್ಲ. ಅವಳ ಇಂದಿನ ಈ ಹಂತದ ಸ್ಥಿತಿಗತಿಗೆ ಸಾವಿರಾರು ವರ್ಷದಿಂದ ಆಚರಣೆ, ಧಾರ್ಮಿಕತೆ, ರಾಜಕೀಯ ಪ್ರಭಾವಗಳು ಅವುಗಳ ಇಂದಿನ ಈ ಹಂತದ ಸ್ಥಿತಿ–ಗತಿಯನ್ನು ರೂಪಿಸುತ್ತದೆ. ಈ ಕಾರಣದಿಂದಲೂ ಪುರಾಣದ ಸ್ತ್ರೀಯ ಅವಲೋಕನ ಒಂದು ರೀತಿಯಲ್ಲಿ ಇಂದಿನ ಸ್ತ್ರೀ ಪ್ರಸ್ತುತತೆಯನ್ನು ಅವಲಂಬಿಸುತ್ತದೆ.

ಪಂಚಕನ್ಯೆಯರು ಈ ಮಹಾ ಸತಿಯರು
ವಂಚನೆಗೆ ಒಳಗಾದವರೆ ಎಲ್ಲಾ
ಆಕಾಲ ಈ ಕಾಲ ಎಲ್ಲಾ ಒಂದೇ
ನೂರ್ಕಾಲ ತಳೆದರೂ ಧನಿಯೊಂದೆ[೩೦]

(ಪ್ರೇಮಾ ಭಟ್–ಪುಟ–೧೦, ೨೦೦೦)

ನೂರ್ಕಾಲ ಕಳೆದರೂ ಧನಿಯೊಂದೆ ಎನ್ನುವಲ್ಲಿ ಕಾಲದೊಂದಿಗೆ ಸ್ತ್ರೀಯ ಸಾಮಾಜಿಕತೆ ಬದಲಾಗಿಲ್ಲ ಎನ್ನುವುದರ ಸೂಚನೆಯಿದೆ. ಸ್ತ್ರೀಯ ಸಾಮಾಜಿಕ ಸ್ಥಿತಿಯ ಅವಲೋಕನ

ಮಾಡತೊಡಗಿದಾಗ ಸಮಾಜಶಾಸ್ತ್ರಜ್ಞರು ವೇಧಗಳ ಕಾಲ, ಜನಪದದ ಕಾಲ, ಪ್ರಾಚೀನಕಾಲ ವೈದಿಕ ಧರ್ಮದ ಕಾಲ, ವಚನ ಸಾಹಿತ್ಯದ ಕಾಲ ಐರೋಪ್ಯ ಚಿಂತನೆಯ ಕಾಲ, ಹೀಗೆ ಹಲವು ಕಾಲಘಟ್ಟದಲ್ಲಿ ಸ್ತ್ರೀಯ ಸ್ಥಿತಿಗತಿಗಳನ್ನು ಅವಲೋಕಿಸುತ್ತಾ ಕಾಲದೊಂದಿಗೆ ಸ್ತ್ರೀಯ ಸಾಮಾಜಿಕ ಸ್ಥಾನಮಾನ ಬದಲಾವಣೆಗಳು ಕಂಡು ಬಂದಿರುವುದನ್ನು ಹೇಳತೊಡಗುತ್ತಾರೆ.

ಪುರಾಣಗಳ ಸ್ತ್ರೀಯರು ಒಂದು ರೀತಿಯ ಪುರಾತನ ಸ್ತ್ರೀಯ ಮಾದರಿಗಳೇ. ಭಾರತದ ಧಾರ್ಮಿಕತೆಯ ಸಂಕೇತ, ಭಾರತೀಯರ ಆಚರಣೆ, ನಂಬಿಕೆ, ಅಸ್ತಿತ್ವ ಎಲ್ಲವನ್ನು ಪ್ರತಿಬಿಂಬಿಸುವುದು ಪುರಾಣದ ಆದ್ಯ ಕೆಲಸ.

ಯಾವುದೇ ಹಂತದಲ್ಲಿ ನಡೆದಿರಬಹುದೆನ್ನುವ ರಾಮಾಯಣ, ಮಹಾಭಾರತಗಳು ಅದರಲ್ಲಿ ಪುರುಷ ಪಾತ್ರಗಳು ದೈವಿ ಹಂತವುಗಳು. ಆ ಪಾತ್ರಗಳಲ್ಲಿನ ಆದರ್ಶ, ತ್ಯಾಗ, ಒಳ್ಳೆಯತನ, ಶೂರತ್ವ, ಚಾಕಚಕ್ಯತೆ, ಎಲ್ಲವೂ ಆದರ್ಶನೀಯ. ಕವಿಯತ್ರಿಯರ ಪ್ರಕಾರ ಇಡೀ ಭಾರತೀಯ ಮನೋಭಾವದ ಪ್ರಕಾರ ರಚಿತವಾಗಿದ್ದವು. ಇದರ ರಚನೆಗಳೆಲ್ಲಾ ಮೇದಾವಿ ಋಷಿ ಪಂಡಿತರುಗಳಿಂದಲೇ ಆಗಿವೆ ಎಂದು ನಂಬಿದ್ದಾರೆ.

ಮಹಾಭಾರತದ ವಾಲ್ಮೀಕಿ ರಾಮಾಯಣ ಬರೆದಿದ್ದು, ವ್ಯಾಸರಿಂದ ಮಹಾಭಾರತ ಬರೆದಿದ್ದು ಎಂಬ ಪವಿತ್ರ ನಂಬಿಕೆ. ಪುರಾಣಗಳ ನಂಬಿಕೆ. ಪುರಾಣಗಳಲ್ಲಿ ಘಟನೆಗಳ ಅವಲೋಕಿಸಿದಾಗ ಸ್ತ್ರೀಗೆ ದೊರಕಿದ್ದ ಪಟ್ಟ ಆತನ ಸಾಮಾಜಿಕ ಸ್ಥರಗಳೊಡನೆ ನೋಡಬಹುದು.

ಪುರಾಣಗಳು ಹಿಂದೆಯೇ ಹೇಳಿರುವಂತೆ 'ಭಾರತೀಯರ ಮಾನಸಿಕ ಸಂಕೇತ', ಭಾರತೀಯರ ನಡವಳಿಕೆ ಆಚರಣೆ, ಧಾರ್ಮಿಕ ತುಮುಲ ಎಲ್ಲದರ ಸಂಕೇತ, ಸಿಮೋನ್‌ದ ಬುವಾ ಹೇಳುವಂತೆ 'ಹೆಣ್ಣು ಸ್ವಭಾವತಃ ರೂಪಿಸಲ್ಪಟ್ಟವಳು' ಎಂದು. ಹೆಣ್ಣು ರಾಮಾಯಣ ಮತ್ತು ಮಹಾಭಾರದಲ್ಲಿ ಭಾರತೀಯ ಮನೋಭಿಲಾಶೆಯಂತೆ ರೂಪಿತವಾಗಿದ್ದಾಳೆ.

ಸಾಧ್ವಿ ತ್ಯಾಗಮಯಿ, ಕ್ಷಮಾಯಾಧರಿತ್ರಿ, ಶೀಲವಂತ, ಗುಣವಂತೆ, ಹೀಗೆ ರೂಪಿತವಾಗುತ್ತಾಳೆ. ಸೀತೆ, ಸಾವಿತ್ರಿಯಂತೆ ಸಾಧ್ವಿ ಪಾತ್ರಗಳು ಅವುಗಳು ಪುರುಷ ಪಾತ್ರಗಳಿಗೆ ನಡೆದುಕೊಂಡಿರುವ ಹೊಂದಾಣಿಕೆ, ಎಲ್ಲವೂ ಭಾರತೀಯ ಮನಸ್ಸಿನ ಸಂಕೇತಗಳಾಗಿವೆ. ಒಂದು ರೀತಿಯ ಪುರಾಣದ ಪುರುಷನ ಅವಲೋಕನವು ಭಾರತೀಯ ಸಮಾಜದ ಮಾನಸಿಕ ನೋಟ ಪಕ್ಷಿ ನೋಟವೆನ್ನಬಹುದು.

ಪುರಾಣದ ಸ್ತ್ರೀಯ ಚಿತ್ರಣಗಳು ಮೂಲತಃ ಭಾರತೀಯ ಹೆಣ್ಣೊಬ್ಬಳು ನಡೆದುಕೊಳ್ಳಬೇಕಾದ ಇರಬೇಕಾದ ಒಂದು ಮಾದರಿ(Living Stage)ಯನ್ನು ಒತ್ತಿ ಹೇಳುತ್ತದೆ. ಈ ಕಾರಣದಿಂದಲೇ ಆದರ್ಶ ನಾರಿ ಕಲ್ಪನೆ ಬೆಳೆದು ಬಂದಿದೆ. ಇದಕ್ಕೆ ಪೂರಕವಾಗಿ ಪಂಚಕನ್ಯೆಯರ ಚಿತ್ರಣ ಮೂಡಿ ಬಂದಿದೆ. ಇಡೀ ಭಾರತೀಯರ ಒಳಗೊಂಡು ಪ್ರಪಂಚದ ಮನೋಭಿಲಾಶೆಯು ಈ ಕನ್ಯೆಯರ ಪಾತ್ರ ಚಿತ್ರಣದಲ್ಲಿದೆ. ಈ ಕಾರಣಕ್ಕಾಗಿಯೇ ತಮ್ಮ ಮನೋಭಿಲಾಷೆ ಈಡೇರಿಸಿಕೊಳ್ಳಲು ಸ್ತ್ರೀ ಜಗತ್ತನ್ನು ನಿಯಂತ್ರಣದಲ್ಲಿರಿಸಲು, ಈ ಪಂಚಕನ್ಯೆಯ ಉದಾರಣೆಗಳನ್ನಿಟ್ಟು ಸ್ತ್ರೀ ಸಮಾಜವನ್ನು ನಿಯಂತ್ರಿಸುತ್ತಾರೆ. ಆಧುನಿಕ ಕವಿಯತ್ರಿ ಈ ಬುದ್ಧಿವಂತಿಕೆಯನ್ನು ಪ್ರಶ್ನಿಸುತ್ತಾಳೆ. ಎಲ್ಲದಕ್ಕೂ ರಾಮಾಯಣ ಮತ್ತು ಮಹಾಭಾರತ ಸ್ತ್ರೀಯರ ಉದಾಹರಣೆ ಅವಶ್ಯಕತೆಯನ್ನು ದೂರುತ್ತಾಳೆ.

ಎಲ್ಲದಕ್ಕೂ ಹೆಣ್ಣೆ ಕಾರಣವೆಂದು
ರಾಮಾಯಣ ಮಹಾಭಾರತ ಮುಂದೆ ಮಾಡಿ
ಸಲ್ಲದ ಅಪವಾದ ಹೊರಿಸಿದಿರಿ ಗಂಡೆ
ನಿನ್ನ ದೌರ್ಬಲ್ಯದಿಂದ
ಉಂಟಾದ ಅನಾಹುತಗಳನ್ನು
ಹೆಣ್ಣಿಗೆ
ಅಂಟು ಹಾಕಿ ಸುಮ್ಮನಾಗದಿರು
ಮೆಲ್ಲಗೆ[೨೧]

(ಎಂ.ಎಸ್.ವೇದ–ಪುಟ–೨೦, ೧೯೮೭)

ಎನ್ನುವಲ್ಲಿ ಪುರುಷ ಪ್ರಪಂಚದ ಅತೀ ಬುದ್ಧಿವಂತಿಕೆಯನ್ನು ಪ್ರಶ್ನಿಸುತ್ತಾಳೆ. ರಾಮಾಯಣ ಮತ್ತು ಮಹಾಭಾರತವು ನಮ್ಮನ್ನು ರೂಪಿಸುವುದಿಲ್ಲವೆಂದು ದಿಟ್ಟವಾಗಿ ಹೇಳುತ್ತಾಳೆ. ಈ ಉದಾಹರಣೆಗಳು ಪುರುಷ ಪ್ರಪಂಚದ ಸ್ವಾರ್ಥಗಳು ಎಷ್ಟರ ಮಟ್ಟಿಗೆ ಅಡಗಿವೆ ಎಂಬುದನ್ನು ಹೇಳಿದ್ದಾರೆ.

ಸಾಮಾನ್ಯವಾಗಿ ಪುರಾಣದ ಸ್ತ್ರೀ ಪಾತ್ರಗಳು ವಿಶ್ಲೇಷಿಸುತ್ತಾ ಹೋದೆಂತೆಲ್ಲಾ ಸೀತೆ, ಸಾವಿತ್ರಿ, ಶಕುಂತಲೆ, ಚಂದ್ರಮತಿ, ದ್ರೌಪದಿ, ಊರ್ಮಿಳೆ, ಅಹಲ್ಯೆ ಪಾತ್ರಗಳು ಸಾಧ್ವಿಕ ಪಾತ್ರಗಳು. ಪುರುಷನ ಆಹಂಗೆ ಅವನ ನಡಾವಳಿಗಳನ್ನು ಅರಿತು, ಕೊಟ್ಟ ಕಷ್ಟಗಳನ್ನು ಮೌನವಾಗಿ ತಲೆ ಬಗ್ಗಿಸಿ ಅನುಭವಿಸಿದ ಸಾಧ್ವಿಕ ಪಾತ್ರಗಳು. ಇವರ ಪಾತ್ರ ಚಿತ್ರಣ. ಗಮನಿಸಿದಾಗ ಒಳ್ಳೆಯತನದಿಂದ ಕೂಡಿದ ವ್ಯಕ್ತಿತ್ವ ಹಲವು ಸಂಕಷ್ಟಗಳ ಸರಮಾಲೆ ಕೊಟ್ಟು ಅವರ ವ್ಯಕ್ತಿತ್ವವನ್ನು ಪರೀಕ್ಷಿಸಲಾಗುತ್ತದೆ.

ಅವಳಿಗೆ ಅಂತಿಮದಲ್ಲಿ ಒಳ್ಳೆಯದಾಗುತ್ತದೆ. ಅಮೃತಮತಿ ಇದೇ ರೀತಿಯ ಕೈಕೇಯಿ, ಶರ್ಮಿಷ್ಠೆ, ಪೂತನಿ, ಹಿಡಂಭಿ ಪಾತ್ರಗಳ ದುಷ್ಟತನದ ಪ್ರತಿರೂಪಗಳು ಜೀವನದುದ್ದಕ್ಕೂ ಜಗತ್ತಿನ ಹೆಣ್ತನದ ಸಾತ್ವಿಕತೆ, ಸರಳತೆ, ಹೊಂದಾಣಿಕೆಯನ್ನು ಮೀರಿ ಬೆಳೆದವು ಅಂತಿಮದಲ್ಲಿ ತಕ್ಕಶಾಸ್ತಿ ಅನ್ನುವ ಹಾಗೆ ಅವರಿಗೆ ಶಿಕ್ಷೆಯಾಗುತ್ತದೆ.

ಇಡೀ ಸ್ತ್ರೀ ಪಾತ್ರಚಿತ್ರಣಗಳಿರುವ ಪುರಾಣಗಳಲ್ಲಿ ನೋಡಿದಾಗ ಪುರುಷ ನಿರ್ಮಿಸಿದ ಸಾತ್ವಿಕ ವೃತ್ತವನ್ನು ದಾಟಿದಾಗ ಅವಳು ಶಿಕ್ಷೆಗೊಳಗಾಗುತ್ತಾಳೆ.

ನೀವು ಕತ್ತೆತ್ತದಿರುವವರೆಗೆ
ನಿಮ್ಮ ತೊತ್ತಾಗಿ ಕಾಯುವ ಗಂಡುಗಳು
ನಿಮ್ಮ ಸುತ್ತ ಇರುತ್ತಾರೆ
ಒಂದು ವೇಳೆ
ರಾವಣ ದುಶ್ಯಾಸನರು ಹುಟ್ಟಿ
ನಿಮ್ಮ ಉಟ್ಟ ಸೀರೆ ಎಳೆದರು
ರಾಮಕೃಷ್ಣರಿದ್ದಾರೆ
ನಿಮ್ಮ ವಸ್ತ್ರ ಅಕ್ಷಯವಾಗಿರಿಸಿ
ಅಗ್ನಿ ಪರೀಕ್ಷೆ ಮಾಡಿ
ಮೀಸೆ ತಿರುವಿಕೊಳ್ಳುವ
ಭೂಪರು[೨]

(ವಿಜಯದಬ್ಬೆ, ಪುಟ-೫೮, ೧೯೮೮)

ಎಲ್ಲಿಯವರೆಗೂ ಹೆಣ್ಣು ಎಲ್ಲಾ ವಿಷಯಗಳಿಗೂ ತಲೆತಗ್ಗಿಸಿ ಗಂಡಿನ ಅಡಿ ಆಳಾಗಿ ಬದುಕುತ್ತಾಳೆಯೋ ಅಲ್ಲಿಯವರೆಗೂ ಗಂಡು ಕಾವಲಾಗಿರುತ್ತಾನೆ. ಇದೊಂದು ಪ್ರತಿಷ್ಠೆಯ ವಿಷಯ. ಅರ್ಥೋಹಿಕನ್ಯಾ ಪರಕೀಯ ಏವ(ಅಭಿಜ್ಞಾನ ಶಾಕುಂತಲ-ಸಂ. ಎ.ಬಿ. ಗಜೇಂದ್ರಗಡ ಪುಟ. ೧೦೦) ಮೂಲತಃ ಹೆಣ್ಣು ತಂದೆಗಿಂತ ಗಂಡನಿಗೆ ಸೇರಿದವಳೆಂದು ಹೇಳುತ್ತದೆ.

ತಂದೆಯ ಕೆಲಸ ಅವಳ ಗಂಡನಿಗೆ ಕೊಡುವವರಿಗೆ ಜೋಪಾನ ಮಾಡುವುದೆಂದರ್ಥ. ಈ ರೀತಿಯಾಗಿ ಅವಳ ಜೋಪಾನ ಗಂಡನ ಮೇಲಿರುತ್ತದೆ. ಇದು ಸತ್ಯವಾಗಿ ಗಂಡು ಹೆಣ್ಣನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಲು ತನ್ನಿಷ್ಟ ಬಂದಂತೆ ಬಳಸಿಕೊಳ್ಳುವ ಹುನ್ನಾರ. ಆದರೆ ತಲೆತಗ್ಗಿಸಿ ಇವರ ಕರುಣೆ, ಪ್ರೀತಿಯ, ವರ್ತುಲದಲ್ಲಿದ್ದ ಹೆಣ್ಣು ಧೈರ್ಯದಿಂದ ತನ್ನ ಸ್ಥೈರ್ಯವನ್ನು ತೋರಿಸಿದರೆ ಅಲ್ಲಿಗೆ ಮುಗಿಯಿತು. ರಾಮ ಕೃಷ್ಣರ ರಾವಣ ದುಶ್ಯಾಸನರ ಸ್ಥಾನದಲ್ಲಿ ಬರುತ್ತಾರೆ. ಆದ್ದರಿಂದ ಕವಿಯತ್ರಿಯರ ಪ್ರಕಾರ ಅಕ್ಷಯವಸ್ತ್ರ, ಅಗ್ನಿಪರೀಕ್ಷೆ, ಇವು ಪುರುಷ ಸಮಾಜದ ಸ್ತ್ರೀಯರಿಗೆ ಆಗಿರುವ ಅನ್ಯಾಯದ ಸಂಕೇತಗಳು.

ನಿನ್ನ ನಯಗಾರಿಕೆಯ ಎಲ್ಲಾ
ಪದರ ಪದರಗಳು ಸರಿದಾಗ
ಸೀತೆ ಸಾವಿತ್ರಿಯರ ಕೆಡಗಿ
ಮಂಡೋಧರಿಯಾದೆ
ನಿನ್ನ ಮನೆದಾಸೆಯ ಮಜಲುಗಳ ಬಣ್ಣ
ಬಯಲಾದಾಗ ಹಿಡಿಂಬೆಯಾಗಲವಣಿಸಿ
ನನ್ನ
ಸಾಮಾಜಿಕ ನ್ಯಾಯದಲ್ಲಿ ಹಿಡಿದಿಟ್ಟೆ
ಪವಿತ್ರತೆಯ ಗಿಲೀಟು ಒಡವೆ
ತೊಡಿಸಿ
ಬಂಗಾರವೆಂದೆ ಸಿಂಗರಿಸಿ ಬಂದೆ[೩೩]

(ಬಾ.ಹ.ರಮಾಕುಮಾರಿ, ಪುಟ-೭೮, ೧೯೯೯)

ಸಮಾಜ ಹೇರಲ್ಪಟ್ಟ ಸಾತ್ವಿಕತೆ, ತ್ಯಾಗ, ಕರುಣಾಮಯಿ ಗುಣಗಳು, ಸೀತೆ, ಸಾವಿತ್ರಿ ಪಾತ್ರಗಳು ಕೆಲವೊಮ್ಮೆ ನೀರಸವೆನಿಸುತ್ತದೆ. ಗಂಡಸಿನ ನಯಗಾರಿಕೆಯ ಬಣ್ಣ ಹೊರಬಂದಂತೆಲ್ಲಾ ಅವಳು ಸೀತೆಯ ಸಾವಿತ್ರಿಯ ಪರಿಕಲ್ಪನೆಯ ಹೊರಬರುತ್ತಾಳೆ. ಪ್ರಶ್ನಿಸುವ ಮಂಡೋಧರಿ ಯಾಗುತ್ತಾಳೆ. ನಂತರದಲ್ಲಿ ಪ್ರಶ್ನಿಸುವ ಬದಲು ಅನ್ಯಾಯ ಮಾಡಿದವರನ್ನು ಹಿಡಿದು ತಿನ್ನುವ ಹಿಡಂಬಿಯಾಗುತ್ತಾಳೆ.

ಈ ಬದಲಾದ ಪಾತ್ರಗಳು ಅಂತಿಮದಲ್ಲಿ ಅವಳಿಗೆ ಭ್ರಮನಿರಸನವನ್ನುಂಟು ಮಾಡು ತ್ತವೆ. ಮಂಡೋಧರಿಯಾಗುವ ಕನಸು ಕಮರುತ್ತದೆ. ಏಕೆಂದರೆ ಸಮಾಜದ ಚೌಕಟ್ಟು ಅವಳಿಗೆ ಪವಿತ್ರತೆಯ ಗಿಲೀಟನ್ನು ತೊಡಿಸಿ ಅವಳನ್ನು ತೆಪ್ಪಗಾಗುತ್ತಾಳೆ. ಅವಳು ಮತ್ತದೆ ಸೀತೆಯಾಗಿ ಪುರುಷನ ಅಡಿ ಆಳಾಗುತ್ತಾಳೆ.

ಸದ್ಯಕ್ಕೆ ಸೀತೆಯಾಗಿರು ಸಾಕು
ಇಷ್ಟಕ್ಕೂ ನಿನಗಾವ
ಕೃಷ್ಣನಿದ್ದಾನೆ ಹೇಳು ಕಾಪಾಡಲು
ಅಕ್ಕ ದಿಟ್ಟ ದಿಗಂಬರೆಯಾದುದಕ್ಕೆ
ಸಿಕ್ಕ ಸಿಕ್ಕಿದವರೆನ್ನಲ್ಲಾ ಬೆತ್ತಲಾಗಬೇಕೆ
ಎಲ್ಲರನ್ನು ಒದ್ದು ಮುದ್ದು
ನಿಂತವನೆಂದು ಗೊಮ್ಮಟ
ಎಲ್ಲರ ಬದುಕನ್ನು ಒದ್ದು ಬಿಡಬೇಕೆ
ಆತ್ಮದಲ್ಲಿ ಒಲಿವಿರಲಿ ಬಾಳಿ
ಬಾಗಿ ನಡೆಯುವುದು

ಅಪ್ಪರನೋವಿನಲಿ ನೊವುಗಳು
ಕರಗಿ ಹೋದವು[೩೪]

(ಶಾಂತ ಜಗದೀಶ್, ಪುಟ-೫೬, ೧೯೯೯)

ಹೊಸಗನ್ನಡ ಈ ತಲೆಮಾರಿನ ಆಧುನಿಕ ಕನ್ನಡ ಕವಿಯತ್ರಿಯರ ಮತ್ತು ಹಿಂದಿನ ಕವಿಯತ್ರಿಯರ ಯೋಚನಾಲಹರಿಗಳು ತಕ್ಕಮಟ್ಟಿಗೆ ಒಂದೇ ಆದರೂ, ಕಾಲದ ಪರಿಣಾಮದಿಂದ ನವೋದಯದ ಕವಿಯತ್ರಿಯರ ಮತ್ತು ನವ್ಯ ಬಂಡಾಯದ ಕವಿಯತ್ರಿಯರ ಯೋಚನಾ ಲಹರಿಗಳು ಬಿನ್ನವಾಗುತ್ತಾ ಹೋಗುತ್ತಿವೆ. ಆದರೆ ಕೆಲವೊಮ್ಮೆ ಪುರುಷ ಸಮಾಜದ ಪ್ರಭಾವದಿಂದ ಸ್ತ್ರೀ ತಪ್ಪಿಸಿಕೊಳ್ಳಲು ಸಾದ್ಯವಾಗುವುದಿಲ್ಲ. ಇದಕ್ಕೆ ಕಾರಣ ಸಮಾಜದ ಮುಖ್ಯ ಬದಲಾವಣೆಗಳು ಸಮಾಜದಲ್ಲಿನ ಎಲ್ಲಾ ವರ್ಗಗಳಿಗೂ ತಲುಪಿರುವುದಿಲ್ಲ. ಕೆಲವೊಂದು ಮಧ್ಯಮವರ್ಗದ ಕುಟುಂಬಗಳು ಎಂತದೇ ಬದಲಾವಣೆಗಳಾದರೂ ಅದೇ ಹಳೆಯ ದೋರಣೆಗಳಿಗೆ ಜೋತು ಬಿದ್ದಿರುತ್ತವೆ.

ಸದ್ಯಕ್ಕೆ ಸೀತೆಯಾಗಿರು ಸಾಕು ಎನ್ನುವಲ್ಲಿ ಆತನ ನಿಲುವನ್ನು ದ್ರೌಪದಿಯ ದಿಟ್ಟತನವನ್ನು ವಹಿಸಲು ಹಿಂಜರಿದಂತಿದೆ. ಆತ್ಮದಲ್ಲಿ ಬಲವಿರಲಿ ಬಾಳು ಬಾಗಿ ನಡೆಯುವುದು ಎನ್ನುವಲ್ಲಿ ಸಂಪೂರ್ಣವಾಗಿ ಪುರುಷ ಸಮಾಜದ ದೋರಣೆಗಳಿಗೆ ಬದ್ಧವಾಗಿದ್ದಂತಿದೆ. ವರ್ಗದ ವಿಭಾಗೀಕರಣದಿಂದ ಕವಿಯತ್ರಿಯರ ಮನೋಮಟ್ಟವನ್ನು ಅಳೆಯಲಾಗುವುದಿಲ್ಲ. ಕೆಲವೊಮ್ಮೆ ಪುರುಷ ಸಮಾಜದ ಕೆಟ್ಟ ಧೋರಣೆಗಳನ್ನು ತನ್ನ ಮೇಲೆ ಹಾಕಿರುವ ನಿರ್ಬಂಧಗಳನ್ನು ಸಂಪೂರ್ಣವಾಗಿ ನಿರಾಕರಿಸಲು ಒಪ್ಪುವುದಿಲ್ಲ.

ಇದಕ್ಕೆ ಕಾರಣ ಹುಡುಕಿದಂತೆಲ್ಲಾ ಕೆಲವೊಂದು ಸ್ತ್ರೀ ವರ್ಗಕ್ಕೆ, ಪುರುಷನ ಅಸ್ತಿತ್ವವಿಲ್ಲದೆ ತಾವು ಬದಕಲಾಗುವುದಿಲ್ಲ ಎನ್ನುವ ಮನೊಭಾವರಿಬಹುದು ಅಥವಾ ಸಂಪೂರ್ಣ ಪುರುಷ ಮುಖಿ ಸಮಾಜದಲ್ಲಿ ಹೊಂದಾಣಿಕೆಯ ಮಾಡಿಕೊಂಡರೆ ತಾನು ನಿಶ್ಚಿಂತೆಯಿಂದ ಇರಬಹುದೆಂಬ ಭಾವನೆ ಇರಬಹುದು.

ರಾವಣನ ಬನದಲ್ಲಿ ಕುಳಿತು
ರಾಮನಿಗಾಗಿ ಜಪಿಸಲಿಲ್ಲ
ಸತ್ಯಗಂಡನ ಶವಕೆ
ಮತ್ತೆ ಜೀವ ತುಂಬಿಸಲಿಲ್ಲ
ನಾನಲ್ಲ ದ್ರೌಪದಿ, ಆಹಲ್ಯಾ, ಮಂಡೋದರಿ
ಇದ್ದುದ್ದೊಂದೆ ಗುರಿ
ವರಿಸದವನೊಂದಿಗೆ ಗರಿಬಿಚ್ಚಿ ಹಾರಿ
ನೀಲ ನಭದಲ್ಲಿ ಹಗುರವಾಗುವ ಆಸೆ

ಇನಿಯನೆತ್ತರ
ಬಡಲಿನಿಲಂಕುರಿಸಿತು ಚಿಗುರು
ಹೋಗಿ ಬರುವುದಾಗಿ ಹೇಳಿ
ಕಾಯರ್ಥ ಪರದೇಶಕ್ಕೆ ಹೋದವರ
ದಾರಿ ಕಾಯುತ್ತಿದೇನೆ
ಪರದೇಶಿಗಳು ನಾವು
ನಾನು ನನ್ನ ಕುವರ[೩೫]

(ಟಿ.ಸಿ.ಪೂರ್ಣಿಮಾ, ಪುಟ-೯೩, ೧೯೯೨)

ಕಾಲಬದಲಾದಂತೆ ಅವಶ್ಯಕತೆ ಮನೋ ಅಕಾಂಕ್ಷೆಗಳು ಗುರಿಗಳು ಕಾಲಕ್ಕೆ ತಕ್ಕಂತೆ ಬದಲಾಗುತ್ತಿದೆ. ಇದ್ದುದರಲ್ಲಿ ಸ್ವಾಭಾವ ಮಾನಕ್ಕಿಂತ ಕೆಲವೊಮ್ಮೆ ಹೊಂದಾಣಿಕೆಯಲ್ಲಿ ತನಗೆ ಬೇಕಾಗಿರುವುದು ದಕ್ಕುತದೆಂಬ ಭಾವನೆ ಇರುತ್ತದೆ.

ಪ್ರತಿಭಟನೆ, ಕೆಲವೊಮ್ಮೆ ಸಮುದ್ರದದ ವಿರುದ್ಧದ ಈಜು ಎನಿಸಬಹುದು. ವಿದ್ಯೆ ಸ್ತ್ರೀಯರನ್ನು ಹಲವು ತರದಲ್ಲಿ ಅವಳಲ್ಲಿ ನಂಬಿಕೆ ತುಂಬಿರುತ್ತದೆ. ನಿಜವಾದರೂ ಅವಳು ಪುರುಷನ ವಿರೋಧಿ ಧೋರಣೆಗಳನ್ನು ವಿರೋಧಿಸುವಷ್ಟು ಗುರುತಿಸುವಷ್ಟು ಸ್ವಾತಂತ್ರಗಳಿದ್ದರೂ, ಅವಕಾಶಗಳಿದ್ದರೂ ಅವಳು, ಪುರುಷ ಸಮಾಜಮುಖಿ ದೋರಣೆಗಳನ್ನು ಬಿಡುವುದಿಲ್ಲ. ಸುಖಾಸುಮ್ಮನೆ ಪುರುಷ ಸಮಾಜದ ವಿರುದ್ದ ತಿರುಗಿ ಬೀಳುವುದಕ್ಕೆ ಹೆದರುತ್ತಾಳೆ.

ಸಾಕುಬಿಡೆ ನಿನಗೇಕೆ ಅವನಪಾಡು
ಬೇಕಲ್ಲವೇ ನಿನಗೆ ಪತಿವ್ರತೆಯರ ಪಟ್ಟು
ಸೊಲ್ಲೆತ್ತಿದ್ದರೆ ಬಿದ್ದೀತು
ರಾಮರಾಜ್ಯದ ಆಗಸರಿಂದ ಪೆಟ್ಟು[೩೬]

(ಪ್ರತಿಭನಂದಕುಮಾರ್, ಪುಟ-೮೦, ೧೯೮೩)

ಸೀತೆಯ ವಿನಯಶೀಲತೆ ಕೆಲವೊಮ್ಮೆ ದಾಟಲಾಗದು. ಶ್ರೀರಾಮನಂತ ಪುರುಷನ ವಿರುದ್ದ ಹೋಗಲಾಗದಂತೆ ಪರಿಸ್ಥಿತಿಯನಿಸುತ್ತದೆ. ಪಂಚಪತಿವ್ರತೆಯರಲ್ಲಿ ಒಬ್ಬಳಾದ ಸೀತೆ ಜೀವನದುದ್ದಕ್ಕೂ ಶ್ರೀರಾಮನ ನಿಲುವನ್ನು ವಿರೋಧಿಸಲಿಲ್ಲ. ಎಲ್ಲೋ ಒಂದು ಕಡೆ ಸೀತೆ ತಾನು ಪುರುಷ ಸಮಾಜದ ಕಟ್ಟುನಿಟ್ಟಿಗೆ ಒಳಗಾಗುವುದೇ ಜೀವನದ ಗುರಿ ಎನಿಸಿರಬೇಕು. ಈ ಕಾರಣದಿಂದಲೇ ಎಲ್ಲವನ್ನು ಸಹಿಸುವ ಸೀತೆಯ ಸೌಮ್ಯ ಸ್ವಭಾವದ ಕವಿಯತ್ರಿಗೆ ಅಗತ್ಯವೆನಸಿರಬೇಕು. ಈ ಕಾರಣದಿಂದಲೇ ಸೀತೆಯ ಈ ನಿಲುವನ್ನು ವಿರೋಧಿಸುತ್ತಾಳೆ. ಪಾರುಪತ್ಯದ ಹಣೆಪಟ್ಟಿ ಹಿಂದೆ ಅನಗತ್ಯವಾದ ಹೊಂದಾಣಿಕೆಯನ್ನು ವಿರೋಧಿಸುತ್ತಾಳೆ.

ಶೀಲ ಅಥವಾ ಪಾತಿವ್ರತ್ಯ ಅಂದಿಗೂ ಮತ್ತು ಇಂದಿಗೂ ಪುರುಷ ಸಮಾಜದ ಕೇಂದ್ರಬಿಂದು. ಇಡೀ ಮಾನವ ಸಂಕುಲದಲ್ಲಿ ಹೆಣ್ಣು ಮತ್ತು ಗಂಡೆಂಬ ವಿಂಗಡಯಾದದ್ದು ಲಿಂಗಬೇದದಿಂದಾಗಿ ಆದಿಮಾನವ ಕಾಲದಿಂದ ಹೆಣ್ಣು ಮತ್ತು ಗಂಡು ಒಟ್ಟಿಗೆ ಬದುಕುವ ಆಹಾರ ಸಂಗ್ರಹಿಸುವ ಪದ್ಧತಿ ಆರಂಭವಾಯಿತು. ಒಟ್ಟಿಗೆ ವಾಸ, ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳುವ, ಮಳೆ, ಚಳಿ, ಗಾಳಿಗಳಿಂದ ರಕ್ಷಿಸಿಕೊಳ್ಳಲು ಮನೆಯ ಕಲ್ಪನೆ ಹೊರತು ಹೆಣ್ಣು ಗಂಡಿನಂತೆ ಶ್ರಮವನ್ನು ಹಂಚಿಕೊಳ್ಳುತ್ತಿದ್ದಳು. ಒಟ್ಟಿಗೆ ಕಾಡು ಪ್ರಾಣಿಗಳನ್ನು ಭೇಟಿಯಾಡುವ, ಹೊಂಚುಹಾಕುವ, ಬೇಟೆಮಾಡುವ ಕೆಲಸಮಾಡಿ ಜೊತೆಗೆ ಸಂತಾನದ ಉತ್ಪತ್ತಿ ಕೆಲಸವನ್ನು ಮಾಡುತ್ತಿದ್ದಳು. ಕುಟುಂಬ ವ್ಯವಸ್ಥೆ ಇರಲಿಲ್ಲ ಬೇಸಾಯಗಳಿಂದ ಆದಿಮಾನವನು ಪ್ರಾಣಿಗಳನ್ನು ಪಳಗಿಸುವ ಕೃಷಿಗಾಗಿ ಕಾಡನ್ನು ಕಡಿದು ಜಾಗಮಾಡುವ ಆಯುಧ ಬಳಸುವ ಪರಿಕಲ್ಪನೆ ಆರಂಭಿಸಿತು. ತಾನು ತನ್ನದು ತನ್ನ ಆಸ್ತಿ ಎಂಬ ಆಸ್ತಿಯು ಪರಿಕಲ್ಪನೆ ಜಾರಿಗೆ ಬಂದಿತು.

ಆಸ್ತಿಯ ಪರಿಕಲ್ಪನೆಯಿಂದ ತನ್ನ ಆಸ್ತಿಯ ಮುಂದಿನ ವಾರಸುದಾರನು ಬೇಕೆಂಬ ಅವಶ್ಯಕತೆ ಬಂತು. ಈ ವಾರಸುಧಾರನ ಕಲ್ಪನೆಯ ಮೂಲಕ ತನ್ನ ಹೆಂಡತಿ ತನಗೊಬ್ಬನಿಗೆ ಮಾತ್ರ ಮೀಸಲಿರಬೇಕೆಂಬ ಭಾವನೆ ಆರಂಭವಾಯಿತು. ಈ ಶೀಲ ಪಾತಿವ್ರತ್ಯದ ಕಲ್ಪನೆ ಕ್ರಮೇಣ ಬಲವಾಯಿತು. ಇದಕ್ಕೆ ಪ್ರೇರಕವಾಗಿ ಧರ್ಮಶಾಸ್ತ್ರ ಪುರಾಣಗಳು ಈ ಪಾತಿವೃತ್ಯವನ್ನು ಪುಷ್ಟಿಕರಿಸಿದವು. ಪಾತಿವೃತ್ಯ ಶೀಲದ ಕಾಪಾಡಿಕೊಳ್ಳುವುದರ ಪ್ರಜ್ಞೆಯ ಜೊತೆಗೆ ಗಂಡನ ಜೊತೆ ಎಷ್ಟರಮಟ್ಟಿಗೆ ವಿದೇಯಳಾಗಿದ್ದಾಳೆಂಬುದು ಮುಖ್ಯವಾಗುತ್ತದೆ.

ಸ್ತ್ರೀ ಎಂದರೆ ಭಾರತೀಯ ಸಂಸ್ಕೃತಿಯ ಪ್ರತಿಭೆಯ ಪರಿಕಲ್ಪನೆಯಂತೆ ಹೆರುವವಳು, ಸ್ತೋತ್ರಿ, ಸಾಧ್ವಿ, ಸಹವತ್ರಿ ಎಂಬುವಂತೆಯೇ ಹೆಂಗಸು ಸೂಕ್ಷ್ಮತೆ ಇಂಗಿತಜ್ಞೆ, ಕಷ್ಟ ಸಹಿಷ್ಣು, ತ್ಯಾಗಮೂರ್ತಿ ಮುಂತಾದ ಭಾವನೆಗಳನ್ನು ವಿಪರೀತವಾಗಿ ಹೊರಿಸಲಾಗಿತ್ತು.

ಪಾತಿವ್ರತ್ಯ ಗಂಡಸಿನ ಅನುಕೂಲಕ್ಕಾಗಿ ರೂಪಿತಗೊಂಡಿತ್ತು. ಇಡೀ ಪುರಾಣ ಧರ್ಮಶಾಸ್ತ್ರಗಳು ಸಂಪೂರ್ಣವಾಗಿ ಈ ಪರಿಕಲ್ಪನೆಯನ್ನು ಎತ್ತಿ ಇಡಿಯುತ್ತದೆ. ಪಂಚ ಪತಿವ್ರತೆಯರ ಉದಾಹರಣೆಗಳು ಧರ್ಮಶಾಸ್ತ್ರದಲ್ಲಿ ಸ್ತ್ರೀಗೆ ಹಾಕಿದ ನಿರ್ಬಂಧನೆಗಳು ಪಾತಿವೃತ್ಯಕಲ್ಪನೆಯನ್ನು ಪುಷ್ಟಿಕರಿಸಿದವು. ಪಾತಿವೃತ್ಯ ಕೇವಲ ಶೀಲಕ್ಕೆ ಸಂಬಂಧಿಸಿದಲ್ಲ. ಅದು ಸಂಪೂರ್ಣವಾಗಿ ಅವಳ ಗಂಡನಿಗೆ ಎಷ್ಟರಮಟ್ಟಿಗೆ ವಿದೇಯಳಾಗಿರುವುದನ್ನು ಒತ್ತಿ ಹೇಳುತ್ತದೆ. ನಮ್ಮ ಪುರಾಣಗಳು ಹೆಣ್ಣಿನ ಸ್ವಾತಂತ್ರ್ಯ ವಿರುದ್ದ ವರ್ಗ ಸ್ವತಂತ್ರ್ಯದ ಪರವಾಗಿ

ವಕಾಲತ್ತು ವಹಿಸುವ ದಾಟಿ ಏಷ್ಟೋಂದು ನೈಜವಾದುದು ಅಷ್ಟೆ ಭಯನಾಕವಾದುದು, ಎಂಬುದಕ್ಕೆ ಪದ್ಮ ಪುರಾಣದ ಒಂದೆರಡು ಭಾಗವನ್ನು ಉಲ್ಲೇಖಿಸಬಹುದು.

ಗಂಡ ಎಲ್ಲಿಗಾದರೂ ಹೋದರೆ ಆಕೆಯು ಆತನ ಅನುಮತಿಯಿಂದ ಕೂಡಿ ಹೋಗಲಿ ಮನೆಯಲ್ಲಿರು ಎಂದರೆ ಅದೇ ಮನೆಯನ್ನು ಬಿಟ್ಟು ಹೋಗಿ ಆತನು ಹಿಂತಿರುವವರೆಗೆ ಆಕೆಯು ಸ್ನಾನ ಮಾಡಬಾರದು, ತಲೆಗೆ ಎಣ್ಣೆ ಹಾಕಬಾರದು, ಹಲ್ಲು ಉಜ್ಜಬಾರದು ರೆಕ್ಕೆಬಾರದು ಉಂಗುರಗಳನ್ನು ಕತ್ತರಿಸಬಾರದು(ಪಂಡಿತ ತಾರನಾಥ.. ಧರ್ಮ ಸಂಭವ ಪುಟ-೨೦).

ಹಿಂದೂಧರ್ಮದಲ್ಲಿ ಶೂದ್ರ ಕೀಳುಮಾನವನಾದರೆ ಸ್ತ್ರೀ ನೀಚಳಾಗಿದ್ದಾಳೆ. ಇದರಿಂದಾಗಿ ಶೂದ್ರರಿಗಿಂತ ಹೆಚ್ಚಿನ ತುಶ್ಚೀಕರಣಕ್ಕೆ ಗುರಿಯಾಗಿದ್ದಾಳೆ. ಸ್ತ್ರೀ ಕಿರುಬಿನ ಹೃದಯವುಳ್ಳವಳು (ಋಗ್ವೇದ), ಅವಳು ಎಲ್ಲಾ ಕೆಡಕಿನ ಬೇರು (ಮಹಾಭಾರತ) ಹೆಂಗಸು ಕಾಮಪಿಪಾಸೆಯುಳ್ಳವಳು. (ಮನು) ಸ್ತ್ರೀ ಒಂದು ವಸ್ತು ಪದಾರ್ಥ (ಶಾಸ್ತ್ರ). ಇವುಗಳಲ್ಲದೆ ಹಿಂದೂ ಮಹಾಕಾವ್ಯಗಳು ರಾಮಾಯಣ, ಮಹಾಭಾರತಗಳ ಸ್ತ್ರೀ ಪಾತ್ರಗಳು ಪಾತಿವ್ರತ್ಯ ಕಲ್ಪನೆಯನ್ನು ಪರಮೋಕ್ಷ ಮಟ್ಟದಲ್ಲಿರುತ್ತವೆ.

> ನಿಮ್ಮ ಕಾಮಾಗ್ನಿಕುಂಡಕ್ಕೆ ನಮ್ಮ ಶೀಲವನ್ನು
> ಬಲಿಕೊಟ್ಟು ನಿಮ್ಮ ಮಾನವರನ್ನು ನಿಮ್ಮಿಂದಲೇ
> ಪತಿವ್ರತೆಯರ ಪಟ್ಟಕ್ಕೇರಿ ಪ್ರಾತಃ ಕಾಲದ ಸ್ಮರಣೆಯು
> ಇಂದಿಗೂ ಉಳಿದು ನರಳುತ್ತಿರುವುದು ನಾವು
> ನಾನು ಪತಿವ್ರತೆಯರಲ್ಲ[೩೭]

(ಹೆಚ್.ಎಸ್.ಮುಕ್ತಾಯುತ್ತಾ, ಪುಟ-೮೦, ೧೯೯೬)

ಪಾತಿವೃತ್ಯ ಆಧುನಿಕ ಕನ್ನಡ ಕವಿಯತ್ರಿಯರ ಪ್ರಶ್ನಾತೀತಾ ವಸ್ತುವಾಗಿದೆ. ಇವರ ಪ್ರಕಾರ ಪಾತಿವೃತ್ಯದ ಹಂಗು ಹೆಂಗಸಿಗೆ ಏಕೆ ಸೀಮಿತವಾಗಿದೆ. ಎಂಬ ಪ್ರಶ್ನೆ ಹಾಕಿದ್ದಾರೆ. ಪಾತವೃತ್ಯ ಕೇವಲ ಗಂಡಸು ಹೆಂಗಸನ ಮೇಲೆ ಹೂಡಿದ ದಬ್ಬಾಳಿಕೆ ಆಸ್ತಿ ಎಂಬುದು ಅವರ ಅಭಿಪ್ರಾಯ.

> ನೀವೇನು ಪಾಂಡುವಲ್ಲ ಪತಿಯ
> ಹೆಸರಿನಲ್ಲಿ
> ನಿಯೋಗಕ್ಕಿಡಾದ ಮಹಾಸತಿ
> ಕುಂತಿ ನಾನಲ್ಲ
> ಗಂಡೆ ನಾಬಲ್ಲೆ ನಿನ್ನ ಆಂತರ್ಯವ
> ನಿನಗೆ ಬೇಕಿರುವುದೇನೆಂದು

ನನ್ನನ್ನಿಟ್ಟು ತೂಗಿ ತೂಗಿ ಇಲ್ಲದ ಎತ್ತರಕ್ಕೇರಿಸಬೇಡ
ನಿನ್ನ ಕಾಡುವ ಶಂಕಿತ ನೋಟಕ್ಕೆ
ನಾನು ಬೆಚ್ಚಿ ಬೀಳುವುದಿಲ್ಲ
ಆದ್ದರಿಂದ ನೂರು ನಾಲಿಗೆಗೆ ವಸ್ತುವಾಗಿಸದೇ
ನನ್ನಷ್ಟಕ್ಕೆ ನನ್ನ ಬಿಟ್ಟು ಬಿಡು[೩೮]

(ಪದ್ಮಾಶೇಖರ್, ಪುಟ-೬೫, ೧೯೮೯)

ಆಧುನಿಕ ಕವಿಯತ್ರಿಯರು ಪಂಚಪತಿವ್ರತೆಯರ ಕಲ್ಪನೆಯ ನಿರಾಕಣೆಗೆ ತೊಡಗಿದ್ದಾರೆ. ಪಾತಿವ್ರತ್ಯದ ಪಟ್ಟದ ಹಿಂದೆ ಪುರುಷ ಪಟ್ಟಾಭದ್ರಾಸಕ್ತಿಗಳ ಕುಯುಕ್ತಿಗಳ ಅರಿವಿದೆ. ಈ ಕಾರಣದಿಂದಲೇ ಪಾತಿವ್ರತ್ಯ ಪಟ್ಟಾಕಟ್ಟಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಪುರುಷ ವರ್ಗಕ್ಕೆ ನೀಡುವ ಎಚ್ಚರವಾಗಿದೆ.

ಬೇಡ ಗಂಡೇ ಬೇಡ
ಸೀತೆ ಸಾವಿತ್ರಿಯ ನೆರಳ
ಪಾತವ್ರತ್ಯದ ತಕ್ಕಡಿಯಲ್ಲಿ
ನನ್ನನಿಟ್ಟು ತೋಗಿ ತೋಗಿ
ಇಲ್ಲದ ಎತ್ತರಕ್ಕೇರಿಸ ಬೇಡ
ನಾನೇನು ಸನ್ಯಾಸಿನಿಯೇ[೩೯]

(ಪದ್ಮಾಶೇಖರ, ಪುಟ-೭೦, ೧೯೮೯)

ನಮ್ಮ ದಾರಿಯಲ್ಲಿ ನಾವು ಸ್ವತಂತ್ರ್ಯರು ಎಂಬ ಭಾವ ಈಗಿನ ಕವಿಯತ್ರಿಯದ್ದಾಗಿದೆ ಈ ಕಾರಣದಿಂದಲೇ ಪಾತವ್ರತ್ಯದ ಹಂಗು ಇವರಿಗೆ ಬೇಡವಾಗಿದೆ.

ಪುರುಷ ಸಮಾಜದಲ್ಲಿ ಆ ಸ್ಥಾನದಲ್ಲಿ
ದುಶ್ಯಾಸನರ ಮರುಹುಟ್ಟು ಆಗುತ್ತಲೆ ಇದೆ.
ತೇಲುತ್ತಿದೆ ಬಾನಗಲ ಹೆಣ್ಣು ಬಿಚ್ಚಿಹ
ಸೀರೆಗಳು
ಬಾನಲ್ಲಿ ಅನುಕರಿಸುತ್ತದೆ ದ್ರೌಪತಿಯಲ್ಲರ
ಚೀರಾಟ
ಪತಿಯ ಆದರ್ಶಕ್ಕೆ ಸತಿಯ ಅಕ್ಷಯಪಾತ್ರೆ[೪೦]

(ಇಂದಿರಾ ಹೆಗಡೆ, ಪುಟ-೯೦, ೨೦೦೧)

ದ್ರೌಪದಿಯ ಸ್ಥಿತಿಯ ಅಪಾರವಾಗಿದ್ದು ಪೌರಾಣಿಕ ಸ್ತ್ರೀಯ ಮೇಲಾಗುವ ದೌರ್ಜನ್ಯದ ಹಳಹಳಿಕೆ ಇದೆ. ಇಲ್ಲಿ ಸಾವಿರಾರು ದ್ರೌಪದಿಯಂತೆ ಸ್ತ್ರೀಯರಿದ್ದಾರೆ. ಒಂದು ಕಡೆ

ಪಾತಿವ್ರತ್ಯದ ಪರಮೋಚ್ಛತೆ ಎತ್ತಿ ಇಡದಿದ್ದರೆ ಅದೇ ಸಂದರ್ಭದಲ್ಲಿ ದುಶ್ಯಾಸನರಂತಹ ನೂರಾರು ಜನರ ಮಧ್ಯೆ ಇರುವುದನ್ನು ಪ್ರಸ್ತುತದಲ್ಲಿ ಕಾಣಬಹುದು.

ತನ್ನ ಪತಿ ಶ್ರೀರಾಮನಂತಿರಲಿ
ಎಂದು ಬಯಸುವುದಕ್ಕೆ
ಇಂದಿಗೂ ಅವಳು ಅಗ್ನಿಪರೀಕ್ಷೆಗೆ
ಒಳಗಾಗುತ್ತಾಳೆ[೪೧]

(ನಿರಾಜಿ–ಪುಟ–೫೬, ೨೦೦೨)

ಶ್ರೀರಾಮ ಲಕ್ಷ್ಮಣ ಬೀಮನಂಥ ಪಾತ್ರವರ್ಗಗಳು ಆದರ್ಶ ಗಂಡನಿಗೆ ಉದಾಹರಣೆಯಾಗಿದೆ. ನಿಜವಾದರೂ ಆದರ್ಶ ಪತಿಯಾಗುವುದಕ್ಕೆ ಹಿಂಬದಿಯಾಗಿ ಆದರ್ಶ ಹೆಂಡತಿಯನ್ನು ಹಿಂಬಾಲಕರಾಗಿದ್ದು, ಕಾರಣದಿಂದ ಆದರ್ಶ ಪತಿಯನಿಸಿದ್ದರು. ಪಾತಿವ್ರತ್ಯ ಒಂದು ಸಾಮಾಜಿಕ ವಿಷಯವಾಗಿದ್ದರಿಂದಲೇ ಸೀತೆಯು ಅಗ್ನಿಗೆ ಆಹುತಿಯಾಗಿ ತನ್ನ ಪಾತಿವ್ರತ್ಯದ ಜಗತ್ತಿಗೆ ತೋರಿಸಬೇಕಾಗಿತ್ತು. ಪೌರಾಣಿಕ ಪಾತ್ರಗಳನ್ನು ಮಾದರಿಯಾಗಿಟ್ಟುಕೊಂಡು ಆ ಪಾತ್ರಗಳನ್ನೆಲ್ಲಾ ಪ್ರಸ್ತುತತಕ್ಕೆ ಹೋಲಿಸುವ ಕೆಲಸವನ್ನು ಇಂದಿನ ಕವಿಯತ್ರಿಯರು ಮಾಡಿದ್ದಾರೆ.

ಮಾಡ್ಕೊಂಡ ಹೆಂಡ್ತಿ ಮನೀಗೆ
ಬಂದ್ರ
ಬಾಗಿಲ ಹಾಕಿ ಕಿಟಕಿ ಸಂಧ್ಯಾಗ ಕುತಗಿ
ಹಾಯ್ಸಿ
ಯಾರು ನೀ? ಅನ್ನೋ ದುಶ್ಯಂತರು
ಈಗಿಲ್ಲಾಂತಿರಾ
ಸೇರಿದ ಅಗಸನ ಚಾಡಿ ಕೇಳಿ ಬಸಿರ
ಹೆಂಡ್ತೀನಾ ಕಾಡಿಗೆ ಕಳಿಸಿ
ಜೂಂ ಆಗೋ ರಾಮದೇವ್ರು
ಈಗಿಲ್ಲಾಂತೀರಾ
ಬೇಕೆಂದಾಗ ಮಜಾ ಮಾಡಿ ಕೆಲಸವಾದ
ಕೂಡ ಮಾರಿ ತಿರಿವಿ ಕೈ ಜಾಡಿಸೋ
ಕೌಶಿಕ ಮುನಿಗಳು ಈಗಿಲ್ಲಾಂತಿರಾ
ಅರಿಲಾರ್ದೆ ಮೈ ಮರೆತ ತಪ್ಪಿಗಾಗಿ
ಬೇಡಿ ಕೊಂಡ್ರು
ಜೀವ ಒಯ್ದು ಕಲ್ಲು ಮಾಡಿದ
ಗೌತಮ ಋಷಿಗಳು ಇಗಿಲ್ಲಾಂತೀರೋ[೪೨]

(ಶಶಿಕಲಾ ವೀರಯ್ಯಸ್ವಾಮಿ–ಪುಟ–೧೦, ೧೯೭೯)

ಕಾಲ ಬದಲಾದರೂ ಪಾತ್ರಗಳು ಬದಲಾಗಿಲ್ಲ, ಅದೇ ದುಶ್ಯಂತ, ರಾಮ, ಕೌಶಿಕ, ಗೌತಮರ ಮುಖಗಳ ಹೊತ್ತ ಗಂಡಸರಿಗೆ ಇಂದಿಗೂ ಪ್ರಸ್ತುತದಲ್ಲಿದ್ದಾರೆ ಎಂಬ ಸಂಶಯವಿದೆ. ಆ ಪುರುಷ ಅವತಾರಗಳು ಇಂದಿಗೂ ಪ್ರಸ್ತುತವೆನಿಸಿದರ ಆರ್ಥ ಸ್ತ್ರೀಯ ಸ್ಥಿತಿ–ಗತಿ ಅಂದಿಗೂ–ಇಂದಿಗೂ ಅಂತಹ ಬದಲಾವಣೆಗಳು ಆಗಿಲ್ಲವೆಂದರ್ಥ.

ಮೀಸೆ ಬಂದವ ಗಂಡು
ಏನೆಲ್ಲಾ ದಕ್ಕಿಸಿ ನಕ್ಕಿದ್ದೆ ಬಂತು
ಹೆಣ್ಣಿನ ಕಣ್ಣೀರ ಕಥೆಗಳೂ
ಮಹಾ ಕಾವ್ಯಗಳೆಮ್ಮವರಿಗೆ
ನಿರ್ದೋಶಿ ಸೀತೆ ದ್ರೌಪದಿ
ಹರಿಸಿದ ಕಣ್ಣೀರ ಕೋಡಿಗೆ
ಗಂಡಿನದ ಇಂದಿಗೂ
ಬಂಜೆ ನೆಲ[೪೩]

(ಸಸ್ಯ ಶ್ಯಾಮಲ ಸರೋಜಿನಿ–ಪುಟ–೧೬, ೧೯೯೦)

ಸೀತೆ–ಸಾವಿತ್ರಿ–ದ್ರೌಪದಿಯ ಉದಾಹರಣೆಗಳು ಅವರು ಬಾಳಿದ ಜೀವನದ ರೀತಿಗಳು ಪುರಾತನವಾದವುಗಳು, ವೈಚಿತ್ರ್ಯವಾಗಿ ಕಾಣುವಂತದ್ದು ಸರಿಯೆನಿಸಿದರೂ, ಅಂತಹ ಪಾತ್ರಗಳು ಅನುಭವಿಸಿದ ನೋವಿನ ಸೆಲೆ ಪುರುಷನ ಅಟ್ಟಹಾಸ ಇಂದಿಗೂ ಪ್ರಸ್ತುತ ಯಾವುದು ಸಮಸ್ಯೆಯಲ್ಲ ಪ್ರಸ್ತುತದಲ್ಲಿ ಹಳೆಯದಲ್ಲ. ಅದೇ ಸೀತೆ, ದ್ರೌಪದಿ ಎದುರಿಸಿದ ನೋವು ನಿರಾಸೆ, ಹತಾಷೆ ಗಂಡಿನ ದೌರ್ಜನ್ಯಗಳು ಆಧುನಿಕ ಕಾಲದಲ್ಲೂ ವಿದ್ಯಾವಂತ ಮಹಿಳೆಗೂ ಹೊಸದೇನಲ್ಲ. ನೂರಾರು ವರ್ಷದ ಸೀತೆ ದ್ರೌಪದಿಯರು ಇಂದಿಗೂ ಪ್ರಸ್ತುತದಲ್ಲೂ ಜೀವಂತವಾಗಿರುವುದಕ್ಕೆ ಕಾರಣಗಳು ಹುಡುಕ ಹೊರಟಾಗ ಬದಲಾದ ಕಾಲದೊಂದಿಗೆ ಸಮಾಜದ ಸ್ತ್ರೀ ಮೇಲಿನ ಧೋರಣೆಗಳು ಬದಲಾಗಿಲ್ಲ ಎಂದು ಸ್ಪಷ್ಟವಾಗುತ್ತದೆ.

ಭೂಮಿ ಬಾಯ್ದೆರೆದು
ನುಂಗಿ ಬಿಡಬಾರದೆ ಎನ್ನ
ಇದೇ ಕೂಗು ಮತ್ತೆ ಮತ್ತೆ
ಅರಣ್ಯ ಧ್ವನಿತವಾಗುತ್ತದೆ ಸೀತೆ
ಬದಲಾಗಿಲ್ಲ ಏನೇನೂ ಇಲ್ಲಿಯ
ಈಗಿನ ಕಥೆ[೪೪]

(ಬಿ.ಟಿ. ಲಲಿತನಾಯಕ್,ಪುಟ ೧೦ ೧೯೯೯)

ಕಾಲದ ಬದಲಾವಣೆಯೊಂದಿಗೆ ಹೆಣ್ಣಿನ ಸ್ಥಿತಿ-ಗತಿಗಳು ಬದಲಾಗಿಲ್ಲದ್ದಕ್ಕೆ ಕಾರಣಗಳಿಗೆ ಸಮಾಜದ ನಿರ್ಬಂಧನೆಗಳಿಗೆ ಪುರಾಣಗಳು ಕಾರಣವಾಗಿವೆ ನಿಜವಾದರೂ ಇವುಗಳನ್ನು ಮೀರುವ ಶಕ್ತಿ ಹೆಣ್ಣಿಗೇಕೆ ಬಂದಿಲ್ಲ ಎಂಬುದೇ ಪ್ರಶ್ನೆಯಾಗಿದೆ. ಎಲ್ಲಾ ಧರ್ಮಗಳು ಸಮಾಜದ ನಿಯಮಗಳು ಪುರುಷ ಪರವಾಗಿದೆ. ಅವು ಸರಿಯೆಂದು ವಾದಿಸುತ್ತದೆ. ಪಾತಿವ್ರತ್ಯ ಪಟ್ಟವೇರಿದ ಸೀತೆ, ಸಾವಿತ್ರಿ ದ್ರೌಪತಿಯ ಕಷ್ಟ ನೋವುಗಳು ರಾಮ-ಭೀಮರ ಶೌರ್ಯಕ್ಕೆ ಬೆಂಬಲ ನೀಡಿದವು ಆದರೆ ರಾಮ-ಭೀಮ ಶೌರ್ಯ-ಸಾಹಸ ಸತ್ಕಾರ್ಯಗಳು ಹೆಸರುವಾಸಿ ಯಾಗಿದ್ದವು, ಹೊರತು ಸೀತೆ-ದ್ರೌಪದಿಗೆ ಸುಖವು ಅಂತಿಮವವರೆಗೆ ಕನಸಾಗಿತ್ತು. ಇಂದಿಗೂ ಈ ರೀತಿಯ ಕಷ್ಟ-ನಷ್ಟ ಹೆಣ್ಣಿಗೆ ತಪ್ಪಿದ್ದಲ್ಲ. ಕಷ್ಟಗಳನ್ನು ಗಂಡಿನೊಂದಿಗೆ ಹಂಚಿಕೊಂಡ ಹೆಣ್ಣಿನ ಸ್ಥಿತಿ-ಗತಿಗಳು ತ್ಯಾಗಕ್ಕಿಂತ ಗೆಲುವು ಗಂಡಿನ ಮುಡಿಗೇರುವುದು ಇಂದಿಗೂ ಪ್ರಸ್ತುತ.

ರಾಮಾಯಣ ಆರಾಧಕರ
ನಿಮ್ಮ ಲಕ್ಷ್ಮಣ ರೇಖೆಯ
ಒಳಗೆ ಇರುವ
ಎಷ್ಟು ಜನ ಸೀತೆಗಿಂತ
ಕನಿಷ್ಠ ಜೀವನದಲ್ಲಿರಲಿಲ್ಲ
ದಾಟಿದ ಎಷ್ಟು ಜನ ಸುಖವಾಗಿಲ್ಲ"

(ಮಾಧವಿ, ಪುಟ-೨೯, ೧೯೮೧)

ಆದರ್ಶದ ಪಾತಿವ್ರತ್ಯದ ಶೀಲದ ಪರದಿಯೊಳಗೆ ಸ್ತ್ರೀಯನ್ನೇ ಸಿಲುಕಿಸಿ ಆ ಪರದಿ ಯೊಳಗಿಂದ ಹೊರ ಬರದಂತೆ ಪುರಾಣಗಳ-ಧರ್ಮಶಾಸ್ತ್ರಗಳ ಬಿಗಿ ಹಿಡಿತವನ್ನು ಹಾಕಿ ಹೆಣ್ಣನ್ನು ನಿಜಕ್ಕೂ ಶತಮಾನಗಳಿಂದ ಕ್ಷೆಮೆಯಿಲ್ಲದ ಕಾರಣ ಹೆಣ್ಣು ತನ್ನ ದಾಟಲಾರದ ಸ್ಥಿತಿಗೆ ಕೊರಗುತ್ತಾಳೆ. ಇದೇ ಶಾಸ್ತ್ರ ಪುರಾಣಗಳ ಪರದೆಯಿಂದ ಸಮಾಜವನ್ನು ಎದುರಿಸಿ ಬಂದ ದಿಟ್ಟ ಮಹಿಳೆಗೆ ಸಮಾಜ ದೂರಿದರೂ ಅವರು ಸ್ವಭಾವತಃ ದಿಟ್ಟೆಯಾಗಿದ್ದಾಳೆ. ಆದರೂ ದಾಟದ ಹೆಣ್ಣಿನ ಸಂಖ್ಯೆ ಕಡಿಮೆಯೇ

ದ್ರೌಪದಿಯ ಸ್ವಗತ.... ಸೀತೆಯ ಸ್ವಗತ
ಅಹಲ್ಯೆ... ಅಮೃತಮತಿ ಸ್ವಗತ
ಹೀಗೆ ಅವರಿವರ ಸ್ವಗತವನ್ನು ಹಾಡುತ್ತಾ
ಅವರೊಳಗೆ ತಮ್ಮನ್ನು ಕಾಡುತ್ತಾ
ಕವಿತೆ ಬರೆಯುವ ಇಂದಿನ
ಕವಿಯತ್ರಿಯರು
ಈ ಇವರು ಮಾಡಿದ ಇಷ್ಟೊಂದು
ಒಂದು ಹೆಣ್ಣು ಒಂದು ಬಾರಿಗೆ

ಮಾಡುವ ಸ್ವಗತವನ್ನು ಬರೆಯುವವರು
ಯಾರು?
ಅಥವಾ ಇವಳಿಗೆ ಸ್ವಗತವೇ
ಇಲ್ಲವೋ ಎಲ್ಲವು ಬಹಿರ್ಗತವೋ
ಮತ ಪ್ರಶ್ನೆಗಳಿಗೂ
ಬರೀ ಪ್ರಶ್ನೆಗಳು*[೪೬]

(ಡಾ. ಪ್ರಭಾವತಿ-ಪುಟ-೫೮, ೧೯೯೯)

ಪುರಾಣದ ಸೀತೆ, ದ್ರೌಪದಿ, ಅಹಲ್ಯೆ, ಅಮೃತಮತಿಯರ ಸ್ವಗತವನ್ನು ಇಂದಿನ ಆಧುನಿಕ ಕವಿಯತ್ರಿಯರು ಬರೆಯುತ್ತಾರೆ. ಆಗಿನ ಸೀತೆ ದ್ರೌಪದಿ ಅಹಲ್ಯೆಯರ ನೋವನ್ನು ಕಷ್ಟವನ್ನು ತನ್ನದೇ ಆದ ಮಹಿಳಾ ಸಂವೇದನಡಿಯಲ್ಲಿ ಅಗ್ರಹೀನ ಸ್ವಗತವನ್ನು ಅವರ ಸ್ವಗತವಾಗಿಸಿಕೊಂಡು ಕಾವ್ಯ ಬರೆದಿದ್ದಾಳೆ.

ಆದರೆ ಸೀತೆ ಸಾವಿತ್ರಿ ದ್ರೌಪದಿ ಯಂಥ ಪಾತ್ರಕ್ಕೆ ಒದಗಿದ ಕಷ್ಟಗಳು ನಿಷ್ಠೂರಗಳು ಪ್ರಸ್ತುತದಲ್ಲಿ ಇಲ್ಲವೆಂದಲ್ಲ. ಆ ಸ್ತ್ರೀಯು ಎದುರಿಸುತ್ತಿರುವ ಕಷ್ಟಗಳು ಅತೀರೇಕವೇ. ಹಿಂದೆ ಮನೆಯ ನಾಲ್ಕು ಗೋಡೆಗಳ ಕಷ್ಟಗಳನ್ನು ಎದುರಿಸುತ್ತಾ ಪುರುಷನ ದಬ್ಬಾಳಿಕೆಗೆ ಬಗ್ಗಿ ಹೋದರೂ ಅವಳಿಗೆ ಅವಳದೇ ಆದ ರೀತಿ ಸ್ವಾತಂತ್ರ್ಯಗಳಿದ್ದವು. ಒಂದು ರೀತಿಯ (Secured)ಆಗಿದ್ದಳು.

ಆದರೆ ಕಾಲ ಬದಲಾಗುತ್ತಾ ಇದೆ. ಪುರುಷನಂತೆ ಹೆಣ್ಣು ಹೆಚ್ಚು ದುಡಿಯಲಾರಂಭಿಸಿದ್ದಾಳೆ. ಗಂಡಿನ ಶ್ರಮವನ್ನು ತನ್ನದಾಗಿಸಿಕೊಂಡಿದ್ದಾಳೆ. ಇದರಿಂದ ಸ್ವಂತಿಕೆ ತನ್ನತನ ಪ್ರಾಪ್ತಿಯಾದರೂ ಆಧುನಿಕತೆ ಅವಳಿಗೆ ಜಿಗುಪ್ಸೆ, ಅನಾರೋಗ್ಯ, ಮೇಲಾಧಿಕಾರಿ ಕಿರುಕುಳಗಳಿಂದ ಅವಳು ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ಬಾಣಲೆಯಿಂದ ಬೆಂಕಿಗೆ ಬಿದ್ದ ಅನುಭವ, ದ್ರೌಪದಿ, ಸೀತೆಯ ಮಂಡೋಧರೆಯಿಂದ ಇದೇ ಕಷ್ಟಗಳು ತಾನೇ ಅನುಭವಿಸುತ್ತಿರುವ ಇಂದಿನ ಮಹಿಳೆಯ ಸ್ವಗತ ಬರೆಯುವುದು ಯಾವಾಗ ಎಂಬ ಪ್ರಶ್ನೆ ಏಳುತ್ತದೆ.

ನಾನು
ಗಂಡನೇ ದೇವರೆಂದು
ವನವಾಸ ಮಾಡಿ
ಅಗ್ನಿಗೆ ದುಮುಕುವ
ಸೀತೆಯಲ್ಲ
ನಾನು ಗಂಡನ ಪ್ರಾಣಕ್ಕಾಗಿ
ಯಮನ ಹಿಂದೆ

ನಾಯಿಯಂತೆಲದ
ಸಾವಿತ್ರಿಯಲ್ಲ[೪೭]

(ಕಮಲಾ ಕೆ.ಆರ್. ಪುಟ-೮೮, ೧೯೮೭)

ದಿಟ್ಟತನ ಆಧುನಿಕ ಮಹಿಳೆಯ ಮನೋ ಬದಲಾವಣೆಯ ಮುಖ್ಯವಾದ ಹಂತ ಧರ್ಮಶಾಸ್ತ್ರ ಮತ್ತು ಪುರಾಣಗಳು ಮೂಲತಃ ಹೆಣ್ಣನ್ನು ನಿಯಂತ್ರಿಸುತ್ತದೆ. ದ್ರೌಪದಿ, ಸೀತೆಯಂತವರನ್ನು ಉದಾರಿಸಿ ಹೆಣ್ಣನ್ನು ಬಂದನಕ್ಕೀಡು ಮಾಡಿದೆ. ಆದರೆ ದಿಟ್ಟ ವಿದ್ಯಾವಂತ ಆಧುನಿಕ ಮಹಿಳೆಯಲ್ಲಿ ಅವಳು ದಿಟ್ಟತನ ಪಾತ್ರ ವಹಿಸುತ್ತಾಳೆ. ಸೀತೆಯ ಸಾವಿತ್ರಿಯ ಪಾತ್ರವನ್ನು ವಹಿಸಲು ನಿರಾಕರಿಸುತ್ತಾಳೆ. ದಿಟ್ಟತನ, ಗಟ್ಟಿತನ, ಅವಳ ಮುಂದಿನ ಹೆಜ್ಜೆಯಾಗಿದೆ.

ಅಗಳು ಅಗಳು ಹಿಸುಕಿ
ಅನ್ನ ಅಗಿದೆಯಾ ಎನ್ನುವ ಬುದ್ದಿ
ಸೀತೆ ಸಾವಿತ್ರಿ ಮಹಾಸತಿ ದ್ರೌಪದಿ
ಅನುಸೂಯ ಅಹಲ್ಯೆಯರ ಮೆಚ್ಚುವ ರೀತಿ
ನನಗೂ ಗೌರವವಿದೆ ರಾಮಾಯಣ ಮಹಾಭಾರತ
ಹಿಂದುಗಳ ಪವಿತ್ರ ಗ್ರಂಥವೆಂಬ ಅರಿವಿದೆ
ಮಾತು-ಮಾತಿಗೆ ಮಹಾಸತಿಯರ
ವ್ಯರ್ಥ ಯತ್ನವೇ ನಿನ್ನದು, ಅದೇಕೆ
ನಾನರಿಯ
ಮಹಾವೇದಾಂತಿಯಂತೆ ಏಕೆ ಹೀಗೆ
ದ್ರೌಪದಿ ಪಾಂಡವರಿಗೆ ಸತಿಯದುದ್ದಕ್ಕೆ
ನಾನು ಆಗ ಬಯಸುವೆ ಎಂದರೆ ನಿನ್ನ ಎದೆ
ಸಾವಿರಾರು ಹೋಳಾಗಬಹುದು.[೪೮]

(ರತ್ನ ಕಾಳೇಗೌಡ-ಪುಟ-೭೮, ೧೯೯೯)

ಸೀತೆ, ಸಾವಿತ್ರಿ ಆಹಲ್ಯೆಯರನ್ನು ಒಂದು ಆದರ್ಶವೆಂಬಂತೆ ವೈಭವೀಕರಿಸುವ ಇತರರಿಗೆ ರಾಮನ ವೈಚಿತ್ರವನ್ನು ಕಂಡು ನೆಲದಾಳಕ್ಕಿಳಿದ ಸೀತೆ, ಐದು ಗಂಡರ ದ್ರೌಪದಿ ಆದರ್ಶವೆನಿಸಿದರೆ, ತಾನು ಆಗೆಯೇ ಆಗಬಲ್ಲ ಎಂದರೆ ಗಂಡಿನದೆ ಸಾವಿರಾರು ಹೋಳಾಗ ಬಹುದೆಂಬ ಕಲ್ಪನೆ ಕವಿಯತ್ರಿಯದು. ಒಟ್ಟಾರೆ ಶಾಸ್ತ್ರ ಪುರಾಣಗಳು ಧರ್ಮಗಳು ಹೊರಸಿದ್ದನ್ನು ಹೇಳಿದ್ದನ್ನು ಕಣ್ಣುಮುಚ್ಚಿ ಕೇಳುವ ಅಭ್ಯಾಸ ಹೀಗಿನ ಬುದ್ದಿವಂತ ಮಹಿಳೆಯದಲ್ಲ.

ಹೀಗೀಗ ಯಾರರ ಯಾರದೋ
ಅನುಕರಣ ಮಾಡೋದು ನೋಡಿ

ನಂಗೂ–ಹಂಗೆ ಮಾಡ್ಬೇಕೆಂದು ಮನಸ್ಸಾಯಿತು
ಯಾರದು ಮಾಡ್ಲಿ? ನಿರ್ಧರಿಸಿದೆ
ತೇತ್ರಾಯುಗದ ರಾಮನಂಗೆ...
ಬುದ್ಧನಂಗೆ...
ರಾಮನ ಸತ್ಯಸಂಧತೆ ಬುದ್ಧನ
ಸರಳತೆ ಎಲ್ಲಾ ಇಟ್ಕೊಂಡು
ನನ್ನ ವ್ಯಕ್ತಿತ್ವ ನಾನೇ ಆಗ್ಬೇಕು.[೪೯]

(ರಶ್ಮೀ ಟಿ.ಎಸ್. ಪುಟ–೫೬, ೧೯೯೬)

ಸ್ವಂತಿಕೆ ಎನ್ನುವುದು ಒಂದು ದೃಡ ವ್ಯಕ್ತಿತ್ವದ ಪುಣ್ಯರೋಪ ಎನ್ನುವುದು ಒಂದು ದೃಢ ವ್ಯಕ್ತಿತ್ವದ ಪೂರ್ಣರೂಪ. ಪುರಾಣ ಧರ್ಮಶಾಸ್ತ್ರಗಳು ಹಾಕಿ ಕೊಟ್ಟ ಆದರ್ಶ ವ್ಯಕ್ತಿತ್ವಗಳಾದ ಶ್ರೀರಾಮ ಬುದ್ಧ, ಶ್ರೀಕೃಷ್ಣರ ಉದಾಹರಣೆಗಳಲ್ಲೆ ಒಂದೊಂದು ರೀತಿಯಲ್ಲಿ ಒಂದೊಂದು ತೆರೆನಾದ ನಕರಾತ್ಮಕವಾದವುಗಳೇ, ಅಂದಿನ ಹೆಂಡತಿಯನ್ನು ಕಾಡಿಗಟ್ಟಿದ ಶ್ರೀರಾಮನ ಧೋರಣೆಗಳು ಏನೇ ಇರಲಿ ಸತ್ಯ–ಅಸತ್ಯಗಳೇನೇ ಇರಲಿ ಆತ ಸೀತೆಯ ವಿಷಯದಲ್ಲಿ ನಕಾರಾತ್ಮಕ ವ್ಯಕ್ತಿ. ಇನ್ನು ಬುದ್ದ ಜಗವೆಲ್ಲಾ ಗೆದ್ದವ ತನ್ನ ತಪಸ್ಸಿನಿಂದ ಸಂಯಮ ತಾಳ್ಮೆಯಿಂದ ಜಗತ್ತನ್ನು ಗೆದ್ದವ ಅರ್ಧ ರಾತ್ರಿಯಲ್ಲಿ ಹೆಂಡತಿ ಮಗು ಬಿಟ್ಟು ಹೊರನಡೆದವ.

ಯಾವುದೇ ರೀತಿಯಲ್ಲಿ ಬೇರೆಯವರ ಅನುಕರಣೆ ಸ್ವಂತಿಕೆಗೆ ಹೊರತಾದ ವ್ಯಕ್ತಿತ್ವ ರಾಮನ ಹಾಗೆ ಬುದ್ಧನ ಹಾಗೆ ಅನ್ನುವುದಕ್ಕಿಂತ ತನ್ನದೇ ವ್ಯಕ್ತಿತ್ವ ರೂಡಿಸಿಕೊಳ್ಳಲು ಕವಿಯತ್ರಿ ನಿರ್ಧರಿಸುವುದು ಆಧುನಿಕ ಬುದ್ದಿವಂತ ಮಹಿಳೆಯ ಆಲೋಚನೆಗಳು ಹೇಗೆ ವಿಕಾಸತೆಯ ಹಾದಿ ಇಡಿದಿವೆ ಅನ್ನುವುದು ತಿಳಿಯುವುದು.

ಮಹಿಳಾ ಕಾವ್ಯದಲ್ಲಿ ಪೌರಾಣಿಕ ಪುರುಷನನ್ನು ಅಭಿವ್ಯಕ್ತಿಸಿದ ಆಧುನಿಕ ಕವಿಯತ್ರಿಯರು ಚಾರಿತ್ರಿಕ ಸ್ತ್ರೀ ಪಾತ್ರಗಳ ಪುನರ್ ಮೌಲ್ಯೀಕರಣ ನಡೆದಿದೆ. ಕುಂತಿ, ಗಾಂದಾರಿ ಸೀತೆ, ಅಕ್ಕಮಹಾದೇವಿ ಅಹಲ್ಯೆ ಮುಂತಾದ ಪಾತ್ರಗಳು ಈ ಹಿಂದೆ ಪತಿವ್ರತಾ ಶಿರೋಮಣಿಗಳೆಂದು ಧಾರ್ಮಿಕ ಪರಿಭಾಷೆಯಲ್ಲಿ ವಾಖ್ಯಾನಗೊಳ್ಳುತ್ತಿದ್ದರೆ ಈಗ ಅವು ಶೋಷಣೆಗೊಳಗಾದ ಪಾತ್ರಗಳಾಗಿ ಸಂಕೇತಗಳಾಗಿ ಮೂಡಿಬರುತ್ತದೆ. ಪ್ರಸ್ತುತವಾಗಿ ಪೌರಾಣಿಕ ಸ್ತ್ರೀಯ ಸ್ಥಿತಿಗತಿಯನ್ನು ವಿಶ್ಲೇಷಿಸುವುದು ಶತಮಾನಗಳಿಂದ ಬದಲಾಗದ ಸ್ತ್ರೀಯ ಸ್ಥಿತಿಗತಿಯನ್ನು ಒತ್ತಿ ಹೇಳುತ್ತದೆ.

ಆಧುನಿಕ ಮಹಿಳಾ ಕಾವ್ಯದಲ್ಲಿ ಪುರಾಣದ ಹೆಣ್ಣನ್ನು ಕುರಿತ ಚಿಂತನೆಯಲ್ಲಿ ತೊಡಗಿರುವುದು ಮೊದಲನೆ ಹಂತದವಾದರೆ ಹೆಣ್ಣಿನ ಅಸ್ಥಿತ್ವವನ್ನು ಪೌರಾಣಿಕವಾಗಿ

ವಿಶ್ಲೇಷಿಸುವುದು ಹೆಣ್ಣಿನ ಬಗ್ಗೆ ಸಮಾಜ ಇದುವರೆವಿಗೂ ಆಲೋಚಿಸಿದ ವಿಧಾನ ತಪ್ಪು ಎಂದು ಹೇಳುವುದಲ್ಲದೇ ಶತಮಾನಗಳಿಂದ ಕತ್ತಲೆಯಲ್ಲಿ ಉಳಿದ ಅವಳ ಸ್ಥಿತಿ-ಗತಿಯನ್ನು ವರ್ಣಿಸುವುದು ಮುಖ್ಯ ವಿಚಾರವಾಗುತ್ತದೆ.

ಪೌರಾಣಿಕ ಪುರುಷ ಮತ್ತು ಪ್ರಭುತ್ವದ ನೆಲೆಗಳು

ಪೌರಾಣಿಕ ಪುರುಷ ಮತ್ತು ಪ್ರಭುತ್ವದ ಅಧ್ಯಯನದಲ್ಲಿ ಪೌರಾಣಿಕ ಸ್ತ್ರೀ ಪಾತ್ರಗಳು ಅವುಗಳ ಮೇಲೆ ಪ್ರಭುತ್ವದ ದಬ್ಬಾಳಿಕೆಯನ್ನು ಹೇಳುತ್ತದೆ. ಪೌರಾಣಿಕ ಪುರುಷ ಇಲ್ಲಿ ಪುರುಷ ಪಾತ್ರಗಳು ಪ್ರಭುತ್ವವನ್ನು ಪ್ರತಿನಿಧಿಸಿದರೆ ಸ್ತ್ರೀ ಪಾತ್ರಗಳು ಸಂಪೂರ್ಣವಾಗಿ ಪಾತಿವ್ರತ್ಯ ಧರ್ಮವನ್ನು ಎತ್ತಿ ಹಿಡಿಯುತ್ತವೆ. ಆದರ್ಶವೆನಿಸಿದ ಪುರುಷ ಪಾತ್ರಗಳು ಪ್ರಭುತ್ವವನ್ನು ವಕಾಲತ್ತು ವಹಿಸಿರುವುದನ್ನು ಹೇಳುತ್ತವೆ.

ಅಧ್ಯಾಯದಲ್ಲಿ ಆಧುನಿಕ ಕವಿ ರಚಿಸಿರುವ ಕಾವ್ಯಗಳು ಪೌರಾಣಿಕ ಪುರುಷ ಪಾತ್ರಗಳ ನಡಾವಳಿಗಳು ಪ್ರಸ್ತುತದಲ್ಲಿ ಹೇಗೆ ಮುಂದುವರೆಸಿದೆ ಎನ್ನುವುದನ್ನು ನೋಡಬಹುದು. ರಾವಣ, ದುಶ್ಯಾಸನ, ಕೀಚಕರಂತ ರಾಕ್ಷಸ ವ್ಯಕ್ತಿತ್ವಗಳು, ಶ್ರೀರಾಮ, ಧರ್ಮರಾಯ, ಗೌತಮರಂತ ಪ್ರಭುತ್ವವಾದಿ ವ್ಯಕ್ತಿತ್ವಗಳು ಇಂದಿಗೂ ಪ್ರಸ್ತುತವಾಗಿದೆ. ಈಗಲೂ ನಮ್ಮ ಕಣ್ಣ ಮುಂದೆ ನಡೆಯುತ್ತಲೆ ಇವೆ. ಇದನ್ನು ಆಧುನಿಕ ಕವಿಯತ್ರಿಯರು ಕಾವ್ಯಗಳಲ್ಲಿ ಗುರುತಿಸುವುದು. ಪುರಾಣ ಸ್ತ್ರೀಯರನ್ನು ವಿವೇಚಿಸುವುದರ ಮುಲಕ ಇಂದಿನ ಆದರ್ಶ ಪುರುಷನನ್ನು ಹುಡುಕಲಾಗಿದೆ. ಅಂದು ಪ್ರಭಲವಾಗಿದ್ದ ಪುರಾಣ ಪುರುಷ ಪಾತ್ರಗಳು ಇಂದಿಗೂ ಪ್ರಸ್ತುತ ಇಂದಿನ ಆದರ್ಶ ಪುರುಷನ ಹುಡುಕಾಟ ಅಂದಿನ ಆದರ್ಶ ಪುರುಷನ ಹುಡುಕಾಟಕ್ಕೂ ಸಮವೆನಿಸುತ್ತದೆ, ಆದರ್ಶತೆ ಕೊನೆಗೂ ಸಿಕ್ಕೀತೆ ಎನ್ನಿಸುವುದು ದೊಡ್ಡ ಪ್ರಶ್ನೆಯಾಗಿದೆ.

ಆದರ್ಶದ ಹಾದಿಯ ರಾಮ, ಭೀಮ, ಧರ್ಮರಾಯ, ಗೌತಮ ಅವರ ಪ್ರಭುತ್ವದ ಹಾದಿಯಿಂದ ಆದರ್ಶದ ಪೊರೆಕಳಚಿ ಅವರು ಸಾಮಾನ್ಯರೆಂಬುದನ್ನು ಎತ್ತಿ ತೋರುತ್ತದೆ. ಪುರಾಣದ ಕಾವ್ಯ ಹೆಣ್ಣಿನ ಕುರಿತ ಚಿಂತನೆಯಲ್ಲಿ ಮೊದಲ ಹಂತದಲ್ಲಿ ಹೆಣ್ಣಿನ ಅಸ್ತಿತ್ವವನ್ನು ಪೌರಾಣಿಕವಾಗಿ ವಿಶ್ಲೇಷಿಸುವುದು. ಹೆಣ್ಣಿನ ಬಗ್ಗೆ ಸಮಾಜ ಇದುವರೆಗೂ ಆಲೋಚಿಸಿದ ವಿಧಾನವು ತಪ್ಪು ಹೇಳುವುದಲ್ಲದೆ ಶತಮಾನಗಳಿಂದ ಕತ್ತಲೆಯಲ್ಲಿ ಉಳಿದ ಅವಳ ಸ್ಥಿತಿಯನ್ನು ವರ್ಣಿಸಿರುವುದನ್ನು ಕಾಣಬಹುದು.

ಇಡೀ ಪೌರಾಣಿಕ ಪಾತ್ರಗಳ ಸ್ತ್ರೀ ಪಾತ್ರಗಳ ಚಿತ್ರಣವನ್ನು ಪ್ರಸ್ತುತದಲ್ಲಿ ಅವಲೋಕಿಸಿದರೆ ಪ್ರತಿಯೊಂದು ಸ್ತ್ರೀಯ ಮೇಲೂ ಪುರುಷ ಪ್ರಭುತ್ವದ ಕತ್ತಿ ತೂಗಾಡುತ್ತದೆ. ಸ್ತ್ರೀ ಇಲ್ಲಿ ಹೆಣಗಾಡಿದರೂ, ನೊಂದರೂ ಅವಳು ಶೋಷಿಸಲ್ಪಟ್ಟಳೆಂಬ ಪಟ್ಟಿಯಲ್ಲಿ ಸಿಗುವುದಿಲ್ಲ. ಅವಳು ನೊಂದಷ್ಟು ಎತ್ತರಕ್ಕೇರುತ್ತಾಳೆ. ಶೋಷಕನೆನಿಸುವ ಪಾತ್ರಗಳು ದೈವಿಮಟ್ಟಕ್ಕೇರುತ್ತವೆ. ಅವನ ದೈವಿಕತೆಗೆ ಪ್ರಕಾಶತೆಗೆ ಬಳಕೆಗೊಂಡರೂ ಸ್ತ್ರೀ ಮುಖ್ಯರಾದವರು ಎನಿಸುವುದಿಲ್ಲ. ಹೇಗಿದ್ದರೂ ಅವಳು ಎರಡನೇ ದರ್ಜೆ ಪ್ರಜೆ. ಗೆದ್ದವನು ಮಾತ್ರ ಪುರುಷ.

ಇಡೀ ಪುರಾಣವನ್ನು ಅವಲೋಕಿಸುತ್ತಾ ಹೋದಂತೆ ಸೀತೆ, ರಾಮ, ಲಕ್ಷ್ಮಣ ಊರ್ಮಿಳೆ, ದ್ರೌಪತಿ, ಧರ್ಮಜ ಗೌತಮ-ಅಹಲ್ಯೆ, ಇಂದ್ರ-ರೆಂಬೆ, ಊರ್ವಶಿ, ಕೈಕೇಯಿ ದಶರಥ, ನಳದಮಯಂತಿ, ಶಿವ-ಪಾರ್ವತಿ, ದುಶ್ಯಂತ-ಶಕುಂತಲ ಹೀಗೆ ಪಟ್ಟಿಯನ್ನು ನೋಡಿದೆಂತೆಲ್ಲಾ ರಾಮಲಕ್ಷ್ಮಣ ಗೌತಮರ ಅತ್ಯುನ್ನತ ಮಟ್ಟಕ್ಕೆ ಏರಲು ಪರೋಕ್ಷವಾಗಿ ಅವರ ಪತ್ನಿಯರ ಸಹಾಯ ನಿಜಕ್ಕೂ ಶ್ಲಾಘನೀಯ. ಅದರೆ ಇಲ್ಲಿ ಸ್ತ್ರೀ ಪಾತ್ರಗಳು ಆ ಪಾತ್ರಗಳು ಪ್ರಕಾಶಿಸುವಂತೆ ಮಾಡುತ್ತವೆ. ಹೊರತು ಆ ಪುರುಷ ಪಾತ್ರಗಳ ಮಟ್ಟಕ್ಕೆ ನಿಲ್ಲಲು ಸಾಧ್ಯವಿಲ್ಲ.

ಪುರುಷ ಪಾತ್ರಗಳು ಪ್ರಭುತ್ವವನ್ನು ಪ್ರತಿನಿಧಿಸಿದಂತೆ ಸ್ತ್ರೀ ಪಾತ್ರಗಳು ಸಂಪೂರ್ಣವಾಗಿ ಪಾತಿವ್ರತ್ಯ ಧರ್ಮವನ್ನು ಎತ್ತಿ ಇಡಿಯುತ್ತದೆ. ಪಾತಿವ್ರತ್ಯ ಅವಳ ಹಕ್ಕಾಗಿರುತ್ತದೆ. ಸೀತೆಯೂ ಅವಳ ಒಟ್ಟಾರೆ ಪಾತ್ರದ ಹುಟ್ಟು -ಬೆಳವಣಿಗೆ ಅಂತಿಮ ಸಾವಿನ ಘಟ್ಟದಲ್ಲೂ ಪಾತಿವ್ರತ್ಯವನ್ನು ಉಳಿಸಿಕೊಳ್ಳುವ ಜವಾಬ್ದಾರಿಯಲ್ಲಿರುತ್ತಾಳೆ. ಪಾತಿವ್ರತ್ಯದ ಪರಿಕಲ್ಪನೆಯು ಕೇವಲ ದೇಹಕ್ಕೆ ಸಂಬಂಧ ಪಟ್ಟಿರುವುದಕ್ಕೆ ಮೇಲ್ನೋಟಕ್ಕೆ ಕಂಡರೂ ಅದು ಸ್ತ್ರೀಯು ಪುರುಷನಿಗೆ ಎಷ್ಟರ ಮಟ್ಟಿಗೆ ನಿಷ್ಠಳಾಗಿದ್ದಾಳೆ ಎಂಬುದೇ ಮುಖ್ಯವಾಗುತ್ತದೆ.

ದ್ರೌಪತಿಯ ಪಾತಿವ್ರತ್ಯ ದೇಹಕ್ಕೆ ಸಂಬಂಧಿಸಿದಲ್ಲ, ಅವಳ ಪಾತಿವ್ರತ್ಯ ಸಂಪೂರ್ಣವಾಗಿ ಬೇರೆಯದಾಗಿರುತ್ತದೆ. ಗೌತಮ ಅಹಲ್ಯೆಯ ಸಂಬಂಧ ಆಹಲ್ಯೆ ಇಂದ್ರನ ಮಾರುವೇಶದಲ್ಲಿ ಕೂಡಿದಾಗಲೂ ಅವಳು ಅವನನ್ನು ಬಯಸುತ್ತಾಳೆ. ಗೌತಮನಲ್ಲಿ ಕಾಣಬಹುದಾದ, ಕಂಡು ಬಂದ ದೌರ್ಬಲ್ಯವನ್ನು ಇಂದ್ರನಲ್ಲಿ ಕಾಣುತ್ತಾಳೆ. ಮಂಡೋಧರಿ, ಕೈಕೇಯಿ, ಶರ್ಮಿಷ್ಠೆ, ಯೋಜನಾಗಂಧಿ ಪಾತ್ರಗಳು ಪಾತಿವ್ರತ್ಯದ ಸ್ವರೂಪವನ್ನು ಬಿಟ್ಟು ಮುಂದೆ ಬಂದಿದ್ದರೂ ಸಾಮಾಜಿಕ ಸಿದ್ಧ ಮಾದರಿಗಳು ಚೌಕಟ್ಟಿನಲ್ಲಿ ಖಂಡಿತವಾಗಿ ಎಲ್ಲವನ್ನು ಕಳೆದುಕೊಂಡು ಸ್ಥಬ್ಧವಾಗುತ್ತದೆ.

ದ್ರೌಪತಿ ಐವರು ಪತ್ನಿಯರಾಗಿದ್ದಕ್ಕೆ ಶಾಪದ ಕಾರಣ ಕೊಡುತ್ತಾರೆ. ಅದು ಅವರ ಜನ್ಮಾಂತರದ ಹಣೆಬರಹವೆಂದು ಸಮರ್ಥಿಸುತ್ತಾರೆ. ಆಹಲ್ಯೆ ಜಾರಿದ್ದಕ್ಕೆ ಇಂದ್ರನ ಮಾರುವೇಷದ ಕಾರಣವನ್ನು, ಸ್ತ್ರೀ ಜಾರಿದ್ದರಿಂದ ಅವಳು ಗೌತಮನಿಂದ ಕಲ್ಲಾದ ಕಥೆಯನ್ನು ಹೇಳುವ ಮೂಲಕ ಸಾಮಾಜಿಕವಾಗಿ ಪಾತಿವ್ರತ್ಯದ ಕಟ್ಟುಪಾಡನ್ನು ಗಟ್ಟಿಯಾಗಿ ಸ್ಥಾಪಿಸುತ್ತಾರೆ. ಆಹಲ್ಯೆಯ ಶಾಪಕ್ಕೆ ಕಾರಣನಾದವ, ಶಾಪಕೊಟ್ಟವ, ಶಾಪವಿಮೋಚನೆ ತೊಡಗಿದವನು ಸಂಪೂರ್ಣವಾಗಿ ಆತ ಪುರುಷನೇ ಆಗಿದ್ದಾನೆ. ಗೌತಮ, ಇಂದ್ರ, ರಾಮ ಅವಳ ಜೀವನವು ಸಂಪೂರ್ಣವಾಗಿ ಪುರುಷ ಪ್ರಭುತ್ವದಿಂದ ನಿಯಂತ್ರಿತಗೊಂಡಿರುತ್ತದೆ.

ಪಾತಿವ್ರತ್ಯ ಒಂದು ರೀತಿಯಲ್ಲಿ ಸ್ತ್ರೀಗೆ ಮಾತ್ರ ಅಂಟಿಕೊಂಡಿರುತ್ತದೆ. ವಿಶ್ವಾಮಿತ್ರನಿಗೆ ತಪೋಭಂಗದ ಸಂದರ್ಭದಲ್ಲಿ ವಿಶ್ವಾಮಿತ್ರ - ಊರ್ವಶಿ ಸಮಾಗಮವಾದದ್ದು, ಪೌರಾಣಿಕ ಮುನಿ - ಸುಗಂಧಿಯೊಡನೆ ಕೂಡಿದ್ದು ಇವೆಲ್ಲ ಋಷಿವರ್ಯರ ಮರ್ಜಿಗಳಾಗುತ್ತವೆ. ಇಂಥದೇ ಸಂದರ್ಭದಲ್ಲಿ ಗೌತಮನು ತಪ್ಪು ಮಾಡಿದ್ದರೂ ಸ್ತ್ರೀಯಾದ ಆಹಲ್ಯೆ ಒಮ್ಮೆ ಜಾರಿದ್ದಕ್ಕೆ ಅವಳಿಗೆ ಕ್ಷಮೆ ಇರಲಿಲ್ಲ. ಈ ಕಾರಣದಿಂದಲೇ ಪುರಾಣಗಳು ಸ್ತ್ರೀ ಪಾತ್ರವುಳ್ಳ ಪುರುಷನಿಗೆ ಸಂಪೂರ್ಣವಾಗಿ ನಿಷ್ಠಳಾಗಿರುವುದನ್ನು ಪ್ರತಿನಿಧಿಸುತ್ತದೆ.

ಪುರಾಣ ಪುಣ್ಯಕತೆಗಳಲ್ಲಿ ಸತಿಶಿರೋಮಣಿಯರ ಪಾತಿವ್ರತ್ಯವನ್ನು ನಿಂತ ನೀರಲ್ಲಿ ಪರಪುರುಷನ ಪ್ರತಿಬಿಂಬ ಕಂಡೇ ಅಪವಿತ್ರಳಾಗುವ ರೇಣುಕೆಯ ತಲೆಕಡಿವಾಗ, ಪ್ರಧಾನ ಸಂಸ್ಕೃತಿ ಪುರುಷಲಾಭಕ್ಕಾಗಿಯೇ ದುಡಿಯುತ್ತಿತ್ತು. ಹೆರುವ ಹೆಣ್ಣಿನ ತಾಯ್ತನದಷ್ಟೇ ಸರಳವಾಗಿ ತಂದೆತನ ಸಾಬೀತಾಗದ ಕಾರಣ, ಹೆಣ್ಣಿನ ಶೀಲ ಪಾತಿವ್ರತ್ಯಕ್ಕೆ ಒತ್ತು ಕೊಟ್ಟು ಗೃಹಬಂಧನದಲ್ಲಿಟ್ಟು ತನ್ನ ವಂಶ ಮುಂದುವರೆಯುವ ಖಾತರಿಗೆ ಗಂಡು ಹೆಣ್ಣಿನ ಮೇಲೆ ಹೇರಿದ ಆದರ್ಶಗಳು, ಪ್ರಧಾನ ಸಂಸ್ಕೃತಿಯ ಬೆನ್ನುಲುಬಾದವು.

ಸೀತೆ, ಆಹಲ್ಯೆ, ಸಾವಿತ್ರಿ ಪಾತ್ರಗಳು ಪ್ರಧಾನ ಸಂಸ್ಕೃತಿಯ ಬೆನ್ನೆಲುಬು ಎನಿಸಿದವು ಆದರೆ ಈ ಮಂಡೋಧರಿ, ಶರ್ಮಿಷ್ಠೆ, ದ್ರೌಪತಿ, ಕೈಕೇಯಿ ಪಾತ್ರಗಳು ಪ್ರಧಾನ ಸಂಸ್ಕೃತಿಗೆ ವಿರೋಧವಾಗಿ ನಡೆದರೂ ಸ್ವಲ್ಪ ಮಟ್ಟಿಗೆ ವ್ಯವಸ್ಥೆಯ ಪ್ರತಿರೋಧವಾಗಿ ಕಂಡುಬಂದರೂ ಆನಂತರದಲ್ಲಿ ಸಾಮಾಜಿಕ ಚೌಕಟ್ಟಿನಲ್ಲಿ ಬಂದಿತವಾಗಿ ಎಲ್ಲವನ್ನು ಕಳೆದುಕೊಂಡು ಸ್ಥಬ್ದವಾಗಬೇಕಾಗುತ್ತದೆ.

ನಮ್ಮ ಸಂಸ್ಕೃತಿಯ ಕೆಲವು ಮಾದರಿಗಳನ್ನು ಬಿಚ್ಚಿಡುವ ನಮ್ಮ ಶಾಸ್ತ್ರಗಳು, ಪುರಾಣಗಳು ಕೊನೆಗೆ ಅವುಗಳ ಛಾಯೆಯಲ್ಲಿ ನಮ್ಮ ಜನಪದ ನುಡಿಗಟ್ಟುಗಳ ಮತ್ತು ಗಾದೆಗಳು ಕೂಡ ಹೆಣ್ಣಿನ ಪರಾಧೀನ ಸ್ಥಿತಿಯ ಅನಿವಾರ್ಯತೆಯನ್ನು ಒತ್ತಿ ಹೇಳುತ್ತದೆ.

ದ್ರೌಪತಿ ಐವರು ಪತ್ನಿಯರಾಗಿದ್ದಕ್ಕೆ ಶಾಪದ ಕಾರಣ ಕೊಡುತ್ತಾರೆ. ಅದು ಅವರ ಜನ್ಮಾಂತರದ ಹಣೆಬರಹವೆಂದು ಸಮರ್ಥಿಸುತ್ತಾರೆ. ಆಹಲ್ಯೆ ಜಾರಿದ್ದಕ್ಕೆ ಇಂದ್ರನ ಮಾರುವೇಷದ ಕಾರಣವನ್ನು, ಸ್ತ್ರೀ ಜಾರಿದ್ದರಿಂದ ಅವಳು ಗೌತಮನಿಂದ ಕಲ್ಲಾದ ಕಥೆಯನ್ನು ಹೇಳುವ ಮೂಲಕ ಸಾಮಾಜಿಕವಾಗಿ ಪಾತಿವ್ರತ್ಯದ ಕಟ್ಟುಪಾಡನ್ನು ಗಟ್ಟಿಯಾಗಿ ಸ್ಥಾಪಿಸುತ್ತಾರೆ. ಆಹಲ್ಯೆಯ ಶಾಪಕ್ಕೆ ಕಾರಣನಾದವ, ಶಾಪಕೊಟ್ಟವ, ಶಾಪವಿಮೋಚನೆ ತೊಡಗಿದವನು ಸಂಪೂರ್ಣವಾಗಿ ಆತ ಪುರುಷನೇ ಆಗಿದ್ದಾನೆ. ಗೌತಮ, ಇಂದ್ರ, ರಾಮ ಅವಳ ಜೀವನವು ಸಂಪೂರ್ಣವಾಗಿ ಪುರುಷ ಪ್ರಭುತ್ವದಿಂದ ನಿಯಂತ್ರಿತಗೊಂಡಿರುತ್ತದೆ.

ಪಾತಿವ್ರತ್ಯ ಒಂದು ರೀತಿಯಲ್ಲಿ ಸ್ತ್ರೀಗೆ ಮಾತ್ರ ಅಂಟಿಕೊಂಡಿರುತ್ತದೆ. ವಿಶ್ವಾಮಿತ್ರನಿಗೆ ತಪೋಭಂಗದ ಸಂದರ್ಭದಲ್ಲಿ ವಿಶ್ವಾಮಿತ್ರ – ಊರ್ವಶಿ ಸಮಾಗಮವಾದದ್ದು, ಪೌರಾಣಿಕ ಮುನಿ – ಸುಗಂಧಿಯೊಡನೆ ಕೂಡಿದ್ದು ಇವೆಲ್ಲ ಋಷಿವರ್ಯರ ಮರ್ಜಿಗಳಾಗುತ್ತವೆ. ಇಂಥದೇ ಸಂದರ್ಭದಲ್ಲಿ ಗೌತಮನು ತಪ್ಪು ಮಾಡಿದ್ದರೂ ಸ್ತ್ರೀಯಾದ ಆಹಲ್ಯೆ ಒಮ್ಮೆ ಜಾರಿದ್ದಕ್ಕೆ ಅವಳಿಗೆ ಕ್ಷಮೆ ಇರಲಿಲ್ಲ. ಈ ಕಾರಣದಿಂದಲೇ ಪುರಾಣಗಳು ಸ್ತ್ರೀ ಪಾತ್ರವುಳ್ಳ ಪುರುಷನಿಗೆ ಸಂಪೂರ್ಣವಾಗಿ ನಿಷ್ಠಳಾಗಿರುವುದನ್ನು ಪ್ರತಿನಿಧಿಸುತ್ತದೆ.

ಪುರಾಣ ಪುಣ್ಯಕತೆಗಳಲ್ಲಿ ಸತಿಶಿರೋಮಣಿಯರ ಪಾತಿವ್ರತ್ಯವನ್ನು ನಿಂತ ನೀರಲ್ಲಿ ಪರಪುರುಷನ ಪ್ರತಿಬಿಂಬ ಕಂಡೇ ಅಪವಿತ್ರಳಾಗುವ ರೇಣುಕೆಯ ತಲೆಕಡಿವಾಗ, ಪ್ರಧಾನ ಸಂಸ್ಕೃತಿ ಪುರುಷಲಾಭಕ್ಕಾಗಿಯೇ ದುಡಿಯುತ್ತಿತ್ತು. ಹೆರುವ ಹೆಣ್ಣಿನ ತಾಯ್ತನದಷ್ಟೇ ಸರಳವಾಗಿ ತಂದೆತನ ಸಾಬೀತಾಗದ ಕಾರಣ, ಹೆಣ್ಣಿನ ಶೀಲ ಪಾತಿವ್ರತ್ಯಕ್ಕೆ ಒತ್ತು ಕೊಟ್ಟು ಗೃಹಬಂಧನದಲ್ಲಿಟ್ಟು ತನ್ನ ವಂಶ ಮುಂದುವರೆಯುವ ಖಾತರಿಗೆ ಗಂಡು ಹೆಣ್ಣಿನ ಮೇಲೆ ಹೇರಿದ ಆದರ್ಶಗಳು, ಪ್ರಧಾನ ಸಂಸ್ಕೃತಿಯ ಬೆನ್ನುಲುಬಾದವು.

ಸೀತೆ, ಆಹಲ್ಯೆ, ಸಾವಿತ್ರಿ ಪಾತ್ರಗಳು ಪ್ರಧಾನ ಸಂಸ್ಕೃತಿಯ ಬೆನ್ನೆಲುಬು ಎನಿಸಿದವು ಆದರೆ ಈ ಮಂಡೋಧರಿ, ಶರ್ಮಿಷ್ಠೆ, ದ್ರೌಪತಿ, ಕೈಕೇಯಿ ಪಾತ್ರಗಳು ಪ್ರಧಾನ ಸಂಸ್ಕೃತಿಗೆ ವಿರೋಧವಾಗಿ ನಡೆದರೂ ಸ್ವಲ್ಪ ಮಟ್ಟಿಗೆ ವ್ಯವಸ್ಥೆಯ ಪ್ರತಿರೋಧವಾಗಿ ಕಂಡುಬಂದರೂ ಆನಂತರದಲ್ಲಿ ಸಾಮಾಜಿಕ ಚೌಕಟ್ಟಿನಲ್ಲಿ ಬಂದಿತವಾಗಿ ಎಲ್ಲವನ್ನು ಕಳೆದುಕೊಂಡು ಸ್ಥಬ್ದವಾಗಬೇಕಾಗುತ್ತದೆ.

ನಮ್ಮ ಸಂಸ್ಕೃತಿಯ ಕೆಲವು ಮಾದರಿಗಳನ್ನು ಬಿಚ್ಚಿಡುವ ನಮ್ಮ ಶಾಸ್ತ್ರಗಳು, ಪುರಾಣಗಳು ಕೊನೆಗೆ ಅವುಗಳ ಛಾಯೆಯಲ್ಲಿ ನಮ್ಮ ಜನಪದ ನುಡಿಗಟ್ಟುಗಳ ಮತ್ತು ಗಾದೆಗಳು ಕೂಡ ಹೆಣ್ಣಿನ ಪರಾಧೀನ ಸ್ಥಿತಿಯ ಅನಿವಾರ್ಯತೆಯನ್ನು ಒತ್ತಿ ಹೇಳುತ್ತದೆ.

ಪವಿತ್ರೀಕರಿಸಿದೆ. ನಮ್ಮ ಪುರಾಣಗಳು ಹೆಣ್ಣಿನ ಸ್ವಾತಂತ್ರ್ಯ ವಿರುದ್ಧ ವರ್ಗ ಸಂಸ್ಕೃತಿ ಪರವಾಗಿ ವಕಾಲತ್ತು ವಹಿಸುವ ದಾಟಿ ಎಷ್ಟೊಂದು ಸತ್ಯವಾದರೂ, ಅಷ್ಟೇ ಭಯಾನಕವಾದುದು ಉಲ್ಲೇಖ ಸರಿಯಿಲ್ಲ ಸರ್ವೆ ಸಾಮಾನ್ಯವಾಗಿ ನೀಡುವ ಪುರುಷ ಮಾದರಿಗಳು ಪ್ರಭುತ್ವವನ್ನು ವಕಾಲತ್ತು ವಹಿಸಿರುವುದರಲ್ಲಿ ಸುಳ್ಳಲ್ಲ ಹೀಗೆ ಪ್ರಭುತ್ವ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪುರಾಣಗಳಿಂದ ಸ್ತ್ರೀಯ ಮೇಲೆ ತೂಗುಕತ್ತಿಯಂತೆ ತೂಗುತ್ತಿದೆ.

ದ್ರೌಪದಿ ಪಾತ್ರ ಚಿತ್ರಣ ಮತ್ತು ಪ್ರಭುತ್ವ

ದ್ರೌಪದಿ ಇಡೀ ಮಹಾಭಾರತದಲ್ಲಿ ಅವಳದು ಧೀರೋದಾತ್ತತೆಯುಳ್ಳ ಪಾತ್ರ ಮೇಲ್ನೋಟಕ್ಕೆ ಪಾಂಡವರ ರಾಣಿಯೆನಿಸಿದರೂ ಅವಳಗಾದ ನೋವು ಮತ್ತು ನಿರಾಸೆಯು ಅಷ್ಟಿಷ್ಟಲ್ಲ. ದ್ರೌಪದಿ ಪಾತ್ರ ಪ್ರಬುತ್ವತೆಯಲ್ಲಿ ನಲುಗಿದ್ದು ಅಸಾಧಾರಣ. ಪ್ರಬುತ್ವ ಎಂದರೆ ಸಾಮಾನ್ಯವಾಗಿ ಹಿಡಿತಸಾಧಿಸುವುದು, ಹಿಡಿತದಲ್ಲಿ ಇಟ್ಟುಕೊಳ್ಳುವುದು, ಎಂದಾದರೂ ಎಲ್ಲಿ ಪ್ರಭುತ್ವ ಗೋಡಿನದೂ ಇಡಿ ಪ್ರಬುತ್ವದಲ್ಲಿ ನಲುಗಿದಳು. ಅವರ ರಾಜ್ಯಾಧಿಕಾರದಲ್ಲಿ ತಾನು ಪಗಡೆಯಾಟದ ತೊತ್ತಾಗಿ ಕೌರವರ ವಸ್ತುವಾಗಿದ್ದು ವಸ್ತ್ರಾಪರಣದ ಸಂದರ್ಭದಲ್ಲಿ ಗಂಡರ‍್ಯವರೆಲ್ಲ ಕೈಲಾಗದಂತೆ ಕುಳಿತಿದ್ದು ಪ್ರಭುತ್ವ ಅವಳ ಮೇಲೆ ಸಾಧಿಸಿದ ಶೋಷಣೆ ನೋಡಬಹುದು. ಪಂಚ ಪಾಂಡವರಿಗೆ ಪತ್ನಿಯಾದರೂ ಅವರೈವರಿಗೆ ಇವಳೊಬ್ಬಳೇ ಏಕಪತ್ನಿಯಲ್ಲ ಪಂಚಪಾಂಡವರಿಗೆ ಇತರೆ ಪತ್ನಿಯರಿದ್ದರು. ಪ್ರತಿಯೊಂದು ಸಂದರ್ಭಗಳು ಅವಳನ್ನು ಶೋಷಿಸಿದ್ದವು. ಅವುಗಳನ್ನೆಲ್ಲ ಅಧುನಿಕ ಕವಿಯತ್ರಿಯರು ದ್ರೌಪದಿ ಮೇಲಾದ ಪ್ರಭುತ್ವವನೇ ತನ್ನ ಕಾವ್ಯದಲ್ಲಿ ಒಂದಾಂದಾಗಿ ವಿವೇಚಿಸಿದ್ದಾರೆ.

ಮಹಾಭಾರತ ಸ್ತ್ರೀ ಪಾತ್ರಗಳಲ್ಲಿ ಎದ್ದು ನಿಲ್ಲುವ ಪಾತ್ರವೆಂದರೆ ದ್ರೌಪದಿ ಒಬ್ಬಳೇ. ಅಪ್ರಾಕೃತಿಕವಾದ ಜನನ. ಮನೋಹರವಾದ ರೂಪ, ಹೆಂಗಸಿಗೆ ಸಾಮಾನ್ಯವಾಗಿ ಸಹಜವಲ್ಲದ ಕ್ಷಾತ್ರ ಗುಣ, ಪ್ರವೃತ್ತಿ ಬೇರಾವ ಕಾವ್ಯದಲ್ಲೂ ಕಂಡುಬಾರದ ಬಹುಪತ್ನಿತ್ವದ ತೊಡುಕು –ಇವು ಒಟ್ಟಾಗಿ ಸೇರಿ ಅವಳ ಪಾತ್ರವನ್ನು ವಿಶಿಷ್ಟವಾಗಿಸಿದೆ. ವಚನಭಾರತ ಬರೆದ ಎಮ್. ಆರ್. ಕೃಷ್ಣಶಾಸ್ತ್ರೀಯವರು ಹೇಳುವಂತೆ ಮಹಾಭಾರತದಲ್ಲಿ ಯಾರಾದರೂ ಗಂಡಿಸಿದ್ದರೆ ಅದು ದ್ರೌಪದಿ ಎಂದಿದ್ದಾರೆ(ವಚನಭಾರತ, ಆರ್.ಕೃಷ್ಣಶಾಸ್ತ್ರೀ, ಪುಟ–೪೬).

ಭಾರತಿ ತೀರ್ಥ ಮಾನ(ಪುಟ ೧೭೫)ದಲ್ಲಿ ಹೆಣ್ಣು ವೀರಳಾಗಿದ್ದಾಗ ಹೇಗೆ ನಡೆಯ ಬೇಕು ಎಂದು ಯಾರಾದರೂ ಹೇಳಿದರೆ ಮಹಾಭಾರತ ಹೇಳುವುದು ಒಂದೇ ಉತ್ತರ ಅದು ದ್ರೌಪದಿಯಂತೆ ನಡೆಯಬೇಕು ಎಂಬ ವಿಮರ್ಶೆಯ ಮಾತುಗಳು, ದ್ರೌಪದಿ ಪಾತ್ರವನ್ನ ಮೆಚ್ಚಿ ಆಶ್ಚರ್ಯದಿಂದ ತೆಗೆದಿರುವ ಉದ್ಗಾರಗಳು, ದ್ರೌಪದಿ ಐವರ ಗಂಡಂದಿರ ಪತ್ನಿ.

ಸಾಮ್ರಾಜ್ಯದ ಅದಿಪತಿಯಾದವಳು, ಧೀರೋಧಾತ್ತೆಯೆಂಬ ಹಣೆಪಟ್ಟ ಇದ್ದರೂ ಪುರುಷ ಪ್ರಭುತ್ವ ಅವಳನ್ನು ಆಳದೇ ಬಿಡದು. ಹೆಣ್ಣನ್ನು ಹಣ್ಣೆಂದು ಕೇಳಿಸಿಕೊಂಡ ಕುಂತಿ ತನ್ನ ಐದು ಮಕ್ಕಳಿಗೆ ಹೇಳಿದ್ದು ಹಂಚಿಕೊಂಡು ತಿನ್ನಿರೆಂದು ದ್ರೌಪದಿ ಐವರು ಪತ್ನಿಯಾದವಳು ಶೂರ-ವೀರರಾಗಿದ್ದರೂ ಅವಳ ನೋವಿಗೆ ಸ್ಪಂದಿಸಿದವರು ಕಡಿಮೆಯೇ.

ಐವರು ನಾಥರಿಂದು ಅನಾಥೆ
ಎಲ್ಲರ ಕಷ್ಟಕ್ಕೆ ಕಾರಣನಾದೆ
ಪ್ರಾಮಾಣಿಕ ಪಟ್ಟಧರಸಿಯಾಗಿ ಮೆರೆದವಳು
ಒಳಗೊಳಗೆ ನರಳಿ ಸತ್ತವಳು
ಐವರು ನಾಥರಿದ್ದು ಅನಾಥೆ[೫೦]

(ಸುಕನ್ಯಾ ಮಾರುತಿ, ಪುಟ-೬೦, ೧೯೮೨)

ಎನ್ನುವಲ್ಲಿ ಅವಳಲ್ಲಿ ಮಾನಸಿಕವಾಗಿ ಅನುಭವಿಸಿದ ನೋವುಗಳಲ್ಲಿ ಶೂರರಾದ ಐದು ಜನ ಗಂಡರಿದ್ದು ತನ್ನತನವನ್ನು ಕಾಪಾಡಿಕೊಳ್ಳಲು ಆಗದಂತಹ ಪರಿಸ್ಥಿತಿ ಅವಳನ್ನು ಒಂದು ರೀತಿಯ ಅಭದ್ರತೆಯನ್ನು ಸೂಚಿಸಿದಂತಿದೆ.

ಸೀತೆಗೆ ಅಗ್ನಿಪರೀಕ್ಷೆ ಒದಗಿ ಬಂದ ಹಾಗೆ ದ್ರೌಪದಿಗೆ ಅಗ್ನಿ ಪರೀಕ್ಷೆಯಂತೆನೆಸಿದ್ದು ವಸ್ತ್ರಾಪಹರಣ ಸ್ತ್ರೀಗೆ ಪ್ರಾಣದಂತಿರುವ ಶೀಲವನ್ನೆ ಪ್ರಶ್ನಿಸುವ ಈ ವಸ್ತ್ರಾಪಹರಣ ಮೂಲತಃ ಕೌರವರಂತಹ ಪ್ರಭುತ್ವವಾದಿಗಳ ಕೀಳು ಮಟ್ಟದ ನಡುವಳಿಕೆ ಇದಾಗಿದೆ.

ಕೌರವರು ಪಾಂಡವರನ್ನು ಪಗಡೆಯಾಟದಲ್ಲಿ ಸೋಲಿಸುವುದು ರಾಜ್ಯಕಿತ್ತುಕೊಳ್ಳುವ ಅಂಗವೇ ಆಗಿದ್ದರೇ ಅದು ಪಗಡೆಯಾಟದೊಂದಿಗೆ ಮುಕ್ತಾಯವಾಗುತ್ತಿತ್ತು. ಆದರೆ ಕೌರವರಿಗಿದ್ದಿದ್ದು ಪಾಂಡವರ ಅಂತಸ್ಥೈರ್ಯ ಮುರಿಯುವುದೇ ಆಗಿತ್ತು. ತನ್ನ ಪತ್ನಿಯನ್ನು ರಕ್ಷಿಸುವುದು ಒಬ್ಬ ಗಂಡಸಿನ ಆಧ್ಯ ಕರ್ತವ್ಯ. ಅದರಲ್ಲಿ ಆತನು ವಿಫಲನಾದರೆ ಆತ ಕೈಲಾಗದವನೆಂದು ಬಿಂಬಿತವಾಗುತ್ತದೆ.

ಈ ಒಂದು ನೆಲೆಗಟ್ಟಿನಲ್ಲೆ ಸ್ತ್ರೀ ಪುರುಷನ ಸ್ವತ್ತಾಗುತ್ತಾಳೆ. ಕೌರವರು ದ್ರೌಪತಿಯ ವಸ್ತ್ರಾಪಹರಣ ಮಾಡಲು ಹೊರಟಿದ್ದು ಇದೇ ಕಾರಣಕ್ಕಾಗಿ. ಕೌರವನ ದೃಷ್ಟತ್ಯಕ್ಕಿಂತ ಪಾಂಡವರು ತನ್ನೆಲ್ಲಾ ಸ್ವತ್ತನ್ನು ಪಗಡೆಯಾಟದಲ್ಲಿ ಕಳೆದುಕೊಂಡಿದ್ದರು ಕೂಡ ಅಂತಿಮದಲ್ಲಿ ಹೆಂಡತಿಯನ್ನು ಸ್ವತ್ತಾಗಿ ಪರಿಗಣಿಸಿ ಅವಳನ್ನು ಒತ್ತೆ ಹಿಡುವ ಸಂದರ್ಭ ಹೀನವಾಗಿದ್ದು, ಕುಮಾರವ್ಯಾಸ ಭಾರತದಲ್ಲಿ ಈ ಪ್ರಸಂಗ ಕುರಿತಂತೆ ದುಶ್ಯಾಸನ ದ್ರೌಪದಿಯನ್ನು ಆಸ್ಥಾನಕ್ಕೆ ಬರಹೇಳುತ್ತಾನೆ. ಬರಲು ನಿರಾಕರಿಸಿದ ದ್ರೌಪದಿ ತಾನು ಪುಷ್ಪವತಿಯಾಗಿದ್ದೆನೆಂದು ಹೇಳಿದಾಗ ದುಶ್ಯಾಸನ ಪುಷ್ಪವತಿಯಾಗಿದ್ದರೇನು? ನಡೆ ಫಲವತಿಯಾಗೆಂದು ಮೂದಲಿಸುತ್ತಾನೆ.

ಮೂಲತಃ ಈ ಪ್ರಸಂಗದಲ್ಲಿ ದ್ರೌಪದಿ ಪಾಂಡವರ ಸ್ವತ್ತು. ಕೌರವನ ವಸ್ತ್ರಾಪಹರಣ ಅಪೇಕ್ಷೆಗಿಂತ ಧರ್ಮಜನು ಪಗಡೆಯಾಟದಲ್ಲಿ ತನ್ನ ಸ್ವತ್ತಿನ ಜೊತೆ ದ್ರೌಪತಿಯನ್ನು ಒತ್ತೆಯಾಗಿ ಇಟ್ಟಿದ್ದು ನಾಚಿಗೇಡು.

ಅಗ್ನಿ ತೆರಗಳ ಸರಿಸಿ ಮೆರದು
ಬಂದವಳು ಹೆಣ್ಣಾದರೂ ಹೆಣ್ಣಿನಂತೆ
ಐವರ ಪಾಲು, ತಲೆಕೊಟ್ಟ ಧರ್ಮಜನ
ದ್ಯುತದ ಚಟಕ್ಕೆ ಬಲಿಯಾದಳು
ತುಂಬಿದ ಕುರುಸಭೆಯಲ್ಲಿ ಸೆಳೆದು
ಸೀರೆಗಾಗಿ ಬಿಚ್ಚಿದ ಮುಡಿಗಾಗಿ
ನ್ಯಾಯ ಹೇಳಿ ಯುದ್ದದ ನಂತರವೇ
ಕಟ್ಟುತ್ತೇನೆಂದಳು ಬಾ ಯುದ್ದದಲ್ಲಿ
ರಣಕಾಳಿಯಾಗಿ ಮರೆದು
ಬಂಧು-ಬಾಂಧವ ಒಡಲಕುಡಿ
ಕಳೆದುಕೊಂಡು ರಕ್ತದಣೆ ಹುಲ್ಲುಗಳಡಿಯಲ್ಲಿ
ಮುಡಿಕಟ್ಟಿ ವಿಜಯದ
ನಗೆ ನಗುತ್ತಾ ನಿಂತ
ಸೀರೆ ಮುಡಿದ ಪಾಂಚಾಲಿ ನೀನು
ಎಂದೆಂದಿಗೂ ಬಾ ಹೆಣ್ಣುಗಳನ್ನು
ಹೆಜ್ಜೆ-ಹೆಜ್ಜೆಗೂ ಕಾಡುವ
ತುಂಬು ವ್ಯಕ್ತಿತ್ವದ ಹೆಣ್ಣು ಹುಲಿ[೫೧]

(ಎಂ.ಎಸ್.ವೇದ, ಪುಟ-೧೦, ೨೦೦೩)

ಸೀತೆಯು ಮೃದುವ್ಯಕ್ತಿತ್ವಕ್ಕೆ ವಿರುದ್ಧವಾದವಳೇ ದ್ರೌಪದಿ. ಸೀತೆಗೆ ಪ್ರತಿರೋಧಿಸುವ ಗುಣಗಳಿಲ್ಲ. ಅವಳು ದ್ರೌಪದಿಯ ಈ ಕ್ಷಾತ್ರ ಪ್ರವೃತ್ತಿಯೇ ಮಹಾಭಾರತಕ್ಕೆ ನಾಂದಿ. ಕುಮಾರವ್ಯಾಸ ಇದನ್ನು 'ಸಾಮಾನ್ಯಮೆ ಬಗೆದೆಯೋ ಕೇಶ ಪಾಶ ಪ್ರಪಂಚಂ'

(ಕುಮಾರವ್ಯಾಸ ಭಾರತ, ಕುಮಾರ ವ್ಯಾಸ, ದ್ಯೂತ ಪ್ರಸಂಗ) ಎಂದು ದ್ರೌಪದಿಯ ಕ್ಷಾತ್ರತೇಜವನ್ನು ವರ್ಣಿಸಿದ್ದಾನೆ. ರಾಮ, ಸೀತೆಯನ್ನು ಅಗ್ನಿಪರೀಕ್ಷೆ ಗೊಡ್ಡುವಾಗ ಅಗಸನ ನಿಂದನೆಗೆ ಗುರಿಯಾಗಿ ಕಾಡಿಗೆ ಹೋಗುವಾಗ ಎಲ್ಲಿಯೂ ಶ್ರೀರಾಮನ ಬಗೆಗೆ ಅಸಮಾದಾನ ಗೊಂಡವಳಲ್ಲ. ರಾಮನಲ್ಲಿ ಕರುಣಾಳು ರಾಘವನಲ್ಲಿ ತಪ್ಪಿಲ್ಲವೆಂದೇ ಹೇಳುತ್ತಾಳೆ. ಆದರೆ ದ್ರೌಪದಿಯು ಕ್ಷಾತ್ರ ತೇಜಸ್ಸುವುಳ್ಳವಳು. ಪಾಂಡವರು ಪಗಟೆಯಾಟಕ್ಕೆ ತನ್ನನ್ನು ಸ್ವತ್ತಾಗಿಸಿದ್ದನ್ನು ವಿರೋಧಿಸುತ್ತಾಳೆ.

ಹೇ ಭರತವಂಶ ಕುರಕುಲೋತ್ತಮ
ಧರ್ಮಾಣಯನೆಂಬ ಧರ್ಮಜ
ಧರ್ಮಾರಾಯನೆಂಬ ಹೆಸರು ಹೊತ್ತ ನೀನೇಕೆ
ಅಧರ್ಮಿಗಳೊಡನೆ ಜೂಜಾಡಲು ಹೋದೆ
ನಿನ್ನ ಧರ್ಮವನ್ನು ಪಣಕ್ಕಿಟ್ಟ
ಹಾರ ಕಿರೀಟಗಳನ್ನು ಕೊಟ್ಟಂತೆ ನನ್ನನ್ನು
ಸೊತ್ತು ಎಂದು ತಿಳಿದಿಯೆ
ದುಶ್ಯಾಸನನ ನನ್ನೊಡಿಗೆ ಕೈಯಿಟ್ಟು
ಸೀರೆ ಸೆಳೆಯ ಬಂದರೂ ತಲೆತಗ್ಗಿನ
ಬೆವರು ಸುರಿಸದೆ
ಗಂಡುಗಲಿ ಭೀಮನ ರೋಶಾಗ್ನಿಗೆ
ತುಪ್ಪವಾಗುತ್ತೇನೆ
ಅರ್ಜುನನ ಭತ್ತಳಿಕೆಯ ಬಾಣವಾಗುತ್ತೇನೆ
ಇದು ನಿಜಕ್ಕೂ ನಾನು 'ಅಗ್ನಿಕನ್ಯೆ' ಯಾಗಿದ್ದೇನೆ[೫೨]

(ಲೀಲಾ ಕುಲಕೋಟಿ, ಪುಟ-೯೦, ೧೯೯೨)

ಪ್ರಭುತ್ವವಾದಿ ಧೋರಣೆಯು ಪ್ರಶ್ನಿಸುವ ಇಂತಹ ದ್ರೌಪದಿಯನ್ನು ಬಗ್ಗು ಬಡಿಯದೇ ಇರುವುದಿಲ್ಲ. ದ್ರೌಪದಿಯು ಎಷ್ಟೇ ಕ್ಷಾತ್ರ ತೇಜಸ್ಸುವುಳ್ಳಾಗಿದ್ದರೂ. ಅವಳದು ಅಪ್ಪಟ ಪ್ರೇಮಿ ಐದು ಜನರಿಗೆ ಹಂಚಿಕೊಂಡ ದ್ರೌಪದಿಗೆ ಯಾರೋ ತನ್ನನ್ನು ಪ್ರೀತಿಸಲಾರದೆಂಬ ಅಭದ್ರಬಾವ. ಆಪಾರ ಕ್ಷಾತ್ರ ತೇಜಸ್ಸು ಅನ್ಯಾಯವನ್ನು ಎದುರುಕೊಳ್ಳುವ ತಾಕುತ್ತುಳ್ಳ ದ್ರೌಪದಿ ಐವರ ಪತ್ನಿ. ಐವರ ಪತ್ನಿಯಾದುದಕ್ಕೆ ಕುಂತಿ ಹೆಣ್ಣನ್ನು ಹಣ್ಣೆಂದು ಪರಿಗ್ರಹಿಸಿದೆ ಕೊಟ್ಟರು. ತನ್ನತ್ತೆಯ ಆಜ್ಞೆಗೆ ಕಾಯಾ ವಾಚಾ ನಡೆದ ಧರ್ಮಪತ್ನಿ ಬಲಶಾಲಿಯಾದ ಭೀಮನಲ್ಲಿ ಅತೀವ ಪ್ರೀತಿ ಪಗಡೆಯಾಟದಲ್ಲಿ ತನ್ನನ್ನು ಸ್ವತ್ತೆಂದು ಪರಿಗ್ರಹಿಸಿದ ಪಾಂಡವರನ್ನು ವಸ್ತ್ರಾಪರಹಣ ಸಂದರ್ಭದಲ್ಲಿ ತಲೆತಗ್ಗಿಸಿ ಕುಳಿತ ಪಂಚಪಾಂಡವರನ್ನು ಮೂದಲಿಸಿದರೂ ವನವಾಸದಲ್ಲಿ ಕೈಬಿಡದೆ ಅಪ್ಪಿಕೊಂಡ ಸಾಧ್ವಿ, ಪಾಂಡವರ ವನವಾಸ ಯುದ್ಧ ಎಲ್ಲದರಲ್ಲೂ ಹಿಂದೆ ಇದ್ದು ತನ್ನ ಕಣ್ಣಮುಂದೆ ಸಾಲುಸಾಲಾಗಿ ಮಕ್ಕಳನ್ನು ಕಳೆದುಕೊಂಡ ಮಾತೃ.

ಭೀಮ
ಹುಡುಕಿಕೊಂಡಿಹನು ಹಿಡಿಂಬೆಯನು
ಅರ್ಜುನ
ಚಿತ್ರಾಂಗದೆ ಊಲೂಪಿಯರನು
ಧರ್ಮ
ಸದಾ ಧರ್ಮದಲ್ಲಿ ಮುಳುಗಿಹೆನು
ಚಿಕ್ಕವರು

ದೊಡ್ಡವರ ಅಜ್ಞೆ ಪಾಲಿಸಲು ಕಟ್ಟಿ ಬದ್ದರು ಹೊರತು
ತಮ್ಮ ಸ್ವಾರ್ಥಕ್ಕೆ ನಿನ್ನನ್ನು
ಒತ್ತೆಯಿಟ್ಟಾಗ ನಿನಗಾದ ಗಾಯಕ್ಕೆ
ಔಷಧಿ ಇತ್ತೆ?
ಮೋಸದಲ್ಲಿ ಕೌರವನ ತೊಡೆ
ಮುರಿದಿದ್ದೇನೋ ಸರಿ
ತೃಪ್ತಿಯಾಗಲಿಲ್ಲ ನಿನಗೆ
ಒಂದಿಷ್ಟು ರವಷ್ಟು[೫೩]

(ಭಾರತಿ ಪಾಟೀಲ, ಪುಟ-೨೨ ೧೯೬೯)

ಜಗತ್ತಿನ ಆಗು-ಹೋಗುಗಳಿಗೆಲ್ಲಾ ಹೆಣ್ಣೆ ಕಾರಣವೆಂದು ಆಕೆಯನ್ನು ಸಮಾಜದಲ್ಲಿ ತುಚ್ಛವಾಗಿ ಕಾಣಲಾಗಿದೆ. ಸಾಮಾನ್ಯವಾಗಿ ಮಹಾಕಾವ್ಯವನ್ನೆ ಮುಂದಿಟ್ಟು ರಾಮಾಯಣ ಮಹಾಭಾರತಕ್ಕೆ ಕಾರಣಳೇ ಹೆಣ್ಣು ಎಂದು ಹೆಣ್ಣನ್ನು ದೂಶಿಸುತ್ತಾರೆ. ನಿಜವಾಗಿ ರಾಮಾಯಣ, ಮಹಾಭಾರತದಲ್ಲಿ ಗಂಡಿನ ದೌರ್ಬಲ್ಯದಿಂದ ನಡೆದದ್ದನ್ನು ಹೆಣ್ಣಿನ ಮೇಲೆ ಹಾಕಿದ್ದಾರೆ ಇದು ತಪ್ಪು ಎಂಬುದನ್ನು ಕವಿಯತ್ರಿ 'ತಿದ್ದುಪಡಿ' ಎಂಬ ಕವನದ ಮೂಲಕ ಸಾಬೀತು ಪಡಿಸಿದ್ದಾರೆ. ಕೆಲವೊಂದು ವಿಷಯಗಳನ್ನು ಪ್ರಶ್ನಿಸುವುದರ ಮೂಲಕ ಓದುಗರು ಅದಕ್ಕೆ ಉತ್ತರ ನೀಡುವಂತೆ ಮಾಡಿದ್ದಾರೆ.

ಪಾಂಡವರಿಗೆ ದಾಳಕೊಟ್ಟು ಪಗಡೆ
ಯಾಡಿರೆಂದು ಹೇಳಿಕಳುಹಿಸಕೊಟ್ಟಳೇ
ದ್ರೌಪದಿ[೫೪]

(ಎಂ.ಎಸ್.ವೇದ, ಪುಟ-೩೮, ೨೦೦೩)

ದ್ರೌಪದಿ ಅನುಭವಿಸಿದ ನೋವನ್ನು ಮಹಾಭಾರತದಲ್ಲಿ ಸಮರ್ಪಕವಾಗಿ ಚಿತ್ರಿಸಿಲ್ಲ. ಇದೇ ಪಾತ್ರವನ್ನು ಸ್ತ್ರೀಯೊಬ್ಬಳು ಸೃಷ್ಟಿಸಿದ್ದರೆ ಬಹುಶಃ ನಾಯಕನಿಗಿಂತ ಶ್ರೇಷ್ಠ ಪಾತ್ರ ಅಗಿರುತ್ತಿತ್ತೇನೋ. ಆದರೆ ರಾಮಾಯಣದಲ್ಲಾಗಲೀ ಮಹಾಭಾರತದಲ್ಲಾಗಲಿ ಹೆಣ್ಣನ್ನು ಗೌಣವಾಗಿ ಚಿತ್ರಿಸಿ ನಡೆದ ಕೆಟ್ಟ ಘಟನೆಗಳಿಗೆಲ್ಲಾ ಹೆಣ್ಣೆ? ಕಾರಣಳು ಎನ್ನುವಂತೆ ತಮ್ಮ ಪುರುಷ ಪ್ರಧಾನ ಸಮಾಜವನ್ನು ಎತ್ತಿ ಹಿಡಿದಿದ್ದಾರೆ. ಆದ್ದರಿಂದ ಕವಿಯತ್ರಿ ಈ ರೀತಿಯಲ್ಲೂ ಅನಾಹುತ ಘಟನೆಗಳನ್ನು ಮಾಡಿ ಎಂದವಳು ಹೆಣ್ಣೆ ಅಥವಾ ಗಂಡಸರಿಗೆ ಬುದ್ಧಿ ಇರಲಿಲ್ಲವೇ ಹೆಣ್ಣಿನ ಅಡಿ ಆಳಾಗಿ ಬಾಳುತ್ತಿದ್ದರೆ ತಾವೇ ಆಲೋಚಿಸುವ ಬುದ್ಧಿಶಕ್ತಿ ಇರಲಿಲ್ಲವೇ ಎಂದು ಪ್ರಶ್ನಿಸಿದ್ದಾಳೆ.

ಪ್ರಭುತ್ವತೆ ದ್ರೌಪತಿಯ ಮೇಲೆ ಬೀಳದೇ ಇರಲಿಲ್ಲ. ದ್ರೌಪದಿ ಐವರ ಪತ್ನಿಯಾದದ್ದು ಒಂದು ರೀತಿಯ ರಾಜಕೀಯ ಪ್ರಭುತ್ವವೇ. ಪಂಚಪಾಂಡವರು ಒಗ್ಗಟ್ಟನ್ನು ಒಂದುಗೂಡಿಸಲು ಕುಂತಿಯ ತಂತ್ರವೇ ಇದಾಗಿರಬೇಕು. ಐವರು ಪುತ್ರರು ಇಡೀ ನೂರು ಮಂದಿ ಕೌರವರನ್ನು ಎದುರಿಸಲು ಇರಬೇಕಾಗಿದ್ದು ಮುಖ್ಯವಾಗಿ ಒಗ್ಗಟ್ಟು. ಈ ಒಗ್ಗಟ್ಟು ಸಾಮಾನ್ಯವಾಗಿ ದ್ರೌಪದಿ ಯಿಂದಲೇ ಸಾಧ್ಯವಾಯಿತೆನ್ನಬಹುದು.

ಪಂಚ ಪಾಂಡವರನ್ನು ತನ್ನ ಮುಷ್ಟಿಯಲ್ಲಿ ಇರಿಸಿಕೊಂಡಿದ್ದಳು. ಒಗ್ಗಟ್ಟನ್ನು ಒಂದು ಗೂಡಿಸಲು ಕುಂತಿ ಕಾರಣವಾದರೆ ಅದನ್ನು ಬಹುಕಾಲದವರೆಗೂ ಉಳಿಸಿಕೊಂಡು ಹೋಗಿರುವುದು ದ್ರೌಪದಿಯೇ, ದ್ರೌಪದಿ ಇಡೀ ಮಹಾಭಾರತದಲ್ಲಿ ಪಾಂಡವರನ್ನು ಹುರಿದುಂಬಿಸಿದ್ದು ತನ್ನ ವಸ್ತ್ರಾಪರಹಣ ಕಾರಣ ಕೊಟ್ಟು ಕುರುಕ್ಷೇತ್ರಕ್ಕೆ ಅಣಿಮಾಡಿಸಲು ದ್ರೌಪತಿ ಪ್ರಮುಖ ಪಾತ್ರ ವಹಿಸಿದ್ದರು. ಪಾಂಡವರ ಆತ್ಮಸ್ಥೈರ್ಯ, ಶೂರತ್ವ, ಸಾಧನೆ, ಎಲ್ಲದರಲ್ಲಿಯೂ ಹಿಂದೆ ಇದ್ದವಳು ದ್ರೌಪತಿಯೇ. ಈ ಕಾರಣದಿಂದಲೇ ಒಟ್ಟಾರೆ ದ್ರೌಪದಿಯ ಚಿತ್ರಣ ಇಡೀ ಮಹಾಭಾರತಕ್ಕೊಬ್ಬಳೇ ದ್ರೌಪದಿ ಎಂಬಂತೆ ಇವಳ ಕ್ಷಾತ್ರಪ್ರವೃತ್ತಿ, ಛಲದ ಮನೋಭಾವವಿದ್ದರೂ ಪ್ರಭುತ್ವ ಅವಳನ್ನು ಆಳದೇ ಬಿಟ್ಟಿಲ್ಲ.

ಶಕುಂತಲೆಯ ಪಾತ್ರ ಚಿತ್ರಣ ಮತ್ತು ಪ್ರಭುತ್ವ

ಶಕುಂತಲೆ–ದುಶ್ಯಂತ ಅಮರ ಪ್ರೇಮಿಗಳು. ಪುರಾಣದ ವಿಶ್ಲೇಷಣೆ ಶಕುಂತಲೆ ಕಣ್ವರ ಮಗಳು. ದುಶ್ಯಂತ ರಾಜವಂಶದವನು. ಇಬ್ಬರು ಮೆಚ್ಚಿ ಗಾಂಧರ್ವ ವಿವಾಹವಾದರು. ಶಕುಂತಲೆಯನ್ನು ತುಂಬಿದ ಸಭೆಯಲ್ಲಿ ನಿರಾಕರಿಸಿದ್ದು, ಆಧುನಿಕ ಕವಿಯತ್ರಿಯರ ಪ್ರಕಾರ ದುಶ್ಯಂತನನ್ನು ಪ್ರಭುತ್ವವಾದಿ ಎಂದು ಗುರುತಿಸುತ್ತಾರೆ. ಉಂಗುರದ ನೆನಹು ಮತ್ತು ಕಳವು ಎರಡೂ ಕೂಡ ದುಶ್ಯಂತ ಕಲ್ಪಿಸಿಕೊಂಡ ನೆಪಗಳು..

ನಂಬಿಸಿ ಮಜಾಮಾಡಿ
ಮತ್ತೆ ಕೈ ಕೊಟ್ಟ
ದುಶ್ಯಂತನನ್ನು ನೆನಸುತ್ತಾ
ಕಣ್ಣೀರ ಸುರಿಸುತ್ತಾ
ಕಾಲ ಕಳೆದು
ಮತ್ತೆ ಸೇರಿದೆಯೆಲ್ಲಾ
ಅವನು ತಿರುಗಿ ಬಂದಾಗ
ನೀನೂ ಒಂದು ಶಾಪ ಕೊಡಬಾರದಿತ್ತೆ[೫೫]

(ಭಾಗ್ಯ, ಪುಟ–೫೬ ೧೯೮೧)

ಶಕುಂತಲೆಯನ್ನು ಆಧುನಿಕ ಸ್ತ್ರೀ ಜಗತ್ತು ಕಂಡಿದ್ದು, ಮೋಸ ಹೊಂದಿದ ಹೆಣ್ಣಾಗಿ, ಭಾಗ್ಯ ನೆಲೆ ಮನೆಯವರು ಇದನ್ನು ವಿವರಿಸುತ್ತಾ, ಇಡೀ ಪುಣ್ಯಕಥೆ. ರಾಮಾಯಣದಲ್ಲಿ ಶಾಪ ಕೊಡುವುದು ಕೇವಲ ಗಂಡಿನ ಸೊತ್ತು. ಶಕುಂತಲೆಯೊಂದಿಗೆ ಸುಖಿಸಿ ರಾಜ ತನ್ನ ಪ್ರಭುತ್ವ ಮೆರದಿದ್ದನು. ಕೇವಲ ಒಬ್ಬ ಸಾಮಾನ್ಯ ಆಸೆಬುರುಕ ವ್ಯಕ್ತಿಯಾಗಿ ತೋರಿಸಿಕೊಂಡಿದ್ದ ಪ್ರೇಮಿಸುವುದು ನಂತರದ ಗಾಂಧರ್ವ ವಿವಾಹ, ಮಕ್ಕಳು, ಮಾಮೂಲಿನ ವಿಷಯವವಾದರೂ ನಂತರದಲ್ಲಿ ಆತ ರಾಜ್ಯಕ್ಕೆ ಹೊರಟಾಗ ಆತ ಪ್ರಭುತ್ವವಾದಿ ತನ್ನ ಆಳ್ವಿಕೆಯನ್ನು ಶಕುಂತಲೆ ಒಬ್ಬ ಹೆಣ್ಣು, ಸಾಮಾನ್ಯದವಳೆಂದೇ ಭಾವಿಸುತ್ತಾನೆ. ಪ್ರಭುತ್ವವಾದಿಯಾಗಿಯೇ ಆತ ವರ್ತಿಸುತ್ತಾನೆ. ನಂತರದಲ್ಲಿ ಶಕುಂತಲೆಯ ಗುರುತು ಕಣ್ವರ ಮಗಳು ಅವರ ಶಾಪದ ಭಯ. ಶಕುಂತಲೆಯ ಮಗ ಸರ್ವಧರ್ಮ ಹೀಗೆ ಆತನಿಗೆ ಅಭಿಲಾಶೆಯ ಹಂಬಲ ಅಂತಿಮದಲ್ಲಿ ಶಕುಂತಲೆಯ ಸ್ವೀಕಾರ ಹಲವು ಉಪಯೋಗಗಳ ಪ್ರಯೋಜನಗಳಿರಬಹುದು.

ದಾವಿಸಿ ಬಂದ ದುಶ್ಯಂತ ದೂರ್ವಾಸನ ಶಾಪ
ಉಂಗುರದ ನೆಪ
ಒಡ್ಡಿ ನಿಂತವನ ನೋಡಿ ನಕ್ಕಳು
(ನೋವುಂಡ ನಕ್ಕ ನಗೆ ನಗೆಯಿಲ್ಲ)[೫೬]

(ಹೇಮಪಟ್ಟಣ ಶೆಟ್ಟಿ, ಪುಟ-೧೯೯೮)

ಶಕುಂತಲೆಯ ನಗೆಯಲ್ಲಿ ಪ್ರಭುತ್ವವು ತನ್ನ ಮೇಲೆ ಮಾಡಿದ ಹಲ್ಲೆಯನ್ನು ವ್ಯಂಗೀಕರಿಸುತ್ತಿದೆ. ಶಕುಂತಲೆಯು ನೋವು ನಗುವಾಗಿ ಹೊರಹೊಮ್ಮುತ್ತದೆ.

ಅಪ್ಸರೆಯ ಮಗಳು ಕೂದಲೆಳೆಯಲ್ಲಿ
ಉಂಗುರ ತುದಿಯಲ್ಲಿ
ಗುರುಕುಲದ ಅರಸು ಬೇಟೆಗೆಂದು
ಬಂದವನು ಸೌಂದರ್ಯವನ್ನು ಕಂಡು
ಚಿತ್ರದಲ್ಲಿ ಬರೆದ ಪ್ರತಿಮೆಯಾದಳು
ಹುಡುಗಿ ಶಕುಂತಲೆಗೆ ಬೇರು
ಕಿತ್ತ ಬಾವ
ಚಿಗುರು ಬೆರಳಿಗೆ ಮತ್ತೆ ಉಂಗುರದ ಸಂಭ್ರಮ
ಹಿಮಗಟ್ಟಿದ ಹುಡುಗಿ ಅಲ್ಲಲ್ಲ ಪ್ರೌಢೆ
ತಣ್ಣಗೆ ನುಡಿದಳು ನನಗೆ ಈ ಉಂಗುರದಲ್ಲಿ
ನೆಚ್ಚಿಗೆಯಿಲ್ಲ
ನೋವುಂಡ ಪ್ರೌಡ ಹೆಣ್ಣಿನ ಪ್ರತಿಭಟನೆ ಶಬ್ಧರೂಪ
ರೂಪಿಸಿದ್ದು ಹೆಚ್ಚು ಮೌಲಿಕವಾದುದು[೫೭]

(ಕಮಲಾ ಎಂ.ಆರ್, ಪುಟ-೧೬, ೧೯೯೮)

ಸುಂದರಿಯಾದ ಶಕುಂತಲೆಯನ್ನು ನೋಡುವುದು ಪ್ರೇಮಿಸುವುದು ಸಾಮಾನ್ಯ ಅಂತಃಕರಣ ಒಳ್ಳೆ ಮನುಷ್ಯನ ನಡಾವಳಿಗಳು, ಆದರೆ ರಾಜಧಾನಿಗೆ ಹೋಗಿ ಸಿಂಹಾಸನ ಮೇಲೆ ಕುಳಿತಾಗ ಪ್ರಭುತ್ವ ಅವನನ್ನು ಕಾಡುತ್ತದೆ. ಕಾಡಿನಲ್ಲಿ ಒಬ್ಬ ಸಾಮನ್ಯ ಪ್ರೇಮಿಯೆನಿಸಿದ್ದ ದುಶ್ಯಂತ ನಾಡಿನಲ್ಲಿ ರಾಜನೆಂಬ ಹಣೆಪಟ್ಟಿ ಬದಲಾಗಿ ಅವನ ಸ್ಥಿತಿ-ಗತಿ ಅಂತಸ್ತು ಬದಲಾದವು. ಆಧುನಿಕ ಮಹಿಳಾ ಕವಿಯತ್ರಿಯರ ದೃಷ್ಟಿಯಲ್ಲಿ ಕಣ್ವರ ಶಾಪ ದುಶ್ಯಂತನ ಮರೆವು ಖಂಡಿತ ಕಾರಣವಾಗಿ ಬರಲಿಲ್ಲ. ಇದೆಲ್ಲಾ ದುಶ್ಯಂತನ ಪ್ರಭುತ್ವವೇ ಕಾರಣ ಎನ್ನುತ್ತಾರೆ. ಇವುಗಳನ್ನೆಲ್ಲಾ ತನ್ನ ಕಾವ್ಯದಲ್ಲಿ ನಿರೂಪಿಸಿದ್ದಾಳೆ.

ಅಹಲ್ಯೆಯ ಪಾತ್ರ ಚಿತ್ರಣ ಮತ್ತು ಪುರುಷ ಪ್ರಭುತ್ವ

ಆಹಲ್ಯೆ ಗೌತಮ ಮಹರ್ಷಿಯ ಪತ್ನಿ. ಈಕೆಯು ಬ್ರಹ್ಮನ ಮಾನಸಪುತ್ರಿ, ಈಕೆ ವಿದ್ವಾಂಸ ಭದ್ರಶ್ವನಿಂದ ಮೇನಕೆಯಲ್ಲಿ ಹುಟ್ಟಿದಳು. ಹುಟ್ಟಿನಿಂದ ಚೆಲುವೆ ಗೌತಮನ ಋಷಿಪತ್ನಿಯಾದಳು.ಅಹಲ್ಯೆ ಪಂಚಪತಿವ್ರತೆಯರಲ್ಲಿ ಒಬ್ಬಳು ಗೌತಮನಲ್ಲಿ ಕಂಡ ಆದರ್ಶದ ಹುಡುಕಾಟದ ಹಂಬಲಕ್ಕಿಂತ ಕ್ಷಣಕಾಲ ಇಂದ್ರನೊಂದಿಗೆ ಸುಖಿಸಿದ್ದಕ್ಕೆ ನೂರಾರು ವರ್ಷ ಕಲ್ಲಾಗಿದ್ದ ಅಹಲ್ಯೆ ಹಂಬಲಿಸಿದ್ದು ಶ್ರೀರಾಮನ ಪಾದಸ್ಪರ್ಶ ಮತ್ತು ವಿಮುಕ್ತಿ(ಪುರಾಣ ಭರತಕೋಶ ಯಜ್ಞನಾರಾಯಣ ಉಡುಪ-ಕನ್ನಡ ಪುಸ್ತಕ ಪ್ರಾಧಿಕಾರ-೨೦೦೩).

ಗೌತಮ ಮಹರ್ಷಿ ಪತ್ನಿಯು ಗೌರವಯುತವಾದ ಸ್ಥಾನಕ್ಕೆ ಅಂಟಿಕೊಂಡಿದ್ದು ಅಹಲ್ಯೆ. ಈಕೆಯ ಸೌಂದರ್ಯಕ್ಕೆ ದೇವೆಂದ್ರನು ಮೋಹಗೊಂಡು ಗೌತಮರು ಆಶ್ರಮದಲ್ಲಿಲ್ಲದ್ದರಿಂದ ಆ ಸಮಯದಲ್ಲಿ ಗೌತಮರಂತೆ ಕಪಟವೇಷ ಧರಿಸಿ ಬಂದನು. ಆಕೆಯ ಪಾತಿವ್ರತ್ಯವನ್ನು ಕೆಡಿಸಿದ್ದರಿಂದ ಗೌತಮರು ಇಂದ್ರನಿಗೆ ಸಹಸ್ರಕ್ಷನಾಗುವಂತೆಯೂ ಆಹಲ್ಯೆಗೆ ಶಿಲೆಯಾಗಿ ಬೀಳುವಂತೆಯೂ ಶಾಪವಿತ್ತನು. ಮುಂದೆ ಶಿಲೆಯಾದ ಅಹಲ್ಯೆ ಶ್ರೀರಾಮನ ಪಾದಸ್ಪರ್ಶಕ್ಕೆ ಕಾಯಬೇಕಾಯಿತು. ಅಂತಿಮದಲ್ಲಿ ಶಾಪವಿಮೋಚನೆಯಾಯಿತು. ಅಲ್ಲಿಗೆ ಎಲ್ಲವೂ ಸುಖಾಂತ್ಯವೇ. ಆದರೆ ಅಹಲ್ಯೆಯ ಮನದಾಳದ ನೋವುಗಳನ್ನು ಅವಳ ದಾರಿತಪ್ಪಿದ ಆ ಭಾವಕ್ಕೆ ಇಂತಹ ದೊಡ್ಡ ಶಿಕ್ಷೆಯೆ ಎಂಬ ಪ್ರಶ್ನೆ ಕಾಡುತ್ತದೆ. ಆಧುನಿಕ ಕವಿಯತ್ರಿ ಕಂಡುಕೊಂಡ ಅಹಲ್ಯೆಯ ಭಾವ ಪ್ರತಿಭಟನಾತ್ಮಕವಾದದ್ದು(ಪುರಾಣ ಭರತಕೋಶ ಯಜ್ಞನಾರಾಯಣ ಉಡುಪ-ಕನ್ನಡ ಪುಸ್ತಕ ಪ್ರಾಧಿಕಾರ-೨೦೦೩) ಪುರಾಣ, ಧರ್ಮಶಾಸ್ತ್ರಗಳು ಸಾಮಾನ್ಯವಾಗಿ ಹೆಣ್ಣನ್ನು ರೂಪಿಸಲ್ಪಟ್ಟವು. ಸಹನೆ, ತಾಳ್ಮೆ, ಪ್ರೀತಿ, ಶೀಲ..... ಹೀಗೆ ಒಂದೊಂದೆ ಗುಣಗಳನ್ನು ಹೆಣ್ಣಿಗೆ ಅಲಂಕರಿಸುತ್ತಾ ಹೋದವು. ಪುರಾಣದ ನೆಲೆಯಲ್ಲಿ ಈ ಕಥೆಯ ಸಾರಾಂಶ ಬೋಧಿಸುವುದು ಈ ಮೂಲ ಸಿದ್ಧಾಂತಗಳ ತತ್ವ ಸಿದ್ಧಾಂತಗಳ ಪ್ರಚಾರವೇ. ಇಲ್ಲಿ ಗೌತಮಿಯೆಂಬ ಋಷಿಪತ್ನಿ

ಮೋಹಪರವಶಳಾಗಿ ಇಂದ್ರನನ್ನು ಕೂಡಿದ್ದವಳು. ಆ ಕಾರಣದಿಂದ ಗೌತಮನಿಂದ ಶಾಪಕ್ಕೊಳಗಾದಳು. ಶೀಲಗೆಟ್ಟ ಆಹಲ್ಯೆಯನ್ನು ಹಲವಾರು ವರ್ಷಗಳ ನಂತರ ಶ್ರೀರಾಮನ ಪಾದಸ್ಪರ್ಶದಿಂದ ಹೆಣ್ಣಾದಳು ಎಂಬ ಹೇಳಿಕೆಯನ್ನು ನೀಡುತ್ತದೆ.

ಆದರೆ ಈ ಪುರಾಣಕಥೆ ಧ್ವನ್ಯಾತ್ಮಕವಾಗಿ ಹೇಳಬಯಸುವುದು ಹೆಣ್ಣಿಗೆ ಶೀಲ ಸರ್ವಸ್ವ ಗೌತಮನಿಂದ ಶಾಪ, ಶ್ರೀರಾಮನಿಂದ ಶಾಪ ವಿಮೋಚನೆ, ಕಥೆಯ ಸಾರಾಂಶವೇ ಶೀಲಗೆಟ್ಟ ಆಹಲ್ಯೆಗೆ ತಂದ ಕಟ್ಟುಪಾಡುಗಳು. ಶೀಲದ ಪ್ರಶ್ನೆ ಹೆಣ್ಣಿಗೆ ಸಾಮಾಜಿಕವಾಗಿ ರೂಪಿಸಲ್ಪಟ್ಟಿದ್ದರೂ, ಬಿಟ್ಟರೂ ಆದೂ ಹೆಣ್ಣಿಗೆ ಹುಟ್ಟಿನಿಂದ ಸ್ವೀಕೃತ. ಯಾವ ಹೆಣ್ಣು ಶೀಲದ ಹೊರತಾದ ಯೋಚನೆ ಬರುವುದಿಲ್ಲ. ಆದರೆ ಗಂಡಿಗಿಲ್ಲದ ಶೀಲ ಹೆಣ್ಣಿಗೆ ರೂಪಿಸಿರುವುದು ಅನ್ಯಾಯವೇ. ಇಷ್ಟಕ್ಕೂ ಆಹಲ್ಯೆ ಜಾರಿದ್ದೇಕೆ ಇದರಲ್ಲಿ ಗೌತಮನ ನಡುವಳಿಕೆಯು ಕಾರಣವಿಲ್ಲವೆನ್ನಲಾಗುವುದಿಲ್ಲ.

ಗೌತಮ ಒಬ್ಬ ಋಷಿ ಸದಾ ದೈವತ್ವವನ್ನು ಪಡೆಯಲು ಯತ್ನಿಸುವವನು. ಆತನಿಗೆ ಯಜ್ಞ ಯಾಗಾದಿ ದೇವತೆಗಳನ್ನು ಮೆಚ್ಚಿಸುವುದು, ಹಲವು ವರಗಳ ಮೂಲಕ ಪ್ರಭುತ್ವನಾಗುವುದರ ಯೋಚನೆ ಈ ನಡುವಳಿಕೆಯೇ ಸ್ವಭಾವತಃ. ಸುಂದರಿಯಾದ ಆಹಲ್ಯೆಗೆ ನೋವಿರಬಹುದು. ಈ ಕೊರತೆಯನ್ನು ಇಂದ್ರನ ಮೂಲಕ ನೀಗಿಸಿಕೊಂಡಿರಬೇಕು. ತಪ್ಪು ಮಾಡಿದ್ದಕ್ಕೆ ಕಾರಣಗಳನ್ನು ಕೊಟ್ಟು ಅಹಲ್ಯೆಗೆ ಕಲ್ಲಾಗು ಎಂದು ಶಾಪ ಕೊಟ್ಟಿರುವುದರಲ್ಲಿ ಗೌತಮ ಋಷಿಯ ಪ್ರಭುತ್ವದ ಸಂಕೇತವೇ ಹೊರತು ಬೇರಲ್ಲ.

ಅರೆ ಅವನು ಇಂದ್ರನೆಂದು
ನನಗೆ ಅರಿವಾಗಲೇ ಇಲ್ಲ
ನಿನ್ನಂತೆ ಪ್ರೀತಿಸಿದೆ.... ಗೌತಮ ಎಷ್ಟು
ತ್ವರಿತವಾಗಿ ಶಾಪಕೊಟ್ಟೆಯಲ್ಲ
ನನ್ನ ರೂಪದಲ್ಲಿ ಬಂದು ನಿನ್ನಪ್ಪಿದರೂ
ಸ್ವೀಕರಿಸಿದರೂ ತಪ್ಪಿಲ್ಲವೇ ನಿಮ್ಮ
ನೀತಿಯಲ್ಲಿ?
ಅದರೊಂದು ಅನುಮಾನ
ಆಗ ನಾನೇ ಒಂದು ಶಾಪ ಕೊಟ್ಟಿದ್ದರೆ
ಅದು ನಿನಗೆ ತಟ್ಟುತ್ತಿತ್ತೆ?[೫೮]

(ಮಾದೇವಿ, ಪುಟ-೮೬-೯೭೨)

ಆಹಲ್ಯೆಯ ಈ ಪ್ರಶ್ನೆ ಧ್ವನ್ಯಾತ್ಮಕವಾದ್ದು ಶೀಲದ ಪ್ರಶ್ನೆ ಬರೀ ಹೆಂಗಸರಿಗೆ ಮಾತ್ರ ಸೀಮಿತವೇ? ಋಷಿಗಳಾದವರು ಅಪ್ಸರೆಯೊಡನೆ ಕೂಡಿರುವ ಉದಾಹರಣೆಗಳಿವೆ. ವಿಶ್ವಾಮಿತ್ರ-ಊರ್ವಶಿ, ಪರಾಶರ ಮುನಿ-ಸುಂಗಧಿಯೊಡನೆ ಕೂಡಿದ್ದು ಒಂದು ರೀತಿಯಲ್ಲಿ

ಶೀಲವೆಂಬುದು ಹೆಣ್ಣಿಗೆ ಮಾತ್ರ ಸೀಮಿತವೆಂದೇ ರೂಪಿತವಾಗಿದೆ. ಗೌತಮ ಪೌರುಷದ ಪ್ರಭುತ್ವದ ಪ್ರತಿನಿಧಿ. ಆಹಲ್ಯೆಯಡೆಗೆ ಇದ್ದದ್ದು ಪ್ರಭುತ್ವತೆ ಹಕ್ಕು ಹೊರತು ನಿಜಕ್ಕೂ ಪ್ರೀತಿಸಿದ್ದರೆ ಆತನಲ್ಲಿ ಕ್ಷಮೆಯ ಅಂಶಗಳಿರುತ್ತಿದ್ದವು.

ತಳೆದ ಭಾವನೆಗಳಿಗೆ ಸಂಯಮದ
ಬಂಡೆ ಎಳದು
ಮರುಭೂಮಿಯ ಹೂವಾದ ಆಹಲ್ಯೆ
ಅದೋ ಗಂಡಿಸಿನ ಸ್ವಾರ್ಥ ಕೋಪಕ್ಕೆ ಕಲ್ಲಾಗಿ
ಅನಂತಕಾಲ ತಪಗೈವ ನಿನಗೆ
ಮತ್ತೇಕೆ, ಭಾವ ತಳಮಟ್ಟಿದ ದಮನ
ರಾಮನ ಪಾದಸ್ಪರ್ಶ ಬೇಕಾಯಿತೋ ಅರಿವಾಗುತ್ತಿಲ್ಲ.[೫೯]

(ಪ್ರೇಮಶಿರಿಸಿ, ಪುಟ-೯೯, ೨೦೦೩)

ತಳೆದ ಭಾವನೆಗಳಿಗೆ ಸಂಯಮದ ಬಂಡೆ ಎಳದು ಎನ್ನುವಲ್ಲಿ ಆಹಲ್ಯೆ ಜಾರಿದ್ದಕ್ಕೆ ಕಾರಣಗಳು ಸಿಗುತ್ತವೆ. ಹೆಣ್ಣಾದ ಆಹಲ್ಯೆಗೆ ಅಂತರಿಕವಾಗಿ ಅಡಗಿದ್ದ ಪ್ರೀತಿಯ, ಲೈಂಗಿಕ ಸುಪ್ತ ಭಾವನೆಗಳಿಗೆ ಗೌತಮನೆಂಬ ಮಹರ್ಷಿಯ ಆಲೋಚನೆಯಲ್ಲಿ ಅದು ಲೆಕ್ಕವಿಲ್ಲದಿರಬಹುದು. ಆದರೆ ಅಹಲ್ಯೆಗೆ ಸಂಯಮದ ಬಂಡೆ ತನ್ನ ಭಾವನೆಗಳಿಗೆ ಬಹಳ ಕಾಲ ಎಳೆದುಕೊಳ್ಳಲು ಸಾದ್ಯವಿರಲಿಲ್ಲ. ಆಹಲ್ಯೆಯು ಈ ತೆರನಾದ ಮನೋಭಾವಕ್ಕೆ ಗೌತಮನೇ ಕಾರಣನಾದರೂ ಪುರುಷ ಪ್ರಭುತ್ವ ಆಹಲ್ಯೆ ಜಾರಿದ್ದಕ್ಕೆ ಅವಳ ಲೋಲುಪ ಮನಸೆ ಕಾರಣವೆಂದು ಬೆಟ್ಟು ಮಾಡುತ್ತದೆ.

ಆಹಲ್ಯೆ ನೀನು
ಗಂಡಸರ ಆಹಂಕಾರಕ್ಕೊಂದು ಸಾಕ್ಷಿ
ಯಾಗಿದ್ದೆ
ಆದರೆ ಆಹಲ್ಯೆ
ನೀನು ಕಲ್ಲಿನಿಂದ ಹೆಣ್ಣಾಗಿ ಅರಳಿ
ಮತ್ತೆ ಗೌತಮನ ದಾಸಿಯಾಗಿ
ಏನನ್ನು ಯೋಚಿಸದೇ
ಅವನು ಗುಡಿಸಲು ಹೊಕ್ಕು ಬಿಟ್ಟೆ
ನೀನು ಕಲ್ಲಾಗಿದ್ದಾಗ
ಆಹಲ್ಯೆ ಜೀವಂತವಾಗಿದ್ದೆ
ಮತ್ತೆ ಹೆಣ್ಣಾದಾಗ ಸತ್ತುಹೋದೆ[೬೦]

(ಸರಜೂ ಕಾಟ್ಕರ್, ಪುಟ-೧೦೮ ೧೯೯೧)

ಆಧುನಿಕ ಕನ್ನಡ ಕವಿಯತ್ರಿಯರು ಪುರಾಣಗಳು ಪ್ರತಿಬಿಂಬಿಸುವ ಆದರ್ಶ, ಶೀಲದ ಕಲ್ಪನೆಯನ್ನು ಪ್ರಶ್ನಿಸುತ್ತಾಳೆ. ಶೀಲದ ಕಲ್ಪನೆಯಲ್ಲಿ ದೇಹದ ಮೂಲಭೂತ ಅಗತ್ಯಗಳಲ್ಲಿ ಒಂದಾದ ಕಾಮದ ಹಸಿವನ್ನು ಹಿಂಗಿಸಿಕೊಳ್ಳುವುದನ್ನು ಸಮರ್ಥಿಸುತ್ತಾರೆ. ಕಾಮವು ಮನುಷ್ಯನ ಹಲವು ಕಾಮನೆಗಳಲ್ಲಿ ಇದೂ ಒಂದು. ಇದನ್ನು ಹೆಣ್ಣು ಪಡೆಯಲು ಗಂಡಿಸಿನಷ್ಟೆ ಸ್ವತಂತ್ರಗಳು ಎಂದು ಹೇಳುತ್ತಾಳೆ. ಈ ಕಾರಣದಿಂದಲೇ ಆಹಲ್ಯೆಯ ಕಲ್ಲಾದ ಕಥೆಯನ್ನು ಮಹಿಳಾ ಸಂವೇದನೆಯಲ್ಲಿ ವಿರೋಧಿಸುತ್ತದೆ.

ಆಹಲ್ಯೆ ಇಂದ್ರನನ್ನು ಕೂಡಿದ್ದಕ್ಕೆ, ಅದು ಗೌತಮನ ಪ್ರೀತಿಯ ಕೊರತೆಯೆಂದೇ ಭಾವಿಸುತ್ತಾರೆ. ಈ ಕಾರಣದಿಂದ ಗೌತಮ ಪ್ರಭುತ್ವವನ್ನು ವಿರೋಧಿಸುತ್ತಾರೆ. ಪುರಾಣದಲ್ಲಿ ಆಹಲ್ಯೆಯನ್ನು ಪ್ರತಿಬಿಂಬಿಸುವುದರ ರೀತಿಗೂ ಆಧುನಿಕ ಕವಿ ಪ್ರತಿಬಿಂಬಿಸುವುದರ ರೀತಿಗೂ ವ್ಯತ್ಯಾಸಗಳಿವೆ. ಗೌತಮಿಯ ಸಾವಿರಾರು ವರ್ಷದ ಕಲ್ಲಾದ ಕಥೆ ಆಧುನಿಕ ಕವಿಯತ್ರಿಯರು ಅವಳ ಹೆಣ್ತನಕ್ಕೆ ಆದ ಅಪಮಾನವೆಂದು ಭಾವಿಸುತ್ತದೆ. ಜೊತೆಗೆ ಗೌತಮನ ಪುರುಷತ್ವದ ಪ್ರಭುತ್ವ ಆಹಲ್ಯೆಯ ಮೇಲೆ ಮಾಡಿದ ಪ್ರಭುತ್ವದ ಅನಾಚಾರವೆಂದೇ ಗ್ರಹಿಸುತ್ತಾರೆ.

ಸೀತೆಯ–ಪಾತ್ರ ಚಿತ್ರಣ ಮತ್ತು ಪ್ರಭುತ್ವತೆ

ಸಾಧ್ವಿ, ಪಾತಿವ್ರತ್ಯ, ಪತಿಷ್ಠೆಗೆ ಭಾರತೀಯ ಪುರಾಣ, ಕಾವ್ಯಗಳು ಉದಾರಣೆಯಾಗಿ ಕೊಡುವುದು ಸೀತೆಯನ್ನು, ಪತ್ನಿಯ ಆದರ್ಶತೆಗೆ ಸೀತೆ ಮಾತೆಯಂತಹ ಹೆಂಡತಿ ಎನ್ನುವ ಉದಾಹರಣೆ ಆದರ್ಶವಾಗಿ ನಿಲ್ಲುತ್ತದೆ. ಶ್ರೀರಾಮನಂತಹ ಪತಿಯಿರಲಿ ಎಂಬುದು ಹೆಂಗಳೆಯರ ಆದರ್ಶ. ಆದರೆ ಆಧುನಿಕ ಕನ್ನಡ ಕವಿಯತ್ರಿಯರ ಪ್ರಕಾರ ಶ್ರೀರಾಮನದು ಪ್ರಭುತ್ವವಾದಿ ಮನುಷ್ಯ ಸೀತೆಯ ಜೀವನವನ್ನು ತನ್ನ ಪ್ರಭುತ್ವದ ಸಾಂಕೇತವಾಗಿ ಬಳಸಿಕೊಂಡನು. ಅವಳ ಪ್ರತಿಯೊಂದು ಜೀವನದ ಘಟನೆ ಆಧುನಿಕ ಕವಿಯತ್ರಿಯರ ಪ್ರಕಾರ ಪ್ರಭುತ್ವದ ಸಂಕೇತವಾಗಿ ಶ್ರೀರಾಮ ಕಂಡುಬಂದರೆ ಸೀತೆ ಸಾಧ್ವಿಯಾಗುತ್ತಾಳೆ.

ಶ್ರೀರಾಮ ಸೀತೆಯನ್ನು ಧರ್ಮಕ್ಕೆ ಕಟ್ಟುಬಿದ್ದು, ಪಿತೃಭಕ್ತಿಗೆ ಸೋತು ತನ್ನ ಸೀತೆಯನ್ನು ಕಾಡಿಗೆ ಕಳಿಸಿದನು. ಸೀತೆ ಪಾವಿತ್ರಳೆಂಬ ಭಾವನೆ ರಾಮನಿಗಿದ್ದರೂ ಸೀತೆ, ತನ್ನ ಪ್ರಭುತ್ವಕ್ಕಿಂತ ದೊಡ್ಡವಳೇನಲ್ಲ. ರಾಜ್ಯ, ಯುದ್ಧ, ರಾಜವಂಶ, ರಾಜಪುತ್ರ, ರಾಮನಿಗೆ ಮೊದಲನೇ ಅಗತ್ಯವಾಗಿ ಕಂಡರೆ ಸೀತೆ ಎರಡನೆ ಹಂತದ ಅಗತ್ಯವಾಗಿ ಕಾಣುತ್ತಾಳೆ. ಕಾಡಿಗಟ್ಟಿದ ಶ್ರೀರಾಮ ಇಲ್ಲಿ ಆದರ್ಶದ ವ್ಯಕ್ತಿಯಾಗುತ್ತಾನೆ ಹೊರತು ಶೋಷಕನಾಗುವುದಿಲ್ಲ.

ಹೆಣ್ತನದ ಅಭಿಶಾಪ ಹೊತ್ತು
ರಾಮನ ಪೌರಷಕ್ಕೆ ಸಂಕೇತವಾಗಿ ನನ್ನ ಪ್ರವೇಶ

ತುಂಬಿ ನಿಂತ ಯೌವನ ಸ್ವಪ್ನಗಳ
ಮೆಟ್ಟಿಲಾಗಿ ಪೇರಿಸಿಟ್ಟ ಹಂಬಲ ಆಕಾಂಕ್ಷೆಗಳು
ದಂತ ಗೋಪುರದಲ್ಲಿ ಮುಲುಗುಟ್ಟಿದವು[೮]

(ಪದ್ಮಾಶೇಖರ್-ಪುಟ-೫೬, ೧೯೮೩)

ಸೀತೆಯ ನಿರಂತರ ಕಷ್ಟಗಳು ಪಡುಪಾಟಲಿಗೆ ಸಂಪೂರ್ಣವಾಗಿ ಸೀತೆಯ ಹೆಣ್ತನವೇ ಕಾರಣವೆಂದು ಕವಿಯತ್ರಿ ಗ್ರಹಿಸುತ್ತಾಳೆ. ಪುರುಷ ಪ್ರಭುತ್ವವು ಅವಳ ಮೌನಕ್ಕೆ ಕಾರಣವಾಯಿತು. ಶ್ರೀರಾಮನ ನೇರವಾದ ತಪ್ಪುಗಳಿಗೆ ಸೀತೆಯ ನೇರವಾದ ಪ್ರತಿಭಟನೆ ಇಲ್ಲಿ ಸಾಧ್ಯವಿಲ್ಲ. ಇದಕ್ಕೆ ಕಾರಣವೆಂದರೆ ಸಮಾಜದಲ್ಲಿನ ಪುರುಷ ಸಂಬಂಧಿತವಾದ ಧೋರಣೆಗಳು ಸೀತೆಯ ಸ್ಥಾನಮಾನವನ್ನು ಸಂಕುಚಿತಗೊಳಿಸುತ್ತದೆ. ಗರ್ಭವತಿಯಾದ ಸೀತೆ ಕಾಡಿಗಟ್ಟಿದ ರಾಮ ಇಲ್ಲಿ ಆದರ್ಶದ ಹಾದಿಯಲ್ಲಿರುತ್ತಾಳೆ. ಸೀತೆಯ ವನವಾಸ, ನಂತರದ ಲಂಕೆಯವಾಸ ಆನಂತದಲ್ಲಿ ಆಗಸನ ಮಾತಿಗೆ ಕಟ್ಟುಬಿದ್ದು ಕಾಡಿಗಟ್ಟಿದ ನಂತರದಲ್ಲಿ ವನವಾಸ ಸಾಲಾಗಿ ಒಂದೇ ಸಮನೆ ಕಷ್ಟದ ಹಾದಿಯಲ್ಲೇ ಕಳೆದ ಸೀತೆ ಪ್ರಭುತ್ವದ ದಬ್ಬಾಳಿಕೆಗೆ ಸಿಲುಕಿ ಹೋಗಿದ್ದಳು. ಇಷ್ಟೆಲ್ಲಾ ಕಷ್ಟಗಳನ್ನು ಸ್ವೀಕರಿಸಿದ ಸೀತೆಯ ಸಂದರ್ಭಗಳು ಪುರಾಣಗಳಲ್ಲಿ ಪಾತಿವ್ರತ್ಯ ಪ್ರಕಾಶಕ್ಕೆ ಹಿಂಬುಕೊಡುವಂತೆ ಚಿತ್ರಿಸಿದೆಯೇ ಹೊರತು ಅವಳ ವೈಯಕ್ತಿಕ ತರದಲ್ಲಿ ಶೋಷಣೆ ಎನಿಸದು.

ಶ್ರೀರಾಮನಿಂದ ಕಾಡಿಗಟ್ಟಿಸಿಕೊಂಡ ಸೀತೆ ಅಂತಿಮವಾಗಿ ಹೇಳುವುದು 'ಪುಣ್ಯವಂತ ಶ್ರೀರಾಮನದು ಏನು ತಪ್ಪಿಲ್ಲ' ಎಂದು. ಒಂದು ರೀತಿಯಲ್ಲಿ ಪುರಾಣಗಳು ಪುರುಷನ ಪ್ರಭುತ್ವವನ್ನೆ ಹೇಳುವಲ್ಲಿ ಮಾಡಿದ ತಪ್ಪನ್ನು ತಿಪ್ಪೆ ಸಾರಿಸುವಲ್ಲಿ ಸಿದ್ದಾಂತವನ್ನು ಹೇಳುತ್ತವೆ.

ಕರುಣಾಳು ರಾಘವನಲ್ಲಿ ತಪ್ಪಿಲ್ಲ
ಎಂದತ್ತಳು ಮಾತೆ ಸೀತೆ ಅಲ್ಲವೇನೆ
ಈ ರಾಮಣ್ಣರು ಹೀಗೆ ಕಣೇ
ನಿಜಸತಿಗೆ ಕಲ್ಲಾಗುವ ಇವರು ಪರಸತಿಗೆ
ಬೆಲ್ಲವಾಗುತ್ತಾರೆ[೬]

(ಶಶಿಕಲಾ ವೀರಯ್ಯಸ್ವಾಮಿ-ಪುಟ-೧೦, ೧೯೯೦)

ಶ್ರೀರಾಮ ರಾಜ್ಯ ತ್ಯಜಿಸಿ ಕಾಡಿಗೆ ಹೊರಟಾಗ ಆತನಲ್ಲಿ ಪಿತೃಭಕ್ತಿ ವಿಜೃಂಭಿಸುತ್ತದೆ. ಶ್ರೀರಾಮನ ಜೊತೆಯಾಗಿ ರಾಜಕುಮಾರಿಯ ಅಷ್ಟೈಶ್ವರ್ಯವನ್ನು ತ್ಯಜಿಸಿ ಹೊರಟ ಸೀತೆ ಅಷ್ಟು ಮುಖ್ಯವೆನಿಸುವುದಿಲ್ಲ. ಮೋಹದ ಮಾಯಾಜಿಂಕೆಗೆ ಸೋತು ರಾವಣನ ಕೈಸೆರೆಯಾದ ಸೀತೆ ಲಂಕೆಯಲ್ಲಿ ನರಳಿದ ಸೀತೆಗಿಂತ ಅವಳು ಬಿಡಿಸಿದ ಶ್ರೀರಾಮ ನಾಯಕನಾಗುತ್ತಾನೆ.

ಸಾಮಾನ್ಯ ಮನುಷ್ಯನಂತೆ ಅಗಸನ ಮಾತಿಗೆ ಕಿವಿಕೊಟ್ಟು ಶ್ರೀರಾಮ ಸೀತೆಯನ್ನು ಕಾಡಿಗಟ್ಟಿದ ಶ್ರೀರಾಮ ಕೆಳಮಟ್ಟದ ಮನುಷ್ಯನಾಗುವುದಿಲ್ಲ. ಬದಲಾಗಿ ಅವನು ಪ್ರಜಾಪಾಲಕನಾಗಿ ಆದರ್ಶದ ವ್ಯಕ್ತಿಯಾಗುತ್ತದೆ. ಕಾಡಿಗೆ ಸೀತೆಯನ್ನು ಕಳುಹಿಸಿದ ನಂತರ ಬಂಗಾರದ ಸೀತೆಯನ್ನು (ಸುವರ್ಣ ಸೀತೆ) ಪಕ್ಕದಲ್ಲಿ ಕುಳ್ಳರಿಸಿಕೊಂಡು ಯಾಗ ಯಜ್ಞಾದಿಗಳನ್ನು ಪೂರೈಸಿದ ರಾಮ ವಿರಹಿಯಾಗುವಂತೆ ಪುರಾಣಗಳು ಪ್ರತಿಬಿಂಬಿಸಿದೆ. ರಾಮ ಆದರ್ಶ ಪ್ರಜಾಪಾಲಕನಾದರೆ, ಸೀತೆ ತನ್ನಿಬ್ಬರು ಮಕ್ಕಳನ್ನು ಉನ್ನತ ಮಟ್ಟಕ್ಕೆ ತಂದು ಉತ್ತಮ, ಕ್ಷತ್ರಿಯ ವಂಶಕ್ಕೆ ಕೊಡುಗೆಯಾಗಿ ಕೊಡುತ್ತಾಳೆ. ಇಷ್ಟೆಲ್ಲಾ ಆದರೂ ಸೀತೆ ಗುರುತಿಸಿಕೊಳ್ಳುವುದು ಶ್ರೀರಾಮನ ಸಾಧನೆಗಳ ಮೂಲಕವೇ ಹೊರತು ತನ್ನತನದ ಮೂಲಕವಲ್ಲ.

ಭೂತಾಯಿ ಜನಕ ತಂದೆ
ಮರ್ಯಾದಾ ಪುರುಷೋತ್ತಮ ಮಡದಿ
ಪತಿಭಕ್ತ ಪತಿವ್ರತಾ ಮೌಲ್ಯ
ಅವನು ಹೆಜ್ಜೆಯಿಟ್ಟಲ್ಲಿ ಇವಳ ತಲೆ
ಕಾಡು ಮೇಡಲೆದು ರಾವಣನ ಬಂಧಿ
ಅವನಾಸೆಯ ಅಶೋಕವನದಲ್ಲಿ
ಶೋಕವೇ ಮೂರ್ತಿ.
ಎರಡು ದಿಗ್ಗಜಗಳ ಪ್ರತಿಷ್ಠೆಯ ಪಾತಿವ್ರತ್ಯೆಗೆ
ಒಂದು ವೇದಿಕೆ ಪತಿಯ ಮನ ಕಾಡಿದ
ಶಂಕೆಗೆ ಬೇಡವೆನ್ನುವ ಬೆಂಕಿಗೆ
ಬಿದ್ದು ಕೂಡ
ಚಂದನದ ಗೊಂಬೆ ರಘುಕುಲತಿಲಕ
ಎಲ್ಲಾ ಹೊತಿಟ್ಟು ಬಂದಿದ್ದ ತನ್ನತನದ
ಉಡುಗೆ ತೊಡುಗೆ[೬೩]

(ಎಂ.ಎಸ್.ವೇದ, ಪುಟ–೧೬, ೨೦೦೩)

ಎನ್ನುವಲ್ಲಿ 'ತನ್ನತನ' ಎಂಬುದು ಸೀತೆ ಮರೆತ ಭಾವವಲ್ಲ. ಅದು ಪ್ರಭುತ್ವ ಕಸಿದುಕೊಂಡ ಭಾವವಾಗಿದೆ. ಪ್ರಭುತ್ವ ಅವಳನ್ನು ಸೀತೆಯ ನೋವು ಹಿಂಸೆ ನರಳಾಟಗಳನ್ನು ಅವಳ ಪಾತಿವ್ರತ್ಯಕ್ಕಾಗಿ ಮಾಡಿದವುಗಳೆಂಬಂತೆ ಚಿತ್ರಿತವಾಗಿದೆ.

ಸೀತೆ
ನಾನು ಸೀತೆ
ಪಂಚವ್ರತೆಯರಲ್ಲಿ ಪ್ರಖ್ಯಾತಳು[೬೪]

(ಪದ್ಮಾಶೇಖರ್, ಪುಟ–೮೦, ೧೯೮೩)

ತನ್ನತನದ ಅರಿವು ಎಂದರೆ ತಾನು ಗೆದ್ದ ಸಾಮ್ರಾಜ್ಯವನ್ನು ಮಾಡಿದ ಯಾಗ-ಯಾಜ್ಞಾದಿಗಳಿಗೆ ಎದೆತಟ್ಟಿ ಹೇಳುವ ಪ್ರಕ್ರಿಯೆಯಿಲ್ಲ. ತನ್ನತನ ಎನ್ನುವಲ್ಲಿ ಸ್ವಾಭಿಮಾನ ಸಾಧನೆಗಳಿರುತ್ತದೆ. ಕವಿಯತ್ರಿ ಸೀತೆಯೂ ಸ್ವಗತದಲ್ಲಿ ಹೇಳುತ್ತಿರುವುದು ಬಹುಶಃ ಪತಿವ್ರತೆ ಎಂಬಲ್ಲಿ ಪ್ರಸಿದ್ಧಳೇ ಹೊರತು ಯಾವುದೇ ರೀತಿಯ ಸ್ತ್ರೀತ್ವ ವರ್ಚಸ್ಸು ಕಂಡುಬರುವುದಿಲ್ಲ ಎಂದು ವಿಡಂಬಿಸಿ ಹೇಳಿದಂತಿದೆ.

ಸೀತೆಯ ಪಾತಿವ್ರತ್ಯ ಗೊತ್ತಾದ ಸತ್ಯ. ರಾಮನಿಗೆ ಗೊತ್ತಾದ ಸತ್ಯ. ಆದರೂ ಅಗ್ನಿಪರೀಕ್ಷೆಗೆ ಸೀತೆಯನ್ನೊಡ್ಡಿದ್ದು ಸ್ವಂತದ ಅನುಮಾನದ ಪರಿಹಾರಕ್ಕಾಗಿ ಅಲ್ಲ. ಜಗತ್ತಿಗೆ ತನ್ನ ಹೆಂಡತಿಯ ಪಾತಿವ್ರತ್ಯ ಸಾರುವುದಕ್ಕಾಗಿ. ಇಲ್ಲಿ ರಾಮ ನಿಜಕ್ಕೂ ಪ್ರಭುತ್ವವಾದಿಯಾಗುತ್ತಾನೆ. ತಪ್ಪಿಲ್ಲದ ಸೀತೆಯನ್ನು ಅಗ್ನಿಗೊಡ್ಡುವಾಗ ಆತನ ಮನಸ್ಸು ಕರಗುವುದಿಲ್ಲ.

> ಅಶೋಕ ವನದಲ್ಲಿ ಕುಳಿತ
> ಇಡೀ ಒಂದು ವರುಷ
> ಒಂದೇ ಸೀರೆಯಲ್ಲಿ
> ಕೊಳೆತು ನಾರುತ್ತಿದ್ದ
> ಸೀತೆಯು ಕೊಳೆಯಲ್ಲ
> ನೀರಲ್ಲಿ ತೊಳೆದರೆ
> ಹೋಗುವುದಿಲ್ಲ ವೆಂದು
> ಅವಳನ್ನು ಸೀರೆಯ ಸಮೇತ
> ಬೆಂಕಿಯೊಳಗೆ ಅದ್ದಿ ತೆಗೆದಿರಬೇಕು
> ರಾಮ! ರಾಮ![೨೨]

(ಶಾಂತ ಜಗದೀಶ್, ಪುಟ-೯೦, ೧೯೯೯)

ಪ್ರಭುತ್ವವಾದಿಯಾದ ರಾಮನಿಗೆ ರಾವಣ ಸೆರೆಯಲ್ಲಿದ್ದ ಸೀತೆ ಒಂದು ಅತ್ಯಮೂಲ್ಯವಾದ ವಸ್ತು. ತನ್ನ ಕ್ಷತ್ರಿಯತೆ ತನ್ನ ರಾಜವಂಶಕ್ಕೆ ಸೀತೆಯ ಬಿಡುಗಡೆ ಒಂದು ಸವಾಲು. ಅವಳನ್ನು ಕರೆತರುವುದೆಂದರೆ ತನ್ನೆಲ್ಲಾ ಕ್ಷತ್ರಿಯ ಪ್ರತಿಷ್ಠೆ ಉಳಿಸಿಕೊಂಡಂತೆಯೇ, ಲಂಕೆಗೆ ಸೇತುವೆ ಕಟ್ಟಿ ಯುದ್ಧ ಮಾಡಿ ದಶವತಾರಿ ರಾವಣನ ಕೊಂದ ರಾಮ ಜಗತ್ತಿನ ಕಣ್ಣಿನಲ್ಲಿ ವೀರ ನೆನೆಸುತ್ತಾನೆ. ಇಷ್ಟೆಲ್ಲಾ ಸೀತೆಗಾಗಿಯೆ ರಾಮಶ್ರಮ ಪಟ್ಟಿದ್ದು ನಿಜವಾದರೆ ಸೀತೆಯ ಅಗ್ನಿಪರೀಕ್ಷೆ ಒಂದು ನಾಟಕವಾಗುತ್ತದೆ. ಅಗಸನ ಮಾತಿಗೆ ಬೆಲೆಕೊಟ್ಟು ಸೀತೆಯನ್ನು ಕಾಡಿಗಟ್ಟಿದ ರಾಮನಿಗೆ ಅಗ್ನಿಪರೀಕ್ಷೆ ಸೀತೆಗಾಗಿ ನಂಬಲಿಲ್ಲವೇಕೆ? ಗರ್ಭವತಿ ಸೀತೆಯನ್ನು ಕಾಡಿಗಟ್ಟಿದಾಗ ಪ್ರಭುತ್ವವಾದಿ ದೋರಣೆ ಎದ್ದುಕಾಣುತ್ತದೆ.

ಸೀತೆಯ ಅಗ್ನಿಪರೀಕ್ಷೆ ಮಾಡಿದರೇನಂತೆ
ಶ್ರೀರಾಮನಲ್ಲಿದ್ದ ಪಿಶಾಚಿ
ಅಗ್ನಿಪ್ರವೇಶ ಮಾಡಲೇ ಇಲ್ಲ
ಮತ್ತೆ ಅವ ತನ್ನ ಅಟ್ಟಹಾಸ
ಮೆರದೋ ಕೊನೆಗೂ
ಅಸಂಬದ್ಧ ಸರ್ಪಗಳ ಹುಡುಕಿ
ಅವಳನ್ನು ಕಾಡಿಗಟ್ಟಿತು
ತಪ್ಪು ಯಾರದೋ? ಶಿಕ್ಷೆ
ಮಾತ್ರ ಸೀತೆಗೆ
ಅವಳ ವನವಾಸ ಮಾತ್ರ ತಪ್ಪಲಿಲ್ಲ[೬೬]

(ಕಾಂತ ದತ್ತಾತ್ರೇಯ, ಪುಟ-೨೦, ೧೯೯೯)

ಇಷ್ಟೆಲ್ಲಾ ಕಷ್ಟಗಳನ್ನು ಹೊತ್ತ ಸೀತೆ ಅವಳಿಗೆ ಶ್ರೀರಾಮನನ್ನೆ ವಿರೋಧಿಸುವ ಗುಣ ಸೀತೆಯಲ್ಲಿರಲಿಲ್ಲವೆ. ಅಂತಿಮದಲ್ಲಿ ಮಕ್ಕಳನ್ನು ಶ್ರೀರಾಮನಿಗೊಪ್ಪಿಸಿ ಭೂಮಿಗಿಳಿದ ಸೀತೆ ಒಂದು ರೀತಿಯ ಬಂಡಾಯವೆನಿಸಿದರೂ ಅಲ್ಲಿಯ ಹೆಣ್ತನದ ಕರ್ತವ್ಯದ ಪ್ರಜ್ಞೆಯಿಂದ ಹೊರಬಂದಿಲ್ಲ. ವನವಾಸ ಅಗ್ನಿಪ್ರವೇಶ, ಕಾನನವಾಸ ನಿರಂತರವಾಗಿ ಕಾಡಿದ ಸೀತೆಗೆ ಯಾವ ಹಂತದಲ್ಲೂ ವಿರೋಧಿಸುವ ಗುಣ ಸೀತೆಯಲ್ಲಿ ಇರಲಿಲ್ಲವೇಕೆ ಇದೇ ಪುರಾಣದಲ್ಲಿ ರಾಮನನ್ನು ಖಂಡಿಸಿದ ಸನ್ನಿವೇಶಗಳೇ ಇರಲಿಲ್ಲವೇಕೆ?

ಅಂತಿಮದಲ್ಲಿ ರಾಮನನ್ನು ತೊರೆದು ಹೋದವಳೆಂದು ಹೇಳಿದರೂ ಅಂತಿಮದಲ್ಲಾದರೂ ತನ್ನ ಮೇಲಾಗುವ ಸಂಕಷ್ಟಗಳಲ್ಲಿ ರಾಮನಲ್ಲಿ ನ್ಯಾಯ ಕೇಳಲಿಲ್ಲವೇಕೆ.

ಅಪ್ಪ ಜನಕ ಕಲಿಸಿದ ಅಕ್ಷರವಿತ್ತು
ಸಾಕವ್ವೆಯರ ಹೇಳಿಕೊಟ್ಟ ಹಾಡ ಮೇಲಿತ್ತು
ಸುತ್ತಮುತ್ತಾ ತಾಡಪತ್ರ ಚೆಲ್ಲಿತ್ತು.
ಯಾಕೆ ಸುಮ್ಮನೇ ಕುಳತೀ ಸೀತೆ ನೀನು[೬೭]

(ಡಿ. ವಿಜಯ, ಪುಟ-೪೮, ೨೦೦೧)

ಎನ್ನುವಲ್ಲಿ ಸೀತೆಯ ಅಸಹಾಯಕತೆ ಎನ್ನುವುದಕ್ಕಿಂತ ಪ್ರಭುತ್ವತೆ ಎನ್ನುವುದು ಇಲ್ಲಿ ಸರಳ ವಾಗಿ ಕಾರ್ಯವೆಸಗಿದೆ ಎನ್ನುಬಹುದು.

ಅಂತೂ ಅಗ್ನಿ ಪರೀಕ್ಷೆ ಮಾಡಿ ಮಾನ ಕಾಪಾಡಿಕೊಂಡವನು
ನೀನು
ಕೊನೆಗೂ ಮರ್ಯಾದೆಗೊಂದು ಮಹಲು ಕಟ್ಟಿ
ಮಕ್ಕಳನ್ನು ನಿನಗೆ ಬಿಟ್ಟು ಹಿಂದಿರುಗಿಯೂ

ನೋಡದೆ
ತಾಯಿಮಡಿಲ ಹೊಕ್ಕವಳು ತವರಿನ ಒಡಲಿಗೆ
ಜೋತು ಬಿದ್ದವಳು೬೮

(ಮಾದವಿ ಬಂಡಾರಿ, ಪುಟ-೧೨, ೧೯೯೭)

ಅಂತಿಮ ನಿರ್ಧಾರ ಅವಳ ದೃಢತೆಯನ್ನು ವಿರೋಧವನ್ನು ಹೇಳಿದರೂ ಅವಳ ಮೇಲೆ ಪ್ರಭುತ್ವವಾದಿ ನೆಲೆ ಅವಳನ್ನು ನಡೆಸಿಕೊಂಡ ರೀತಿಯನ್ನು ಹೇಳುತ್ತದೆ. ಹೀಗೆ ಪ್ರಬುತ್ವವೆಂಬುದು ಒಂದು ಶೋಷಣೆಯಾಗಿ ಕೊಡುಬಂದರೂ, ಪುರಾಣಗಳು ಇವುಗಳನ್ನೆಲ್ಲಾ ಆದರ್ಶ, ಧಾರ್ಮಿಕತೆ, ಅವತಾರಗಳ ಹೆಸರಿನಲ್ಲಿ ಮುಚ್ಚಿಹಾಕಿವೆ.

ಟಿಪ್ಪಣಿಗಳು

೧. ಸುಧಾ ಹರೀಶ್, ನಾದನಿನಾಧ, ಚಿನ್ಮಯಿ ಪ್ರಕಾಶನ, ಬೆಂಗಳೂರು, ೧೯೯೬,

೨. ಶಾಂತ ಜಗದೀಶ್, ಮೌಲ್ಯ, ಭಾವಸಂಪದ ಪ್ರಕಾಶನ, ಬೆಂಗಳೂರು, ೧೯೯೯,

೩. ಬಿ.ಟಿ.ಲಲಿತಾನಾಯಕ್, ಇದೇ ಕೂಗು ಮತ್ತೆ ಮತ್ತೆ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೯೦

೪. ಭಾಗ್ಯ, ಸುಳ್ಳಿನಾಚೆಯ ಸತ್ಯ, ನೆಲೆಮನೆ ಪ್ರಕಾಶನ, ಮೈಸೂರು, ೧೯೮೧

೫. ಕಾಂತದತ್ತಾತ್ರೇಯ, ಈ ಶತಮಾನದ ಕವಿಯತ್ರಿಯರು, ಚಿನ್ಮಯಿ ಪ್ರಕಾಶನ, ಬೆಂಗಳೂರು, ೧೯೯೬

೬. ಸುಮಿತ್ರಾ ಎಲ್.ಜಿ. ಕಾವ್ಯ ಕಾವೇರಿ, ಲಿಖಿತ ಪ್ರಕಾಶನ, ಬೆಂಗಳೂರು, ೧೯೯೦

೭. ಗಿರಿಜಾಶಾಸ್ತ್ರೀ, ಹೆಣ್ಣೊಬ್ಬಳ ಧ್ವನಿ, ಸಂಹವನ ಪ್ರಕಾಶನ, ಬೆಂಗಳೂರು, ೧೯೯೫

೮. ಡಿ. ವಿಜಯಾ, ಕನ್ನಡ ಸಾಹಿತ್ಯ ಮತ್ತು ಮಹಿಳೆ, ಸಾಹಿತ್ಯ ಅಕಾಡಮಿ, ಬೆಂಗಳೂರು, ೨೦೦೬

೯. ಎಂ.ಎಸ್. ವೇದ, ದ್ರೌಪತಿ ಪ್ರಲಾಪ (ಬಿಳಲುಗಳು), ಅಭಿರುಚಿ ಪ್ರಕಾಶನ, ೧೯೮೯.

೧೦. ಸುಕನ್ಯಾ ಮಾರುತಿ, ನಾನು ನನ್ನವರು, ಸಂಗ್ರಾಮ ಪ್ರಕಾಶನ, ಧಾರವಾಡ, ೧೯೮೫

೧೧. ಅನುಸೂಯ ಎಂ.ಕೆ. ಅಂತರಂಗದ ಹೆಜ್ಜೆ, ತೃಪ್ತಿ ಪ್ರಕಾಶನ, ಬೆಂಗಳೂರು, ೨೦೦೦.

೧೨. ಭಾಗ್ಯ ಸುಳ್ಳಿನಾಚೆಯ ಸತ್ಯ, ನೆಲೆಮನೆ ಪ್ರಕಾಶನ ಮೈಸೂರು, ೧೯೮೧

೧೩. ಸರಸ್ವತಿಗೌಡ, ದ್ರೌಪತಿ ಸ್ವಗತ ನೆಲೆಬಯಲು, ಸೀಮೆ ಪ್ರಕಾಶನ, ಚನ್ನಪಟ್ಟಣ, ೧೯೮೦,

೧೪. ಎಂ.ವೇದ, ಬಿಳಲುಗಳು, ದೇವಿ ಪ್ರಕಾಶನ, ಮೈಸೂರು, ೧೯೮೭.

೧೫. ಇಂದಿರಾ ಹೆಗಡೆ, ದ್ರೌಪತಿಯರು, ರಾಘವೇಂದ್ರ ಪ್ರಕಾಶನ, ಬೆಂಗಳೂರು, ೧೯೮೫.

೧೬. ಪಾರ್ವತಿದೇವಿ ಹೆಗಡೆ, ಮಾಣಿ ಪುಷ್ಪ, ವಿದ್ಯಾನಂದ ಪ್ರಕಾಶನ, ೨೦೦೧

೧೭. ಸುಕನ್ಯಾ ಮಾರುತಿ, ಪಂಚಾಗ್ನಿ ಮದ್ಯೆ, ಸಂಗ್ರಾಮ ಪ್ರಕಾಶನ, ಧಾರವಾಡ, ೧೯೮೫

೧೮. ಶೋಭ ಹಳಬೆ, ಪುರಾಣ ಜೀವನ (ಆಹಲ್ಯಾವಿಲಾಸ) ದೀಪ್ತಿ ಪ್ರಕಾಶನ, ಬೆಂಗಳೂರು, ೧೯೮೯.

೧೯. ಭಾಗ್ಯ, ಸುಳ್ಳಿನಾಚೆಯ ಸತ್ಯ, ನೆಲೆಮನೆ ಪ್ರಕಾಶನ, ಮೈಸೂರು, ೧೯೯೧

೨೦. ಸುಕನ್ಯ ಮಾರುತಿ, ನಾನು ನನ್ನವರು, ಸಂಗ್ರಾಮ ಪ್ರಕಾಶನ, ಧಾರವಾಡ, ೧೯೮೫

೨೧. ತಾರಣಿ ಯು.ರಾವ್, ಕಲ್ಲಾದಳು ಊರ್ಮಿಳೆ, ಭತ್ತೇರೇಶ ಪ್ರಕಾಶನ, ಕಲುಬುರ್ಗಿ, ೧೯೯೯

೨೨. ಎಂ.ಆರ್.ಕಮಲ, ಶಕುಂತಲೋಪಾಖ್ಯಾನ, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧

೨೩. ಎಂ.ಎಸ್.ವೇದ, ಗಂಗೋತ್ರಿಯಲ್ಲಿ, ದೇವಿ ಪ್ರಕಾಶನ, ಮೈಸೂರು, ೧೯೯೮

೨೪. ಎಂ.ಎಸ್.ವೇದ ಗಂಗೋತ್ರಿಯಲ್ಲಿ, ದೇವಿ ಪ್ರಕಾಶನ, ಮೈಸೂರು, ೧೯೯೮

೨೫. ವೈದೇವಿ, ಬಿಂದಿಬಿಂದಿಗೆ, ಕನ್ನಡ ಸಂಘ, ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೯೩

೨೬. ಪ್ರತಿಭಾನಂದ ಕುಮಾರ್, ಈತನಕ, ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೮೮

೨೭. ಪ್ರೇಮಭಟ, ಗಂಗಾಳದಲೊಂದು ಗೂಡು, ಪ್ರೇಮಸಾಯಿ ಪ್ರಕಾಶನ, ಬೆಂಗಳೂರು, ೧೯೯೮

೨೮. ಪ್ರೇಮಭಟ, ಗಂಗಾಳದಲೊಂದು ಗೂಡು, ಪ್ರೇಮಸಾಯಿ ಪ್ರಕಾಶನ, ಬೆಂಗಳೂರು, ೧೯೯೮

೨೯. ಹೆಚ್.ಎಲ್.ಪುಷ್ಪ, ಅಮೃತಮತಿಯ ಸ್ವಗತ, ಅನ್ವೇಷನ ಪ್ರಕಾಶನ, ರಾಯಚೂರು, ೧೯೯೨

೩೦. ಪ್ರೇಮಾಭಟ್, ಸೂತ್ರದಾರಿಯ ಲೋಕತತ್ವ, ಪ್ರೇಮಸಾಯಿ ಪ್ರಕಾಶನ, ಬೆಂಗಳೂರು, ೧೯೯೮

೩೧. ಎಂ.ಎಸ್.ವೇದ, ಗಂಗೋತ್ರಿಯಲ್ಲಿ, ದೇವಿ ಪ್ರಕಾಶನ ಪ್ರಕಾಶನ, ಮೈಸೂರು, ೧೯೮೭

೩೨. ವಿಜಯಾದೆಬ್ಬೆ, ಪರಂಪರೆ, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೮.

೩೩. ಬಾ.ಹ.ರಮಾಕುಮಾರಿ, ಅಂತರಗದ ಹಾಡು, ಸಂಸ್ಕೃತಿ ಪ್ರಕಾಶನ, ೧೯೯೯

೩೪. ಶಾಂತಜಗದೀಶ್, ಮೌಲ್ಯ, ಭಾವಸಂಪದ, ಬೆಂಗಳೂರು, ೧೯೮೧

೩೫. ಟಿ.ಸಿ.ಪೂರ್ಣಿಮಾ, ಹಾದಿಬದಿಯ ಹದಿಬದಿಧರ್ಮ, ಲಿಪಿಪ್ರಕಾಶನ, ಬೆಂಗಳೂರು, ೧೯೯೨.

೩೬. ಪ್ರತಿಭಾನಂದಕುಮಾರ್, ಈತನಕ, ಕನ್ನಡ ಸಂಘ, ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೮೮

೩೭. ಹೆಚ್.ಎಸ್.ಮುಕ್ತಾಯಕ್ಕ ನಾವು ಪತಿವ್ರತೆಯರಲ್ಲ, ಪ್ರಶಾಂತ ಪ್ರಕಾಶನ, ರಾಯಚೂರು, ೧೯೮೩

೩೮. ಪದ್ಮಾಶೇಖರ್, ಹಕ್ಕಿ ಹರೆಯ, ಪತ್ರಿಕಾ ಪ್ರಕಾಶನ, ಬೆಂಗಳೂರು, ೧೯೯೮

೩೯. ಪದ್ಮಾಶೇಖರ್, ಹಕ್ಕಿ ಹರೆಯ ಪತ್ರಿಕಾ ಪ್ರಕಾಶನ, ಬೆಂಗಳೂರು, ೧೯೯೮

೪೦. ಇಂದಿರಾ ಹೆಗಡೆ, ದ್ರೌಪದಿಯರು, ರಾಘೇವೇಂದ್ರ ಪ್ರಕಾಶನ, ಅಂಕೋಲಾ, ೨೦೦೧

೪೧. ನಿರಾಜಿ, ಪ್ರಸ್ತುತತೆ, ವಿದ್ಯಾನಂದ ಪ್ರಕಾಶನ, ಮೈಸೂರು, ೨೦೦೨

೪೨. ಶಶಿಕಲಾವೀರಯ್ಯಸ್ವಾಮಿ, ಗುಬ್ಬಿಮನಿ, ಸಂವೇದನಾ ಪ್ರಕಾಶನ, ಬೆಂಗಳೂರು, ೧೯೭೯

೪೩. ಸರೋಜಿನಿ, ಸಸ್ಯಶ್ಯಾಮಲ, ಶ್ರೀಜಗದ್ಗುರು ಪ್ರಕಾಶನ, ಮೂರುಸಾವಿರ ಮಠ, ಧಾರವಾಡ, ೧೯೯೦

೪೪. ಬಿ.ಟಿ.ಲಲಿತನಾಯಕ್, ದಲಿತ ಬಂಡಾಯ ಬದಲಾವಣೆಯ ಆಶಯ ಮತ್ತು ಸ್ತ್ರೀ, ಭಾವಸಂಪದ ಪ್ರಕಾಶನ, ಬೆಂಗಳೂರು, ೧೯೯೯

೪೫. ಮಾದೇವಿ, ಅಂತರಾಳದ ಬೆಕ್ಕುಗಳು, ರಾಘವೇಂದ್ರ ಪ್ರಕಾಶನ, ಅಂಕೋಲ, ೧೯೮೧

೪೬. ಡಾ.ಪ್ರಭಾವತಿ ಎಸ್.ಎನ್. ಉಳಿದಿದ್ದು ಆಕಾಶ, ಸಂವೇದನೆ ಪ್ರಕಾಶನ, ಬೆಂಗಳೂರು, ೧೯೯೯

೪೭. ಕಮಲಾ ಕೆ.ಆರ್.(ಶಕುಂತಲಾಲೋಪಾಖ್ಯಾನ), ವರ್ತಮಾನ, ಚೈತ್ರ ಪ್ರಕಾಶನ, ೧೯೮೭ ಮೈಸೂರು.

೪೮. ಎಮ್.ಜಿ.ರತ್ನಕಾಳೇಗೌಡ, ಕಾವ್ಯನಿಧಿ, ತೃಪ್ತಿ ಪ್ರಕಾಶನ, ಬೆಂಗಳೂರು, ೧೯೯೯

೪೯. ರಶ್ಮಿ ಟಿ.ಎಸ್., ಅಂತರಾಳ, ದೀಪ್ತಿ ಪ್ರಕಾಶನ, ಚಿಂಚೋಳಿ, ೧೯೯೬
೫೦. ಸುಕನ್ಯಾಮಾರುತಿ, ಪಂಚಾಗ್ನಿಯ ಮಧ್ಯೆ, ಚಿನ್ಮಯಿ ಪ್ರಕಾಶನ, ಬೆಂಗಳೂರು, ೧೯೮೨
೫೧. ಎಂ.ಎಸ್.ವೇದ, ಗಂಗೋತ್ರಿಯಲ್ಲಿ(ಬಿಳಲುಗಳು), ದೇವಿ ಪ್ರಕಾಶನ ಮೈಸೂರು, ೧೯೮೭
೫೨. ಸರೋಜನಿ ಮಹಿಷಿ, ಈ ಶತಮಾನದ ಕವಿಯತ್ರಿಯರು, ಚಿನ್ಮಯಿ ಪ್ರಕಾಶನ, ಮೈಸೂರು, ೧೯೯೯
೫೩. ಭಾರತಿ ಪಾಟೀಲ, ಅಕ್ಕಕೇಳವ್ವ, ನೆಲೆಮನೆ ಪ್ರಕಾಶನ, ಸಿಂದಗಿ, ೧೯೮೯
೫೪. ಎಂ.ಎಸ್.ವೇದ, ಗಂಗೋತ್ರಿಯಲ್ಲಿ(ಬಿಳಲುಗಳು), ದೇವಿ ಪ್ರಕಾಶನ, ಮೈಸೂರು, ೧೯೮೭
೫೫. ಭಾಗ್ಯ, ಸುಳ್ಳಿನಾಚೆಯ ಸತ್ಯ, ನೆಲಮನೆ ಪ್ರಕಾಶನ, ಮೈಸೂರು, ೧೯೮೧
೫೬. ಹೇಮಪಟ್ಟಣಶೆಟ್ಟಿ, ಹೊಸ ಹಾಡು, ಅನನ್ಯ ಪ್ರಕಾಶನ, ಧಾರವಾಡ, ೧೯೮೬
೫೭. ಕಮಲಾ ಎಂ.ಆರ್., ಶಕುಂತಲಾ, ವರ್ತಮಾನ ಚೈತ್ರ ಪ್ರಕಾಶನ, ಬೆಂಗಳೂರು, ೧೯೯೮
೫೮. ಮಾದೇವಿ, ಅಂತರಾಳದ ಬಿಕ್ಕುಗಳು, ರಾಘವೇಂದ್ರ ಪ್ರಕಾಶನ, ಅಂಕೋಲಾ, ೧೯೮೧
೪೯. ಪ್ರೇಮ ಸಿರಸಿ, ಅಹಲ್ಯಾ ವಿಲಾಸ, ಅಭಿರುಚಿ ಪ್ರಕಾಶನ, ಬೆಂಗಳೂರು, ೨೦೦೩
೬೦. ಸರಜೂ ಕಾಟರ್, ಅನ್ವೇಷಣೆ, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೧
೬೧. ಪದ್ಮಾಶೇಖರ್, ಹಕ್ಕಿಯ ಹರೆಯ, ಪಲ್ಲವಿ ಪ್ರಕಾಶನ, ಮಂಡ್ಯ, ೧೯೮೯
೬೨. ಶಶಿಕಲಾ ವೀರಯ್ಯಸ್ವಾಮಿ, ಹೇಗೆ ಹೇಳಲಿ ಗೆಳತಿ, ನೆಲೆಮನೆ ಪ್ರಕಾಶನ, ಬೆಂಗಳೂರು, ೧೯೯೦
೬೩. ಎಂ.ಎಸ್.ವೇದ, ಗಂಗೋತ್ರಿಯಲ್ಲಿ(ಬಿಳಲುಗಳು), ದೇವಿ ಪ್ರಕಾಶನ, ಮೈಸೂರು, ೧೯೮೭.
೬೪. ಪದ್ಮಾಶೇಖರ್, ಹಕ್ಕಿಯ ಹರೆಯ, ಪಲ್ಲವಿ ಪ್ರಕಾಶನ, ಮಂಡ್ಯ, ೧೯೮೯
೬೫. ಶಾಂತ ಜಗದೀಶ್, ಮೌಲ್ಯ ಭಾವಸಂಪದ ಪ್ರಕಾಶನ, ಬೆಂಗಳೂರು, ೧೯೯೯
೬೬. ಕಾಂತ ದತ್ತಾತ್ರೇಯ, ಸೀತೆಯ ಕೊರಗು, ಚಿನ್ಮಯಿ ಪ್ರಕಾಶನ, ಬೆಂಗಳೂರು, ೧೯೯೯
೬೭. ದಿ.ವಿಜಯ, ತಿರುಗಿನಿಂತ ಪ್ರಶ್ನೆ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧
೬೮. ಮಾಧವಿ ಭಂಡಾರಿ, ಕಟ್ಟುವುದು ಬಲುಕಷ್ಟ, ವರ್ತಮಾನ ಪ್ರಕಾಶನ, ಬೆಂಗಳೂರು, ೧೯೯೭

ಅಧ್ಯಾಯ ೧೦

ಉಪಸಂಹಾರ

೧೦

ಉಪಸಂಹಾರ

೧೫೦೦ ವರ್ಷಗಳಷ್ಟು ಇತಿಹಾಸ ಹೊಂದಿರುವ ಕನ್ನಡ ಕಾವ್ಯದಲ್ಲಿ ಹೆಣ್ಣಿನ ಸೇರ್ಪಡಿಕೆಯ ಸಮಯವನ್ನು ಗುರುತಿಸಲು ಹೊರಟಾಗ ಬೆರಳೆಣಿಕೆಯಷ್ಟು ಕವಿಯತ್ರಿಯರು ಮಾತ್ರ ಸಿಗುತ್ತಾರೆ. ಕಡಿಮೆ ಸಂಖ್ಯೆಯ ಈ ಸೇರ್ಪಡಿಕೆಯು ಪ್ರಬಂಧದ ಆದಿಯಾದಿಂದಲೂ ಚರ್ಚಿಸಿದಂತೆ ಸಾಮಾಜದ ಸ್ತ್ರೀ ಮೌಲ್ಯಗಳು, ಕಟ್ಟುಪಾಡುಗಳು, ಪುರಾಣಗಳ ಪಾತಿವ್ರತ್ಯ ಕಲ್ಪನೆ ಅಕ್ಷರಭ್ಯಾಸದ ವಂಚನೆ ಹೀಗೆ ಒಟ್ಟಾರೆ ಸ್ತ್ರೀ ಅಕ್ಷರಲೋಕಕ್ಕೆ ಕಾವ್ಯ ಪ್ರಪಂಚಕ್ಕೆ ಕಾಲಿಡಲು ತಡವಾಗಿದ್ದು ಈ ಕಾರಣದಿಂದಲೇ ಎನ್ನಬಹುದು.

ಕಾವ್ಯ ತನ್ನದೇ ಆದ ಹೊಸತನವನ್ನು ತಾದದ್ಯತ್ಮಕತೆ ಹೊಂದಿದೆ. ಮಹಿಳಾ ಸಂವೇದನೆಯ ಎಲ್ಲಾ ಧೋರಣೆ, ಸಾಧ್ಯತೆಗಳನ್ನು ಕನ್ನಡದ ಇತರೆ ಸಾಮಾಜಿಕ ಪ್ರಕಾರಗಳಾದ ಕತೆ, ಕಾದಂಬರಿ, ನಾಟಕ, ಲಲಿತ ಪ್ರಬಂಧ ಇವುಗಳಿಗಿಂತ ಹೆಚ್ಚು ಪ್ರಚಲಿತವಾಗಿ ಮೂಡಿಸಿದ್ದು ಕಾವ್ಯವೇ. ಕನ್ನಡ ಸಾಹಿತ್ಯದ ಒಂದು ಮೂಲದ ಜನರ ಧೋರಣೆಯ ಪ್ರಕಾರ ಕಥೆ, ಕಾದಂಬರಿ ಹೆಚ್ಚು ಜನಪ್ರಿಯ ಮಾಧ್ಯಮ. ಅಲ್ಲವೇ, ಹೌದು ಎನ್ನುವುದಕ್ಕಿಂತ, ಜನಪ್ರಿಯತೆಯೇ ಮೌಲ್ಯ ನಿರ್ಧರಿಸುವ ಆಳತೆಗೋಲೆ ಎಂಬುದು ಪ್ರಶ್ನೆ.

ಆರಂಭದ ಕತೆ, ಕಾದಂಬರಿ, ಜನಪ್ರಿಯ, ಧೋರಣೆಗಳು ಹೆಚ್ಚು ಜನಪ್ರಿಯವಾದವು. ಕಾವ್ಯ ಮೊದಲಿನಿಂದಲೂ ನಿಂತ ನೀರಲ್ಲ. ಕತೆ, ಕಾದಂಬರಿಗಳು ಸಮಸ್ಯೆಗಳಿಗೆ ಸಿಲುಕಿದರೆ ಕಾವ್ಯ ಆರಂಭದಿಂದ ಇಂದಿನವರೆಗೂ ಹೊಸತನ ಮೂಡಿಸಿದೆ. ಪ್ರತಿಯೊಬ್ಬ ಹೊಸ ಕವಿಯತ್ರಿಯರಲ್ಲೂ ಹೊಸಕವಿತೆ ಮೂಡಿ ಬೇರೆ ಕವಿಯತ್ರಿಗಿಂತ ಬಿನ್ನವಾಗುತ್ತದೆ.

ಹೂಸತನವೇ ಕವಿತೆಯ ಜೀವಾಳ ನೂರು ವಿಷಯವನ್ನು ಒಂದು ಸಾಲಿನಲ್ಲಿ, ಒಂದು ವಾಕ್ಯದಲ್ಲಿ ಹೇಳುವ ತಾಕತ್ತು ಇರುವುದು ಕವನದಲ್ಲಿ ಮಾತ್ರವೆ.

ಕಾವ್ಯವು ಸ್ರೀವಾದಿ ನಿಲುವಿಗೆ ಅಂಟಿಕೊಂಡಿದ್ದರೂ, ಆ ನಿಲುವು ಅನುಭವವೇದ್ಯವಾದರಿಂದ ಅವು ಹೆಚ್ಚು ಸ್ಪಷ್ಟ ಸುಂದರ ಮತ್ತು ಹೊಸದೆನಿಸುತ್ತದೆ. ಶತಮಾನಗಳಿಂದ ತಿಂದ

ನೋವುಗಳಿಗೆ ವೇದಿಕೆಯಾಗಿ ಕಾವ್ಯ ನಿಲ್ಲುತ್ತದೆ. ಕೆಲವು ಹಂತದಲ್ಲಿ ಸಂಕೋಚದಿಂದ, ಕೆಲವೊಮ್ಮೆ ನಿರ್ಭಿಡೆಯಿಂದ ಇನ್ನು ಕೆಲವು ಕಡೆ ಹೆಚ್ಚುಗಾರಿಕೆಯಿಂದ ಹೇಳಲಾಗಿದೆ.

ಕನ್ನಡ ಕಾವ್ಯ ಪರೋಕ್ಷವಾಗಿ ಸ್ತ್ರೀಮಯವಾಗಿದೆ. ಇದುವರೆಗೂ ನೋಡದ ತಮ್ಮ ಅಂತರಂಗದ ಎಲ್ಲಾ ಸ್ತರಗಳನ್ನು ಹೊರಗೆಳೆದು ಎಳೆ - ಎಳೆಯಾಗಿ ಬಿಡಿಸಿ ಇಡುತ್ತಿದ್ದಾರೆ ಎಂಬ ಮಾತು ಹೆಚ್ಚು ವಾಸ್ತವವಾಗಿದೆ. ಪುರುಷ ಕಾವ್ಯಕ್ಕಿಂತ ಮಹಿಳಾ ಕಾವ್ಯದಲ್ಲಿ ಹೆಚ್ಚು ಪ್ರಭುದ್ಧ ಮಾನವಾಗಿದೆ. ಕನ್ನಡ ಕಾವ್ಯ ಮಹಿಳೆಯರ ಸೊತ್ತಾಗಿದೆ ಎಂಬುದು ನಿಜವಾಗುತ್ತದೆ.

ಅಧ್ಯಯನದ ವಿಧಾನಗಳು

ಪ್ರತಿಯೊಂದು ಸಂಶೋಧನೆಯ ಯಶಸ್ಸು ಅಂತಿಮವಾಗಿ ಅದು ವಿಧಿ-ವಿಧಾನವನ್ನು ಅವಲಂಬಿಸಿರುತ್ತದೆ. ಚಿಂತನಾ, ಮಂಥನ ಮಂಡಿಸುವಿಕೆ ಹೀಗೆ ಹಲವು ಹಂತಗಳನ್ನು ದಾಟಿರಬಹುದು. ಪ್ರಬಂಧಕ್ಕೆ ಅಂತಿಮವಾಗಿ ತಳಪಾಯದ ರೀತಿಯಲ್ಲಿ ಬಿಗಿದಿಟ್ಟಿರುವುದು ಅಧ್ಯಯನ ವಿಧಿ-ವಿಧಾಗಳು. ಪ್ರಸ್ತುತ ಪ್ರಬಂಧದಲ್ಲಿ ಬಳಸಿರುವ ವಿಧಿ-ವಿಧಾನಗಳೆಂದರೆ

೧. ಮಹಿಳಾ ಸಂವೇದನೆಯಲ್ಲಿ ಮಹಿಳಾ ಕಾವ್ಯವನ್ನು ನೋಡಲಾಗಿದೆ.

೨. ಹಲವು ಧ್ವನಿ ಸಾಧ್ಯತೆಯನ್ನು ಒಳಗೊಂಡಿರುವ ಕಾವ್ಯದಲ್ಲಿ ಒಂದು ಸಾಧ್ಯತೆ ಕುರಿತು (ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ) ಹೇಳಲಾಗಿದೆ.

೩. 'ಆದರ್ಶ' ಎಂಬ ಪದವನ್ನು ವೈಯಕ್ತಿಕತೆಯಿಂದಾಗಲಿ, ವಿದ್ವಾಂಸ ಸೃಷ್ಟಿಯಿಂದ ಅರ್ಥೈಸಿಲ್ಲ. ಮಹಿಳಾ ಸಂವೇಧನೆಯ ಅನ್ವಯದಾರಿತವಾಗಿ ಅರ್ಥೈಸಲಾಗಿದೆ.

೪. ಸಮೀಕ್ಷೆಯು ಧೀರ್ಘವಾದ್ದರಿಂದ ವಿಸ್ತಾರವಾದ ಮಹಿಳಾ ಕಾವ್ಯವನ್ನು ಮೊಟಕುಗೊಳಿಸಿ ಆಧುನಿಕ ಮಹಿಳಾ ಕಾವ್ಯ (ಸ್ವಾತಂತ್ರ್ಯ ನಂತರದ ಕಾಲಮಾನವನ್ನು)ಗಣನೆಗೆ ತೆಗೆದುಕೊಳ್ಳಲಾಗಿದೆ.

೫.. ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ'ದ ಪುರುಷನ ಹುಡುಕುವಿಕೆಯಲ್ಲಿ ಸಂಶೋಧನೆಗೆ ತೊಡಗಿದ ನನಗೆ ಆದರ್ಶ ಪುರುಷ ವಿಶ್ಲೇಷಣೆ ನೇರವಾಗಿ ದೊರಕಿಲ್ಲ. ಆತನ ನಕರಾತ್ಮಕ ವಿಶ್ಲೇಷಣೆ ಮೂಲಕ ಕವಿಯತ್ರಿ ಬಯಸುವ ಆದರ್ಶ ಹುಡುಕಲಾಗಿದೆ.

ಸ್ತ್ರೀ ವಾದಿಪರಿಕರಗಳ ಮೂಲಕ ಮಹಿಳಾ ಕಾವ್ಯವನ್ನು ಪ್ರತಿಬಿಂಬಿಸುವುದು ಈ ಪ್ರಬಂದಧ ಮೂಲ ಉದ್ದೇಶವಾಗಿದೆ. ಮಹಿಳಾವಾದ, ಸ್ತ್ರೀವಾದಗಳು ಕೋರ್ಟು ವಾದಗಳ ನೆಲೆಯಲೆಷ್ಟೆ ಅಲ್ಲ ಅವು ವಾಸ್ತವವು ಹೌದು. ಮಹಿಳಾ ಸಂವೇಧನೆಯ ಎಲ್ಲಾ ಮೂಲಾಂಶಗಳನ್ನು ಆಧುನಿಕ ಮಹಿಳಾ ಕಾವ್ಯ ಒಳಗೊಂಡಿರುವುದರಿಂದ ಇಲ್ಲಿ ಆದರ್ಶ

ಪುರುಷನನ್ನು ಮಹಿಳಾ ಸಂವೇಧನೆಯ ನೆಲೆಗಟ್ಟಿನಲ್ಲಿ ಗುರುತಿಸಲಾಗುತ್ತದೆ. ಇದರಡಿಯಲ್ಲಿ ಕಾವ್ಯಗಳನ್ನು ಚರ್ಚಿಸಲಾಗಿದೆ. ಮಹಿಳಾ ಸಂವೇದನೆಯ ಎಲ್ಲಾ ಧೋರಣೆಗಳು, ಸಿದ್ಧಾಂತಗಳು ಈ ಚೌಕಟ್ಟಿನಲ್ಲಿ ಬರುತ್ತದೆ. ಆಧುನಿಕ ಮಹಿಳಾ ಕಾವ್ಯದ ಎಲ್ಲಾ ಲಕ್ಷಣಗಳು ಮಹಿಳಾ ಸಂವೇದನೆಗೆ ಹತ್ತಿರವಾಗುತ್ತದೆ.

ಇದೇ ರೀತಿಯಲ್ಲಿ ಇನ್ನೊಂದು ಚರ್ಚಿತ ವಿಷಯವೆಂದರೆ ಪ್ರತಿಯೊಂದು ಸಾಹಿತ್ಯ ಪ್ರಕಾರ ಯಾವುದಿರಲಿ ತನ್ನ ಕಾಲದ ಸಂಘರ್ಷವನ್ನು ಗಮನಿಸದೇ ಬೆಳೆಯಲು ಸಾದ್ಯವಿಲ್ಲ ಏಕೆಂದರೆ ಬೆಳಗೆರೆ ಜಾನಕಮ್ಮನಿಂದ ಹಿಡಿದು ಪ್ರತಿಬಾ ನಂದಕುಮಾರ್‌ವರೆಗೆ ಒಂದೊಂದು ಬದಲಾದ ನಿಲುವುಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಈ ರೀತಿಯ ದೋರಣೆಗಳು ಆದರ್ಶ ಪುರುಷ ನಿರಂತರವಾಗಿ ಕಾಲದಿಂದ ಕಾಲಕ್ಕೆ ಬದಲಾಗಲು ಸಾಧ್ಯವಾಗುತ್ತಗೆ ಎನ್ನುಬಹುದು.

ಬೆಳೆಗೆರೆ ಜಾನಕಮ್ಮ ಧೋರಣೆ ಗಮನಿಸಿದಾಗ ಹೆಣ್ತನ – ಕಾವ್ಯವನ್ನು ಎತ್ತರಕ್ಕೇರಿಸಿ, ಗಿಡವೆಂದು ಬಗೆದೆಯೋ ಹೆಣ್ಣು ಜನ್ಮದ ಒಡಲ ಫಲಗಳನ್ನು ಸೃಜಿಸುವುದಕೆ (ಚಂಡಶಾಸ), ಎನ್ನುವ ದೋರಣೆ ಮೂಲಕ ಆಧಿಕಾಲದ ದೋರಣೆಯನ್ನು ಪ್ರಶ್ನಿಸುವ ದಿಟ್ಟತನ ತೋರಿದರೆ ಆ ಕವಿಯತ್ರಿ ಹಲವೊಮ್ಮೆ 'ಪಾದ ತೊಳೆದು ಕುಡಿಯನ್ನುವ ತೀರ್ಥವನ್ನು ನಿಮ್ಮ ಮುಖಕ್ಕೆರಚಿ ಬೆವರು ಸುರಿಸಿ ದುಡಿದು ಬದುಕುತ್ತೇನೆ' ಎನ್ನುವಲ್ಲಿ, ಇದೇ ವ್ಯವಸ್ಥೆಯನ್ನು ದಿಕ್ಕರಿಸಿ ತಾನೇ ಸ್ವಂತ ದಾರಿಯಲ್ಲಿ ನಡೆಯುವ ಅವಳ ದೋರಣೆ ಆರಂಭದ ಕವಿಯತ್ರಿಗಿಂತ ಇಂದಿನ ಕವಿಯತ್ರಿ ಹೇಗೆ ಬಿನ್ನ ಎನ್ನುವುದನ್ನು ನೋಡಬಹುದು.

ಇದಕ್ಕೆ ಕಾರಣ ಆರಂಭದ ಕವಿಯತ್ರಿಯರು ಬದುಕಿದ ರೀತಿ ಅವಳ ಸಮಾಜದ ಕಟ್ಟುಪಾಡು ಅವಳಿಗೆ ದೊರಕುವ ಸಾಮಾಜಿಕ ಮಟ್ಟ ಎಲ್ಲವೂ ಕೂಡ ಅವಳ ಕಾವ್ಯದಲ್ಲಿ ಅವಳು ಚಿತ್ರಿಸುವ ಆದರ್ಶ ಪುರುಷನಲ್ಲಿ ಚಿತ್ರತವಾಗುತ್ತದೆ. ಈ ಕಾರಣದಿಂದ ಬೆಳಗೆರೆ ಜಾನಕಮ್ಮ ಸೃಷ್ಟಿಸಿದ ಪುರುಷ ನಕಾರಾತ್ಮಕವಾಗಿ ಸ್ತ್ರೀಯ ತಾಯ್ತನ ಪಾಲನೆಯೇ ಜೀವನದ ಪ್ರಮುಖ ಧ್ಯೇಯ ಎಂಬ ಮಾತನ್ನು ವಿರೋಧಿಸಿದಳೇ ಹೊರತು ತಾಯ್ತನವನ್ನು ತಪ್ಪೆಂದು ಹೇಳಲಿಲ್ಲ. ತಾಯ್ತನ, ಗಂಡ ಸಂಸಾರದ ಪರದಿ ವರ್ತುಲದಿಂದ ಅವಳು ಹೊರಬರಲು ಸಾಧ್ಯವಿಲ್ಲ. ಆದರೆ ಆ ಮಹಿಳೆ ಅವಳ ವಿದ್ಯಾಬ್ಯಾಸ ಗಂಡಸಿನ ಹೊರತಾದ ಸ್ವಾತಂತ್ರ್ಯ ಜೀವನ, ಅವಳಿಗೆ ಆತ್ಮಸ್ಥೈರ್ಯ ತುಂಬಿ ಕೊಟ್ಟಿದೆ. ತಾನು ಸ್ವತಂತ್ರವಾಗಿ ಸಮಾಜದಲ್ಲಿ ಬದುಕುವ ಅವಳ ನಿಲುವು ಆರ್ಥಿಕ ಸಲಬತೆಯನ್ನು ಗುರುತಿಸುತ್ತದೆ. ಈ ಕಾರಣದಿಂದ

ಆಧುನಿಕ ಕವಿಯತ್ರಿರ ಕವಿತೆಗಳಲ್ಲಿ ಅವಳ ಆತ್ಮಸ್ಥೈರ್ಯ ಸ್ಪಷ್ಟವಾದ ಪುರುಷ ವಿರೋಧಿ ನಿಲುವನ್ನು ಕಾಣಬಹುದು.

ಮಹಿಳಾ ಕಾವ್ಯ ಕೇವಲ ಮಹಿಳೆಯನ್ನು ಮಾತ್ರ ಕುರಿತದ್ದಾಗಿರದೆ, ಹಲವು ಸಂವೇದನೆಗಳುನ್ನು ಒಳಗೊಂಡಿರುವಂತದ್ದು ಹಲವು ಧ್ವನಿ ಸಾದ್ಯತೆಯನ್ನು ಒಳಗೊಂಡಿರುವ ಕಾವ್ಯದಲಿ ಒಂದು ಧ್ವನಿ ಸಾದ್ಯತೆಯನ್ನು (ಕುರಿತು) ಕಂಡುಕೊಳ್ಳುವಿಕೆ ಅದರ ಆಳವಾದ ಆದರ್ಶದ ಅಪೇಕ್ಷಣೆ ಎಡೆ ಮಾಡಿ ಕೊಡುತ್ತಿದ್ದು. ಈ ಹಿನ್ನಲೆಯಲ್ಲಿ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಬಗೆಗಿನ ಆಲೋಚನಾ ಧ್ವನಿ ಸಾದ್ಯತೆಗಳನ್ನು ಒಂದೆಡೆ ಸೇರಿಸುವ ಅವುಗಳನ್ನು ಆಳವಾಗಿ ಅಧ್ಯಯನ ಮಾಡುವ ಕಾರ್ಯವನ್ನು ಆಯ್ದುಕೊಂಡಿದ್ದೇನೆ. ಪರಂಪರೆಯಿಂದ ಪುರುಷ ಎಂಬ ಪರಿಕಲ್ಪನೆಯನ್ನು ಕಾವ್ಯಗಳು ಪ್ರತಿನಿಧಿಸಿರುವ ರೀತಿ ಎಂತದ್ದು? ಮಹಿಳಾ (ಕಾವ್ಯ) ದೃಷ್ಟಿಕೋನದಲ್ಲಿ ಪುರುಷ ನಿರ್ವಚನೆ ಹೇಗೆ ಕಂಡುಬಂದಿದೆ. ಆದರ್ಶ ಎಂದರೇನು? ಕನ್ನಡ ಸಾಹಿತ್ಯದಲ್ಲಿ ಆದರ್ಶ ಬಗೆಗಿನ ವ್ಯಾಖ್ಯಾನಗಳು ಹೇಗಿದ್ದವು? ಇತ್ತೀಚಿನ ಆದರ್ಶದ ಸ್ವರೂಪಗಳು ಯಾವುವು? ಎಂಬುದನ್ನು ಮಹಿಳಾ ಕಾವ್ಯದಲ್ಲಿ ಕಂಡುಕೊಳ್ಳಬೇಕಿದೆ.

ಮಹಿಳಾ ಕಾವ್ಯರಚನೆಯ ಕಾಲಘಟ್ಟದ ಆರಂಭದ ಈವರೆಗಿನ ಸ್ವರೂಪಗಳು ಹೇಗೆ ಕಂಡು ಬಂದಿವೆ? ಅವುಗಳಲ್ಲಿನ ಸೂಕ್ಷ್ಮಗಳು ಎಂತವುಗಳು ಎಂಬುದನ್ನು ತಿಳಿಯುವುದು ಅಧ್ಯಯನದ ಉದ್ದೇಶವಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಈ ಉದ್ದೇಶದ ಪ್ರಯತ್ನವಾಗಿ ಆದರ್ಶ ಪುರುಷನ ಹುಟುಕಾಟವನ್ನು ಹಲವು ನೆಲೆಯಲ್ಲಿ ಕಂಡುಕೊಳ್ಳಬೇಕಾಗಿದೆ.

ಹೊಸಗನ್ನಡ ಮಹಿಳಾ ಕಾವ್ಯ, ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ, ಮಹಿಳಾ ಸಂವೇದನೆ, ಮುಸ್ಲಿಂ ಸಂವೇದನೆ ನವ್ಯೋತ್ತರ ಹೀಗೆ ಹಲವು ನೆಲೆಗಳಿಂದ ಮಹಿಳಾ ಕವಿಯತ್ರಿಯರ ಕಾವ್ಯಗಳನ್ನು ಅನುಲಕ್ಷಿಸಿ ಆದರ್ಶದ ಪುರುಷ ಸ್ವರೂಪದ ವೈವಿದ್ಯತೆಗಳನ್ನು ಕಂಡುಕೊಳ್ಳುತ್ತಿದೆ.

ಮೊದಲನೆ ಹಂತದಲ್ಲಿ ಆದರ್ಶದ ಅಥೈಯಿಸಿಕೆಯಾದರೆ, ಆದರ್ಶ ಪದದ ಅರ್ಥ, ವಿವಿಧ ಜ್ಞಾನ ಶಿಸ್ತುಗಳಲ್ಲಿ ಆದರ್ಶದ ಬಗೆಗೆ ವಿದ್ವಾಂಸರ ಒಟ್ಟಾರೆ ಆದರ್ಶ ಪುರುಷನ ಬಗ್ಗೆ ಅರ್ಥ ಸ್ಪಷ್ಟತೆಯನ್ನು ಪಡೆಯುತ್ತದೆ.

ಎರಡನೆ ಹಂತದಲ್ಲಿ ಆದರ್ಶ ಪುರುಷನ ನಿರ್ವಚನೆಯನ್ನು ಮಾಡಲಾಗಿದೆ. ಈ ಮೂಲಕ ಸಂಬಂಧವಾಚಕಗಳ ಮೂಲಕ ತಂದೆ-ಮಗ, ಗಂಡ, ಪ್ರೇಮಿ, ಶತ್ರುವಿನ ಮೂಲಕ (ಪ್ರತಿಬಿಂಬಿಸುವ ಕಾವ್ಯದ ಮೂಲಕ) ಆದರ್ಶ ಪುರುಷನ ಹುಡುಕುವಿಕೆಯನ್ನು ಹೇಗೆ ನಡೆಸಿದ್ದಾರೆ ಎಂಬುದನ್ನು ಚರ್ಚಿಸಲಾಗಿದೆ.

ಮೂರನೆ ಹಂತದಲ್ಲಿ ಕನ್ನಡ ಕಾವ್ಯದಲ್ಲಿ ಹೆಚ್ಚು ಅಭಿವ್ಯಕ್ತಿಸಿದ ಸಂಗತಿಗಳ ಚರ್ಚೆಯಾಗಿದೆ. ನಾಲ್ಕನೇ ಆಧ್ಯಾಯದಲ್ಲಿ ಪಿತೃಪ್ರಧಾನ ಮೌಲ್ಯಗಳನ್ನು ಪ್ರತಿಬಿಂಬಿಸುವ ಮಹಿಳಾ ಕಾವ್ಯದಲ್ಲಿ ಆದರ್ಶವನ್ನು ಹುಡುಕಲಾರಂಭಿಸುತ್ತದೆ.

ಐದನೇ ಅದ್ಯಾಯದಲ್ಲಿ ಜಾಗೃತ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನ ಹುಡುಕಾಟ ಮತ್ತು ಅಂತಿಮವಾಗಿ ಆರನೇ ಅದ್ಯಾಯದಲ್ಲಿ ಪುರಾಣ ಕಾವ್ಯಗಳ ಸ್ತ್ರೀ ಪ್ರತಿಮೆಯ ಮೂಲಕ ಆದರ್ಶ ಪುರುಷನ ಹುಡುಕಾಟದಲ್ಲಿ ಹೀಗೆ ಆದರ್ಶದ ಹುಡುವಿಕೆಯನ್ನು ಪ್ರತಿಯೊಂದು ಕಾವ್ಯದಲ್ಲಿ ತೆಗೆಯಲಾಗಿದೆ.

ಪ್ರಸ್ತುತ ಪ್ರಬಂದವನ್ನು ನಿರೂಪಿಸುವಲ್ಲಿ ಹಲವಾರು ತೊಡಕುಗಳು ಉಂಟಾಯಿತು "ಆಧುನಿಕ ಮಹಿಳಾ ಕಾವ್ಯದಲ್ಲಿ 'ಆದರ್ಶ ಪುರುಷ' ನ ಹುಡುಕಾಟ ಎನ್ನುವಲ್ಲಿ ಆದರ್ಶ ಅರ್ಥವನ್ನು ಸೂಚಿಸುವಲ್ಲಿ ಕಷ್ಟವಾಯಿತು. ಆದರ್ಶ ಒಂದು ಗುಣಾವಳಿಯಾದರೆ ಆದರ್ಶ ಪುರುಷ ಒಂದು ನಾಮಪದ ಇದರ ಅರ್ಥ ವಿಶಾಲವೆನಿಸಿದರೆ ಕೆಲವೊಮ್ಮೆ ಸೀಮಿತಮಟ್ಟದಲ್ಲಿದೆ ಎನಿಸುತ್ತದೆ. ಆದರ್ಶದ ಅರ್ಥವಂತಿಕೆ ವಿಶಾಲತೆಯು ನೂರು ಜನರಲ್ಲಿ ನೂರಾರು ವಿಭಿನ್ನತೆಯ ಅಭಿಪ್ರಾಯವನ್ನು ಹೇಳುತ್ತದೆ. ಆದರ್ಶ ಎನ್ನುವುದು ಅವರವರ ಮನೋಭಿಪ್ರಾಯ ಒಬ್ಬರು ಅಂದುಕೊಂಡ ಆದರ್ಶ ಇನ್ನೊಬ್ಬರಲ್ಲಿ ಅದು ಅನಗತ್ಯವಾಗಿ ಕೇವಲವಾಗಿ ಆದ್ದರಿಂದ ಆದರ್ಶವನ್ನು ಮಹಿಳಾ ಸಂವೇಧನೆಯಡಿಯಲ್ಲಿ ಕಂಡುಕೊಂಡ ಸಂವೇಧಾತ್ಮಕ ರೀತಿಯಲ್ಲಿ ಆದರ್ಶವನ್ನು ಗುರುತಿಸಲಾಗಿದೆ.

ಪ್ರಸ್ತುತ ಪ್ರಬಂದದ ವಿಷಯವನ್ನು ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಒಂದಾದ ಕಾವ್ಯದಲ್ಲಿ ಆಯ್ದುಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಸಂಗ್ರಹ ಮೂಡಲು ಹೊರಟ ಕಾವ್ಯಗಳಲ್ಲಿ ಶೇಕಡ ಹತ್ತರಷ್ಟು ದೇವರ ಸ್ತುತಿ, ದೇಶ ಭಕ್ತಿಗಳಾದರೆ ಇನ್ನುಳಿದವು ಶೇಕಡ ಮೂವತ್ತರಷ್ಟು ಪ್ರೇಮಕಾವ್ಯಗಳಾಗಿವೆ. ಇನ್ನುಳಿದ ಅರವತ್ತರಷ್ಟು ಕಾವ್ಯಗಳಲ್ಲೂ ಸ್ತ್ರೀ ಪುರುಷ ವಿರೋಧಿ ಧೋರಣೆಗಳ ಕಾವ್ಯ ಹೆಚ್ಚಾಗಿದೆ. ಆದರ್ಶ ಪುರುಷ ಎಂಬ ವಿಷಯದಡಿಯಲ್ಲಿ ಆದರ್ಶ ಪುರುಷನನ್ನು ಹುಡುಕ ಹೊರಟಾಗ ಕಷ್ಟವಾಯಿತು. ಏಕೆಂದರೆ ಮುಕ್ಕಾಲು ಪಾಲು ಎಲ್ಲಾ ಕಾವ್ಯದಲ್ಲಿ ಕವಿಯತ್ರಿಯರು ಪುರುಷನ ಧೋರಣೆ ವಿರೋದಿಸಿ, ತಮ್ಮ ಹೊಸದೊಂದು ಜಗತ್ತನ್ನೇ ಕಾಣುವ ಹುಮ್ಮಸ್ಸಿನಲ್ಲಿ ಪ್ರತಿಭಟನಾತ್ಮವಾಗಿ ಜಾಗೃತ ಮಹಿಳೆಯನ್ನು ಚಿತ್ರಿಸಲು ಹೊರಟ್ಟಿದ್ದಾಳೆ. ಈ ಮೂಲಕ ಅವಳ ಕಾವ್ಯದಲ್ಲಿ ಪುರುಷ ನಕರಾತ್ಮಕ ಅಂಶಗಳಿಂದ ಕೂಡಿರುತ್ತಾನೆ. ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನನ್ನು ಹುಡುಕ ಹೊರಟ ನನಗೆ ಆದರ್ಶ ಪುರುಷನ ಸಿಕ್ಕಿದ್ದಕ್ಕಿಂತ ನಕರಾತ್ಮಕ ಪುರುಷ ಸಿಕ್ಕಿದ್ದ ಹೆಚ್ಚು. ಆದರ್ಶವನ್ನು

ನೇರವಾಗಿ ಸೂಚಿಸಿದಲೇ ಇರುವುದನ್ನು ಕೆಲವೊಮ್ಮೆ ಪ್ರಬಂದದ ನಿಜವಾದ ಉದ್ದೇಶ ಸೂಚಿಸದೇ ಸೋಲುತ್ತದೆಂಬ ಭಾವ ಕಾಣುತ್ತದೆ. ನಕರಾತ್ಮಕ ಧೋರಣೆ ಮೂಲಕವೇ ಆದರ್ಶವನ್ನು ಗುರುತಿಸುವಲ್ಲಿ ಎಚ್ಚರವಹಿಸಿದ್ದೇನೆ.

ಇನ್ನೊಮ್ಮೆ ಒದಗಿ ಬಂದ ತೊಡಕೆಂದರೆ ಕಾವ್ಯ ಪ್ರಕಾರ ವಿಶಾಲವಾದ್ದು ಕವಿಯತ್ರಿಯರ ಸಂಖ್ಯೆ ಬಹಳಷ್ಠಿದ್ದರು ಕೂಡ ಅತ್ಯುತ್ತಮವಾದ ಮತ್ತು ಅರ್ಥ ಗಂಬೀರತೆಯುಳ್ಳ ಕಾವ್ಯ ರಚಿಸಿದ್ದು ಬೆರಳೆಣಿಕೆಯಷ್ಟು ಮಾತ್ರ ಈ ಕಾರಣದಿಂದಲೇ ಪ್ರಸ್ತುತ ಪ್ರಬಂದದಲ್ಲಿ ಕೆಲವು ಪ್ರಖ್ಯಾತ ಕವಿಯತ್ರಿಯರ ಕವಿತೆಯನ್ನು ಬಳಸಿಕೊಳ್ಳುವ ಅನಿವಾರ್ಯತೆ ಉಂಟಾಗಿದೆ. ಈ ತೊಡಕಿನಿಂದಲೇ ಈ ಪ್ರಬಂದದಲ್ಲಿ ಕೆಲವು ಪ್ರಬುದ್ಧವಾದ ಕವಿಯತ್ರಿಯರ ಬೇರೆ-ಬೇರೆ ಕಾವ್ಯ ಸಂಕಲನಗಳನ್ನೂ ಹಲವು ಬಾರಿ ಬಳಸಿಕೊಳ್ಳಲಾಗಿದೆ.

ಫಲಿತಗಳು

ಸಂಶೋಧನೆಯ ಮಹತ್ವವು ಸಫಲವಾಗುವುದು ಆ ಪ್ರಬಂಧದ ಫಲಿತಗಳ ಮೇಲೆ ಸಂಶೋಧನೆಯ ಒಟ್ಟಾರೆ ಆಶಯಗಳು ಫಲಿತಾಂಶ ಕೊಡುತ್ತವೆ. ಜೊತೆಗೆ ಆ ಸಂಶೋಧನೆಯಲ್ಲಿ ಮುಂದೆ ಆಗಬೇಕಾದ ಮುಂದುವರೆದ ಸಂಶೋಧನೆಯ ಬಗ್ಗೆ ತಿಳಿವು ಮೂಡುತ್ತದೆ. ಪ್ರಸ್ತುತ ಪ್ರಬಂದ ಒಟ್ಟಾರೆ ಫಲಿತಗಳ ಕಡೆ ಗಮನ ಹರಿಸಿದಾಗ.

೧. 'ಆದರ್ಶ ಪುರುಷ' ನ ಹುಡುಕಾಟದ ಹಂತದಲ್ಲಿ ಆದರ್ಶ ಪುರುಷ ಸಿಕ್ಕಿದ್ದಾನೆಯೂ? ಎಂಬ ಪ್ರಶ್ನೆ ಅಂತಿಮವಾಗಿ ಇದಕ್ಕೆ ಸಿಕ್ಕ ಉತ್ತರ ಧನ್ಯಾತ್ಮಕವಾದದು 'ಸಿಕ್ಕಿದ್ದಾನೆ ಎಂದರೆ' ಹಾಗಾದರೆ ಯಾವರೀತಿಯ ಆದರ್ಶ ಪುರುಷ? ಆ ಆದರ್ಶ ಪುರುಷನ ಮಾನದಂಡನೆಗಳೇನು? ಎಂಬ ಪ್ರಶ್ನೆ ಮೂಡುತ್ತದೆ. ಆದರ್ಶ ಒಂದು ವ್ಯಕ್ತಿ ಪ್ರತೀಕ ನಿಜವಾದರೂ ಅದು ಅಷ್ಟಕ್ಕೆ ನಿಲ್ಲುವುದಿಲ್ಲ. ಆದರ್ಶವೆಂಬ ಸಂಗತಿ ಅದು ನಿಂತ ನೀರಲ್ಲ. ನೂರು ಜನರ ಅಭಿಪ್ರಾಯದಲ್ಲಿ ಆದರ್ಶ ನೂರು ತರಹದಲ್ಲಿರುತ್ತದೆ.

೨. ಆಧುನಿಕ ಮಹಿಳಾ ಕನ್ನಡ ಕಾವ್ಯ ಪರಂಪರೆಯನ್ನು ಮಹಿಳಾ ಸಂವೇದನೆಯಡಿಯಲ್ಲಿ ವಿಶ್ಲೇಷಿಸಲಾಗಿದೆ. ಆದರ್ಶದ ಅರ್ಥ ವ್ಯಾಖ್ಯೆ ವೈಶಾಲ್ಯತೆಗಳಲ್ಲ ಮಹಿಳಾ ಸಂವೇದನೆಯನ್ನು ಅವಲಂಬಿಸಿದೆ. ಅದೇ ಅಂತಿಮವಾಗಿದೆ. ಮಹಿಳಾ ವಾದದ ಹಕ್ಕೋತ್ತಾಯ ಹೇಳಿಕೆಗಳು ಆದರ್ಶದ ಚೌಕಟ್ಟು ಹೇಳಿದರೂ ಕೂಡ ಆದರ್ಶ ಕೆಲವೊಮ್ಮೆ ಈ ಚೌಕಟ್ಟನ್ನು ಬಿಟ್ಟು ವಿಸ್ತಾರವಾಗಿದೆ.

೩. ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಎನ್ನುವುದು ನೇರವಾಗಿ ಸಿಕ್ಕಿಲ್ಲ ನೂರು ಕಾವ್ಯಗಳಲ್ಲಿ ಹೆಚ್ಚೆಂದರೆ ನಾಲ್ಕು ಐದು ಕಾವ್ಯಗಳು ಮಾತ್ರ ಸಕಾರಾತ್ಮಕ ಆದರ್ಶ ಪುರುಷನನ್ನು ಹೇಳಿದೆ. ಈ ರೀತಿಯ ಮನೋಭಾವನೆಗೆ ಆದರ್ಶದ ಪರಿಮಿತಿ ಸಮಾಜದಲ್ಲಿ ಯಾವ ಮಟ್ಟದಲ್ಲಿ ಇದೆಯೆಂದು ಯೋಚಿಸಬೇಕಾಗುತ್ತದೆ ಈ ಕಾರಣದಿಂದಲೆ ಇಡೀ ಕಾವ್ಯವನ್ನು ಗುರುತಿಸುವ ಮೂಲಕ ಸಕಾರಾತ್ಮಕ ಪುರುಷನನ್ನು ಹೇಳಲಾಗಿದೆ. ಸ್ತ್ರೀ ವಿರೋದಿ ಪುರುಷನ ನಿಲುಗುಗಳ ತಪ್ಪನ್ನು ಒತ್ತಿ ಹೇಳುವುದರ ಮೂಲಕ ಅವನಲ್ಲಿ ಕವಿಯತ್ರಿ(ಮಹಿಳೆ) ಬಯಸುವ ಆದರ್ಶದ ನೀತಿಯನ್ನು ಹೇಳಲಾಗಿದೆ.

೪. ಆಧುನಿಕ ಮಹಿಳಾ ಕಾವ್ಯದಲ್ಲಿ ಆದರ್ಶ ಪುರುಷನನ್ನು ಹುಡುಕಲು ಹೊರಟಾಗ ಆದರ್ಶ ಪುರುಷನ ಜೊತೆಗೆ ಇಡೀ ಮಹಿಳಾ ಕಾವ್ಯದ ರೂಪುರೇಷೆ ದೊರೆತಂತಾಯಿತು. ಅವರ ಆದರ್ಶ ಪುರುಷನ ಬಗ್ಗೆ ಆಲೋಚನೆ ಗಮನಿಸಿದಾಗ ಹಲವು ಸಂಗತಿಗಳು ತಿಳಿದುಬರುತ್ತದೆ ಇಲ್ಲಿನ ಮಹಿಳಾ ಕಾವ್ಯದಲ್ಲಿ ವಸ್ತುವಿನ ಆಯ್ಕೆ ಆಲೋಚನ ಕ್ರಮ ಮತ್ತು ಅಭಿವ್ಯಕ್ತಿ ಕ್ರಮಗಳಲ್ಲಿ ತನ್ಮಯತೆ ಧೃಡತೆ ಪರಿಪಕ್ವತೆಗಳು ಕಾಣಿಸಕೊಳ್ಳುತ್ತಿರುವುದು ಮಹಿಳಾ ಸಾಹಿತ್ಯದ ಒಳ್ಳೆಯ ಸೂಚನೆ. ಹಾಗೆಯೇ ವಿಚಾರ ಭಾವ ಅನುಭಾವಗಳ ವ್ಯಕ್ತಿ ಮಟ್ಟವನ್ನು ದಾಟಿ ಸಮುಷ್ಟಿಯತ್ತ ಒರಳಿದೆ ಒಟ್ಟಾಗಿ ಹೇಳುವುದಾದರೆ ಮಹಿಳೆಯರು ಕೃತಿಯ ಸಂಖ್ಯೆಯನ್ನು ಹೆಚ್ಚಿಸುವುದಕ್ಕಿಂತ ಗುಣಮಟ್ಟವನ್ನು ಹೆಚ್ಚಿಸುವುದ ಅನಿವಾರ್ಯ. ಜೊತೆಗೆ ಓದುಗನ ಮನಮುಟ್ಟುವಂತ ಕಾವ್ಯಗಳು ಇನ್ನೂ ಹೆಚ್ಚು ಮೂಡಿ ಬರಬೇಕಾಗಿದೆ.

ಹೀಗೆ 'ಆದರ್ಶದ' ಹುಡುಕುವಿಕೆಯನ್ನು ಪ್ರತಿಯೊಂದು ಕಾವ್ಯದಲ್ಲಿ ತೆಗೆಯಲಾಗಿದೆ. ಒಟ್ಟಾರೆ ಹೊಸಗನ್ನಡ ಮಹಿಳಾ ಕಾವ್ಯ ಪರಿಕರಗಳ ಮೂಲಕ ಆದರ್ಶ ಪುರುಷ ಹೇಗೆ ಪ್ರತಿಬಿಂಬಿಸಿದ್ದಾರೆ ಎಂಬುದನ್ನು ಹೇಳುವುದು ಈ ಮೂಲಕ ಉದ್ದೇಶವಾಗಿದೆ. ಪ್ರಬಂಧದ ಬಗ್ಗೆ ಧೀರ್ಘ ಆಧ್ಯಯನ ಚರ್ಚೆಗಳು ಗಮನಿಸುತ್ತಾ ಹೋದೆಂತೆಲ್ಲಾ ಒಟ್ಟಾರೆ ಆದರ್ಶ ಪುರುಷನ ಹುಡುಕಾಟದಲ್ಲಿ ಆಧುನಿಕ ಕವಿಯತ್ರಿಯರು ಆದರ್ಶ ಪುರುಷ ಹುಡುಕಾಟದಲ್ಲಿ ಪುರುಷನನ್ನು ಹುಡುಕಾಟದಲ್ಲಿ ವಿಫಲಳಾಗಿದ್ದಾರೆಯೇ? ಸಫಲಳಾಗಿದ್ದೆಯೇ? ಒಟ್ಟಾರೆ ಈ ಹುಡುಕಾದಲ್ಲಿ ಪುರುಷನು ಹೇಗೆ ಪ್ರತಿಬಿಂಬಿಸಿದ್ದಾನೆ?

ಕವಿಯತ್ರಿ ಪುರುಷನನ್ನು ಹೇಗೆ ಅದರ್ಶ ಪುರುಷನನ್ನು ವಿವೇಚಿಸಿದ್ದಾಳೆ. ಆದರ್ಶ ಪಾತ್ರದ ಅವಳ ದೃಷ್ಟಿಯಲ್ಲಿ ಆದರ್ಶವೆಂದರೇನು? ಎಂಬುದರ ಕಡೆ ನೋಡಬೇಕಾಗಿದೆ. ಈ ಪ್ರಬಂದಧ ಒಟ್ಟಾರೆ ಎಲ್ಲವೂ ಅದೇ ಆಗಿದೆ. ಈ ಎಲ್ಲಾ ಪ್ರಶ್ನೆಗಳು ಜೊತೆಗೆ ಉತ್ತರವು

ಪ್ರಬಂಧದ ಆದಿಯಿಂದ ಇಲ್ಲಿಯವರೆಗೂ ವಿವರಿಸಲಾಗಿದೆ. ಜೊತೆಗೆ ಇನ್ನೊಂದು ಮುಖ್ಯವಾದ ಚರ್ಚೆಯೆಂದರೆ ಆದರ್ಶ ಪುರುಷನ ಸ್ವರೂಪದ ಕುರಿತು. ಪ್ರಶ್ನೆಯಾಗಿದೆ. ಆದರ್ಶ ಪುರುಷ ಕಾಲಕ್ಕೆ ತಕ್ಕ ಹಾಗೆ ಕವಿಯತ್ರಿಯರ ಧೋರಣೆಗಳು ಬದಲಾಗುತ್ತಾ ಹೋದೆಂತೆಲ್ಲಾ ಆದರ್ಶ ಪುರುಷನ ಸ್ವರೂಪ ಬದಲಾಗುತ್ತಾ ಹೋಗುತ್ತದೆ. ಅಧುನಿಕ ಮಹಿಳಾ ಕಾವ್ಯದಲ್ಲಿ 'ಆದರ್ಶದ ಹುಡುಕಾಟದಲ್ಲಿ' ತೊಡಗಿದಾಗ ಅಂತಿಮದಲ್ಲಿ ಆಧರ್ಶ ಪುರುಷ ಸಿಕ್ಕಿದ್ದಾನೆಯೇ? ಸಿಕ್ಕ ಆಧರ್ಶ ಪುರುಷನ ಸ್ವರೊಪ ಏಂತದ್ದು ಎಂಬ ಪ್ರಶ್ನೆ ಮುಡುತ್ತದೆ. ಮಹಿಳಾ ಸಂವೇಧನೆಯಡಿಯಲ್ಲಿ ರಚನೆಯಾದ ಆತನ ಸ್ವರೂಪ ನಿಂತನಿರಲ್ಲ ಆತ ಕಾಲಕ್ಕೆ ತಕ್ಕ ಹಾಗೆ ಬದಲಾಗುತ್ತಾ ಹೋಗುತ್ತಾನೆ.

ಆಕರ ಗ್ರಂಥಗಳು

೧. ಆರತಿ ಎಚ್.ಎನ್., **ಬಾ ಹೇಳಿ ಕಳಿಸೋಣ ಹಗಲಿಗೆ,** ರಾಘವೇಂದ್ರ ಪ್ರಕಾಶನ, ಬೆಂಗಳೂರು, ೧೯೯೭

೨. ಆರ್ಕೆ, **ಸಾಮಾಜಿಕ ಸಿದ್ಧಾಂತ ಮತ್ತು ಹೋರಾಟ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೮೫

೩. ಆಶಾ ಕುಮಾರಿ, **ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಪರಿಕಲ್ಪನೆ,** ಅಭಿರುಚಿ ಪ್ರಕಾಶನ, ೨೦೦೩

೪. ಆರ್ಯಾಂಬ ಪಟ್ಟಾಬಿ, **ಮಹಿಳಾ ಸಾಹಿತ್ಯ,** ಸಂಹವನ ಪ್ರಕಾಶನ, ೨೦೦೩

೫. ಇಂದಿರಾ ಹೆಗೆಡೆ, **ದ್ರೌಪದಿಯರು,** ರಾಘವೇಂದ್ರ ಪ್ರಕಾಶನ, ಅಂಕೋಲಾ, ೨೦೦೧

೬. ಉಜ್ವಲಾ ಪ್ರತಾಪಾಗೌಡ, **ನಾವು ಬದುಕ ಬಯಸುತ್ತೇವೆ,** ಸಾಹಿತ್ಯ ಚೈತ್ರ, ೨೦೦೧

೭. ಉಷಾ ಪಿ.ರೈ., **ನೆಲದ ಹಾಡು,** ಸಂವಾದ ಪ್ರಕಾಶನ, ಚಿತ್ರದುರ್ಗ, ೧೯೯೦

೮. ಇಂದುಮತಿ ವಿ., **ವಿಭೂತಿ ಜೀವಕತೆ,** ಔರಂಗಬಾದ್ ಪ್ರಕಾಶನ, ೧೯೮೩

೯. ಉಷಾ ಪಿ.ರೈ., **ತೊಗಲು ಗೊಂಬೆ ಆತ್ಮಕಥೆ,** ಚಿಲುಮೆ ಪ್ರಕಾಶನ, ಮೈಸೂರು, ೧೯೯೧

೧೦. ಕಮಲ ಎಂ.ಆರ್., **ಶಕುಂತಲೋಪಾಖ್ಯಾನ,** ಕಲ್ಯಾಣಿ ಪ್ರಕಾಶನ, ೧೯೮೮

೧೧. ಕಮಲ ಹೆಮ್ಮಿಗೆ., **ಪಲ್ಲವಿ,** ಅಕ್ಷರ ಪ್ರಕಾಶನ, ಸಾಗರ, ೧೯೮೦

೧೨. ಕುರುರಾಣಿ ಕೆ., **ನಾಗಲಕ್ಷ್ಮಿ, ಸ್ನೇಹಸೇತು,** ಅರೆಕಲ್ಲು ಪ್ರಕಾಶನ, ೧೯೯೮

೧೩. ಕಮಲಮೂರ್ತಿ, **ತುಂಬೆ ಹೂವು,** ಚೇತನ ಪ್ರಕಾಶನ, ೧೯೮೬

೧೪. ಕಾಂತಾ ದತ್ತಾತ್ರೇಯ, **ಸೀತೆಯ ಕೊರಗು,** ಚಿನ್ಮಯಿ ಪ್ರಕಾಶನ, ೧೯೯೬

೧೫. ಚಂದ್ರಿಕಾ ಪಿ., **ನಿಮ್ಮ ಚರಿತ್ರೆಯಲ್ಲಿ ನಮಗೆ ಜಾಗವಿಲ್ಲ,** ನವಕರ್ನಾಟಕ ಪ್ರಕಾಶನ ಬೆಂಗಳೂರು, ೧೯೯೫

೧೬. ಗೀತಾವಸಂತ, **ಹೊಸ್ತಿಲಾಚೆ ಬದುಕು,** ರುಜುವಾತು ಪ್ರಕಾಶನ, ೧೯೮೯

೧೭. ಕವಿತ ಬಗಲಿ, **ಹೇಮಂತಬಗಲಿ, ಜೋಡಿ ಜೀವ,** ಧಾರವಾಡ ಪ್ರಕಾಶನ, ೧೯೯೯

೧೮. ಗಿರಿಜಾಶಾಸ್ತ್ರಿ, **ಹೆಣ್ಣೊಬ್ಬಳ ಧ್ವನಿ,** ಸಂವಹನ ಪ್ರಕಾಶನ, ಬೆಂಗಳೂರು, ೧೯೯೯

೧೯. ತಾರಣಿ ಯು.ರಾವ್, ಕಲ್ಲಾದಾಳು **ಊರ್ಮಿಳೆ,** ಭರತೇಶ ಪ್ರಕಾಶನ, ೧೯೯೯

೨೦. ಸ.ನಾಗಲಕ್ಷ್ಮಿ, **ಚಂದ್ರನನ್ನು ಕರೆಯಿರಿ ಭೂಮಿಗೆ,** ಸಂವಾದ ಪ್ರಕಾಶನ, ೧೯೯೯
೨೧. ಪ್ರೇಮಭಟ್, **ಗಂಗಾಳದಲ್ಲೊಂದು ಗೂಡು,** ಪ್ರೇಮಸಾಯಿ ಪ್ರಕಾಶನ, ೧೯೯೮
೨೨. ಪ್ರತಿಭಾ ನಂದಕುಮಾರ್, **ಈತನಕ,** ಕ್ರೈಸ್ತ ಕಾಲೇಜು, ಬೆಂಗಳೂರು, ೧೯೮೮
೨೩. ಭಾಗ್ಯ, **ಸುಳ್ಳಿನಾಚೆಯ ಸತ್ಯ,** ನೆಲೆಮನೆ ಪ್ರಕಾಶನ, ಮೈಸೂರು, ೧೯೮೧
೨೪. ಪಾರ್ವತಿದೇವಿ ಹೆಗಡೆ, **ಮಾಣಿಕ ಪುಷ್ಪ,** ವಿದ್ಯಾನಂದ ಪ್ರಕಾಶನ, ೨೦೦೦
೨೫. ಪ್ರೇಮಲೀಲಾ ಎಚ್., **ಜೋಡಿ ಜೀವ,** ಶೂದ್ರ ಪ್ರಕಾಶನ, ೨೦೦೦
೨೬. ಟಿ.ಸಿ.ಪೂರ್ಣಿಮಾ, **ಭೂಮಿ ನಿನ್ನದಲ್ಲ,** ಪ್ರತಿಭಾ ಪ್ರಕಾಶನ, ೧೯೮೮
೨೭. ಪದ್ಮಾ ಬಸವರಾಜು, **ಸೆಲೆ,** ಮನು ಪ್ರಕಾಶನ, ೧೯೮೯
೨೮. ಪ್ರೇಮಾ ತಾಶಿಲ್ದಾರ, **ಅವಕಾಶ,** ನೆಲೆಮನೆ ಪ್ರಕಾಶನ, ಮೈಸೂರು, ೧೯೯೯
೨೯. ಡಾ.ಪ್ರಭಾವತಿ, **ಉಳಿದಿದ್ದು ಆಕಾಶ,** ನೆಲೆಮನೆ ಪ್ರಕಾಶನ, ಮೈಸೂರು, ೧೯೯೯
೩೦. ಪ್ರೇಮಾಭಟ್, **ಸೂತ್ರಧಾರಿಯ ಲೋಕತತ್ವ,** ಸಂಹವನ ಪ್ರಕಾಶನ, ೧೯೯೦
೩೧. ಪ್ರೇಮಶಿರಸಿ, **ಆಹಲ್ಯಾ ವಿಲಾಸ,** ಅಭಿರುಚಿ ಪ್ರಕಾಶನ, ಬೆಂಗಳೂರು, ೨೦೦೩
೩೨. ಪ್ರತಿಭಾನಂದಕುಮಾರ್, **ನಾವು ಹುಡುಗಿಯರೇ ಹೀಗೆ,** ಕ್ರೈಸ್ತ್ ಕಾಲೇಜ್, ೧೯೮೩
೩೩. ಪ್ರತಿಭಾನಂದಕುಮಾರ್, **ಈತನಕ,** ಕನ್ನಡ ಸಂಘ ಕ್ರೈಸ್ಟ್ ಕಾಲೇಜು ಬೆಂಗಳೂರು ೧೯೮೮
೩೪. ಹೆಚ್.ಎಸ್.ಮುಕ್ತಾಯಕ್ಕ, **ನಾನು ಮತ್ತು ಅವನು,** ಕನ್ನಡ ಪ್ರಕಾಶನ, ಬೆಂಗಳೂರು
೩೪. ಚಿ.ನಾ.ಮಂಗಳ, **ಕೆನಡಾ ಕವನ,** ಸ್ಪ್ಯಾನ್ ಪ್ರಿಂಟ್ ಬೆಂಗಳೂರು, ೧೯೮೯
೩೫. ಮಾಲತಿಪಟ್ಟಣಶೆಟ್ಟಿ, **ಗರಿಗೆದರಿ,** ಕೃತಿ ಪ್ರಕಾಶನ ಧಾರವಾಡ, ೧೯೮೩
೩೬. ಮಾಲತಿಪಟ್ಟಣಶೆಟ್ಟಿ, **ತಂದೆ ಬದುಕು ಗುಲಾಬಿ,** ಕೃತಿ ಪ್ರಕಾಶನ ಧಾರವಾಡ, ೧೯೮೮
೩೭. ಮಾಲತಿಪಟ್ಟಣಶೆಟ್ಟಿ, **ಬಾ ಪರೀಕ್ಷೆಗೆ,** ನಿರ್ಮಾಣ ಪ್ರಕಾಶನ, ಧಾರವಾಡ, ೧೯೭೬
೩೮. ಮುಕ್ತಾಯಕ್ಕ ಎಚ್.ಎಸ್., **ನಾನು ಮತ್ತು ಅವನು,** ಪ್ರಶಾಂತ ಪ್ರಕಾಶನ, ರಾಯಚೂರು, ೧೯೮೩
೩೯. ಮುಕ್ತಾಯಕ್ಕ ಎಚ್.ಎಸ್., **ನೀವು ಕಾಣಿರೆ ನೀವು ಕಾಣಿರೆ,** ಕನ್ನಡ ಸಂಘ ಕ್ರೈಸ್ಟ್ ಕಾಲೇಜು ಬೆಂಗಳೂರು, ೧೯೮೬
೪೦. ಮಾದೇವಿ, **ಅಂತರಾಳದ ಬಿಕ್ಕುಗಳು,** ರಾಘವೇಂದ್ರ ಪ್ರಕಾಶನ, ಅಂಕೋಲ, ೧೯೮೧
೪೧. ಮಲ್ಲಿಕಾಘಂಟಿ, **ರೊಟ್ಟಿ ಮತ್ತು ಹುಡುಗಿ,** ಗೌತಮ ಪ್ರಕಾಶನ, ೨೦೦೧
೪೨. ಮಾಲತಿಪಟ್ಟಣಶೆಟ್ಟಿ, **ಮಹಿಳಾ ಸಾರ್ವತ್ರಿಕ,** ಹುಬ್ಬಳ್ಳಿ ಪ್ರಕಾಶನ, ೧೯೯೨

೪೩. ಮಾಲತಿ, **ಒಂದು ಹೆಣ್ಣು ಹೇಳಿದ್ದು,** ಸಂಸ್ಕೃತಿ ಪ್ರಕಾಶನ, ೧೯೮೯

೪೪. ರಮಾಕುಮಾರಿ ಬಾ.ಹ., **ಅಂತರಂಗದ ಹಾಡು,** ಪ್ರಕೃತಿ ಪ್ರಕಾಶನ, ೧೯೯೯

೪೫. ರೂಪ ಹಾಸನ, **ಒಂದಿಷ್ಟು ಹಸಿಮಣ್ಣು,** ನೆಲೆಮನೆ ಪ್ರಕಾಶನ, ಮೈಸೂರು, ೧೯೯೧

೪೬. ರಜಿಯಾ ಪಿ.ಬಿ., **ಕಳೆದು ಹೋಗುತ್ತಿದೆ,** ತಳುಕಿನವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ೧೯೯೮

೪೭. ರಜಿಯಾ ಬೇಗಂ, **ಕುಲಶೇಖರಿ ಸಂಗ್ರಹ,** ಚಿನ್ಮಯ ಪ್ರಕಾಶನ, ೧೯೯೦

೪೮. ಲತಾ ರಾಜಶೇಖರ್, **ಅತಿಶಯೋಕ್ತಿಯೆನ್ನದಿರು,** ರುಜುವಾತು ಪ್ರಕಾಶನ, ೧೯೬೮

೪೯. ಲಲಿತಾನಾಯಕ್ ಬಿ.ಟಿ., **ದಲಿತ ಬಂಡಾಯ ಬದಲಾವಣೆಯ ಆಶಯ ಮತ್ತು ಸ್ತ್ರೀ** ಭಾವಸಂಪದ ಪ್ರಕಾಶನ, ೧೯೯೮

೫೦. ವೀರಣ್ಣ ವಿ.ಸಿ., **ಕಾವ್ಯಕಂಡ ಹೆಣ್ಣು,** ಶಕ್ತಿ ಮುದ್ರಣ ಪ್ರಕಾಶನ, ೧೯೯೯

೫೧. ವೇದ ಎಂ.ಎಸ್., **ಗಂಗೋತ್ರಿಯಲ್ಲಿ,** ದೇವಿ ಪ್ರಕಾಶನ, ಮೈಸೂರು, ೨೦೦೩

೫೨. ವೇದ ಎಂ.ಎಸ್., **ಬಿಳುಲುಗಳು,** ದೇವಿ ಪ್ರಕಾಶನ, ಮೈಸೂರು, ೧೯೮೯

೫೩. ಶಶಿಕಲಾ ವಸ್ತ್ರದ, **ಗುಬ್ಬಿಮನಿ,** ನೆಲಮನೆ ಪ್ರಕಾಶನ ಮೈಸೂರು, ೧೯೭೮

೫೪. ಶೀಲಾ ಅಂಕೋಲಾ, **ಚಿಗುರುವೆವು,** ಪ್ರಸನ್ನ ಚಂದ್ರ ಪ್ರಕಾಶನ, ಬೆಂಗಳೂರು, ೧೯೮೮

೫೫. ಶೈಲಜಾ ಉಡುಚಣ, **ಕಪ್ಪು ನೆಲ ಸೊಕ್ಕಿದ ಸೂರ್ಯ,** ಚೇತನ ಪ್ರಕಾಶನ, ಗುಲ್ಬರ್ಗಾ, ೧೯೮೮

೫೬. ಶೈಲಜಾ ಉಡುಚಣ, **ಸ್ವಗತಾ,** ಚಂದ್ರನ ಪ್ರಕಾಶನ, ೧೯೮೧

೫೭. ಸರಸ್ವತಿ ಗೌಡ, **ಮುಂಗಾರು,** ಬಯಲು ಸೀಮೆ ಪ್ರಕಾಶನ, ಚನ್ನಪಟ್ಟಣ, ೧೯೮೦

೫೮. ಸರ್ವಮಂಗಳ, **ಅಮ್ಮನಗುಡ್ಡ,** ರುಜುಮಾತ ಪ್ರಕಾಶನ, ೧೯೮೮

೬೦. ಸವಿತಾ ನಾಗಭೂಷಣ, **ನಾ ಬರುತ್ತೇನೆ ಕೇಳು,** ಅಕ್ಷರ ಪ್ರಕಾಶನ ಸಾಗರ, ೧೯೮೭

೬೧. ಸುಕನ್ಯಾ ಮಾರುತಿ, **ನಾನು ನನ್ನವರು,** ಸಂಗ್ರಾಮ ಪ್ರಕಾಶನ, ೧೯೮೫

೬೨. ಸುಮಿತ್ರ ಎಂ.ಎಸ್., **ಗುಚ್ಛ,** ಭಾವ ಸಂಪ್ರದ ಪ್ರಕಾಶನ, ೧೯೯೧

೬೩. ಹೇಮ ಪಟ್ಟಣಶೆಟ್ಟಿ, **ಹೊಸ ಹಾಡು,** ಅನನ್ಯ ಪ್ರಕಾಶನ ಧಾರವಾಡ, ೧೯೮೬

೬೪. ವಿಜಯದಬ್ಬೆ, **ಪರಂಪರೆ,** ಸಾಹಿತ್ಯ ಆಕಾಡೆಮಿ ಪ್ರಕಾಶನ, ಬೆಂಗಳೂರು, ೧೯೯೯

೬೫. ವೈದೇವಿ, **ಬಿಂದುಬಿಂದಿಗೆ,** ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೯೫

೬೬. ವಿಜಯಶ್ರೀ ಸಬರದ, **ಲಕ್ಷ್ಮಣರೇಖೆ ದಾಟಿದರು,** ಸುರೇಖ ಪ್ರಕಾಶನ, ೧೯೯೧

೬೭. ವಿಜಯ ಡಿ., **ತಿರುಗಿ ನಿಂತ ಪ್ರಶ್ನೆ,** ಕನ್ನಡ ಸಾಹಿತ್ಯ ಆಕಾಡೆಮಿ, ಬೆಂಗಳೂರು, ೨೦೦೦

೬೮. ಶಶಿಕಲಾ ವಸ್ತ್ರದ, **ಗುಬ್ಬಿಮನಿ,** ಸಂವೇದನಾ ಪ್ರಕಾಶನ, ಬೆಂಗಳೂರು, ೧೯೭೯

೬೯. ಶಾರದ ಕೆ.ಬಸವರಾಜು, **ಜೋಡಿಜೀವ,** ಗೌತಮ ಪ್ರಕಾಶನ, ೧೯೯೩

೭೦. ಶಶಿಕಲಾ ಸಿ.ಹೆಚ್., **ಹುಡುಗ ಮತ್ತು ಪ್ರೀತಿ,** ಚಿತ್ರಭಾನು ಪ್ರಕಾಶನ, ೧೯೯೬

೭೧. ಶೈಲಜಾ ಉಡುಚಣ, **ಸ್ವಗತ,** ಧಾರವಾಡ ಪ್ರಕಾಶನ, ೧೯೮೧

೭೨. ಶಾಂತಜಗದೀಶ್, **ಮಾಲ್ಯ,** ಭಾವಸಂಪದ ಪ್ರಕಾಶನ, ೧೯೮೧

೭೩. ಶರೀಫಾ, **ನೂರನೇಳಾ ಅಂತರಂಗ,** ಸಮತಾ ಅಧ್ಯಯನ, ಮೈಸೂರು, ೨೦೦೦

೭೪. ಶೈಲಾಜಾ **ಉಡುಚಣ, ಕಾದುನೋಡು,** ಕನ್ನಡ ಸಾಹಿತ್ಯ ಪ್ರಕಾಶನ, ೧೯೭೯

೭೫. ಶಶಿಕಲಾ ವೀರಯ್ಯಸ್ವಾಮಿ, **ಗುಬ್ಬಿಮನೆ,** ಸಂಗ್ರಾಮ ಪ್ರಕಾಶನ, ಧಾರವಾಡ, ೧೯೭೯

೭೬. ಸುಕನ್ಯಾ ಮಾರುತಿ, **ಪಂಚಾಗ್ನಿ ಮಧ್ಯೆ,** ಗುಬ್ಬಿಮನೆ ಪ್ರಕಾಶನ, ೧೯೮೫

೭೭. ಸರಸ್ವತಿಗೌಡ, **ಸ್ವತಂತ್ರದ ಕನವರಿಕೆ,** ಬಯಲುಸೀಮೆ ಪ್ರಕಾಶನ, ಚನ್ನಪಟ್ಟಣ, ೧೯೮೦

೭೮. ಸುಕನ್ಯಾಕಲಶ, **ಗತದೊಂದಿಗೆ ಸ್ವಗತ,** ತೇಜಸ್ವಿ ಪ್ರಕಾಶನ, ೧೯೮೮

೭೯. ಸರ್ವಮಂಗಳ, **ಭಂಡರು,** ರುಜುವಾತ ಪ್ರಕಾಶನ, ೧೯೯೩

೮೦. ಸರೋಜಿನಿಮಹಿಷಿ, **ಈ ಶತಮಾನದ ಕವಿಯಿತ್ರಿಯರು,** ಚಿನ್ಮಯಿ ಪ್ರಕಾಶನ, ೧೯೯೨

೮೧. ಸುನಿತ ಹೆಳವಾಯಿ, **ಕಳೆದುಹೋದ ಪದ್ಯ,** ಸಂಗ್ರಾಮ ಪ್ರಕಾಶನ, ಧಾರವಾಡ, ೧೯೮೨

೮೨. ಸುಮಿತ್ರಾ ಎಲ್.ಜಿ., **ಸ್ಪರ್ಶರೇಖೆಗಳು,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೮

೮೩. ಸವಿತಾ ನಾಗಭೂಷಣ್, **ಜಾತ್ರೆಯಲ್ಲಿ ಶಿವ,** ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೨

೮೪. ಸರಸ್ವತಿ ದು., **ಹೆಣೆದರೆ ಜೇಡದಂತೆ,** ಶಂಬಾಜೋಷಿ ಸ್ಮಾರಕ, ೧೯೯೭

೮೫. ಸರೋಜನಿ, **ಸಸ್ಯ ಶ್ಯಾಮಲ,** ಶ್ರೀ ಜಗದ್ಗುರು ಮೂರು ಸಾವಿರ ಮಠ, ಇಳಾ ಪ್ರಕಾಶನ, ೧೯೯೮

೮೬. ಸುಮಿತ್ರಾ ಎಲ್.ಜಿ., **ಕಾವ್ಯ ಕಾವೇರಿ,** ಲಿಪಿ ಪ್ರಕಾಶನ, ಬೆಂಗಳೂರು, ೧೯೯೦